ವಿಶ್ವವಾಣಿ

ವಿಶ್ವಾಸವೇ ವಿಶ್ವ



ಬ್ರೆಜಿಲ್ ಆಗಮಿಸಿದ ಪ್ರಧಾನಿ

ಬ್ರೆಜಿಲ್‌ನಲ್ಲಿ ಮಂಗಳವಾರ ನಡೆಯಲಿರುವ ಜಿ-20 ಶೃಂಗಸಭೆಯಲ್ಲಿ ಭಾಗವಹಿಸಲು ಆಗಮಿಸಿರುವ ಪ್ರಧಾನಿ ಮೋದಿ ಮತ್ತು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಪರಸ್ಪರ ಭೇಟಿಯಾಗಿ ಕುಶಲೋಪರಿ ನಡೆಸಿದರು. ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಸೇರಿದಂತೆ ಹಲವು ದೇಶಗಳ ಪ್ರಮುಖರು ಶೃಂಗಸಭೆಯಲ್ಲಿ ಭಾಗಿಯಾಗಲಿದ್ದಾರೆ.

ಪುಟ ತೆರೆದಂತೆ...

ಮಾತು ಚುನಾವಣೆಯನ್ನು ಕೆಡಿಸಿತು!
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ | 6

ಸನ್ನದ್ಧವಾಗಿರುವುದು ನಮ್ಮ ಕೈಲಿದೆ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
ಸಂ.ಗಮ | 7

ಇಂದಿರಾ: ವ್ಯಕ್ತಿತ್ವದಲ್ಲಿ ಮೇರು ಶಿಖರ, ಸಾಧನೆಗಳು ಆಕಾಶದೆತ್ತರ
ಗುಣಗಾನ
ಡಿ.ಕೆ.ಶಿವಕುಮಾರ್, ಡಿಸಿಎಂ

ಮಾತಂದ್ರೆ ಮಾತು

ವಕ್ಫ್ ವಿಷಯದಲ್ಲಿ ಮೊದಲು ಜನರಿಗೆ ನೋಟಿಸ್ ಕೊಟ್ಟಿದ್ದವರೇ ಬಿಜೆಪಿಯವರು. ಈಗ ಆರೋಪ ಮಾಡುತ್ತಿರುವವರು ಅವರೇ, ಕಾಂಗ್ರೆಸ್‌ನವರು ನೋಟಿಸ್ ಕೊಟ್ಟಿದ್ದಾರೆ ಎಂದು ತೀರ್ಪು ಕೊಡುತ್ತಿರುವವರು ಅವರೇ. ಈಗ ಪಶ್ಚಾತ್ತಾಪಕ್ಕಾಗಿ ಪಾದಯಾತ್ರೆ ನಡೆಸುತ್ತಿದ್ದಾರೆ. ಆದರೆ, ಅವರ ಪಕ್ಷದ ಮನೆಗೆ ನೂರು ಬಾಗಿಲುಗಳು ಆಗಿವೆ. ಹೀಗಾಗಿಯೇ ಆ ಪಕ್ಷದ ಮುಖಂಡರು ಬೇರೆ ಬೇರೆ ಪಾದಯಾತ್ರೆ ಮಾಡುತ್ತಿದ್ದಾರೆ.

– ಈಶ್ವರ ಖಂಡ್ರೆ, ಅರಣ್ಯ ಸಚಿವ

ದಾರಿದೀಪೋಕ್ತಿ

ಸೋಲುವ ಭಯವಿದ್ದವರು ಜೀವನದಲ್ಲಿ ಏನನ್ನೂ ಮಾಡಲು ಮುಂದಾಗುವುದಿಲ್ಲ. ಸೋಲುವ ಭೀತಿಯೇ ಅವರನ್ನು ಮುಂದಡಿಯಿಡಲು ಬಿಡುವುದಿಲ್ಲ. ನಿಮಗೆ ಸೋಲಲು ಭಯ ಇಲ್ಲದಿದ್ದರೆ, ಖಂಡಿತವಾಗಿಯೂ ಗೆಲ್ಲುತ್ತೀರಿ. ಸೋಲಿನ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬಾರದು. ಸೋಲೇ ಗೆಲುವಿನ ಸೋಪಾನ.

ವಕ್ರತುಂಡೋಕ್ತಿ

ಕೆಲವರ ಕುಡಿತವನ್ನು ಸಹಿಸಿಕೊಳ್ಳಬಹುದು. ಸಹಿಸಿಕೊಳ್ಳಲು ಅಸಾಧ್ಯ ಅಂದ್ರೆ ಕುಡಿದಾಗ ಅವರ ಇಂಗ್ಲಿಷ್.

ಜಾತಿ ಸಮೀಕ್ಷೆ: ರಾಹುಲ್ ಪುನರುಚ್ಚಾರ

ಮುಂಬೈ: ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಮಹಾ ವಿಕಾಸ ಆಘಾಡಿ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಜಾತಿ ಗಣತಿ ನಡೆಸುತ್ತೇವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪುನರುಚ್ಚರಿಸಿದ್ದಾರೆ.

ಖಮೇನಿ ಉತ್ತರಾಧಿಕಾರಿ ರಹಸ್ಯ ಆಯ್ಕೆ

ಟೆಹರಾನ್: ಇರಾನ್ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಆರೋಗ್ಯ ವಯೋಸಹಜವಾಗಿ ಕ್ಷೀಣವಾಗುತ್ತಿರುವ ಹಿನ್ನೆಲೆಯಲ್ಲಿ ಅವರ ಉತ್ತರಾಧಿಕಾರಿಯಾಗಿ ಅವರ 2ನೇ ಪುತ್ರ ಮೊಜ್ತಾಬಾ ಖಮೇನಿ ಅವರನ್ನು ಆಯ್ಕೆ ಮಾಡಲಾಗಿದೆ. ಟೆಹ್ರಾನ್‌ನಲ್ಲಿ ನಡೆದ ರಹಸ್ಯ ಸಭೆಯಲ್ಲಿ ದೇಶದ ಮುಂದಿನ ಮುಖ್ಯಸ್ಥರಾಗಿ ಮೊಜ್ತಾಬಾ ಖಮೇನಿ ಆಯ್ಕೆಯಾಗಿದ್ದಾರೆ.

ಫನ್‌ತರಂಗ

– ರಘುಪತಿ ಶೃಂಗೇರಿ –

ಸ್ಕೂಲಿಗೆ ತಡವಾಗಿ ಬಂದಿದ್ದಕ್ಕೆ ವಿದ್ಯಾರ್ಥಿಗಳ ಕೂದಲು ಕತ್ತರಿಸಿದ ಟೀಚರ್



19ನೇ ವರ್ಷದ ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಸಿಎಂ

ಬಸವಾದಿ ಶರಣರ ವಿಚಾರಗಳು ಇಡೀ ಜಗತ್ತಿಗೆ ತಲುಪಬೇಕು

ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ಬೆಂಗಳೂರಿನ ರಮಣಶ್ರೀ ಪ್ರತಿಷ್ಠಾನದ ಸಹಯೋಗದಲ್ಲಿ ರಮಣಶ್ರೀ ರಿಚ್ಮಂಡ್ ಹೋಟೆಲ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಅವರು 19ನೇ ವರ್ಷದ ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ ಮಾಡಿದರು. ಸಂಸದ ಬಸವರಾಜ ಬೊಮ್ಮಾಯಿ, ಪ್ರತಿಷ್ಠಾನದ ಅಧ್ಯಕ್ಷ ಎಸ್.ಷಡಕ್ಷರಿ, ವಿಶ್ವವಾಣಿ ಪತ್ರಿಕೆ ಸಂಪಾದಕ ವಿಶ್ವೇಶ್ವರ ಭಟ್, ಶರಣ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಗೋ.ರು.ಚನ್ನಬಸಪ್ಪ ಉಪಸ್ಥಿತರಿದ್ದರು.

ಬೆಂಗಳೂರು: ಬಸವಣ್ಣನವರ ವಿಚಾರ, ತತ್ವ, ಆದರ್ಶಗಳನ್ನು ನೂರಕ್ಕೆ ನೂರು ಪಾಲನೆ ಮಾಡಲಾಗದಿದ್ದರೂ ಪಾಲಿಸುವ ಪ್ರಯತ್ನ ಮಾಡುತ್ತಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ಬೆಂಗಳೂರಿನ ರಮಣಶ್ರೀ ಪ್ರತಿಷ್ಠಾನದ ಸಹಯೋಗದಲ್ಲಿ ರಮಣಶ್ರೀ ಹೋಟೆಲ್‌ನಲ್ಲಿ ಆಯೋಜಿಸಿದ್ದ 19ನೇ ವರ್ಷದ ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ ಹಾಗೂ ಎಸ್.ಷಡಕ್ಷರಿ ಅವರ ಕ್ಷಣ ಹೊತ್ತು ಆಣಿಮುತ್ತು ಭಾಗ-14ರ ಪುಸ್ತಕ ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಶರಣ ಸಾಹಿತ್ಯ ಕ್ಷೇತ್ರದಲ್ಲಿ ಉತ್ತಮ ಕೆಲಸ ಮಾಡಿರುವವರನ್ನು ಪ್ರೋತ್ಸಾಹಿಸುವುದು ಬಹಳ ಮುಖ್ಯ. ಬಸವಾದಿ ಶರಣರ ವಿಚಾರಗಳು ಇಡೀ ಜಗತ್ತಿಗೆ ತಲುಪಬೇಕು. ನಮಗೆ ಮಾತ್ರ ಸೀಮಿತವಾಗಿ ತಲುಪಿದರೆ ಸಾಲುವುದಿಲ್ಲ. ಬಸವಾದಿ ಶರಣರ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿ ಕೊಂಡಾಗ ಮಾತ್ರ ಅವರಿಗೆ ನಿಜವಾದ ಗೌರವ ಸಲ್ಲಿಸಿದಂತಾ ಗುತ್ತದೆ. ಸಮಾಜಕ್ಕೆ ಬಸವಣ್ಣ ಮತ್ತು ಅವರ ಅನುಯಾಯಿಗಳ ಕೊಡುಗೆ ಅಪಾರವಾದುದು. ಸಮಾಜವು ಜಾತಿ ವ್ಯವಸ್ಥೆಯಿಂದ ಅಕ್ಷರ ಸಂಸ್ಕೃತಿಯಿಂದ ವಂಚಿತವಾಗಿದೆ ಎಂದರು.

ಅನುದಾನ ಮೀಸಲು: ಮುಂದಿನ ಬಜೆಟ್‌ನಲ್ಲಿ ಬಸವ ಮಂಟಪ ಸ್ಥಾಪನೆಗೆ ಹಾಗೂ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿಗೆ ಅನುದಾನ ಮೀಸಲಿಡಲಾಗುವುದು. ಗೊತ್ತಿದ್ದೋ ಗೊತ್ತಿಲ್ಲದೆಯೋ ಮೌಢ್ಯ, ಕಂದಾಚಾರ ಆಚರಿಸುತ್ತೇವೆ. ಇದನ್ನು ಬಿಟ್ಟಾಗ ಮಾತ್ರ ಬಸವಾದಿ ಶರಣರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ. ಶರಣರು ಹೇಳಿದಂತೆ ಇವನಾರವ ಎಂದು ಎಣಿಸದೆ ಇವ ನಮ್ಮವ ಎಂದು ಎಣಿಸಬೇಕು. ವಚನಗಳನ್ನು ಹೇಳುತ್ತಲೇ ನೀವು ಯಾವ ಜಾತಿ ಎಂದು ಕೇಳುತ್ತೇವೆ. ಇದನ್ನು ಮೊದಲು ನಾವು ಬಿಡಬೇಕು ಎಂದರು.

ಸಾಹಿತಿ ರಾಜೂರ ಸೇರಿ 13 ಸಾಧಕರಿಗೆ ಪ್ರಶಸ್ತಿ

ರಮಣಶ್ರೀ ಪ್ರಶಸ್ತಿಗೆ 2024ನೇ ಸಾಲಿನಲ್ಲಿ ಒಟ್ಟು 13 ಮಂದಿ ಸಾಧಕರನ್ನು ಆಯ್ಕೆ ಮಾಡಲಾಗಿತ್ತು. ಧಾರವಾಡದ ಹಿರಿಯ ಸಾಹಿತಿ ವೀರಣ್ಣ ರಾಜೂರ ಅವರಿಗೆ ರಮಣಶ್ರೀ ಶರಣ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಉಳಿದ ತಲಾ ಆರು ಮಂದಿ ಸಾಧಕರಿಗೆ ರಮಣಶ್ರೀ ಶರಣ ಹಿರಿಯ ಶ್ರೇಣಿ ಪ್ರಶಸ್ತಿ ಮತ್ತು ರಮಣಶ್ರೀ ಶರಣ ಉತ್ತೇಜನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಆಪರೇಷನ್ ವಾರ್ ವಾಕ್ಸಮರ ಬಿರುಸು

ಆಫರ್ ಇದೆ ಎಂದ ಕಾಂಗ್ರೆಸ್‌ಗೆ ದಾಖಲೆ ಕೇಳಿದ ಬಿಜೆಪಿ

ಬೆಂಗಳೂರು: ಬಿಜೆಪಿಯು ಪ್ರತಿ ಶಾಸಕರಿಗೂ 50 ಕೋಟಿ ರುಪಾಯಿ ಆಫರ್ ನೀಡಿದೆ ಎಂದು ಕಾಂಗ್ರೆಸ್ ಆರೋಪಕ್ಕೆ ಬಿಜೆಪಿ ತಿರುಗೇಟು ನೀಡಿದ್ದು, ಮೂರನೇ ಆಪರೇಷನ್ ಕಮಲ ಯುದ್ಧ ರಾಜ್ಯದಲ್ಲಿ ಆರಂಭವಾಗಿದೆ.

ವಿಶ್ವವಾಣಿ ವಿಶೇಷ

'ಬಿಜೆಪಿಯು ಕರ್ನಾಟಕ ಕಾಂಗ್ರೆಸ್ ಸರಕಾರವನ್ನು ಬೀಳಿಸಲು ಪ್ರಯತ್ನಿಸುತ್ತಿದೆ' ಎಂದು ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಶಾಸಕರು ಹೇಳಿರುವ ಬೆನ್ನಲ್ಲೇ 'ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರಕಾರ ರಚನೆ ಮಾಡುವಾಗ ಶಾಸಕರನ್ನು ಕಳುಹಿಸಿದ್ದೇ ಸಿದ್ದರಾಮಯ್ಯ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿರುವುದು ಈಗ ಮತ್ತೊಂದು ಹಂತದ ವಾಕ್ಸಮರ ತಾರಕಕ್ಕೇರಿದೆ.

'ಆಪರೇಶನ್ ಕಮಲಕ್ಕೆ 50 ಕೋಟಿ ರು. ಅಲ್ಲ 100 ಕೋಟಿ ಆಫರ್ ಬಂದಿದೆ' ಎಂಬ ಶಾಸಕ ಗಣಿಗ ರವಿಕುಮಾರ್ ಹೇಳಿಕೆ ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ. ಸರಕಾರ ಕೆಡವಲು ಕಾಂಗ್ರೆಸ್ ಶಾಸಕರಿಗೆ ಬಿಜೆಪಿ 50 ಕೋಟಿ ರು.ಆಮಿಷವೊಡ್ಡುತ್ತಿದೆ ಎಂಬ ಮುಖ್ಯಮಂತ್ರಿಗಳ ಮಾತಿಗೆ ಕಾಂಗ್ರೆಸ್‌ನ ಹಲವು ಸಚಿವರು, ಶಾಸಕರು ಧ್ವನಿಗೂಡಿಸಿದ್ದರು. ಇದೀಗ ಮಂಡ್ಯ ಶಾಸಕ ಗಣಿಗ ರವಿ ಅವರು, ಬಿಜೆಪಿಯವರು ಕಿತ್ತೂರಿನ ಶಾಸಕ ಬಾಬಾಸಾಹೇಬ್ ಪಾಟೀಲ್ ಮತ್ತು ಚಿಕ್ಕಮಗಳೂರಿನ ಶಾಸಕ ಎಚ್.ಡಿ. ತಮ್ಮಯ್ಯ ಅವರನ್ನು ಸಂಪರ್ಕಿಸಿ, 100 ಕೋಟಿ ಆಫರ್ ನೀಡಿದ್ದಾರೆ ಎಂದು ಹೇಳಿದ್ದಾರೆ.

ಆದರೆ, ಗಣಿಗ ರವಿ ಆರೋಪವನ್ನು ಬಾಬಾಸಾಹೇಬ್ ಪಾಟೀಲ್ ಮತ್ತು ಎಚ್.ಡಿ.ತಮ್ಮಯ್ಯ ಅಲ್ಲಗಳೆದಿದ್ದು, ತಮ್ಮನ್ನು ಯಾವುದೇ ಬಿಜೆಪಿ ಶಾಸಕರು ಸಂಪರ್ಕಿಸಿಲ್ಲ. ರವಿ ಗಣಿಗ ಏಕೆ ಈ ರೀತಿ ಹೇಳಿಕೆ ನೀಡಿದ್ದಾರೋ ಗೊತ್ತಿಲ್ಲ ಎಂದು ಹೇಳಿರುವುದು ನಾನಾ ವ್ಯಾಖ್ಯಾನಗಳಿಗೆ ಕಾರಣವಾಗಿದೆ.

→ 4

- ಹೊಸಬರು, ಹಳಬರನ್ನೂ ಬಿಜೆಪಿಯವರು ಟಚ್ ಮಾಡ್ತಿದ್ದಾರೆ: ಶಾಸಕ ಬಾಬಾಸಾಹೇಬ ಪಾಟೀಲ್
- ಬಿಜೆಪಿಗೆ ಕಾಂಗ್ರೆಸ್ ಶಾಸಕರನ್ನು ಕಳುಹಿಸಿದ್ದೇ ಸಿದ್ದರಾಮಯ್ಯ: ಕೇಂದ್ರ ಸಚಿವ ಪ್ರಲ್ಹಾದ ಜೋಶಿ
- ನನ್ನನ್ನು ಈವರೆಗೂ ಯಾರು ಸಂಪರ್ಕ ಮಾಡಿಲ್ಲ: ಶಾಸಕ ತಮ್ಮಯ್ಯ ಸ್ಪಷ್ಟನೆ
- ಕಾಂಗ್ರೆಸ್ ಶಾಸಕರಿಗೆ ಮಂಪರು ಪರೀಕ್ಷೆ ಮಾಡಿಸಿದ್ರೆ ಸತ್ಯ ಹೊರ ಬರುತ್ತೆ: ಕೋರ್ಟ್‌ಗೆ ಸಿ.ಟಿ.ರವಿ ಮನವಿ

ಕಾಂಗ್ರೆಸ್‌ನವರು ಏನಾದರೂ ಬಿಡುಗಡೆ ಮಾಡಲಿ, ಯಾರು ಬೇಡ ಅಂದವರು? ಈಗ ಡೈವರ್ಟ್ ಮಾಡಲು ಏನೇನೋ ಆರೋಪ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಹಗರಣದಲ್ಲಿ ಸಿಲುಕಿ ಹಾಕಿಕೊಂಡಿದ್ದಾರೆ. ಹೀಗಾಗಿ, ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ.

– ಪ್ರಲ್ಹಾದ ಜೋಶಿ ಕೇಂದ್ರ ಸಚಿವ

ಬಿಜೆಪಿ 1000 ಕೋಟಿ ರು. ವಿಚಾರದ ಬಗ್ಗೆ ಮಾತನಾಡಲಿ. ಈ ಬಗ್ಗೆ ಯತ್ನಾಳ್ ಅವರನ್ನು ಕೇಳಬೇಕು. ಈ ಬಗ್ಗೆ ಅಶೋಕ ಮತ್ತು ವಿಜಯೇಂದ್ರರಿಗೆ ಪ್ರಶ್ನೆ ಮಾಡಬೇಕು. ತನಿಖೆ ಅಲ್ಲ, ಮೊದಲು ಅವರು (ಬಿಜೆಪಿ) ಇಂಟರ್ನಲ್ ತನಿಖೆ ಮಾಡಲಿ. ನೀವು ಅವರನ್ನು ಕೇಳಬೇಕು. ನಾವು ತನಿಖೆ ಮಾಡುತ್ತೇವೆ. ಬಿಡುವುದಿಲ್ಲ.

– ಡಿ.ಕೆ.ಶಿವಕುಮಾರ್, ಡಿಸಿಎಂ

ಸಿಎಂ ಬಾಮೈದ ಇ.ಡಿ ವಿಚಾರಣೆಗೆ ಹಾಜರು

ಬೆಂಗಳೂರು: ಮುಡಾದ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಹಗರಣ ಸಂಬಂಧ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಪ್ರಕರಣದಲ್ಲಿ, ಮೂರನೇ ಆರೋಪಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಾಮೈದ ಮಲ್ಲಿಕಾರ್ಜುನಸ್ವಾಮಿ ಜಾರಿ ನಿರ್ದೇಶನಾಲಯ ಅಧಿಕಾರಿಗಳ ಮುಂದೆ ವಿಚಾರಣೆಗೆ ಹಾಜರಾಗಿದ್ದಾರೆ.

ಸ್ನೇಹಮಯಿ ಕೃಷ್ಣ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡಿರುವ ಇ.ಡಿ ಅಧಿಕಾರಿಗಳು ಇತ್ತೀಚೆಗೆ ಮುಡಾ ಮಾಜಿ ಅಧ್ಯಕ್ಷ ಮರಿಗೌಡ, ಅಂದಿನ ಆಯುಕ್ತರಾಗಿದ್ದ ನಟೇಶ್ ಸೇರಿದಂತೆ ಹಲವರನ್ನು ವಿಚಾರಣೆ ನಡೆಸಿದ್ದರು. ಮೈಸೂರಿನ ಕೆಸರೆ ಜಾಗವನ್ನು ಮಾಲೀಕರಾಗಿದ್ದ ದೇವರಾಜು ಅವರಿಂದ ಯಾವಾಗ ಖರೀದಿಸಿದ್ದರು?. ಹೇಗೆ ಖರೀದಿ ಮಾಡಲಾಗಿತ್ತು?. ಸಹೋದರಿ ಪಾರ್ವತಿ ಅವರಿಗೆ ಜಮೀನು ದಾನ ಮಾಡಿದ್ದು ಯಾವಾಗ? ಎಂಬುದು ಸೇರಿದಂತೆ ಇನ್ನಿತರ ಅಂಶಗಳ ಬಗ್ಗೆ ಮಲ್ಲಿಕಾರ್ಜುನಸ್ವಾಮಿ ಅವರನ್ನು ವಿಚಾರಣೆ ನಡೆಸಲಾಗಿದೆ ಎಂದು ಇ. ಡಿ ಮೂಲಗಳು ತಿಳಿಸಿವೆ.

7 ಜನ ನೀರುಪಾಲು

ಹುಕ್ಕೇರಿ, ಸುರಪುರ, ಕೊರಟಗೆರೆ ತಾಲೂಕುಗಳಲ್ಲಿ ದುರ್ಘಟನೆ

ಬೆಳಗಾವಿ: ಮೀನು ಹಿಡಿಯಲು ಘಟಪ್ರಭಾ ನದಿಗೆ ಹೋಗಿದ್ದ ತಂದೆ ಮತ್ತು ಇಬ್ಬರು ಮಕ್ಕಳು ನೀರು ಪಾಲಾಗಿರುವ ಘಟನೆ ಭಾನುವಾರ ಹುಕ್ಕೇರಿ ತಾಲೂಕಿನ ಬೆನಕನಹೊಳಿ ಗ್ರಾಮದಲ್ಲಿ ನಡೆದಿದೆ. ಬೆನಕನಹೊಳಿ ಗ್ರಾಮದ ಲಕ್ಷ್ಮಣರಾಮ ಅಂಬಲಿ (49), ರಮೇಶ್ ಅಂಬಲಿ (14) ಹಾಗೂ ಯಲ್ಲಪ್ಪ ಅಂಬಲಿ (12) ಮೂವರು ನೀರು ಪಾಲಾಗಿದ್ದಾರೆ. ಎನ್‌ಡಿಆರ್‌ಎಫ್ ತಂಡ, ಯಮಕನಮರಡಿ ಠಾಣೆ ಪೊಲೀಸರು ನೀರುಪಾಲಾಗಿರುವ ಮೂವರ ಶವ ಮೇಲೆತ್ತಿದ್ದಾರೆ.

ಕೊರಟಗೆರೆ ತಾಲೂಕಿನ ತುಂಬಾಡಿ ಕೆರೆಯನ್ನು ನೋಡಲು ಹೋಗಿದ್ದ ತಂದೆ, ಮಗಳು ಕಾಲು ಜಾರಿ ನೀರಿಗೆ ಬಿದ್ದು ಸಾವನ್ನಪ್ಪಿದ್ದಾರೆ. ಬೆಂಗಳೂರು ಶಿವಾಜಿ ನಗರದ ಫಿರ್ದೋಸ್ (45), ಮಗಳು ಆಯ್ಮಾ (6) ಮೃತರು.

ಯಾದಗಿರಿ ಜಿಲ್ಲೆಯ ಸುರಪುರದಲ್ಲಿ ದನ ಮೇಯಿಸಲು ಹೋದಾಗ ಈಜಾಡಲೆಂದು ಹಳ್ಳಕ್ಕಿಳಿದು ಕೊಚ್ಚಿ ನೀರುಪಾಲಾಗಿದ್ದ ಇಬ್ಬರು ಬಾಲಕರ ಮೃತದೇಹ ಸೋಮವಾರ ಬೆಳಗ್ಗೆ ದೊರೆತಿದೆ. ಯುವರಾಜ್ ಶಂಕರ್ ಮೇಟಿ (10) ಮತ್ತು ಬಾಲಕ ಶ್ರೀಯಣ್ಣ ಚಂದ್ರಕಾಂತ್ (8) ಎನ್ನುವ ಬಾಲಕರ ಮೃತ ದುರ್ದೈವಿಗಳು. ಭಾನುವಾರ ರಾತ್ರಿಯಿಂದಲೂ ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ಪೊಲೀಸ್ ಅಧಿಕಾರಿಗಳು ಸ್ಥಳೀಯರೊಂದಿಗೆ ಶೋಧ ಕಾರ್ಯ ನಡೆಸಿದ್ದರು. ಸೋಮವಾರ ಬೆಳಗ್ಗೆ 7:30ರ ಸುಮಾರಿಗೆ ಮೃತ ದೇಹಗಳು ಪತ್ತೆಯಾಗಿವೆ.

ಮಣಿಪುರದಲ್ಲಿ ಪರಿಸ್ಥಿತಿ ಉದ್ವಿಗ್ನ

ಬಿಜೆಪಿ-ಕಾಂಗ್ರೆಸ್ ಕಚೇರಿ ಧ್ವಂಸ ಈವರೆಗೂ 200ಕ್ಕೂ ಹೆಚ್ಚು ಸಾವು

ಇಂಫಾಲ್: ಮಣಿಪುರದ ಜಿರೀಬಾಮ್ ಜಿಲ್ಲೆಯಲ್ಲಿ ಬಂಡುಕೋರರು ಮೂವರು ಮಹಿಳೆಯರು ಮತ್ತು ಶಿಶುಗಳ ಹತ್ಯೆ ಮಾಡಿದ್ದರಿಂದ ಸೋಮವಾರವೂ ಹಿಂಸಾಚಾರ ಮುಂದುವರಿದಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ಕಚೇರಿ ಗಳನ್ನು ಉದ್ರಿಕ್ತರ ಗುಂಪು ಧ್ವಂಸಗೊಳಿ ಸಿದೆ. ಇಂಫಾಲ್ ಕಣಿವೆಯಲ್ಲಿ ಬಿಜೆಪಿ ಶಾಸಕರೊಬ್ಬರ ಪೂರ್ವಜರ ಮನೆಯನ್ನು ಧ್ವಂಸಗೊಳಿಸಲಾಗಿದ್ದು, ಜಿರೀಬಾಮ್‌ನ ಶಾಸಕ ಅಶಬ್ ಉದ್ದೀನ್ ಒಡೆತನದ ಕಟ್ಟಡವನ್ನು ಧ್ವಂಸಗೊಳಿಸಲಾಗಿದೆ.

ಎನ್‌ಐಎಗೆ ತನಿಖೆ ಹೊಣೆ: ಮಣಿಪುರದ ಮೂರು ಹಿಂಸಾಚಾರ ಪ್ರಕರಣಗಳ ತನಿಖೆ ಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸಿ ಕೇಂದ್ರ ಗೃಹ ಸಚಿವಾಲಯ ಆದೇಶ ಹೊರಡಿಸಿದ್ದು, ಎನ್‌ಐಎ ತಂಡವು, ಪೊಲೀಸರಿಂದ ಮಾಹಿತಿ ಕಲೆಹಾಕುತ್ತಿದೆ.

50ಕ್ಕೂ ಹೆಚ್ಚು ಸಿಎಪಿಎಫ್ ತುಕಡಿ ರವಾನೆ: ಸಂಘರ್ಷ ಪೀಡಿತ ಮಣಿಪುರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಸುಮಾರು 5,000ಕ್ಕೂ ಸಿಬ್ಬಂದಿಯನ್ನು ಒಳಗೊಂಡ 50 ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆ (ಸಿಎಪಿಎಫ್) ತುಕಡಿಗಳನ್ನು ಕಳುಹಿಸಲು ಕೇಂದ್ರ ನಿರ್ಧರಿಸಿದೆ.

ಮೆಡಿಕಲ್ ಸ್ಟೋರ್‌ಗಳಲ್ಲಿ ಮಾತ್ರೆ ರೂಪದಲ್ಲಿ ಡ್ರಗ್ಸ್ ಮಾರಾಟ: ಪರಮ್

ಡ್ರಗ್ಸ್ ದಂಧೆಗೆ ಫಾರ್ಮಸಿ ನಂಟು

ಮೈಸೂರು: ಸರಕಾರ ಮಾದಕ ವಸ್ತುಗಳ ವಿರುದ್ಧ ಸಮರ ಸಾರಿದ್ದು, ಒಂದು ವರ್ಷದಿಂದ ನೂರಾರು ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡು ಹಲವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಮಾದಕ ವಸ್ತುಗಳ ಹಾವಳಿ ತಡೆಗೆ ಕಠಿಣ ಕ್ರಮ ಕೈಗೊಳ್ಳಲಾಗಿದೆ ಎಂದು ಗೃಹ ಸಚಿವ ಪರಮೇಶ್ವರ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಮಾದಕ ದ್ರವ್ಯ ಮತ್ತು ಡ್ರಗ್ಸ್ ಅನ್ನು ಚಾಕಲೇಟ್ ಹಾಗೂ ಟ್ಯಾಬ್ಲೆಟ್‌ಗಳ ರೂಪದಲ್ಲಿ ಮಾರಾಟ ಮಾಡಲಾಗುತ್ತಿದ್ದು, ಇದನ್ನು ತಡೆಯಲು ರಾಜ್ಯ ಸರಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ವಿದೇಶಗಳಿಂದ ಬಂದು ಮಾದಕ ದ್ರವ್ಯ ದಂಧೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳ ವಿರುದ್ಧ ಪ್ರಕರಣಗಳನ್ನು ದಾಖ ಲಿಸಲಾಗಿದೆ. ಸುಮಾರು 70ರಿಂದ 80 ಮಂದಿಯನ್ನು ಗಡಿಪಾರು ಮಾಡಿದ್ದೇವೆ. ಇಲ್ಲವಾದಲ್ಲಿ ಕೇವಲ ಪ್ರಕರಣ ಗಳನ್ನು ದಾಖಲಿಸಿದರೆ ಇಲ್ಲಿಯೇ ಉಳಿದುಕೊಂಡು ತಮ್ಮ ಕೃತ್ಯಗಳನ್ನು ಮುಂದುವರಿಸುತ್ತಾರೆ. ಈ ಹಿನ್ನೆಲೆಯಲ್ಲಿ ಅವರ ರಾಯಭಾರಿ ಕಚೇರಿಗಳು ಮತ್ತು ಅಧಿಕಾರಿಗಳಿಗೆ ತಿಳಿಸಿ ಅವರನ್ನು ಗಡಿಪಾರು ಮಾಡುತ್ತೇವೆ ಎಂದು ತಿಳಿಸಿದ್ದಾರೆ.

ದೇಹದೊಳಗೆ ಇಟ್ಟುಕೊಂಡು ಡ್ರಗ್ಸ್ ರವಾನೆ: ಡ್ರಗ್ಸ್ ಅನ್ನು ಒಳಗೆ ಹೇಗೆ ತರಲಾಗುತ್ತದೆ ಎಂದು ತಿಳಿದರೆ ನಿಮಗೆ ಆಶ್ಚರ್ಯವಾಗುತ್ತದೆ. ಅವರು ತಮ್ಮ ದೇಹದೊಳಗೆ ಡ್ರಗ್ಸ್ ಅನ್ನು ಇಟ್ಟುಕೊಳ್ಳುತ್ತಾರೆ ಮತ್ತು ಅವರು ಅದನ್ನು ಇತರ ರೂಪಗಳಲ್ಲಿ ತರುತ್ತಾರೆ. ವಿಮಾನ ನಿಲ್ದಾಣಗಳು ಮತ್ತು ಅಂತಾರಾಜ್ಯ ಸಾರಿಗೆ ವ್ಯವಸ್ಥೆಗಳ ಮೂಲಕ ಡ್ರಗ್ಸ್ ಸಾಗಿಸಲಾಗುತ್ತಿದೆ. ನಾವು ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದ್ದೇವೆ ಎಂದು ಪರಮೇಶ್ವರ ಹೇಳಿದರು.

ಡ್ರಗ್ಸ್ ಸಿಕ್ಕರೆ ಮೆಡಿಕಲ್ ಶಾಪ್ ಲೈಸನ್ಸ್ ರದ್ದು

ಡ್ರಗ್ಸ್ ವಿರುದ್ಧ ಕಠಿಣ ಕ್ರಮದಲ್ಲಿ ಯಾವುದೇ ರಾಜಿ ಇಲ್ಲ. ಇಂತಹ ಅಕ್ರಮದಲ್ಲಿ ತೊಡಗಿರುವ ಮೆಡಿಕಲ್ ಸ್ಟೋರ್‌ಗಳ ಪರವಾನಗಿಯನ್ನು ರದ್ದುಗೊಳಿಸಲು ಶಿಫಾರಸು ಮಾಡುತ್ತೇವೆ ಎಂದು ಪರಮೇಶ್ವರ ಹೇಳಿದರು.

ಗಾಂಜಾದಲ್ಲಿ ಎರಡು ವಿಧಗಳಿವೆ. ಒಂದು ವಿಧದ ಗಾಂಜಾವನ್ನು ರಾಜ್ಯದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಬೆಳೆಯುತ್ತಾರೆ. ಅದನ್ನು ದಾಳಿ ನಡೆಸಿ ನಿಗಾವಹಿಸಿ ನಿಲ್ಲಿಸುತ್ತೇವೆ. ಎರಡನೆಯದಾಗಿ, ರಾಜ್ಯದಲ್ಲಿ ಹೈಡ್ರೋ ಗಾಂಜಾದ ಭೀತಿಯಿದೆ. ನಾವು ಕಠಿಣ ಕ್ರಮವನ್ನು ಪ್ರಾರಂಭಿಸುವ ಮೂಲಕ ಅದನ್ನು ನಿಭಾಯಿಸುತ್ತಿದ್ದೇವೆ.

– ಡಾ.ಜಿ.ಪರಮೇಶ್ವರ ಗೃಹ ಸಚಿವ

ಸಮಾಚಾರ ಸಣ್ಣದಲ್ಲ

ಚಿರತೆ ದಾಳಿಗೆ ಮಹಿಳೆ ಬಲಿ

ಬೆಂಗಳೂರು: ಬೆಂಗಳೂರಿನ ಹೊರವಲಯದಲ್ಲಿ ಚಿರತೆ ದಾಳಿ ನಡೆದಿದ್ದು, 52 ವರ್ಷದ ಮಹಿಳೆ ಸಾವನ್ನಪ್ಪಿದ್ದಾರೆ. ನೆಲಮಂಗಲದ ಕಂಬಲು, ಗೊಲ್ಲರಹಟ್ಟಿಯಲ್ಲಿ ಈ ಘಟನೆ ವರದಿಯಾಗಿದ್ದು, ಕೃಷಿ ಭೂಮಿ ಯಿಂದ ಹುಲ್ಲು ತರಲು ಹೋಗಿದ್ದಾಗ ಮಹಿಳೆ ಮೇಲೆ ಚಿರತೆ ದಾಳಿ ನಡೆಸಿದೆ. ಆಕೆ ಕೆಲಸ ಮಾಡುತ್ತಿದ್ದ ಜಾಗ, ಚಿರತೆಗಳು ಹೆಚ್ಚಾಗಿ ಬರುವ ಕಾಡಿಗೆ ಹೊಂದಿಕೊಂಡಿದ್ದು, ಸುತ್ತ ಮುತ್ತಲಿನ ಪ್ರದೇಶಗಳಿಗೆ ಹೋಗದಂತೆ ಇತ್ತೀಚಿನ ದಿನಗಳಲ್ಲಿ ಗ್ರಾಮಸ್ಥರಿಗೆ ಎಚ್ಚರಿಕೆ ನೀಡಲಾಗಿತ್ತು. ಚಿರತೆ ನಾಯಿಗಳು ಮತ್ತು ಇತರ ಬೀದಿ ಬೀದಿಗಳನ್ನು ಕೊಂದ ನಿದರ್ಶನಗಳಿವೆ ಎಂದು ಹಿರಿಯ ಅರಣ್ಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಚಿರತೆ ದಾಳಿಯಿಂದ ಮೃತಪಟ್ಟ ಮಹಿಳೆ ಕರಿಯಮ್ಮನ ಕುಟುಂ ಬಕ್ಕೆ ಅರಣ್ಯ ಇಲಾಖೆ 15 ಲಕ್ಷ ರು. ಪರಿಹಾರ ಘೋಷಿಸಿದೆ. ಸ್ಥಳಕ್ಕೆ ಎಸಿಎಫ್ ನಿಜಾಮು ದ್ದೀನ್ ಭೇಟಿ ನೀಡಿ ಪರಿಹಾರ ಪ್ರಕಟಿಸಿದ್ದಾರೆ.

ಬಾಲಕ ಆತ್ಮಹತ್ಯೆ

ಬೆಂಗಳೂರು: ಬಾಲಕನೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆ ಹೆಣ್ಣೂರು ಪೊಲೀಸ್ ಠಾಣಾ ವ್ಯಾಪ್ತಿಯ ಗೆದ್ದಲಹಳ್ಳಿಯಲ್ಲಿ ಭಾನುವಾರ ತಡರಾತ್ರಿ ನಡೆದಿದೆ. ಆದೀವ್ (16) ಸಾವನ್ನಪ್ಪಿದ ಬಾಲಕ. ಖಾಸಗಿ ಕಾಲೇಜಿನಲ್ಲಿ ಪ್ರಥಮ ಪಿಯುಸಿಯಲ್ಲಿ ಓದುತ್ತಿದ್ದ ಬಾಲಕನ ತಂದೆ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ. ಕಳೆದ 15 ವರ್ಷಗಳಿಂದಲೂ ಕುಟುಂಬವು ಗೆದ್ದಲಹಳ್ಳಿಯಲ್ಲಿ ವಾಸಿಸುತ್ತಿದೆ. ಭಾನುವಾರ ತಡರಾತ್ರಿ ಅಪಾರ್ಟ್‌ಮೆಂಟ್‌ನ ಏಳನೇ ಮಹಡಿಯಿಂದ ಕೆಳಗೆ ಬಿದ್ದು ಸಾವನ್ನಪ್ಪಿದ್ದಾನೆ. ಸ್ಥಳಕ್ಕೆ ಪೊಲೀಸರು ಪರಿಶೀಲಿಸಿದ್ದಾರೆ. ಮೃತದೇಹ ಮರಣೋತ್ತರ ಪರೀಕ್ಷೆ ನಡೆಸಿ, ಕುಟುಂಬಸ್ಥರಿಗೆ ಮೃತದೇಹ ಹಸ್ತಾಂತರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಾಲಕ ಇತ್ತೀಚೆಗೆ ಕಾಲೇಜು ಬದಲಾವಣೆ ವಿಚಾರವಾಗಿ ಕುಟುಂಬಸ್ಥರೊಂದಿಗೆ ಚರ್ಚಿಸಿದ್ದ. ಪೋಷಕರೊಂದಿಗೆ ಮಾತಿನ ಚಕಮಕಿ ನಡೆದಿತ್ತು. ಇದೇ ವಿಚಾರವಾಗಿ ಭಾನುವಾರ ಮಧ್ಯಾಹ್ನ ಮನೆಬಿಟ್ಟು ಹೋಗಿದ್ದ. ಸಂಜೆಯಾದರೂ ಮನೆಗೆ ಬಂದಿರಲಿಲ್ಲ. ಬಳಿಕ ರಾತ್ರಿ ಮನೆಗೆ ಬಂದಿದ್ದ. ತಡರಾತ್ರಿ ಅಪಾರ್ಟ್‌ಮೆಂಟ್‌ನ ಏಳನೇ ಮಹಡಿ ಯಿಂದ ಬಿದ್ದು ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ಮಾಹಿತಿ ತಿಳಿಸಿದ್ದಾರೆ.

ಬೈಕ್ ಸವಾರ ಬಲಿ: ಬಸ್ ಚಾಲಕನಿಗೆ ಜೈಲು

ಬೆಂಗಳೂರು: ವೇಗ ಹಾಗೂ ಅಜಾಗರೂಕತೆಯಿಂದ ವಾಹನ ಚಲಾಯಿಸಿ ಅಪಘಾತವೆಸಗಿ ಬೈಕ್ ಸವಾರನ ಸಾವಿಗೆ ಕಾರಣರಾಗಿದ್ದ ಮಿನಿ ಬಸ್ ಚಾಲಕನಿಗೆ ಎಸಿಜೆಎಂ ನ್ಯಾಯಾಲಯ 15 ತಿಂಗಳು, 9 ಸಾವಿರ ರು. ಶಿಕ್ಷೆ ಪ್ರಕಟಿಸಿದೆ.ರಾಮನಗರ ಮೂಲದ ಸುನೀಲ್ ಕುಮಾರ್ (37) ಶಿಕ್ಷೆಗೊಳಗಾದ ಅಪರಾಧಿ. 2021ರಲ್ಲಿ ವೈಟ್‌ಫೀಲ್ಡ್ ಸಂಚಾರ ಠಾಣಾ ವ್ಯಾಪ್ತಿಯ ವರ್ತೂರು ಕಡೆಯಿಂದ ಗುಂಜೂರು ಮಾರ್ಗವಾಗಿ ತನ್ನ ಮಿನಿ ಬಸ್ಸನ್ನು ವೇಗವಾಗಿ ವಾಹನ ಚಲಾಯಿಸಿ ಮುಂದೆ ಬರುತ್ತಿದ್ದ ಹೊಸಕೋಟೆಯ ಕಲ್ಯಾಣ್ ಕುಮಾರ್ (25) ಬೈಕಿಗೆ ಡಿಕ್ಕಿ ಹೊಡೆದಿದ್ದಾನೆ.

ಅಪಘಾತ ದಿಂದಾಗಿ ಕೋಮಾ ತಲುಪಿ ಮೂರು ತಿಂಗಳು ನಿರಂತರ ಚಿಕಿತ್ಸೆ ಪಡೆದರೂ ಫಲಕಾರಿಯಾಗದೆ ಮೃತಪಟ್ಟ ಹಿನ್ನೆಲೆಯಲ್ಲಿ ವೈಟ್‌ಫೀಲ್ಡ್ ಸಂಚಾರ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಮೂರು ವರ್ಷಗಳ ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಲಯ ಬಸ್ ಚಾಲಕನ ಅಜಾಗರೂಕತೆಯಿಂದ ವಾಹನ ಚಲಾಯಿಸಿರುವುದು ವಿಚಾರಣೆಯಲ್ಲಿ ಸಾಬೀತಾಗಿದ್ದರಿಂದ, ಅಪರಾಧಿಗೆ ಒಂದು ವರ್ಷ ಮೂರು ತಿಂಗಳು ಸಾದಾ ಜೈಲು ಶಿಕ್ಷೆ ಪ್ರಕಟಿಸಿ, ದಂಡ ಕಟ್ಟದಿದ್ದರೆ ಹೆಚ್ಚುವರಿಯಾಗಿ 2 ತಿಂಗಳು 10 ದಿನ ಜೈಲು ಶಿಕ್ಷೆ ಅನುಭವಿಸಬೇಕು ಎಂದು ತೀರ್ಪಿನಲ್ಲಿ ನ್ಯಾಯಾಲಯ ತಿಳಿಸಿದೆ.

ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಪೊಲೀಸರ ಸಿದ್ಧತೆ | ವಿಶೇಷ ಅರ್ಜಿ ಬಗ್ಗೆ ಹೈಕೋರ್ಟ್‌ನಿಂದ ಇಂದು ಆದೇಶ ಪ್ರಕಟ | ಗುರುವಾರದೊಳಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಪೊಲೀಸರ ಅರ್ಜಿ ಸಾಧ್ಯತೆ

ದರ್ಶನ್ ಜಾಮೀನು ತೆರವಿಗೆ ಮೇಲ್ಮನವಿ

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪಿ ನಟ ದರ್ಶನ್‌ಗೆ ನೀಡಿರುವ ಮಧ್ಯಂತರ ಜಾಮೀನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಬೆಂಗಳೂರು ಪೊಲೀಸರು ಸಿದ್ಧತೆ ನಡೆಸಿದ್ದಾರೆ. ಮಧ್ಯಂತರ ಜಾಮೀನು ತೆರವು ಕೋರಿ ಸುಪ್ರೀಂಗೆ ಮೇಲ್ಮನವಿ ಸಲ್ಲಿಸಲು ಈಗಾಗಲೇ ರಾಜ್ಯ ಸರಕಾರ ಅನುಮತಿ ನೀಡಿದೆ. ಹೀಗಾಗಿ ಕನ್ನಡದಲ್ಲಿರುವ ಪ್ರಕರಣದ ಚಾರ್ಜ್‌ಶೀಟ್ ಅನ್ನು ಪೊಲೀಸರು ಇಂಗ್ಲಿಷ್‌ಗೆ ತರ್ಜುಮೆಗೊಳಿಸಿದ್ದಾರೆ.

ಸೋಮವಾರ ಕನಕದಾಸ ಜಯಂತಿ ಹಿನ್ನೆಲೆಯಲ್ಲಿ ನ್ಯಾಯಾಲಯದ ಕಲಾಪಗಳಿಗೆ ರಜೆ ಇತ್ತು. ಹೀಗಾಗಿ ಮಂಗಳವಾರ ಹೈಕೋರ್ಟ್‌ನಲ್ಲಿ ಎಸ್‌ಎಲ್‌ಪಿ (ಸ್ಪೆಷಲ್ ಲೀವ್ ಪಿಟಿಷನ್) ಇತ್ಯರ್ಥವಾಗುವ ನಿರೀಕ್ಷೆಯಿದೆ. ಆ ಬಳಿಕ ದರ್ಶನ್‌ಗೆ ದೊರೆತಿರುವ ಮಧ್ಯಂತರ ಜಾಮೀನು ಪ್ರಶ್ನಿಸಿ ಬುಧವಾರ ಅಥವಾ ಗುರುವಾರ ಸುಪ್ರೀಂ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲು ತಯಾರಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಸರಕಾರದ ಅನುಮತಿ : ಮಧ್ಯಂತರ ಜಾಮೀನು ತೆರವಿಗೆ ಮೇಲ್ಮನವಿ ಸಲ್ಲಿಸಲು ರಾಜ್ಯ ಸರಕಾರದಿಂದ ಅನುಮತಿ ದೊರೆತಿದ್ದು, ಸದ್ಯದಲ್ಲೇ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಶುಕ್ರವಾರ ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ತಿಳಿಸಿದ್ದರು.

ದರ್ಶನ್ ಜಾಮೀನು ಅರ್ಜಿ 57ನೇ ಸಿಸಿಎಚ್ ನ್ಯಾಯಾಲಯ ವಜಾಗೊಳಿಸಿತ್ತು. ಆ ಬಳಿಕ ಅವರು ಜಾಮೀನು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅ.30ರಂದು ಹೈಕೋರ್ಟ್ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ಪೀಠ, ಆರೋಗ್ಯ ತಪಾಸಣೆಗಾಗಿ ಆರು ವಾರಗಳ ಕಾಲ ಷರತ್ತುಬದ್ಧ ಮಧ್ಯಂತರ ಜಾಮೀನನ್ನು ಮಂಜೂರು ಮಾಡಿತ್ತು.

ದರ್ಶನ್ ಶಸ್ತ್ರಚಿಕಿತ್ಸೆ ಗೆ ವೈದ್ಯರ ಸಲಹೆ: ಬಳ್ಳಾರಿ ಜೈಲಿನಲ್ಲಿದ್ದ ದರ್ಶನ್ ಬೆನ್ನುಹುರಿ ನೋವಿನಿಂದ ಬಳಲುತ್ತಿದ್ದರು. ಅಂತೆಯೇ ಅವರಿಗೆ ಅಲ್ಲಿನ ವಿಮ್ಸ್ ಆಸ್ಪತ್ರೆಯಲ್ಲಿ ಎಂಆರ್‌ಐ ಸ್ಕ್ಯಾನ್ ಮಾಡಿಸಲಾಗಿತ್ತು. ಆ ಬಳಿಕ ಶಸ್ತ್ರಚಿಕಿತ್ಸೆಗೆ ಅಗತ್ಯದ ಬಗ್ಗೆ ವೈದ್ಯರು ಸಲಹೆ ನೀಡಿದ್ದರು. ಜೈಲಿನಿಂದ ಬಿಡುಗಡೆಯಾದ ಒಂದು ವಾರದಲ್ಲಿ ವೈದ್ಯಕೀಯ ವರದಿ ಸಲ್ಲಿಸುವಂತೆ ಕೋರ್ಟ್ ಆದೇಶಿಸಿತ್ತು. ಈ ಹಿನ್ನೆಲೆಯಲ್ಲಿ ದರ್ಶನ್ ಬೆಂಗಳೂರಿನ ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದ ಬಳಿಕ ಅವರ ಆರೋಗ್ಯ ಪರಿಸ್ಥಿತಿ ಮತ್ತು ಚಿಕಿತ್ಸೆ ಕುರಿತ ವೈದ್ಯಕೀಯ ವರದಿಯನ್ನು ಹೈಕೋರ್ಟ್‌ಗೆ ದರ್ಶನ್ ಪರ ವಕೀಲರು ನವೆಂಬರ್ 6ರಂದು ಸಲ್ಲಿಸಿದ್ದಾರೆ.

ಸಂಘಟಿತರಾಗಿ ಕೆಲಸ ಮಾಡಿ ಸಮ್ಮೇಳನ ಯಶಸ್ವಿಗೊಳಿಸಿ: ದಿನೇಶ್ ಗೂಳಿಗೌಡ

ಸಾಹಿತ್ಯ ಸಮ್ಮೇಳನದಲ್ಲಿ ಎಲ್ಲ ಕಲಾವಿದರಿಗೆ ಹೆಚ್ಚಿನ ಅವಕಾಶ

ವಿಶ್ವವಾಣಿ ಸುದ್ದಿಮನೆ ಮಂಡ್ಯ

ಮಂಡ್ಯದಲ್ಲಿ ಜರುಗಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಡೀ ಇಂಡಿಯಾದಲ್ಲಿ ಹೆಸರಾಗಬೇಕು. ಸಮ್ಮೇಳನದಲ್ಲಿ ಎಲ್ಲಾ ವರ್ಗದ ಕಲಾವಿದರಿಗೂ ಅವಕಾಶ ಕಲ್ಪಿಸ ಬೇಕು ಎಂದು ಶಾಸಕರು ಹಾಗೂ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಾಂಸ್ಕೃತಿಕ ಸಮನ್ವಯ ಸಮಿತಿ ಅಧ್ಯಕ್ಷ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ. ನಗರದ ಹೊರವಲಯದ ಅಮರಾ ವತಿ ಹೋಟೆಲ್ ನಲ್ಲಿ ಹಮ್ಮಿಕೊಂಡಿದ್ದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಾಂಸ್ಕೃತಿಕ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಇತಿಹಾಸದಲ್ಲಿ ಉಳಿಯು ವಂತಹ ಕಾರ್ಯಕ್ರಮ ಆಯೋಜಿಸುವ ಮುಖಾಂತರ ಸಮ್ಮೇಳನ ಯಶಸ್ವಿಗೊಳಿಸಿ ಜಿಲ್ಲೆಯ ಹೆಸರನ್ನು ಎತ್ತಿಹಿಡಿಯಬೇಕು ಎಂದರು.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಎಲ್ಲಾ ವರ್ಗದವರಿಗೆ ಸಮಾನ ಅವಕಾಶ ನೀಡಬೇಕು. ಅವಕಾಶ ವಂಚಿತರಿಗೂ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿ ಸ್ಥಳೀಯ ಕಲೆ, ಕಲಾವಿದರನ್ನು ಪ್ರೋತ್ಸಾಹಿಸುವ ಕೆಲಸವಾಗಬೇಕು. ನೋಂದಣಿಯಾಗಿರುವ ಕಲಾವಿದರ ಪಟ್ಟಿ ಅಂತಿಮಗೊಳಿಸಿ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವಾಗಿರುವುದರಿಂದ ದೇಶದ ನಾನಾ ಭಾಗದ ಕಲಾ ಪ್ರದರ್ಶನಕ್ಕೆ ಅವಕಾಶ ನೀಡುವುದರ ಜೊತೆಗೆ 31 ಜಿಲ್ಲೆಯ ಮುಖ್ಯ ಕಲಾಪ್ರಕಾರಗಳಿಗೆ ಅವಕಾಶ ಕಲ್ಪಿಸಬೇಕು ಎಂದು ಹೇಳಿದರು.

ಕಲಾವಿದರಿಗೆ ಸೂಕ್ತ ರೀತಿಯಲ್ಲಿ ಊಟ, ವಸತಿ ವ್ಯವಸ್ಥೆಯಾಗಬೇಕು. ಒಂದು ಸಂಘಟನೆಯಾಗಿ ಕೆಲಸ ಮಾಡಬೇಕು. ಮುಖ್ಯದ್ವಾರದಿಂದ ಗಣ್ಯರನ್ನು ಮಂಗಳ ವಾದ್ಯದ ಜೊತೆಯಲ್ಲಿ ಕರೆತರಬೇಕು. ತಮಟೆ, ನಗಾರಿ ತಂಡಗಳಿಂದ ಸ್ವಾಗತಿಸಬೇಕು. ಸಮ್ಮೇ ಳನ ಆರಂಭಕ್ಕೂ ಎರಡು ದಿನ ಮೊದಲೇ ನಗರದಲ್ಲಿ ನಾಟಕ, ಗಾಯನ ಕಾರ್ಯಕ್ರಮ ಗಳನ್ನು ಆಯೋಜಿಸಬೇಕು. ಈ ಮೂಲಕ ಡಿ.18ರಿಂದಲೇ ಸಾಹಿತ್ಯ ಸಮ್ಮೇಳನ ಹಬ್ಬದ ಆಚರಣೆ ಆರಂಭವಾಗಬೇಕು ಎಂದು ಕರೆಕೊಟ್ಟರು.

> ಸ್ಥಳೀಯ ಕಲಾವಿದರಿಗೆ ಪ್ರಾತಿನಿಧ್ಯ ನೀಡಲು ಸಮಿತಿಯವರು ಮಾನದಂಡ ನಿಗದಿಪಡಿಸಿ ತೀರ್ಮಾನ ಕೈಗೊಳ್ಳಬೇಕು. ಪಾರದರ್ಶಕ ನಿಯಮ, ಮಾನದಂಡಗಳನ್ನು ಅನುಸರಿಸಿ ಎಲ್ಲಾ ಕಲಾವಿದರಿಗೆ ಅವಕಾಶ ಕಲ್ಪಿಸಬೇಕು. ಮೂರು ವೇದಿಕೆಗಳಲ್ಲಿ ವಿವಿಧ ವಿಚಾರ ಗೋಷ್ಠಿ ಮುಗಿದ ನಂತರ ಕಾರ್ಯಕ್ರಮಕ್ಕೆ ಅವಕಾಶ ಸಿಗಲಿದೆ. ಅಂಬೇಡ್ಕರ್ ಭವನ, ಕಲಾಮಂದಿರದಲ್ಲಿ ಸ್ಥಳೀಯರಿಗೆ ಅವಕಾಶ ಸಿಗಲಿದೆ.
>
> **ಡಾ. ಕುಮಾರ್,** ಜಿಲ್ಲಾಧಿಕಾರಿ

> ಕಲಾವಿದರ ಆಯ್ಕೆಗೆ ಮಾನದಂಡ ನಿಗದಿಗೊಳಿಸಬೇಕು. ಸ್ಥಳೀಯ ಕಲಾತಂಡಗಳಿಗೆ ಪ್ರಾತಿನಿಧ್ಯ ನೀಡಬೇಕು. ಸ್ಥಳೀಯ ಪ್ರತಿಭೆಗಳನ್ನು ಗುರುತಿಸಬೇಕು. ಕಲಾವಿದರಿಗೆ ಗೌರವಧನ ಹೆಚ್ಚಿಸಬೇಕು. ಕಲಾಮಂದಿರ, ಅಂಬೇಡ್ಕರ್ ಭವನದಲ್ಲಿ ಕಾರ್ಯಕ್ರಮ ಆಯೋಜಿಸಿ ಸ್ಥಳೀಯ ಕಲಾವಿದರಿಗೆ ಅವಕಾಶ ಕಲ್ಪಿಸಬೇಕು. ಸ್ಥಳೀಯ ಕಲಾವಿದರ ಜೊತೆ ರಾಜ್ಯದ ಕಲಾವಿದರ ಸಮನ್ವಯತೆ ಕಾಯ್ದುಕೊಂಡು ವೇದಿಕೆ ಹಂಚಿಕೆಯಾಗಬೇಕು.
>
> **ಪ್ರೊ.ಜಯಪ್ರಕಾಶ್ ಗೌಡ,** ಸಾಂಸ್ಕೃತಿಕ ಸಮಿತಿ ಉಪಾಧ್ಯಕ್ಷ

ಕರುನಾಡ ಸಂಭ್ರಮದಲ್ಲಿ ಉತ್ತಮ ಸಿಬ್ಬಂದಿಗೆ ಗೌರವ

ಸ್ಮಾರ್ಟ್ ಕ್ವಿಕ್ ಸಂಸ್ಥೆಯ ಸಿಬ್ಬಂದಿಗೆ ಬೈಕುಗಳ ವಿತರಣೆ

ಬೆಂಗಳೂರು: ಸ್ಮಾರ್ಟ್ ಕ್ವಿಕ್ ಅರ್ಪಿಸುವ 69ನೇ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಕರುನಾಡ ಸಂಭ್ರಮ ಕಾರ್ಯಕ್ರಮದಲ್ಲಿ ಸಂಸ್ಥೆಯಲ್ಲಿ ಸಾಧನೆ ಮಾಡಿದ ಸಂಸ್ಥೆಯ 6 ಸಿಬ್ಬಂದಿಗೆ ಬೈಕುಗಳನ್ನು ವಿತರಣೆ ಮಾಡಲಾಯಿತು.

ಸ್ಫಟಿಕಪುರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಂಜಾವಧೂತ ಸ್ವಾಮೀಜಿ,ಸ್ಮಾರ್ಟ್ ಕ್ವಿಕ್ ಮಾಲೀಕ ದೀಪುಗೌಡ ಮತ್ತು ಚಿತ್ರಸಾಹಿತಿ ಕವಿರಾಜ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕನ್ನಡಿಗರಿಗೆ ಉದ್ಯೋಗ ಸಿಗಲಿ: ನಂಜಾವಧೂತ ಸ್ವಾಮೀಜಿ ಮಾತನಾಡಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನ್ನಡನಾಡಿನ ಯುವಕರು ಸಂಸ್ಥೆಗಳನ್ನು ಕಟ್ಟಬೇಕು. ಕನ್ನಡಿಗರಿಗೆ ಹೆಚ್ಚಿನ ಉದ್ಯೋಗ ಸಿಗುವಂತಾಗಬೇಕು. ವಿದೇಶಿ ಕಂಪನಿಗಳ ಸರಿಸಮಾನವಾಗಿ ರಾಜ್ಯದ ಕನ್ನಡಿಗ ದೀಪುಗೌಡ ಅವರು ಸ್ಮಾರ್ಟ್‌ಕ್ವಿಕ್ ಸಂಸ್ಥೆ ಸಾವಿರಾರು ಕನ್ನಡಿಗರಿಗೆ ಉದ್ಯೋಗ ನೀಡಿದ್ದಾರೆ. ಪರೋಕ್ಷ ಮತ್ತು ಪ್ರತ್ಯಕ್ಷವಾಗಿ ಯುವ ಸಮುದಾಯದವರಿಗೆ ಕೆಲಸ ನೀಡಿದ್ದಾರೆ. ಸ್ಪರ್ಧಾತ್ಮಕ ಯುಗದಲ್ಲಿ ಒಬ್ಬ ಕನ್ನಡಿಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆದಿರುವುದು ಹೆಮ್ಮೆಯ ವಿಷಯವಾಗಿದೆ. ಕನ್ನಡಿಗರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಉದ್ಯೋಗ ಸಂಸ್ಥೆಗಳನ್ನು ಕಟ್ಟಬೇಕು. ಕನ್ನಡಿಗರಿಗೆ ಹೆಚ್ಚಿನ ಉದ್ಯೋಗ ಲಭಿಸಬೇಕು ಎಂದು ಹೇಳಿದರು.

ಕನ್ನಡದಲ್ಲೇ ಮಾತನಾಡಿ: ದೀಪುಗೌಡ ಮಾತನಾಡಿ, ಕನ್ನಡ ಭಾಷೆ ತಾಯಿ ಭಾಷೆ, ಬೇರೆ ಭಾಷೆ ಕಲಿತರು ನಮ್ಮ ಮಾತೃಭಾಷೆ ಮರೆಯುವಂತಿಲ್ಲ, ಮಾತೃಭಾಷೆ ಮರೆತರೆ ಹೆತ್ತತಾಯಿ ಮರೆತಂತೆ. ಕನ್ನಡ ಭಾಷೆಗೆ 2500ವರ್ಷ ಇತಿಹಾಸವಿರುವ ಪ್ರಾಚೀನ ಭಾಷೆಯಾಗಿದೆ, ಕನ್ನಡ ಮಾತನಾಡುವ ಹೃದಯದಿಂದ ಮಾತನಾಡುತ್ತಾರೆ. ಕನ್ನಡ ಭಾಷೆ ಉಳಿಸಿ, ಬೆಳೆಸಲು ಪ್ರತಿಯೊಬ್ಬರೂ ಕನ್ನಡದಲ್ಲಿ ಮಾತನಾಡಿ, ಕನ್ನಡದಲ್ಲಿಯೇ ವ್ಯವಹರಿಸಬೇಕು ಎಂದು ಕರೆ ನೀಡಿದರು.

ಯುವ ಕನ್ನಡಿಗರಿಗೆ ಉತ್ತೇಜನ: ಸ್ಮಾರ್ಟ್‌ಕ್ವಿಕ್ ಸಂಸ್ಥೆಯಲ್ಲಿ ಹೆಚ್ಚಿನ ಕನ್ನಡಿಗರಿಗೆ ಉದ್ಯೋಗವಕಾಶ ನೀಡಲಾಗಿದೆ. ಕನ್ನಡ, ಕನ್ನಡಿಗರು ಮೊದಲ ಆದ್ಯತೆ. ಇ-ಕಾಮರ್ಸ್ ಸಂಸ್ಥೆಯಾಗಿದ್ದು, ನಿರುದ್ಯೋಗ ನಿವಾರಣೆ ಮಾಡಬೇಕು ಎಂದು ಯುವ ಸಮುದಾಯಕ್ಕೆ ಉದ್ಯೋಗ ಸೃಷ್ಟಿ ಮಾಡಿ ಕೆಲಸ ನೀಡುತ್ತಿದ್ದೇವೆ . ಸಂಸ್ಥೆಯಲ್ಲಿ ಉತ್ತಮ ಸೇವೆ ಸಲ್ಲಿಸಿರುವ ಆರು ನೌಕರರಿಗೆ 2.5ಲಕ್ಷ ರು.ಮೌಲ್ಯದ ಬೈಕ್ ಮತ್ತು 4ಲಕ್ಷ ಮೌಲ್ಯದ ಬಿಎಂಡಬ್ಲ್ಯೂ ಬೈಕ್ ಉಡುಗೊರೆಯಾಗಿ ನೀಡಲಾಗಿದೆ ಎಂದು ದೀಪುಗೌಡ ತಿಳಿಸಿದರು.

ಕರುನಾಡ ಸಂಭ್ರಮಕ್ಕೆ ಸ್ಫಟಿಕಪುರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಂಜಾವಧೂತ ಸ್ವಾಮೀಜಿ ಮತ್ತು ಸ್ಮಾರ್ಟ್ ಕ್ವಿಕ್ ಮಾಲೀಕ ದೀಪುಗೌಡ, ಚಿತ್ರಸಾಹಿತಿ ಕವಿರಾಜ್ ಚಾಲನೆ ನೀಡಿದರು.

ಕನಕದಾಸರ ತತ್ವ ಕೀರ್ತನೆ ಪಾಲಿಸಿ

ಗುಂಜೂರು ಪಾಳ್ಯ ಗ್ರಾಮದಲ್ಲಿ ಸಂತ ಕನಕದಾಸರ 537 ನೇ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕ ಆರ್.ರಾಮಕೃಷ್ಣಪ್ಪ. ದೇವರಾಜ್ ಮಂಜುನಾಥ್ ಬಾಲಾಜಿ ಮೋಹನ್ .ಶ್ರೀಧರ ಬಾಬು , ಮುರಳಿ, ಮಂಜು, ಗೋಪಾಲಪ್ಪ , ಸುರೇಶ್ , ಸರ್ವೇಶ, ವೆಂಕಟಾಚಲತಿ, ರಘುರಮ್ ರೆಡ್ಡಿ, ಬಸವರಾಜ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಮಹದೇವಪುರ: ಜಾತಿ ಸಂಕೋಲೆಯನ್ನು ಕಳಚಿದ ಭಕ್ತ ಶ್ರೇಷ್ಠ ಕನಕದಾಸರ ತತ್ವ ಅವರ ಕೀರ್ತನೆಯ ಸಂದೇಶಗಳನ್ನು ಪಾಲಿಸುವುದು ನಾವು ಅವರಿಗೆ ಕೊಡುವ ಅತಿ ದೊಡ್ಡ ಗೌರವವಾಗಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕ ಆರ್. ರಾಮಕೃಷ್ಣಪ್ಪ ತಿಳಿಸಿದ್ದಾರೆ.

ಗುಂಜೂರು ಪಾಳ್ಯ ಗ್ರಾಮದಲ್ಲಿ ಸಂತ ಕನಕದಾಸರ 537 ನೇ ಜಯಂತಿ ಕಾರ್ಯಕ್ರಮದಲ್ಲಿ ಭಾವ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಕನಕದಾಸರ ಕೀರ್ತನೆಯಲ್ಲಿ ಅಗಾಧ ವೈಚಾರಿಕ ಚಿಂತನೆ ಯಾವ ಮಟ್ಟದಲಿದೆ ಎಂಬುದು ತಿಳಿಯುತ್ತದೆ ಅವರು ಬರಿ ಹರಿ ಯನ್ನು ಹೊಗಳಿ ದಾಸ ಶ್ರೇಷ್ಠರಾಗಲಿಲ್ಲ ಅಂದಿನ ಕಾಲದಲ್ಲಿ ಇಂದಿಗೂ ನಡೆಯುತ್ತಿರುವ ಡಾಂಭಿಕ ಮೌಢ್ಯದ ಅಂಧಾಚರಣೆ ಗಳನ್ನೂ ತೀಕ್ಷ್ಣವಾಗಿ ಟೀಕಿಸಿದ್ದರು ಎಂದು ಹೇಳಿದರು.

ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಜನರ ಮನಸ್ಸುಗಳನ್ನು ಬದಲಿಸುತ್ತಾ ಸಮಾಜವನ್ನು ಸರಿದಾರಿಗೆ ತರುಲು ಶ್ರಮಿಸಿದರು. ಅವರ ಜೀವನ ಹಾಗೂ ಸಾಹಿತ್ಯ ಎರಡೂ ನಮಗೆ ಉತ್ತಮ ಮಾರ್ಗವನ್ನು ತೋರುತ್ತವೆ. ಕನಕದಾಸರು ದೇವರು ಭಕ್ತಿಗೆ ಮಾತ್ರ ಒಲಿಯುತ್ತಾನೆ ಹೊರತು ಜಾತಿಗಲ್ಲ ಎಂಬುದನ್ನು ತೋರಿಸಿದ್ದಾರೆ. ಅವರ ಆದರ್ಶಗಳನ್ನು ಎಲ್ಲರೂ ಪಾಲಿಸೋಣ ಎಂದು ತಿಳಿಸಿದರು.

ಇದೆ ವೇಳೆ ಕನಕದಾಸರ ಜೀವನ ಚರಿತ್ರೆ ಪುಸ್ತಕ ಗಳನ್ನು ಗ್ರಾಮಸ್ಥರಿಗೆ ಮತ್ತು ಶಾಲಾ ಮಕ್ಕಳಿಗೆ ನೀಡಿದರು. ಕಬಡ್ಡಿ ಕ್ರೀಡೆ ಯಲ್ಲಿ ವಿಜೇತರಿಗೆ ಬಹುಮಾನ ಮತ್ತು ಕುರಿ ನೀಡಿ ಗೌರವಿಸಲಾಯಿತು.

ತುತ್ತಿನ ಕೂಳು ಹುಡುಕಲು ಚಿತ್ತಾರದ ಬಲೆ ಹೆಣೆದು ಕಾಯುವುದು ಜೇಡ. ಜೇಡಕ್ಕೆ ಕೂಳು ಸಿಗಲಿ ಬಿಡಲಿ, ಚಿತ್ತಾರದ ಬಲೆ ನೋಡುವುದೇ ಸೊಗಸು. ಬೆಂಗಳೂರಿನ ಉಲ್ಲಾಳ ರಸ್ತೆಯ ಬಳಿ ಮರವೊಂದರಲ್ಲಿ ಬಲೆ ಹೆಣೆಯುತ್ತಿದ್ದ ಜೇಡ ಕ್ಯಾಮೆರಾ ಕಣ್ಣಿಗೆ ಸಿಕ್ಕ ಬಗೆ.

–ಚಿತ್ರ: ಸುಧಾಕರ್ ದೇವರಾಜ್

ಯಲಹಂಕದ ಅದೃಷ್ಟಶಾಲಿ ಗ್ರಾಹಕನಿಗೆ 1 ಕೆಜಿ ಚಿನ್ನ ಬಹುಮಾನ

ಬೆಂಗಳೂರು ಗೋಲ್ಡ್ ಶಾಪಿಂಗ್ ಫೆಸ್ಟಿವಲ್

ಬೆಂಗಳೂರು: ಬೆಂಗಳೂರು ಗೋಲ್ಡ್ ಶಾಪಿಂಗ್ ಫೆಸ್ಟಿವಲ್‌ನಲ್ಲಿ ಚಿನ್ನ ಖರೀದಿಸಿದ ಯಲಹಂಕದ ಶ್ರೀ ಸಾಯಿಗೋಲ್ಡ್ ಪ್ಯಾಲೇಸ್ ಗ್ರಾಹಕನಿಗೆ ಒಂದು ಕೆ.ಜಿ. ಚಿನ್ನದ ಗಟ್ಟಿ ಪ್ರಥಮ ಬಹುಮಾನದ ರೂಪದಲ್ಲಿ ಲಭಿಸಿದೆ. ಚಿನ್ನ ಖರೀದಿಸಿದ ತಮಗೆ ಬಹುಮಾನ ಬರುತ್ತದೆ ಎಂಬ ಕಲ್ಪನೆಯೇ ಇರದ ಯಲಹಂಕ ಗ್ರಾಹಕ ಬಹುವಾಗಿ ಸಂಭ್ರಮಿಸಿದರು.

ಫೋರ್ ಸೀಸನ್ಸ್ ಹೋಟೆಲ್ ಸಭಾಂಗಣದಲ್ಲಿ ಜ್ಯುವೆಲ್ಲರ್ಸ್ ಅಸೋಸಿಯೇಷನ್ ಬೆಂಗಳೂರು ಬಂಪರ್ ಡ್ರಾ, ಬೆಂಗಳೂರು ಗೋಲ್ಡ್ ಶಾಪಿಂಗ್ ಫೆಸ್ಟಿವಲ್‌ನ 3ನೇ ಆವೃತ್ತಿ ಬಂಪರ್ ಬಹುಮಾನ 1 ಕಿಲೋ ಚಿನ್ನ ಮತ್ತು ಇತರ ಬಹುಮಾನಗಳನ್ನು ಡಿಜಿಟಲ್ ವ್ಯವಸ್ಥೆ ಮೂಲಕ ಮೆಗಾ ಲಕ್ಕಿಡ್ರಾ, ಆಯೋಜಿಸಲಾಗಿತ್ತು. ನಟಿ ರಚಿತಾ ರಾಮ್ ಹಾಗೂ ವಿಧಾನಪರಿಷತ್ತಿನ ಶಾಸಕ ಡಾ.ಟಿ.ಎ.ಶರವಣ, ಬೆಂಗಳೂರು ಜ್ಯುವೆಲರಿ ಅಸೋಸಿಯೇಷನ್ ಅಧ್ಯಕ್ಷ ಡಾ.ಚೇತನ್ ಕುಮಾರ್ ಮೆಹ್ತಾ, ಬೆಂಗಳೂರು ಗೋಲ್ಡ್ ಫೆಸ್ಟಿವಲ್ ಅಧ್ಯಕ್ಷ ಸುರೇಶ್ ಕುಮಾರ್ ಘಾನ ಮೆಗಾ ಲಕ್ಕಿ ಡ್ರಾಗೆ ಚಾಲನೆ ನೀಡಿದರು.

ಚಿನ್ನದಲ್ಲಿ ಹೂಡಿಕೆ ಮಾಡಿ: ವಿಧಾನ ಪರಿಷತ್ ಸದಸ್ಯ ಡಾ. ಟಿ.ಎ.ಶರವಣ ಮಾತನಾಡಿ, ಬೆಂಗಳೂರು ಗೋಲ್ಡ್ ಫೆಸ್ಟಿವಲ್ 200ಚಿನ್ನದ ಅಂಗಡಿಗಳಲ್ಲಿ ಐವತ್ತು ಸಾವಿರ ಗ್ರಾಹಕರು ಚಿನ್ನದ ಖರೀದಿ ಮಾಡಿದವರಿಗೆ ಲಕ್ಕಿ ಕೂಪನ್ ನೀಡಲಾಗಿತ್ತು. ಲಕ್ಕಿ ಕೂಪನ್ ಇರುವ ಗ್ರಾಹಕರಿಗೆ ಲಕ್ಕಿ ಡ್ರಾ ನಲ್ಲಿ 1ಕೆ.ಜಿ.ಚಿನ್ನ ಪ್ರಥಮ ಬಹುಮಾನ ಸೇರಿ ಒಂದೂವರೆ ಕೆ.ಜಿ.ಚಿನ್ನ ಮತ್ತು 16ಕೆ.ಜಿ. ಬೆಳ್ಳಿ ಬಹುಮಾನ ವಿತರಿಸಲಾಗುತ್ತಿದೆ. ಚಿನ್ನದ ಬೆಲೆ 8 ಸಾವಿರ ರು.ಗೆ ತಲುಪಿದೆ. ಚಿನ್ನ ಖರೀದಿ ಅತ್ಯುತ್ತಮ ಹೂಡಿಕೆ ಎಂದರು.

ಗೋಲ್ಡ್ ಶಾಪಿಂಗ್ ಫೆಸ್ಟಿವಲ್ ನ 3ನೇ ಆವೃತ್ತಿಯಲ್ಲಿ ನಟಿ ರಚಿತಾ ರಾಮ್ ಹಾಗೂ ವಿಧಾನಪರಿಷತ್ತಿನ ಶಾಸಕ ಡಾ.ಟಿ.ಎ.ಶರವಣ, ಬೆಂಗಳೂರು ಜುವ್ಯೆಲರಿ ಅಸೋಸಿಯೇಷನ್ ಅಧ್ಯಕ್ಷ ಡಾ.ಚೇತನ್ ಕುಮಾರ್ ಮೆಹ್ತಾ, ಬೆಂಗಳೂರು ಗೋಲ್ಡ್ ಫೆಸ್ಟಿವಲ್ ಅಧ್ಯಕ್ಷ ಸುರೇಶ್ ಕುಮಾರ್ ಘಾನ ಭಾಗವಹಿಸಿದ್ದರು.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್
ಯುಬಿ ಟವರ್, ನಂ. 24, ವಿಠಲ್ ಮಲ್ಯ ರಸ್ತೆ, ಬೆಂಗಳೂರು–560001, ಕರ್ನಾಟಕ

ಷೇರು ಪ್ರಮಾಣಪತ್ರಗಳು ಕಳೆದುಹೋಗಿರುವ ಬಗ್ಗೆ ಸೂಚನೆ

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ("ದಿ ಕಂಪನಿ") ಈ ಸೂಚನೆಯ ಮೂಲಕ ತಿಳಿಸುವುದೇನೆಂದರೆ, ಈ ಕೆಳಗೆ ಹೆಸರಿಸಿರುವ ಷೇರುದಾರರ ಹೆಸರಿನಲ್ಲಿ ನೋಂದಾಯಿತವಾದ ಷೇರು ಪ್ರಮಾಣ ಪತ್ರಗಳು ಕಳೆದು, ತಪ್ಪಿ ಹೋಗಿದ್ದು, ನಕಲಿ ಷೇರು ಪ್ರಮಾಣಪತ್ರಗಳ ನೀಡುವಿಕೆಗಾಗಿ ಅರ್ಜಿ ಸಲ್ಲಿಸಿರುತ್ತಾರೆ.

ನೋಂದಾಯಿತ ಷೇರುದಾರ(ರು)	ಫೋಲಿಯೋ ಸಂ	ಈಕ್ವಿಟಿ ಷೇರುಗಳು	ಪ್ರಮಾಣಪತ್ರ ಸಂಖ್ಯೆ	ಡಿಸ್ಟಿಂಕ್ಟಿವ್ ಸಂಖ್ಯೆ ರಿಂದ–ರವರೆಗೆ
ರಾಜೇಶ್ ಕುಮಾರ್	MS121074	4000 ಮುಖ ಬೆಲೆ @2	5022	722505686-722509685

ಯಾವುದೇ ವ್ಯಕ್ತಿ ಹೇಳಲಾದ ಷೇರುಪ್ರಮಾಣಪತ್ರಗಳ ಬಗ್ಗೆ ಕ್ಲೈಮು ಹೊಂದಿದ್ದಲ್ಲಿ ಅಂಥವರು ತಮ್ಮ ಕ್ಲೈಮನ್ನು ಪೂರಕ ದಾಖಲೆಗಳೊಂದಿಗೆ ಕಂಪನಿಯೊಂದಿಗೆ ಅಥವಾ ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್, ನಂ. 30, ರಮಣ ರೆಸಿಡೆನ್ಸಿ, 4ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003 ಇವರಿಗೆ ತಲುಪಿಸತಕ್ಕದ್ದು. ಸೂಕ್ತ ಮತ್ತು ಮಾನ್ಯ ಕ್ಲೈಮ್‌ಗಳು ಈ ಪ್ರಕಟಣೆಯ 15 ದಿನಗಳ ಒಳಗಾಗಿ ಬಂದಿಲ್ಲವಾದರೆ, ಕಂಪನಿಯು ಮೇಲೆ ಹೆಸರಿಸಿದವರಿಗೆ ನಕಲಿ ಪ್ರಮಾಣಪತ್ರ(ಗಳನ್ನು) ಷೇರುದಾರ(ರಿಗೆ) ನೀಡಲಿದ್ದು, ತದನಂತರ ಯಾವುದೇ ಕ್ಲೈಮ್‌ನ್ನು ಉತ್ತೇಜಿಸಲಾಗುವುದಿಲ್ಲ.

ದಿನಾಂಕ: 18.11.2024 ರಾಜೇಶ್ ಕುಮಾರ್

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, **ಶ್ರೀ. ಮುರಳಿ ಮೋಹನ್ ಟಿ.ಸಿ.** ಇವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ಥಿರಾಸ್ತಿ ಸ್ವತ್ತಿಗೆ ಮಾಲೀಕರಾಗಿರುತ್ತಾರೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ಶ್ರೀಮತಿ. ಬಿ.ಎಸ್. ನಾಗಮಣಿ ರವರ ಹೆಸರಿಗೆ ನೀಡಿರುವ ದಿನಾಂಕ: 15/12/2014 ರ ಮೂಲ ಹಂಚಿಕೆ ಪತ್ರ ಮತ್ತು ದಿನಾಂಕ 19/01/2018 ರ ಸ್ವಾಧೀನ ಪತ್ರ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ಶ್ರೀಮತಿ. ಬಿ.ಎಸ್. ನಾಗಮಣಿ ಕೋಂ ಶ್ರೀ. ಗಂಗಾಧರ ರವರ ಹೆಸರಿಗೆ ಬರೆದುಕೊಟ್ಟಿರುವ ದಸ್ತಾವೇಜು ನಂ. 1310/2016–17, 1ನೇ ಪುಸ್ತಕ, ಸಿಡಿ ನಂ.220 ರಂತೆ ಹೆಚ್ಚುವರಿ ಜಿಲ್ಲಾ ನೋಂದಣಾಧಿಕಾರಿ ನಗರ ಜಿಲ್ಲೆ, ಉಪ–ನೋಂದಣಿಗಳ ಕಛೇರಿಯಲ್ಲಿ ನೋಂದಣಿಯಾಗಿರುವ ದಿನಾಂಕ 15/07/2016 ರ ಮೂಲ ಅಸಲಿ ಕ್ರಯ ಪತ್ರವನ್ನು ಕಳೆದು ಕೊಂಡಿರುತ್ತಾರೆ. ಯಾರಿಗಾದರೂ ತಿಳಿಸಿರುವ ಷೆಡ್ಯೂಲ್ ಸ್ವತ್ತಿನ ಮೇಲೆ ಕ್ಲೇಮುಗಳು ಅಥವಾ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ **ಏಳು ದಿನಗಳ** ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ವಿಶ್ವೇಶ್ವರಯ್ಯ ಬಡಾವಣೆ 6ನೇ ಬ್ಲಾಕ್ ನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ರಚಿಸಿರುವ ಸೈಟ್ ನಂ. 2788, ರ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 9.00 ಮೀಟರ್ಸ್, ಮತ್ತು ಉತ್ತರದಿಂದ ದಕ್ಷಿಣಕ್ಕೆ : 6.00 ಮೀಟರ್ಸ್, ಮತ್ತು ಇದರ ಸಂಪೂರ್ಣ ಚಕ್ಕುಬಂದಿ ಈ ಕೆಳಕಂಡಂತಿರುವುದು:
ಪೂರ್ವಕ್ಕೆ : ರಸ್ತೆ; **ಪಶ್ಚಿಮಕ್ಕೆ** : ಸೈಟ್ ನಂ. 2839 & 2840; **ಉತ್ತರಕ್ಕೆ** : ಸೈಟ್ ನಂ. 2789; **ದಕ್ಷಿಣಕ್ಕೆ** : ಸೈಟ್ ನಂ. 2787.

ಎನ್. ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್, ಎನ್ ಆರ್ ಕಾಲೋನಿ ಬಸ್ ನಿಲ್ದಾಣ ಹತ್ತಿರ, ಹೋಟೆಲ್ ದ್ವಾರಕ ಎದುರು, ಬೆಂಗಳೂರು–560019, ಮೊ: 9341261700.

PUBLIC NOTICE

Public are informed that our clients Lakshmamma N. and Basavaraju R intends to Purchase the Property bearing No. 99, 5th Cross, Kaverinagar, Ward No. 42, BBMP, previously coming under the limits of Dasarahalli Nagarasabhe, Assesment No. 8/2 Old No.8, Lagere Village, Yeshwanthapura Hobli, Bangalore North Taluk, measuring East to West 12.192 Mtrs., North to South 9.144 Mtrs and bounded as follows:
East by: Site No. 65. West by: 30 feet Road,
North by: Site No. 98,
South by: Vacant Land.
from its owner Ramprasad B. G, and informing general public that Lakshmamma N. and Basavaraju R intent to mortgage the said property in favour of M/s PIRAMAL CAPITAL AND HOUSING FINANCE LIMITED and anyone having any claim over the said property or any other claims by any person/s Nationalized banks, MNC Banks Private Banks, Co-Operative Banks any Financial institutions Governed by the RBI Rules may lodge their objections in writing within 07 days from this day to the under mentioned Advocate.

K. S. Ravi ADVOCATE
OFFICE# 53/1, 1th Floor, Guttahalli Main Road, D.T. Street, 8th Cross, Malleshwaram, Bangalore – 560 003
Email: raviksadvocate@gmail.com
Mobile: 99450 00789

ಗ್ಯಾರಂಟಿ ಭಾರ ಬಿಪಿಎಲ್ ರದ್ದು

ಬೆಂಗಳೂರು: ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಸಾಧ್ಯವಾಗದೆ ಫಲಾನುಭವಿಗಳನ್ನೇ ಕಡಿಮೆ ಮಾಡಲು ಸರಕಾರ ಹೊರಟಿದೆ. ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗುತ್ತಿದೆ ಎಂದು ಆಮ್ ಆದ್ಮಿ ಪಕ್ಷ ದೂರಿದೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಶ್ರೀ.ಜಿ.ಸಿ.ಸುರೇಶ್, ಇವರು ಕೆಳಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ಥಿರಾಸ್ತಿ ಸ್ವತ್ತಿಗೆ ಮಾಲೀಕರಾಗಿರುತ್ತಾರೆ ಮತ್ತು ಶ್ರೀ.ವೀರಭದ್ರಯ್ಯ ಬಿನ್ ಲೇಟ್ ಚಿಕ್ಕವೀರಭದ್ರಯ್ಯನವರು ಶ್ರೀಮತಿ. ಶಿವರುದ್ರಮ್ಮ ಕೋಂ ಲೇಟ್ ವೀರಭದ್ರಯ್ಯನವರ ಹೆಸರಿಗೆ ಬರೆದುಕೊಟ್ಟಿರುವ ಅಸಲಿ ಮಾರಾಟ ಪತ್ರದ ದಿನಾಂಕ:23–03–1996, ದಸ್ತಾವೇಜು ನಂ.4791/ 1995–96, 1ನೇ ಪುಸ್ತಕ, ವಾಲ್ಯೂಮ್ ನಂ.1747, ಪುಟಗಳು –201–202, ಈ ಸ್ವತ್ತು, ರಾಮನಗರ, ಉಪ ನೋಂದಣಿ ಕಛೇರಿಯಲ್ಲಿ ನೋಂದಣಿಯಾಗಿರುವ ಅಸಲಿ ಮಾರಾಟ ಪತ್ರವನ್ನು ಕಳೆದುಕೊಂಡಿರುತ್ತಾರೆ. ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ **ಏಳು ದಿನಗಳ** ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ರಾಮನಗರ ಜಿಲ್ಲೆ, ರಾಮನಗರ ಟೌನ್, ಐಜೂರ್ ಗ್ರಾಮ, ವಾರ್ಡ್ ನಂ.30, ಮಲ್ಲೇಶ್ವರ ಲೇಔಟ್, ಬ್ಲಾಕ್–2, 4ನೇ ಕ್ರಾಸ್, ನಂ. 12ಸಿ, ಇಲ್ಲಿರುವ ವಸತಿ ಸ್ಥಿರಾಸ್ತಿ ಖಾಲಿ ಸ್ವತ್ತಿನ ಬಿಯರಿಂಗ್ ನಂ.30–2–515–12ಸಿ, ಹಳೇ ಖಾತೆ ನಂ. 1937/1550, ಹೊಸ ನಗರಸಭೆ ಖಾತಾ ನಂ.578/549/567/1937/1550, ಅಸೆಸ್‌ಮೆಂಟ್ ನಂ.47/3, ಪಿ.ಐ.ಡಿ ನಂ. 126/25/8, ಇದರ ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ 30 ಅಡಿಗಳು, ಮತ್ತು ಉತ್ತರದಿಂದ ದಕ್ಷಿಣದಲ್ಲಿ 40 ಅಡಿಗಳು, ಒಟ್ಟಾರೆ 1200 ಚದರ ಅಡಿಗಳು, ಈ ಸ್ವತ್ತಿಗೆ ಚಕ್ಕುಬಂದಿ:– **ಪೂರ್ವಕ್ಕೆ** : ಸೈಟ್ ನಂ.10, **ಪಶ್ಚಿಮಕ್ಕೆ** : ಸೈಟ್ ನಂ.12, **ಉತ್ತರಕ್ಕೆ** : 24 ಅಡಿ ರಸ್ತೆ, **ದಕ್ಷಿಣಕ್ಕೆ** : ಸೈಟ್ ನಂ.26,

ಎನ್ ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್, ಎನ್.ಆರ್.ಕಾಲೋನಿ ಬಸ್ ನಿಲ್ದಾಣದ ಹತ್ತಿರ, ಹೋಟೆಲ್ ದ್ವಾರಕ ಎದುರು, ಬೆಂಗಳೂರು–560019,

ವಿಶೇಷ ಕಾರ್ಯಾಚರಣೆಯಲ್ಲಿ 1,507 ಪ್ರಕರಣ ದಾಖಲು

ಸಂಚಾರ ನಿಯಮ ಉಲ್ಲಂಘನೆ: 7.62 ಲಕ್ಷ ದಂಡ ಸಂಗ್ರಹ

ಬೆಂಗಳೂರು: ಕಳೆದ ಕೆಲವು ದಿನಗಳಿಂದ ಬೆಂಗಳೂರು ನಗರದಾದ್ಯಂತ ಸಂಚಾರ ನಿಯಮಗಳ ಉಲ್ಲಂಘನೆ ವಿರುದ್ಧದ ಕಾರ್ಯಾಚರಣೆಯನ್ನು ಸಂಚಾರ ಪೊಲೀಸರು ತೀವ್ರಗೊಳಿಸಿದ್ದಾರೆ. ಅದರಂತೆ, ಶನಿವಾರ ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ ಕೇವಲ 5 ಗಂಟೆಗಳಲ್ಲಿ 7.62 ಲಕ್ಷ ರು. ದಂಡ ಸಂಗ್ರಹಿಸಿದ್ದಾರೆ. ಶನಿವಾರ ಬೆಳಗ್ಗೆ 11ರಿಂದ ಸಂಜೆ 4 ಗಂಟೆ ವರೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಗಿತ್ತು.

ಒಟ್ಟು 1,507 ಪ್ರಕರಣ ದಾಖಲಿಸಿ, 7.62 ಲಕ್ಷ ರು. ದಂಡ ಸಂಗ್ರಹಿಸಿದ್ದಾರೆ. ಒಟ್ಟು ಪ್ರಕರಣಗಳ ಪೈಕಿ 722 ನೋ ಎಂಟ್ರಿ ಪ್ರಕರಣ, 590 ಒನ್ ವೇ ಉಲ್ಲಂಘನೆ ಪ್ರಕರಣಗಳಿದ್ದವು. ಒಟ್ಟು ದಾಖಲಾದ ಪ್ರಕರಣಗಳಲ್ಲಿ 1,312 ರಷ್ಟು ನೋ ಎಂಟ್ರಿ, ಒನ್ ವೇ ಉಲ್ಲಂಘನೆಯೇ ಇದ್ದವು. ಅಕ್ರಮ ಪಾರ್ಕಿಂಗ್ 127 ಪ್ರಕರಣ ದಾಖಲಿಸಿ 64,500 ರು. ದಂಡ ಸಂಗ್ರಹಿಸಲಾಗಿದೆ. ಪ್ರವೇಶ ನಿಷೇಧ 722 ಪ್ರಕರಣ ದಾಖಲಿಸಿ 3,66,500 ರು. ದಂಡ ಸಂಗ್ರಹಿಸಲಾಗಿದೆ. ಪಾದಚಾರಿ ಮಾರ್ಗದಲ್ಲಿ ವಾಹನ ಚಲಾವಣೆ 68 ಪ್ರಕರಣ ದಾಖಲಿಸಿ 34,000 ರು. ದಂಡ ವಿಧಿಸಿದ್ದಾರೆ. ಒನ್ ವೇ ಉಲ್ಲಂಘನೆ: 590 ಪ್ರಕರಣ ದಾಖಲಿಸಿ 2,97,000 ರು. ದಂಡ ಸಂಗ್ರಹಿಸಲಾಗಿದೆ.

> **ಸಂಚಾರ ನಿಯಮ ಜಾಗೃತಿ**
>
> ಬೆಂಗಳೂರು ನಗರದಾದ್ಯಂತ ಸಂಚಾರ ನಿಯಮಗಳ ಬಗ್ಗೆ ವಾಹನ ಸವಾರರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನೂ ಟ್ರಾಫಿಕ್ ಪೊಲೀಸರು ಮಾಡುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿಮ ಜಾಗೃತಿ ವಿಡಿಯೊಗಳನ್ನು ಪೋಸ್ಟ್ ಮಾಡುವ ಮೂಲಕ ಮಾತ್ರವಲ್ಲದೆ, ವಿವಿಧ ಸ್ಥಳಗಳಿಗೆ ತೆರಳಿಯೂ ಟ್ರಾಫಿಕ್ ಪೊಲೀಸ್ ಸಿಬ್ಬಂದಿ ಅರಿವು ಮೂಡಿಸುವ ಕಾರ್ಯ ಮಾಡುತ್ತಿದ್ದಾರೆ. 'ಒಂದು ಕ್ಷಿಪ್ರ ಕರೆ' ನಿಮ್ಮ ಕೊನೆಯ ತಪ್ಪಾಗಲು ಬಿಡಬೇಡಿ. ನಿಮ್ಮ ಜೀವನ ಮತ್ತು ಇತರರದ್ದು ಸಹ-ಅಪಾಯದಲ್ಲಿದೆ ಎಂಬ ಅರಿವಿರಲಿ. ಈಗ ವಾಹನ ಚಲಾಯಿಸಿ, ನಂತರ ಕರೆ ಮಾಡಿ. ಎಂದು ವಾಹನ ಚಾಲನೆ ವೇಳೆ ಮೊಬೈಲ್ ಬಳಸುವವರನ್ನು ಟ್ರಾಫಿಕ್ ಪೊಲೀಸರು ಎಚ್ಚರಿಸಿದ್ದಾರೆ.

ಸಂಗಾತಿ ಮೇಲೆ ರೇಪ್ ಕೇಸ್: ಪ್ರಕರಣ ರದ್ದು

ಬೆಂಗಳೂರು: ಸರಿಸುಮಾರು 22 ವರ್ಷ ಸಹ ಜೀವನ ನಡೆಸಿದ ನಂತರ ಪ್ರಿಯತಮನ ವಿರುದ್ಧ ಮಹಿಳೆಯೊಬ್ಬರು ದಾಖಲಿಸಿದ್ದ ಅತ್ಯಾಚಾರ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿ ಆದೇಶಿಸಿದೆ.

ಅತ್ಯಾಚಾರ, ಜೀವ ಬೆದರಿಕೆ ಮತ್ತು ವಂಚನೆ ಸೇರಿ ಇತರ ಆರೋಪಗಳ ಸಂಬಂಧ ತನ್ನ ವಿರುದ್ಧ ಮಾಜಿ ಗೆಳತಿಯು ಬ್ಯಾಡರಹಳ್ಳಿ ಪೊಲೀಸ್ ಠಾಣೆಗೆ ದಾಖಲಿಸಿರುವ ದೂರು ರದ್ದುಪಡಿಸುವಂತೆ ಕೋರಿ ನೆಲಮಂಗಲದ ನಿವಾಸಿ ಸತೀಶ್ ಎಂಬವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ ಅವರ ಪೀಠ ಈ ಆದೇಶ ಮಾಡಿದೆ.

ನಗರದ ಅಂದ್ರಹಳ್ಳಿಯಲ್ಲಿ ನೆಲೆಸಿರುವ ಮಹಿಳೆ ಮೊದಲಿಗೆ ಮಲ್ಲಯ್ಯ ಎಂಬವರನ್ನು ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳು ಜನಿಸಿದ್ದರು. ಮಾರಣಾಂತಿಕ ರೋಗದಿಂದ ಪತಿ ಬಳಲುತ್ತಿದ್ದ ಹಿನ್ನೆಲೆಯಲ್ಲಿ 2004ರಲ್ಲಿ ಬೆಂಗಳೂರಿಗೆ ಬಂದಿದ್ದ ಮಹಿಳೆ ಹೋಟೆಲ್ ಕೆಲಸಕ್ಕೆ ಸೇರಿದ್ದರು.

> **ಮಹಿಳೆಯ ಆರೋಪವೇನು?**
>
> ಇದಾದ ಬಳಿಕ ಪರಿಚಯವಾದ ಸತೀಶ್ ಜತೆಗೆ ಸಲುಗೆ ಬೆಳೆದಿತ್ತು. ಮಹಿಳೆಯನ್ನು ಮದುವೆಯಾಗಿ ಉತ್ತಮ ಜೀವನ ನೀಡುವುದಾಗಿ ಸತೀಶ್ ಸಹ ಭರವಸೆ ನೀಡಿದ್ದ. ಇದರಿಂದ ಸತೀಶ್ ಮನೆಯಲ್ಲಿಯೇ ಆಕೆ ವಾಸ ಮಾಡತೊಡಗಿದ್ದು, ಇಬ್ಬರ ನಡುವೆ ದೈಹಿಕ ಸಂಬಂಧ ಬೆಳೆದಿತ್ತು. ನಂತರ ಸತೀಶ್ ತನ್ನ ಹುಟ್ಟೂರಿಗೆ ಹೋಗಿ ಹಿರಿಯರು ನಿಶ್ಚಯಿಸಿದ್ದ ಹುಡುಗಿಯನ್ನು ವಿವಾಹವಾಗಿದ್ದರು. ಈ ವಿಚಾರ ತಿಳಿದ ಮಹಿಳೆ ತನ್ನನ್ನು ಮದುವೆಯಾಗುವಂತೆ ಸತೀಶ್‌ಗೆ ಬಲವಂತ ಮಾಡಿದ್ದರು. ಅದಕ್ಕೆ ನಿರಾಕರಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಗಲಾಟೆ ಮಾಡಿದ ಆರೋಪ ಸತೀಶ್ ಮೇಲಿದೆ. ಮಹಿಳೆ ಸತೀಶ್ ವಿರುದ್ಧ ಅತ್ಯಾಚಾರ, ವಂಚನೆ, ಜೀವ ಬೆದರಿಕೆ, ಉದ್ದೇಶಪೂರ್ವಕವಾಗಿ ಅವಮಾನ ಮಾಡಿರುವುದು ಸೇರಿದಂತೆ ಇನ್ನಿತರ ಆರೋಪ ಹೊರಿಸಿ ದೂರು ದಾಖಲಿಸಿದ್ದರು. ತನಿಖೆ ನಡೆಸಿದ್ದ ಬ್ಯಾಡರಹಳ್ಳಿ ಠಾಣಾ ಪೊಲೀಸರು, ಸತೀಶ್ ವಿರುದ್ಧ ಅಧೀನ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ತನ್ನ ವಿರುದ್ಧದ ಪ್ರಕರಣ ರದ್ದು ಕೋರಿ ಸತೀಶ್ ಹೈಕೋರ್ಟ್ ಮೊರೆ ಹೋಗಿದ್ದರು.

ನಗರದಲ್ಲಿ ಫೆಸ್ಟಿವಲ್ ಆಫ್ ಆಸ್ಟ್ರೇಲಿಯಾ

ಬೆಂಗಳೂರು: ಆಸ್ಟ್ರೇಲಿಯನ್ ಟ್ರೇಡ್ ಅಂಡ್ ಇನ್ವೆಸ್ಟ್ಮೆಂಟ್ ಕಮಿಷನ್ (ಆಸ್ಟ್ರೇಡ್) ನಗರದಲ್ಲಿ ಫೆಸ್ಟಿವಲ್ ಆಫ್ ಆಸ್ಟ್ರೇಲಿಯಾ ಎಂಬ ಶೀರ್ಷಿಕೆಯಡಿ ಆಸ್ಟ್ರೇಲಿಯಾದ ಉನ್ನತ ಗುಣಮಟ್ಟದ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ರಿಟೇಲ್ ವ್ಯಾಪಾರ ಮತ್ತು ಇತರ ವ್ಯಾಪಾರವನ್ನು ಒಟ್ಟುಗೂಡಿಸುವ ಮೊಟ್ಟ ಮೊದಲ ಬಾರಿಗೆ ಪ್ರದರ್ಶನ ಆಯೋಜಿಸಿತು. ಒಂದೇ ವೇದಿಕೆಯಲ್ಲಿ ಪಾಲುದಾರರು ಮತ್ತು ಆಸ್ಟ್ರೇಲಿಯಾದ ಪ್ರೀಮಿಯಂ ಉತ್ಪನ್ನಗಳನ್ನು ಭಾರತೀಯ ಗ್ರಾಹಕರಿಗೆ ಪ್ರದರ್ಶಿಸಲಾಯಿತು. ಪ್ರದರ್ಶನವು ಭಾರತೀಯ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಆಸ್ಟ್ರೇಲಿಯಾದ ವಿಶ್ವವಿದ್ಯಾಲಯಗಳ ಪ್ರತಿನಿಧಿಗಳೊಂದಿಗೆ ನೇರವಾಗಿ ತೊಡಗಿಸಿಕೊಳ್ಳಲು ಮತ್ತು ಅವರ ವೃತ್ತಿ ಮತ್ತು ಕಲಿಕೆಯ ಗುರಿಗಳನ್ನು ಸಾಧಿಸಲು ಸಹಾಯ ಮಾಡುವ ಕೋರ್ಸ್‌ಗಳ ಬಗ್ಗೆ ಚರ್ಚಿಸಲು ಅವಕಾಶವನ್ನು ಒದಗಿಸಿದೆ. ಪ್ರದರ್ಶನದ ಭಾಗವಾಗಿ, ಮ್ಯಾಕ್ಸ್ಲ ಆಸ್ಟ್ರೇಲಿಯಾದ ಸಂಸ್ಥಾಪಕ ಮತ್ತು ಸಿಇಒ ರೆನಾಟಾ ಸ್ಗುರಿಯೊ ಅವರು ಪ್ರಸ್ತುತಪಡಿಸಿದ ಮಾನವ ಕೌಶಲ್ಯಗಳ ಮೂಲಕ ವೃತ್ತಿಪರ ಪ್ರಭಾವಕ್ಕಾಗಿ ಅಪ್‌ಸ್ಕಿಲ್ಲಿಂಗ್ ಕುರಿತ ಮಾಸ್ಟರ್‌ಕ್ಲಾಸ್‌ನಲ್ಲಿ ಭಾರತೀಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪರಾರಿಯಾಗಿದ್ದ ಆರೋಪಿ ಚಾಲಕನ ಪತ್ತೆ

ಬೆಂಗಳೂರು: ಸಿಸಿಟಿವಿ ಕ್ಯಾಮಾರಗಳ ನೆರವಿನೊಂದಿಗೆ ಅಪಘಾತ ಮಾಡಿ ಪರಾರಿಯಾಗಿದ್ದ ಸ್ವಿಫ್ಟ್ ಕಾರ್ ಹಾಗೂ ಆರೋಪಿ ಚಾಲಕನ ಪತ್ತೆ ಹಚ್ಚುವಲ್ಲಿ ಪಶ್ಚಿಮ ವಿಭಾಗದ ಸಂಚಾರ ಪೊಲೀಸರು ಯಶಸ್ವಿ ಯಾಗಿದ್ದಾರೆ. ಕಳೆದ ನ.1 ರಂದು ಮುಂಜಾನೆ 2ರ ವೇಳೆ ಬ್ಯಾಡರಹಳ್ಳಿಯ ತಿಗಳರಪಾಳ್ಯ ಮುಖ್ಯ ರಸ್ತೆಯ ಕೆಂಪೇಗೌಡ ವೃತ್ತದಲ್ಲಿ ಪೀಣ್ಯ ಕಡೆಯಿಂದ ಗರುಡಪ್ಪ ಸರ್ಕಲ್ ಕಡೆಗೆ ವೇಗವಾಗಿ ಬರುತಿದ್ದ ದ್ವಿ ಚಕ್ರ ವಾಹನ ಸವಾರನ ಶಶಿಕುಮಾರ್ (20) ಅದೇ ಮುಖ್ಯ ರಸ್ತೆಯ ಎಡಭಾಗದಿಂದ 14ನೇ ಕ್ರಾಸ್ ರಸ್ತೆಯಿಂದ ಏಕಾಏಕಿ ಯಾವುದೇ ಸೂಚನೆ ನೀಡದೇ ಬಲತಿರುವು ಪಡೆಯಲು ಅಜಾರೂಗಕತೆಯಿಂದ ಬಂದ ಸ್ವಿಫ್ಟ್ ಕಾರೊಂದಕ್ಕೆ ಅಪಘಾತವಾಗುವುದನ್ನು ತಪ್ಪಿಸಲು, ಬ್ರೇಕ್ ಹಾಕಿದಾಗ ಟಿವಿಎಸ್ ಎನ್ ಟ್ರಾಕ್ ದ್ವಿ ಚಕ್ರ ವಾಹನ ಸ್ಕಿಡ್ ಆಗಿ ರಸ್ತೆ ಮೇಲೆ ಬಿದ್ದು, ಕಾರಿನ ಮುಂಭಾಗದಿಂದ ಸವರಿಕೊಂಡು ಹೋಗಿ ರಸ್ತೆಯ ಬಲಬದಿಯ ಕಂಬಕ್ಕೆ ಡಿಕ್ಕಿ ಹೊಡೆದಿತ್ತು. ರಸ್ತೆ ಮೇಲೆ ಬಿದ್ದ ಸವಾರನು ಸ್ವಿಫ್ಟ್ ಕಾರಿನ ಬಲ ಮುಂಭಾಗದ ಚಕ್ರದ ಬಳಿ ಬಿದ್ದು, ತಲೆಗೆ ಏಟಾಗಿದ್ದು ಸಿಫ್ಟ್ ಕಾರಿನ ಚಾಲಕನು ಅಪಘಾತದ ಸ್ಥಳದಿಂದ ಪರಾರಿಯಾಗುವ ಅವಸರದಲ್ಲಿ ಕೆಳಗೆ ಬಿದ್ದ ಸವಾರನ ಮೇಲೆ ಕಾರಿನ ಚಕ್ರ ಹರಿಸಿ ನಂತರ ಹಿಂದಕ್ಕೆ ಬಂದು, ಕಾರನ್ನು ಎಡಕ್ಕೆ ತಿರುಗಿಸಿಕೊಂಡು ಸ್ಥಳದಿಂದ ಪರಾರಿ ಯಾಗಿದ್ದ. ಈ ಘಟನೆಯಲ್ಲಿ ಗಾಯಾಳುವಿಗೆ ಸೂಕ್ತ ಚಿಕಿತ್ಸೆ ದೊರಕದ ಕಾರಣ ಸ್ಥಳದಲ್ಲಿ ಮೃತ ಪಟ್ಟಿದ್ದ. ಈ ಬಗ್ಗೆ ಯಾವುದೇ ಸುಳಿವು ಸಿಕ್ಕಿರಲಿಲ್ಲ.

ರಾಜ್ಯದ ರೈತರಿಗೆ ದ್ರೋಹ ಪ್ರಧಾನಿ ಪತ್ರ: ಮುಖ್ಯಮಂತ್ರಿ

ಶಾಸಕರ ಭವನದ ಆವರಣದಲ್ಲಿರುವ ಕನಕದಾಸರ ಪ್ರತಿಮೆಗೆ ಸಿಎಂ ಸಿದ್ದರಾಮಯ್ಯ ಮಾಲಾರ್ಪಣೆ

ದಾಸಶ್ರೇಷ್ಠ ಕನಕದಾಸರ ಜಯಂತಿ ನಿಮತ್ತ ಶಾಸಕರ ಭವನದ ಆವರಣದಲ್ಲಿರುವ ಕನಕದಾಸರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ. ಸಚಿವ ಎಚ್.ಸಿ.ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಶಿವರಾಜ್ ತಂಗಡಗಿ, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೇರಿ ಹಲವು ಮುಖಂಡರು ಉಪಸ್ಥಿತರಿದ್ದರು.

- ಗ್ಯಾರಂಟಿ ಯೋಜನೆ ಬಗ್ಗೆ ಬಿಜೆಪಿ ಅಪಪ್ರಚಾರ ನಡೆಸುತ್ತಿದೆ.
- ಮಹಾರಾಷ್ಟ್ರ ಸರಕಾರದ ವಿರುದ್ಧ ದಾವೆ ಹೂಡಲು ಚಿಂತನೆ

ಬೆಂಗಳೂರು: ರಾಜ್ಯದ ಗ್ಯಾರಂಟಿ ಯೋಜನೆ ಬಗ್ಗೆ ಮಹಾರಾಷ್ಟ್ರ ಚುನಾವಣೆಯಲ್ಲಿ ಅಲ್ಲಿನ ಸರಕಾರ ಹಾಗೂ ಬಿಜೆಪಿಯವರು ಸುಳ್ಳು ಅಪಪ್ರಚಾರ ನೀಡಿರುವ ಸಂಬಂಧ ದಾವೆ ಹೂಡಲು ಚಿಂತನೆ ನಡೆಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ.

ದಾಸಶ್ರೇಷ್ಠ ಕನಕದಾಸರ ಜಯಂತಿ ನಿಮಿತ್ತ ಶಾಸಕರ ಭವನದ ಆವರಣದಲ್ಲಿರುವ ಕನಕದಾಸರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿ, ಗ್ಯಾರಂಟಿ ಯೋಜನೆ ಬಗ್ಗೆ ಬಿಜೆಪಿ ಅಪಪ್ರಚಾರ ನಡೆಸುತ್ತಿದೆ. ಹೀಗಾಗಿ ಮಹಾರಾಷ್ಟ್ರ ಸರಕಾರದ ವಿರುದ್ಧ ದಾವೆ ಹೂಡಲು ಚಿಂತನೆ ನಡೆಸಲಾಗಿದೆ. ಈ ಬಗ್ಗೆ ಕಾನೂನು ತಜ್ಞರ ಜತೆ ಚರ್ಚಿಸಿ ದೂರು ದಾಖಲಿಸಲು ಚಿಂತಿಸಲಾಗುವುದು ಎಂದರು.

ಜನರು ಪಾವತಿಸುತ್ತಿರುವ ತೆರಿಗೆ ದುಡ್ಡು ಎಲ್ಲಿಗೆ ಹೋಗುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಗೆ ಪ್ರಶ್ನಿಸಲು ಯಾವ ನೈತಿಕತೆಯಿದೆ? ರಾಜ್ಯದಿಂದ ನಾಲ್ಕುವರೆ ಲಕ್ಷ ಕೋಟಿ ಆದಾಯ ಕೇಂದ್ರಕ್ಕೆ ಸಂದಾಯವಾಗುತ್ತಿದೆ, ಆದರೆ ವಾಪಸ್ ಹಂಚಿಕೆಯಾಗುತ್ತಿರುವುದು 60 ಸಾವಿರ ಕೋಟಿ. ಉಳಿದ ದುಡ್ಡನ್ನು ದೇವೇಗೌಡರಾಗಲಿ, ಕುಮಾರಸ್ವಾಮಿಯವರಾಗಲಿ ಕೊಡಿಸಲಿ.

-ಮುಖ್ಯಮಂತ್ರಿ ಸಿದ್ದರಾಮಯ್ಯ

ಬಿಜೆಪಿ, ಜೆಡಿಎಸ್ ಅನ್ನಭಾಗ್ಯ ಜಾರಿ ಮಾಡಿದರೇ ?

ಅನ್ನಭಾಗ್ಯ ಯೋಜನೆ ಸಿದ್ದರಾಮಯ್ಯ ಸರಕಾರದಲ್ಲಿ ಜಾರಿ ತರಲಾಗಿದ್ದು, 2017ರಲ್ಲಿ ಒಂದು ರೂಪಾಯಿಗೆ ನೀಡುತ್ತಿದ್ದ ಅಕ್ಕಿ ಉಚಿತವಾಗಿ ನೀಡಲಾಯಿತು. ಬಿಜೆಪಿ ಅಧಿಕಾರದಲ್ಲಿರುವ ಯಾವ ರಾಜ್ಯದಲ್ಲೂ ಇಂತಹ ಯೋಜನೆ ಜಾರಿ ಮಾಡಿಲ್ಲ. ಗುಜರಾತ್, ಮಧ್ಯಪ್ರದೇಶ, ಬಿಹಾರ, ಉತ್ತರ ಪ್ರದೇಶ, ಹರಿಯಾಣದಲ್ಲಿ ಎಲ್ಲೂ ಯಾವ ಯೋಜನೆ ಬಿಜೆಪಿ ಜಾರಿ ಮಾಡದೇ ಸುಮ್ಮನೆ ಮಾತನಾಡುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವ್ಯಂಗ್ಯವಾಡಿದ್ದಾರೆ.

ನಬಾರ್ಡ್ ನೆರವಿನಲ್ಲೂ ಅನ್ಯಾಯ: ನಬಾರ್ಡ್ ನೆರವು ನೀಡುವುದರಲ್ಲೂ ರಾಜ್ಯಕ್ಕೆ ಅನ್ಯಾಯ ಮಾಡಲಾಗಿದೆ. ಒಟ್ಟು ಮೊತ್ತದಲ್ಲಿ ಶೇ. 58 ರಷ್ಟು ಸಾಲ ಕೊಟ್ಟಿದ್ದಾರೆ. ಕಳೆದ ವರ್ಷ 5,600 ಕೋಟಿ ನೀಡಿದರೆ ಈ ವರ್ಷ 2,300 ಕೋಟಿ ನೀಡಿದ್ದಾರೆ. ಇದರಿಂದಾಗಿ ಸಹಕಾರ ಸಂಘ-ಸಂಸ್ಥೆಗಳ ಮೂಲಕ ರೈತರಿಗೆ ಕೃಷಿ ಸಾಲ ನೀಡಲು ಕಷ್ಟವಾಗಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಕುಮಾರಸ್ವಾಮಿ ಏನು ಮಾಡುತ್ತಿದ್ದಾರೆ. ಕರ್ನಾಟಕಕ್ಕೆ ಅನ್ಯಾಯ, ರೈತರಿಗೆ ದ್ರೋಹ ಮಾಡಬೇಡಿ ಎಂದು ಪ್ರಧಾನಿಗೆ ಪತ್ರ ಬರೆದಿರುವುದಾಗಿ ತಿಳಿಸಿದರು.

6 ಕೋಟಿ ರು. ವಿದ್ಯಾರ್ಥಿ ಪ್ರೋತ್ಸಾಹ ಧನ ವಿತರಣೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪನಾ ದಿನಾಚರಣೆ

ಬೆಂಗಳೂರು: ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರ ದಿನದ ಸ್ಮರಣಾರ್ಥ 6 ಕೋಟಿ ವಿದ್ಯಾರ್ಥಿ ಪ್ರೋತ್ಸಾಹ ಧನವನ್ನು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 187 ವಿದ್ಯಾರ್ಥಿಗಳಿಗೆ ಶಿಷ್ಯವೇತನ, 14 ವಿದ್ಯಾರ್ಥಿಗಳಿಗೆ ಕ್ರೀಡಾ ಪ್ರತಿಭಾ ವೇತನ ಪುರಸ್ಕಾರ, 20 ವಿದ್ಯಾರ್ಥಿಗಳಿಗೆ ನಾಯಕತ್ವ ಪ್ರತಿಭಾ ಪುರಸ್ಕಾರ ವೇತನ ನೀಡಿ ಗೌರವಿಸಲಾಯಿತು.

ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಡಾ.ಕೆ. ಗೋವಿಂದರಾಜ್, ಮಾಜಿ ಸಚಿವ ಅರವಿಂದ ಲಿಂಬಾವಳಿ, ಏಷ್ಯನ್ ಫುಟ್ಬಾಲ್ ಕಾನ್ಫೆಡರೇಷನ್ ಸುಧೀರ್ ಮೆನನ್ ಚೆಂಬಜಿ ಭಾಗವಹಿಸಿದ್ದರು.

ಎಲ್ಲರಿಗೂ ಗುಣಾತ್ಮಕ ಶಿಕ್ಷಣ ನೀಡಬೇಕು ಎಂಬ ಮಹತ್ವಾಕಾಂಕ್ಷೆ ಹೊಂದಿದ್ದ ಚಿಕ್ಕಮುನಿಯಪ್ಪ ರೆಡ್ಡಿ ಅವರ ದೂರದೃಷ್ಟಿಯ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪನಾ ದಿನದ ಸ್ಮರಣಾರ್ಥ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿ ವೇತನ ನೀಡಿ ಗೌರವಿಸುವ ಮೂಲಕ ಸಿಎಂಆರ್ ಸಂಸ್ಥಾಪನಾ ದಿನ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಪೊಲೀಸ್ ಇಲಾಖೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಅನುಭವವಿರುವ ಡಾ.ಕೆ.ಸಿ.ರಾಮಮೂರ್ತಿ ಅವರು ಅವರ ತಂದೆಯವರ ದೂರದೃಷ್ಟಿಯಂತೆ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ದೇಶದಲ್ಲಿಯೇ ಮಾದರಿ ಶಿಕ್ಷಣ ಸಂಸ್ಥೆಗಳಾಗಿ ಬೆಳೆಸಿದ್ದಾರೆ.

-ಅರವಿಂದ ಲಿಂಬಾವಳಿ ಮಾಜಿ ಸಚಿವ

ಸಿಎಂ ರಾಜಕೀಯ ಕಾರ್ಯದರ್ಶಿ ಡಾ.ಕೆ.ಗೋವಿಂದರಾಜ್ ಅವರು ಮಾತನಾಡಿ, ಕಳೆದ ಮೂರು ದಶಕಗಳಿಂದ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳು ಗುಣಾತ್ಮಕ ಶಿಕ್ಷಣ ನೀಡುವ ಮೂಲಕ ದೇಶದಲ್ಲೆ ಮಾದರಿಯಾಗಿದೆ.

ಇಲ್ಲಿ ಕಲಿತ ವಿದ್ಯಾರ್ಥಿಗಳು ದೇಶವಿದೇಶಗಳಲ್ಲಿ ಕೆಲಸ ಮಾಡುತ್ತಿರುವುದು ಹೆಮ್ಮೆಯ ವಿಷಯ. ಸಿಎಂಆರ್ ಸಂಸ್ಥಾಪನಾ ದಿನದ ಸ್ಮರಣಾರ್ಥ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿತಿಭಾ ಪುರಸ್ಕಾರದ ಜತೆ ಶಿಷ್ಯವೇತನ ನೀಡಿ ಗೌರವಿಸುತ್ತಿರುವುದು ಅತ್ಯಂತ ಅರ್ಥಪೂರ್ಣ ಎಂದರು.

ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರ ದಿನದ ಸ್ಮರಣಾರ್ಥ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 14 ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಸಿಎಂ ರಾಜಕೀಯ ಕಾರ್ಯದರ್ಶಿ ಡಾ.ಕೆ.ಗೋವಿಂದರಾಜ್ ಅವರು ವಿತರಿಸಿದರು. ಮಾಜಿ ರಾಜ್ಯಸಭಾ ಸದಸ್ಯ ಡಾ.ಕೆ.ಸಿ.ರಾಮಮೂರ್ತಿ, ಮಾಜಿ ಸಚಿವ ಅರವಿಂದ ಲಿಂಬಾವಳಿ ಸೇರಿದಂತೆ ಮತ್ತಿತರಿದ್ದರು.

ಮೆಜೆಸ್ಟಿಕ್ ರೈಲು ನಿಲ್ದಾಣ 1500 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ

ಬೆಂಗಳೂರು: ಮೆಜೆಸ್ಟಿಕ್ ರೈಲು ನಿಲ್ದಾಣವನ್ನು 1500 ಕೋಟಿ ರು. ವೆಚ್ಚದಲ್ಲಿ ವಿಮಾನ ನಿಲ್ದಾಣದ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಯೋಜನೆಯನ್ನು ರೈಲ್ವೆ ಇಲಾಖೆಯ ರಾಜ್ಯ ಸಚಿವ ವಿ.ಸೋಮಣ್ಣ ಘೋಷಿಸಿದ್ದಾರೆ. ಸಚಿವ ವಿ.ಸೋಮಣ್ಣ ಮಾತನಾಡಿ, ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಅಭಿವೃದ್ಧಿಗೆ ಡಿಪಿಆರ್ ಸಿದ್ಧವಾಗಿದೆ. ಈ ಯೋಜನೆಯು ವಿಮಾನ ನಿಲ್ದಾಣದಲ್ಲಿ ದೊರೆಯುವ ಎಲ್ಲಾ ಸೌಲಭ್ಯ ಒಳಗೊಂಡಿರುತ್ತದೆ. ಒಳ್ಳೆಯ ಕೆಲಸಗಳಿಗೆ ಪ್ರಧಾನಿ ಮೋದಿ ಬೇಡ ಎನ್ನುವುದಿಲ್ಲ. ರೈಲು ನಿಲ್ದಾಣ ಅಭಿವೃದ್ಧಿ ಬಗ್ಗೆ ರೈಲ್ವೆ ಮಂಡಳಿ ಕೆಲ ಸ್ಪಷ್ಟನೆ ಕೇಳಿದೆ. ಮುಂದಿನ ದಿನಗಳಲ್ಲಿ ರೈಲ್ವೆ ಮಂಡಳಿ ಮುಂದೆ ಇಡುತ್ತೇವೆ. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಜತೆ ಚರ್ಚಿಸಿ ಕೆಲಸ ಆರಂಭಿಸುತ್ತೇವೆ ಎಂದರು. ಸುಮಾರು 1500 ಕೋಟಿ ರು. ವೆಚ್ಚದಲ್ಲಿ ವಿಮಾನ ನಿಲ್ದಾಣಕ್ಕಿಂತ ವಿಭಿನ್ನವಾಗಿ ಮೆಜೆಸ್ಟಿಕ್ ರೈಲು ನಿಲ್ದಾಣ ಅಭಿವೃದ್ಧಿ ಮಾಡುತ್ತೇವೆ. ವಿಮಾನ ನಿಲ್ದಾಣದಲ್ಲಿ ಸಿಗುವ ಎಲ್ಲಾ ಸವಲತ್ತುಗಳು ಸಿಗಲಿದೆ. 160 ಎಕರೆ ಜಾಗ ಇದೆ. ನಿರೋದ್ಯೋಗಿಗಳಿಗೆ ಅನುಕೂಲವಾಗಲಿದೆ ಎಂದರು.

ಇಂದಿರಾ: ವ್ಯಕ್ತಿತ್ವದಲ್ಲಿ ಮೇರುಶಿಖರ, ಸಾಧನೆಗಳು ಆಕಾಶದೆತ್ತರ

ಗುಣಗಾನ

ಡಿ.ಕೆ.ಶಿವಕುಮಾರ್

vveditoped@gmail.com

ದೇಶ ಕಂಡ ಧೀಮಂತ ನಾಯಕಿ ಇಂದಿರಾ ಗಾಂಧಿ ಅವರು ಕಾಲವಾಗಿ ದಶಕಗಳೇ ಕಳೆದರೂ ಈಗಲೂ ಅವರ ಹೆಸರು ಪ್ರಸ್ತಾಪ ಆಗುತ್ತಲೇ ಇರುತ್ತದೆ. ಅದೇ ಅವರ ಸಾಧನೆಗೆ, ವ್ಯಕ್ತಿತ್ವಕ್ಕೆ ಸಾಕ್ಷಿ. ಜನಪರ ರಾಜಕಾರಣದಿಂದ ಹಾಗೂ ರಾಷ್ಟ್ರ ಕೇಂದ್ರಿತ ನೀತಿಗಳಿಂದ ದೇಶದ ಅತ್ಯಂತ ಜನಪ್ರಿಯ ಪ್ರಧಾನ ಮಂತ್ರಿಯಾಗಿ ಭಾರತದ ಜನಮಾನಸದಲ್ಲಿ ಅಚ್ಚಳಿಯದೆ ಉಳಿದುಕೊಂಡಿರುವ ಇಂದಿರಾ ಗಾಂಧಿಯವರ ಜಯಂತಿ ಇಂದು.

'ಇಂದಿರಾ ಪ್ರಿಯದರ್ಶಿನಿ ಗಾಂಧಿ' ಭಾರತ ಕಂಡ ದಿಟ್ಟನಾಯಕಿ. ಹೆಣ್ಣೊಬ್ಬಳು ದೇಶದ ಉನ್ನತ ಸ್ಥಾನಕ್ಕೇರಿದ್ದು ನಮ್ಮ ಪ್ರಜಾಪ್ರಭುತ್ವದ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿ. ಇಂದಿರಾಗೆ ರಾಜಕೀಯ ಹಿನ್ನೆಲೆ ಮತ್ತು ಪ್ರಭಾವಗಳೆರಡೂ ಇದ್ದವು. ತಂದೆ ಜವಾಹರಲಾಲ್ ನೆಹರು ಭಾರತದ ಮೊದಲ ಪ್ರಧಾನಿ ಎಂಬುದರ ಹೊರತಾಗಿಯೂ, ಅವರು ತಮ್ಮದೇ ಆದ ರಾಜಕೀಯ ವರ್ಚಸ್ಸು ಬೆಳೆಸಿಕೊಂಡರು. ಜನಕಲ್ಯಾಣ, ದಿಟ್ಟ ನೀತಿ-ನಿರ್ಧಾರಗಳಿಂದಾಗಿ 'ಇಂದಿರಾ ಅಂದರೆ ಇಂಡಿಯಾ' ಅನ್ನುವಷ್ಟು ಜನಪ್ರಿಯರಾದರು. ಇಂದಿಗೂ ದೇಶವು ಅವರನ್ನು 'ಭಾರತದ ಉಕ್ಕಿನ ಮಹಿಳೆ' ಎಂದೇ ಗುರುತಿಸುತ್ತದೆ.

1917ರ ನವೆಂಬರ್ 19ರಂದು ಅಲಹಾಬಾದ್‌ನಲ್ಲಿ ಜನಿಸಿದ ಇಂದಿರಾ, ಜವಾಹರಲಾಲ್ ನೆಹರು ಮತ್ತು ಕಮಲಾ ಅವರ ಏಕೈಕ ಪುತ್ರಿ. ಸ್ವಾತಂತ್ರ್ಯ ಹೋರಾಟದ ವೇಳೆ ನೆಹರು ಅನೇಕ ಬಾರಿ ಜೈಲುವಾಸ ಅನುಭವಿಸಬೇಕಾಯಿತು. ಇಂಥ ಸಂದರ್ಭದಲ್ಲಿ, ತಂದೆ ಇಲ್ಲದೆ ಇಂದಿರಾ ಒಂಟಿತನ ಅನುಭವಿಸಬೇಕಾಯಿತು. ಕೆಲವು ವರ್ಷಗಳ ಕಾಲ ಸ್ವಿಸ್ ಬೋರ್ಡಿಂಗ್ ಸ್ಕೂಲ್‌ನಲ್ಲಿದ್ದ ಇಂದಿರಾ ಆಕ್ಸ್‌ಫರ್ಡ್‌ನ ಸೊಮರ್ವಿಲ್ಲೆ ಕಾಲೇಜ್‌ನಲ್ಲಿ ಇತಿಹಾಸ ಅಧ್ಯಯನ ಮಾಡಿದರು.

1947ರಲ್ಲಿ ಸ್ವಾತಂತ್ರ್ಯ ಬಂದ ಕೂಡಲೇ ನೆಹರು ಅವರು ಸ್ವತಂತ್ರ ಭಾರತದ ಮೊದಲ ಪ್ರಧಾನಿಯಾಗಿ ದೇಶ ಕಟ್ಟುವ ಮಹತ್ತರ ಜವಾಬ್ದಾರಿ ವಹಿಸಿಕೊಂಡರು. ಈ ವೇಳೆ ಇಂದಿರಾ ಅವರು ತಂದೆಗೆ ಒತ್ತಾಸೆಯಾಗಿ ಕೆಲಸ ಮಾಡಿದರು. ಅವರ ಗರಡಿಯಲ್ಲಿ ಪಕ್ಷ ಸಂಘಟನೆಯ ಪಟ್ಟುಗಳನ್ನು, ಆಡಳಿತದ ಕಲೆಯನ್ನು ಸಣ್ಣ ವಯಸ್ಸಿನಲ್ಲೇ ಕಲಿತರು. 1955ರಲ್ಲಿ ಇಂದಿರಾ ಕೂಡ ಕಾಂಗ್ರೆಸ್‌ನ 21 ಸದಸ್ಯರಿರುವ ಪ್ರಭಾವಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಯಾದರು. 4 ವರ್ಷದ ಬಳಿಕ ಕಾಂಗ್ರೆಸ್‌ನ ಅಧ್ಯಕ್ಷರಾದರು. 1964ರಲ್ಲಿ ನೆಹರು ನಿಧನದ ಬಳಿಕ ಲಾಲ್ ಬಹಾದುರ್ ಶಾಸ್ತ್ರಿ ಅವರು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡರು. ಅವರ ಸಂಪುಟದಲ್ಲಿ ಇಂದಿರಾ, ಮಾಹಿತಿ ಮತ್ತು ಪ್ರಸಾರ ಖಾತೆಯ ಸಚಿವೆಯಾಗಿ ಕಾರ್ಯನಿರ್ವಹಿಸಿದರು. 2 ವರ್ಷಗಳ ಬಳಿಕ, ಶಾಸ್ತ್ರಿ ಅವರ ಅಕಾಲಿಕ ನಿಧನದಿಂದಾಗಿ ತೆರವಾದ ಪ್ರಧಾನಿ ಹುದ್ದೆಗೆ ಕಾಂಗ್ರೆಸ್ ನಾಯಕರು ಇಂದಿರಾರನ್ನೇ ಆಯ್ಕೆ ಮಾಡಿದರು. ಪ್ರಧಾನಿಯಾಗಿ ಕೆಲವೇ ವರ್ಷಗಳಲ್ಲಿ ಇಂದಿರಾ ಅವರು ಭಾರಿ ಜನಪ್ರಿಯತೆಯನ್ನು ಪಡೆದುಬಿಟ್ಟರು.

● ದೇಶ ರಕ್ಷಣೆಯಲ್ಲಿ ದುರ್ಗೆ:

ಇಂದಿರಾ ಅವರು 1971ರಲ್ಲಿ ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳ ನಡುವಿನ ಸಂಘರ್ಷಕ್ಕೆ ಅಂತ್ಯಹಾಡುವ ಮೂಲಕ ವಿಪಕ್ಷಗಳಿಂದಲೂ ಭೇಷ್ ಎನಿಸಿಕೊಂಡರು. ಇಂದಿರಾರ ನೆರವಿನಿಂದಾಗಿ ಪೂರ್ವ ಪಾಕಿಸ್ತಾನ ಅಂದರೆ ಬಾಂಗ್ಲಾದೇಶ ಸ್ವತಂತ್ರ ರಾಷ್ಟ್ರವಾಗಿ ಉದಯಿಸಿತು. ಪಾಕಿಸ್ತಾನದ ಮೇಲೆ ಯುದ್ಧ ಮಾಡಿ 1 ಲಕ್ಷ ಪಾಕ್ ಸೈನಿಕರನ್ನು ಸೆರೆಹಿಡಿದು, ಬಾಂಗ್ಲಾದೇಶವನ್ನು ಸ್ವತಂತ್ರಗೊಳಿಸಿದರು. ಆ ಸಂದರ್ಭದಲ್ಲಿ ಬಿಜೆಪಿಯ ಅಗ್ರಗಣ್ಯ ನಾಯಕ ಅಟಲ್ ಬಿಹಾರಿ ವಾಜಪೇಯಿಯವರು ಇಂದಿರಾರನ್ನು 'ದುರ್ಗೆ' ಎಂದು ಹೊಗಳಿದ್ದರು. ಆದರೆ ನಮ್ಮ ಯೋಧರ ಈ ಪರಾಕ್ರಮವನ್ನು ಇಂದಿರಾ ಅವರು ಎಂದಿಗೂ ತಮ್ಮ ರಾಜಕೀಯ ಲಾಭಕ್ಕೆ ಬಳಸಿಕೊಳ್ಳಲಿಲ್ಲ.

● ಬ್ಯಾಂಕುಗಳ ರಾಷ್ಟ್ರೀಕರಣ:

ಇಂದಿರಾ ಅವರ ಒಟ್ಟು ಆಡಳಿತಾವಧಿಯಲ್ಲಿ ಎದ್ದು ಕಾಣುವ ಪ್ರಮುಖ ಆರ್ಥಿಕ ಸುಧಾರಣೆ ಎಂದರೆ ಬ್ಯಾಂಕುಗಳ ರಾಷ್ಟ್ರೀಕರಣ. 1969ರಲ್ಲಿ ಅವರು ಒಟ್ಟು 14 ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿ, ದೇಶದ ಆರ್ಥಿಕಾಭಿವೃದ್ಧಿಗೆ ಮುನ್ನುಡಿ ಬರೆದರು. ಇದರ ಒಟ್ಟು ಪ್ರತಿಫಲ 80ರ ದಶಕದಲ್ಲಿ ನಿಚ್ಚಳವಾಗಿ ಕಾಣಲಾರಂಭಿಸಿದರೆ ಈಗ 'ಡಿಬಿಟಿ' ಮೂಲಕ ಅದರ ಪೂರ್ಣ ಪ್ರಮಾಣದ ಪ್ರತಿಫಲ ಕಾಣುತ್ತಿದೆ. ಅಂದು ಇಂದಿರಾ ಅವರು ಕೈಗೊಂಡ ಈ ನಿರ್ಧಾರಕ್ಕೆ ಕಾಂಗ್ರೆಸ್ ಒಳಗೂ ಸೇರಿದಂತೆ ಭಾರಿ ವಿರೋಧವಿತ್ತು. ಆದರೆ, ಇಂದಿರಾ ಗಟ್ಟಿಗಿತ್ತಿ. ಯಾವುದೇ ನಿರ್ಧಾರ ಕೈಗೊಂಡರೂ ಅದನ್ನು ವ್ಯವಸ್ಥಿತವಾಗಿ ಜಾರಿಗೊಳಿಸುವ ಕಲೆ ಅವರಿಗೆ ಕರಗತವಾಗಿತ್ತು.

ಬ್ಯಾಂಕುಗಳ ರಾಷ್ಟ್ರೀಕರಣದಿಂದಾಗಿ ದೇಶದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾದವು. ಜತೆಗೆ ಆರ್ಥಿಕ ಪ್ರಗತಿಗೂ ಅದು ದಾರಿಯಾಯಿತು. 1969ರಲ್ಲಿ ಬ್ಯಾಂಕುಗಳ ಶಾಖೆಗಳು 8000 ಇದ್ದದ್ದು 1980ರ ಹೊತ್ತಿಗೆ 32,000 ಶಾಖೆಗಳಿಗೆ ಹೆಚ್ಚಾದವು. 1990ರ ಹೊತ್ತಿಗೆ ಇವುಗಳ ಪ್ರಮಾಣ 60,000ಗಿಂತಲೂ ಹೆಚ್ಚಾದವು. ಉಳಿತಾಯ ಪ್ರಮಾಣ ಕೂಡ ಹೆಚ್ಚಾಯಿತು. ಅಂದರೆ, ಮಾರುಕಟ್ಟೆಯಲ್ಲಿ ಹಣದ ವಹಿವಾಟು ಕೂಡ ಹೆಚ್ಚಾಯಿತು. ಶಾಖೆಗಳ ಹೆಚ್ಚಳ ಮತ್ತು ಮಾರುಕಟ್ಟೆಯಲ್ಲಿ ಹಣದ ವಹಿವಾಟಿನಿಂದಾಗಿ ಠೇವಣಿ ದರ 1969ರಲ್ಲಿ ಶೇ.12ರಷ್ಟಿದ್ದದ್ದು 1980ರ ಹೊತ್ತಿಗೆ ಶೇ.20ಕ್ಕೆ ಜಿಗಿಯಿತು. ಇದರ ಪರಿಣಾಮ ಬೆಳವಣಿಗೆ ದರ ಶೇ.5.5ರಿಂದ 6ರವರೆಗೆ ಹೆಚ್ಚಲು ಸಾಧ್ಯವಾಯಿತು. ಅಂದರೆ, ಬ್ಯಾಂಕುಗಳ ರಾಷ್ಟ್ರೀಕರಣ ಮತ್ತು ದೇಶದ ಆರ್ಥಿಕಾಭಿವೃದ್ಧಿ ಮಧ್ಯೆ ಕೊಂಡಿಯೊಂದು ನಿಖರವಾಗಿ ಕೆಲಸಮಾಡಿತ್ತು ಎಂಬುದು ಇದರಿಂದ ವೇದ್ಯವಾಗುತ್ತದೆ.

ರಾಷ್ಟ್ರೀಕರಣದ ಮುಂದಿನ 2 ದಶಕಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರ ಅಗಾಧವಾಗಿ ಬೆಳವಣಿಗೆ ಕಂಡಿತು. ಸಾರ್ವಜನಿಕ ಬ್ಯಾಂಕುಗಳು ತಮ್ಮ ಬ್ಯಾಲೆನ್ಸ್ ಶೀಟ್ ಅನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಿದವು. ಈ ವಿಷಯದಲ್ಲಿ ಅವುಗಳ ಕೆಲಸ ಶ್ಲಾಘನೀಯ. ಮುಂದೆ 90ರ ದಶಕದಲ್ಲಿ ಬ್ಯಾಂಕುಗಳು ಲಾಭವನ್ನು ಕೂಡ ಕಾಣಲಾರಂಭಿಸಿದವು. ಈ ಎಲ್ಲದರ ಪರಿಣಾಮ ನಾವಿಂದು ಜಗತ್ತಿನಲ್ಲೆ ಅತಿ ಹೆಚ್ಚು ಲಾಭದಾಯಕ ಬ್ಯಾಂಕಿಂಗ್ ಕ್ಷೇತ್ರವನ್ನು ಹೊಂದಲು ಸಾಧ್ಯವಾಗಿದೆ. ಇದಕ್ಕೆಲ್ಲ ಕಾರಣ ರಾಷ್ಟ್ರೀಕರಣದ ವೇಳೆ ಬ್ಯಾಂಕುಗಳು ವಿಸ್ತರಿಸಿಕೊಂಡ ಜಾಲ ಹಾಗೂ ಮುಂದಿನ ದಿನಗಳಲ್ಲಿ ಅನುಷ್ಠಾನಕ್ಕೆ ಬಂದ ರಾಷ್ಟ್ರೀಯ ನೀತಿಗಳು.

● ಹಣದುಬ್ಬರ ನಿಯಂತ್ರಣ:

ಲಾಲ್ ಬಹಾದುರ್ ಶಾಸ್ತ್ರಿ ಅವರು ಪ್ರಧಾನಿಯಾಗಿದ್ದ ಅವಧಿಯಲ್ಲಿ ಯುದ್ಧ ಮುಂತಾದ ಕಾರಣಗಳಿಂದ ದೇಶದ ಹಣದುಬ್ಬರ ಶೇ.7.7ರಷ್ಟಿತ್ತು. ಮುಂದೆ ಇಂದಿರಾ ಪ್ರಧಾನಿಯಾದ ಬಳಿಕ ಹಣದುಬ್ಬರ ಮತ್ತು ನಿರುದ್ಯೋಗ ಸಮಸ್ಯೆಯನ್ನು ಕಡಿಮೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಂಡರು. ಇದರಿಂದಾಗಿ 1977ರ ಹೊತ್ತಿಗೆ ಹಣದುಬ್ಬರ ಪ್ರಮಾಣ ಶೇ.5.3ಕ್ಕೆ ನೆಲೆ ನಿಂತಿತ್ತು. ಅಂದಿನ ಹಣದುಬ್ಬರಕ್ಕೆ ಕಾರಣವಾಗಿದ್ದು ತೈಲ ಬೆಲೆಗಳ ಏರಿಕೆ. ಹಣದುಬ್ಬರ ಸಮಸ್ಯೆ ಅತ್ಯಂತ ಮಾರಕ ಎಂದು ಗುರುತಿಸಿದ ಇಂದಿರಾ, ಅದನ್ನು ಹತ್ತಿಕ್ಕಲು ಅನೇಕ ಕ್ರಮಗಳನ್ನು ಕೈಗೊಂಡರು. ತುರ್ತು ಪರಿಸ್ಥಿತಿಯಲ್ಲಂತೂ ಹಣದುಬ್ಬರ ಋಣಾತ್ಮಕ ಗತಿಯಲ್ಲಿತ್ತು! ಮುಂದೆ, 1980ರಲ್ಲಿ ಹಣದುಬ್ಬರವಂತೂ ಆಕಾಶಕ್ಕೆ ತಲುಪಿತ್ತು. ಮತ್ತೆ ಇಂದಿರಾ ಅಧಿಕಾರಕ್ಕೆ ಬರುತ್ತಿದ್ದಂತೆ ಹಣದುಬ್ಬರ ಶೇ.6.5ಕ್ಕೆ ಇಳಿಯಿತು. ಇದು ಅವರ ದಕ್ಷ ಆಡಳಿತಕ್ಕೆ ಸಾಕ್ಷಿ.

● ಅಣ್ವಸ್ತ್ರ ಪರೀಕ್ಷೆ:

ಅಣು ಯೋಜನೆಯಲ್ಲಿ ಭಾರತ ಸಶಕ್ತವಾಗಬೇಕು ಎಂಬ ನೆಹರು ಅವರ ಆಲೋಚನೆಯನ್ನು ನಿಜಾರ್ಥದಲ್ಲಿ ಸಾಕಾರಗೊಳಿಸಿದ್ದು ಇಂದಿರಾ. ಚೀನಾ ಆಗ ಯಶಸ್ವಿ ಅಣ್ವಸ್ತ್ರ ಪ್ರಯೋಗ ನಡೆಸಿ ಅಟ್ಟಹಾಸ ಬೀರಿತ್ತು. ಅದಕ್ಕೆ ಪ್ರತಿಯಾಗಿ ಇಂದಿರಾ ಅವರು 1967ರಲ್ಲಿ ಅಣ್ವಸ್ತ್ರ ಯೋಜನೆಗೆ ಹೆಚ್ಚಿನ ಆಸ್ಥೆ ವಹಿಸಿದರು. ಪರಿಣಾಮವಾಗಿ 1974ರ ಮೇ 18ರಂದು ಭಾರತ ತನ್ನ ಮೊದಲ ಅಣ್ವಸ್ತ್ರ ಪರೀಕ್ಷೆಯನ್ನು ಪೊಖ್ರಾನ್‌ನಲ್ಲಿ ಯಶಸ್ವಿಯಾಗಿ ನಡೆಸಿತು. ಇದಕ್ಕೆ ಇಂದಿರಾರ ಇಚ್ಛಾಶಕ್ತಿ ಮುಖ್ಯ ಕಾರಣ ಎಂದರೆ ತಪ್ಪಲ್ಲ. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ 5 ರಾಷ್ಟ್ರಗಳನ್ನು ಹೊರತುಪಡಿಸಿ ಅಣ್ವಸ್ತ್ರ ಪರೀಕ್ಷೆ ನಡೆಸಿದ ಮೊದಲ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಯಿತು.

● ಹಸಿರು ಕ್ರಾಂತಿ:

ಇಂದಿರಾ ಅವರು ಮೊದಲ ಬಾರಿಗೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದಾಗ ದೇಶದ ಆರ್ಥಿಕತೆ ದುರ್ಬಲವಾಗಿತ್ತು. 1965ರಲ್ಲಿ ಪಾಕಿಸ್ತಾನ ವಿರುದ್ಧ ನಡೆದ ಯುದ್ಧ ದೇಶವನ್ನು ಮತ್ತಷ್ಟು ಹೈರಾಣಾಗಿಸಿತ್ತು. ಎಲ್ಲೆಡೆ ಬರಗಾಲದ ಛಾಯೆಯಿತ್ತು. ಸ್ವಾತಂತ್ರ್ಯದ ಬಳಿಕ ಭಾರತದ ಆರ್ಥಿಕತೆ ಅತ್ಯಂತ ಕೆಳಮಟ್ಟಕ್ಕೆ ಇಳಿದಿತ್ತು. ಈ ಹಂತದಲ್ಲಿ ಆರ್ಥಿಕತೆಯನ್ನು ಉದಾರೀಕರಣದ ವ್ಯಾಪ್ತಿಗೆ ತರಲು ನಿರ್ಧರಿಸಲಾಯಿತು. ಇದೇ ವೇಳೆ, ದೇಶದಲ್ಲಿ ಆಹಾರ ಕೊರತೆ ಹೆಚ್ಚಾಗಿತ್ತು. ಹೊರದೇಶಗಳಿಂದ ಆಹಾರ

ಧಾನ್ಯಗಳನ್ನು ಆಮದು ಮಾಡಿಕೊಳ್ಳುವ ಪರಿಸ್ಥಿತಿಯಿತ್ತು. ಈ ಸಮಸ್ಯೆಯನ್ನು ನೀಗಿಸಲು ದೇಸಿ ಕೃಷಿ ಉತ್ಪಾದನೆ ಹೆಚ್ಚಿಸಲು ಇಂದಿರಾ ಅವರು ಮುಂದಾದರು, ಯಶಸ್ವಿಯೂ ಆದರು. 1970ರ ದಶಕದಲ್ಲಿ ಭಾರತ ಹಸಿರುಕ್ರಾಂತಿಗೆ ಸಾಕ್ಷಿಯಾಗಿ, ನಿಧಾನವಾಗಿ ಆಹಾರ ಭದ್ರತೆಯಲ್ಲಿ ಸ್ವಾವಲಂಬನೆ ಸಾಧಿಸಿತು. ದೇಶಕ್ಕೆ ಬೇಕಾಗುವಷ್ಟು ಆಹಾರ ಧಾನ್ಯವನ್ನು ಬೆಳೆಯುವುದಕ್ಕೆ ಹಸಿರುಕ್ರಾಂತಿ ಅನುವುಮಾಡಿಕೊಟ್ಟಿತು. ಇವತ್ತು ಭಾರತ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದ್ದರೆ ಅದಕ್ಕೆ ಇಂದಿರಾರ ದೂರದೃಷ್ಟಿಯೇ ಕಾರಣ.

● ವನ್ಯಸಂಪತ್ತು ರಕ್ಷಣೆಗೆ ಭದ್ರಬುನಾದಿ:

ವನ್ಯಜೀವಿ ಸಂರಕ್ಷಣೆ ಹೆಸರಲ್ಲಿ ಕಾಡುಪ್ರಾಣಿಗಳನ್ನ ಅವೈಜ್ಞಾನಿಕವಾಗಿ ಸಲಹಿ ಫೋಟೋಶೂಟ್ ಮಾಡುವ ಟ್ರೆಂಡ್ ಹೆಚ್ಚಿದೆ. ಆದರೆ ಇಂದಿರಾ ಅವರು 60-70ರ ದಶಕದಲ್ಲೇ ಇಂಟರ್‌ನ್ಯಾಷನಲ್ ಕನ್ಸರ್ವೇಶನ್ ಯೂನಿಯನ್ ಆಯೋಜನೆ, ವನ್ಯಜೀವಿ ಸಂರಕ್ಷಣಾ ಕಾಯ್ದೆ ರಚನೆಗೆ ಕ್ರಮ, ಪ್ರಾಜೆಕ್ಟ್ ಟೈಗರ್ ಜಾರಿ, ಅರಣ್ಯ ಸಂರಕ್ಷಣಾ ಕಾಯ್ದೆ ಜಾರಿ ಮೊದಲಾದ ಕ್ರಮಗಳನ್ನು ವಹಿಸಿದ್ದರು. ದೇಶದಲ್ಲಿ ಇತ್ತೀಚಿನ ದಿನಗಳಲ್ಲಿ ಹುಲಿ ಸಂರಕ್ಷಣೆ ಸೇರಿದಂತೆ ವನ್ಯಜೀವಿ ಸಂರಕ್ಷಣೆ ಬಗ್ಗೆ ಹೆಚ್ಚು ಅರಿವು ಮೂಡುತ್ತಿದೆ. ಆದರೆ ಇಂದಿರಾರು ಬಹಳ ಹಿಂದೆಯೇ ಈ ಚಿಂತನೆಯನ್ನು ಹರಿಬಿಟ್ಟಿದ್ದರು.

● ಬಡತನ ನಿರ್ಮೂಲನೆ:

ಇಂದಿರಾ ಅವರು 'ಬಡತನ ನಿರ್ಮೂಲನೆ' ಕಾರ್ಯಕ್ರಮದ ಮೂಲಕ ಜನರನ್ನು ಆರ್ಥಿಕವಾಗಿ ಮೇಲಕ್ಕೆತ್ತುವ ಕೆಲಸ ಮಾಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ನಮ್ಮ ಕಾಂಗ್ರೆಸ್ ಸರಕಾರವು, ಹಿಂದಿನ ಅವಧಿಯಲ್ಲಿ 'ಇಂದಿರಾ ಕ್ಯಾಂಟೀನ್' ಯೋಜನೆ ಜಾರಿ ಮಾಡಿ ಅದು ಯಶಸ್ವಿಯಾಗಿ ನಡೆಯುತ್ತಿದೆ. ಈ ಅವಧಿಯಲ್ಲಿ ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿಯಂಥ ಗ್ಯಾರಂಟಿ ಕಾರ್ಯಕ್ರಮಗಳು ಜನಪ್ರಿಯತೆಯಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿವೆ. ಇಂಥ ನವಚಿಂತನೆಯ ಕಾರ್ಯಕ್ರಮಗಳಿಗೆ ಇಂದಿರಾ ಅವರ ಬಡತನ ನಿರ್ಮೂಲನೆಯ ಕಾರ್ಯಕ್ರಮವೇ ಪ್ರೇರಣೆಯಾಗಿದೆ.

● ಕಠಿಣ-ನೇರ-ನಿಷ್ಠುರ:

ದೇಶದ ಸಮಗ್ರತೆಗೆ ಧಕ್ಕೆ ಬಂದಾಗ ಇಂದಿರಾ ಅಮೃತಸರದ ಸ್ವರ್ಣಮಂದಿರಕ್ಕೆ ಅನಿವಾರ್ಯವಾಗಿ ಸೇನೆ ನುಗ್ಗಿಸಿ ಭಯೋತ್ಪಾದಕರನ್ನು ಸದೆಬಡಿದರು. ಬಾಹ್ಯಶಕ್ತಿಗಳಿಂದ ತೊಂದರೆಯಾದಾಗ ತೀವ್ರವಾದಿ ನಿಲುವು ತಳೆಯುವಲ್ಲಿ ಇಂದಿರಾರನ್ನು ಸರಿಗಟ್ಟುವ ನಾಯಕರು ದೇಶಕ್ಕೆ ಈವರೆಗೂ ದೊರೆತಿಲ್ಲ. ಅಂಥ ಉಕ್ಕಿನ ಮನಸ್ಥಿತಿಯಿಂದಲೇ ಅವರು 'ಸರ್ವಾಧಿಕಾರಿ' ಎಂಬ ಸುಳ್ಳು ಆರೋಪ ಹೊರಬೇಕಾಗಿ ಬಂದಿದ್ದು ದುರದೃಷ್ಟ! ಅಷ್ಟೆಲ್ಲ ದಿಟ್ಟತನ ತೋರಿದ್ದ ಇಂದಿರಾ ತಮ್ಮ ಪ್ರಾಣದ ಬಗ್ಗೆ ಅಸಡ್ಡೆ ತೋರಿದ್ದು ದುರಂತ.

ಪ್ರಾಣಾಪಾಯ ಇರುವುದರಿಂದ ಅಂಗರಕ್ಷಕರನ್ನು ಬದಲಿಸಬೇಕು ಎನ್ನುವ ಸಲಹೆಯನ್ನು ಅವರಿಗೆ ನೀಡಿದಾಗ, ಅಂಥ ಹೇಡಿಕೆಲಸ ಮಾಡಲಾರೆ ಎಂದುತ್ತರಿಸಿದ್ದರಂತೆ! ಭುವನೇಶ್ವರದ ಕಾರ್ಯಕ್ರಮವೊಂದರಲ್ಲಿ ಇಂದಿರಾರು ಮಾಡಿದ ಕೊನೆಯ ಭಾಷಣದ ಒಂದು ಸಾಲು ಹೀಗಿದೆ: ''ನಾನು ಇಂದು ಇಲ್ಲಿದ್ದೇನೆ, ನಾಳೆ ಇರದೇ ಹೋಗಬಹುದು. ಆದರೆ ರಾಷ್ಟ್ರದ ಹಿತಾಸಕ್ತಿಯನ್ನು ಕಾಯುವ ಜವಾಬ್ದಾರಿ ಪ್ರತಿ ಭಾರತೀಯರ ಹೆಗಲ ಮೇಲಿದೆ''.

ದೇಶದ ಘನತೆ ಹಾಗೂ ಪ್ರಜಾಪ್ರಭುತ್ವವನ್ನು ಎತ್ತಿಹಿಡಿದು ಬದುಕಿದ ಉಕ್ಕಿನ ಮಹಿಳೆ ಇಂದಿರಾ ಅವರ ಜನ್ಮದಿನದ ಸಂದರ್ಭದಲ್ಲಿ ನಾವೆಲ್ಲರೂ ಈ ಮಾತನ್ನು ಸ್ಮರಿಸಿಕೊಳ್ಳಬೇಕು. ಅವರ ದಾರಿಯಲ್ಲಿ ಸಾಗಿ ಆಡಳಿತ ನಡೆಸುವುದೇ ಅವರ ಜನ್ಮದಿನಕ್ಕೆ ನಾವು ಕೊಡಬಹುದಾದ ಉಡುಗೊರೆ.

(ಲೇಖಕರು ರಾಜ್ಯದ ಉಪಮುಖ್ಯಮಂತ್ರಿಗಳು)

ಬಾವಿಗೆ ಬಿದ್ದು ಮಹಿಳೆ ಆತ್ಮಹತ್ಯೆ

ವಿಜಯಪುರ: ಅನಾರೋಗ್ಯದ ಕಾರಣ ಶಸ್ತ್ರ ಚಿಕಿತ್ಸೆ ಮೂಲಕ ಗರ್ಭಕೋಶ ತೆಗೆದಿದ್ದಕ್ಕೆ ಇನ್ಮುಂದೆ ಮಕ್ಕಳಾಗಲ್ಲಾ ಎಂದು ಮನನೊಂದ ಮಹಿಳೆ ಮಗುವಿನೊಂದಿಗೆ ಬಾವಿಗೆ ಬಿದ್ದು ಆತ್ಮಹತ್ಯೆಗೆ ಶರಣಾದ ದಾರುಣ ಘಟನೆ ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನ ಹಂಡರಗಲ್ ಗ್ರಾಮದಲ್ಲಿ ನಡೆದಿದೆ. ಹಂಡರಗಲ್ ಗ್ರಾಮದ ರಿಹಾನಾ ಇನಾಂದಾರ್ (24) ತನ್ನ 4 ವರ್ಷದ ಹೆಣ್ಣು ಮಗು ಅಮೀರಾ ಜೊತೆಗೆ ಗ್ರಾಮದ ಹೊರ ಭಾಗದಲ್ಲಿರುವ ಬಾವಿಗೆ ಹಾರಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಕ್ಲೌಡ್ ಸಾಫ್ಟ್‌ವೇರ್ ಗ್ರೂಪ್ ಇಂಡಿಯ ಪ್ರೈವೇಟ್ ಲಿಮಿಟೆಡ್
(ಈ ಮೊದಲು ಸಿಟ್ರಿಕ್ಸ್ ಆರ್&ಡಿ ಇಂಡಿಯ ಪ್ರೈವೇಟ್ ಲಿಮಿಟೆಡ್ ಎಂದಿತ್ತು)
ನೋಂದಾಯಿತ ಕಚೇರಿ: ಪ್ರೆಸ್ಟೀಜ್ ಡೈನಾಸ್ಟಿ, #33, ಹಲಸೂರು ರಸ್ತೆ, ಬೆಂಗಳೂರು–560042, ಕರ್ನಾಟಕ, ಭಾರತ. ದೂರವಾಣಿ: +91 80 6120 2001 । ಫ್ಯಾಕ್ಸ್: +91 6120 2666
ವೆಬ್‌ಸೈಟ್ : www.cloud.com | ಇ–ಮೇಲ್ : corpm-india@cloud.com |
CIN:U72300KA2001PTC029871
ಅರ್ಜಿ ನಮೂನೆ ಸಿಎಎ–2
[ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 230(3) ಮತ್ತು ಕಂಪನಿಗಳ (ರಾಜಿಗಳು, ವ್ಯವಸ್ಥೆಗಳು ಮತ್ತು ಸಂಯೋಜನೆಗಳು) ನಿಯಮಾವಳಿ–2016ರ ನಿಯಮ 6 ಮತ್ತು 7ರ ಅನುಸಾರ]
ಸಿ.ಎ. (ಸಿಎಎ) ಸಂ.20/ಬಿಬಿ/2024
ಕಂಪನಿ ಕಾಯಿದೆ, 2013ರ ವಿಷಯವಾಗಿ
ಮತ್ತು
ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 230ರಿಂದ 232 ಹಾಗೂ ಕಂಪನಿಗಳ ಕಾಯ್ದೆ, 2013ರ ಅನ್ವಯವಾಗುವ ಇತರ ಅಂಶಗಳು
ಮತ್ತು
ಟಿಬ್ಕೊ ಸಾಫ್ಟ್‌ವೇರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಅರ್ಜಿದಾರೇತರ ಕಂಪನಿ ವರ್ಗಾಯಿತ ಕಂಪನಿ ನಂ. 1) ಸ್ನ್ಯಾಪಿಡೇಟಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಅರ್ಜಿದಾರೇತರ ಕಂಪನಿ ವರ್ಗಾಯಿತ ಕಂಪನಿ ನಂ. 2), ಸಿಟ್ರಿಕ್ಸ್ ಸಿಸ್ಟಮ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಅರ್ಜಿದಾರ ಕಂಪನಿ) ಗಳನ್ನು ಮತ್ತು ಕ್ರಮವಾಗಿ ಸಂಬಂಧಿತ ಷೇರುದಾರರನ್ನು ಕ್ಲೌಡ್ ಸಾಫ್ಟ್‌ವೇರ್ ಗ್ರೂಪ್ ಇಂಡಿಯ ಪ್ರೈವೇಟ್ ಲಿಮಿಟೆಡ್ (ಅರ್ಜಿದಾರ ಕಂಪನಿ 2/ವರ್ಗಾವಣೆಗಾರ ಕಂಪನಿ) ನೊಂದಿಗೆ ಸಂಯೋಜಿಸುವ ವಿಷಯವಾಗಿ ಕ್ಲೌಡ್ ಸಾಫ್ಟ್‌ವೇರ್ ಗ್ರೂಪ್ ಇಂಡಿಯ ಪ್ರೈವೇಟ್ ಲಿಮಿಟೆಡ್ ನ ಅಸುರಕ್ಷಿತ ಸಾಲಗಾರರ ಸಭೆಯ ಸೂಚನೆ ಮತ್ತು ಸೂಚನೆಯ ಜಾಹೀರಾತು

ಈ ಮೂಲಕ ಸೂಚನೆ ನೀಡುವುದೇನೆಂದರೆ, ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ಮಂಡಳಿ (ಎನ್‌ಸಿಎಲ್‌ಡಿ) ತನ್ನ ಆದೇಶ ದಿನಾಂಕ 6ನೇ ನವೆಂಬರ್, 2024 ('ಹೇಳಲಾದ ಆದೇಶ') ಆದೇಶದಲ್ಲಿ ಒಂದು ವೇಳೆ ಯಾವುದೇ ಮಾರ್ಪಾಡು ಅಥವಾ ಇಲ್ಲದೆಯೇ ಟಿಬ್ಕೊ ಸಾಫ್ಟ್‌ವೇರ್ ಇಂಡಿಯ ಪ್ರೈವೇಟ್ ಲಿಮಿಟೆಡ್ (ವರ್ಗಾಯಿತ ಕಂಪನಿ ನಂ. 1) ಸ್ನಾಪ್ಪಿಡೇಟಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ವರ್ಗಾಯಿತ ಕಂಪನಿ ನಂ. 2) ಸಿಟ್ರಿಕ್ಸ್ ಸಿಸ್ಟಮ್ಸ್ ಇಂಡಿಯ ಪ್ರೈವೇಟ್ ಲಿಮಿಟೆಡ್ (ವರ್ಗಾಯಿತ ಕಂಪನಿ 3) ಮತ್ತು ಕ್ಲೌಡ್ ಸಾಫ್ಟ್‌ವೇರ್ ಗ್ರೂಪ್ ಇಂಡಿಯ ಪ್ರೈವೇಟ್ ಲಿಮಿಟೆಡ್ (ವರ್ಗಾವಣೆಗಾರ ಕಂಪನಿ)ಯೊಂದಿಗೆ ವಿಲೀನಗೊಳಿಸುವ ಬಗ್ಗೆ ವರ್ಗಾವಣೆಗಾರ ಕಂಪನಿಯ ಅಸುರಕ್ಷಿತ ಸಾಲದಾತರ ಸಭೆಯನ್ನು ಪರಿಗಣಿಸುವ ಉದ್ದೇಶಕ್ಕಾಗಿ ಅಸುರಕ್ಷಿತ ಸಾಲದಾತರ ಮತ್ತು ಅವುಗಳ ಷೇರುದಾರರ ಸಭೆಯನ್ನು ಕರೆಯಲು ನಿರ್ದೇಶನ ನೀಡಿದೆ.
ಸದರಿ ಆದೇಶದ ಅನುಸಾರವಾಗಿ ಮತ್ತು ಅದರಲ್ಲಿ ನಿರ್ದೇಶಿಸಿದಂತೆ ಮುಂದಿನ ಸೂಚನೆಯನ್ನು ನೀಡಲಾಗಿದ್ದು, ಈ ವರ್ಗಾವಣೆದಾರ ಅಸುರಕ್ಷಿತ ಸಾಲದಾತರ ಸಭೆಯು ಶುಕ್ರವಾರ 20ನೇ ಡಿಸೆಂಬರ್ 2024 ರಂದು ಬೆಳಿಗ್ಗೆ 10.30 ಘಂಟೆಗೆ ಹೈಬ್ರಿಡ್ ಮೋಡ್ ಅಂದರೆ ಅಸುರಕ್ಷಿತ ಸಾಲದಾತರು ಆಡಿಯೊ ವಿಡಿಯೊ ಕಾನ್ಫರೆನ್ಸಿಂಗ್ (ವಿಸಿ) ಮೂಲಕ ಅಥವಾ ನೋಂದಾಯಿತ ಕಚೇರಿ ಪ್ರೆಸ್ಟೀಜ್ ಡೈನಾಸ್ಟಿ, #33, ಹಲಸೂರು ರಸ್ತೆ, ಬೆಂಗಳೂರು–560042, ಕರ್ನಾಟಕ ಇಲ್ಲಿ ಖುದ್ದಾಗಿ ಹಾಜರಾಗಬಹುದು.
ಅಸುರಕ್ಷಿತ ಸಾಲಗಾರರು ಹೇಳಲಾದ ಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.
ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 102 ಮತ್ತು ಕಂಪನಿಗಳ ಕಾಯಿದೆ 6 (ರಾಜಿಗಳು, ವ್ಯವಸ್ಥೆಗಳು ಮತ್ತು ಸಂಯೋಜನೆಗಳು) ನಿಯಮಗಳು, 2016 ರೊಂದಿಗೆ ಓದಲಾದ ಸೆಕ್ಷನ್ 230(3) ಅಡಿಯಲ್ಲಿ ಮತ್ತು ಪ್ರಾಕ್ಸಿಯ ನಮೂನೆಗಳನ್ನು ಉಚಿತವಾಗಿ ವರ್ಗಾವಣೆಗಾರ ಕಂಪನಿಯ ನೋಂದಾಯಿತ ಕಚೇರಿಯಲ್ಲಿ ಟ್ರಿಬ್ಯೂನಲ್‌ನ ದಿನಾಂಕದವರೆಗೆ ಯಾವುದಾದರೂ ಕೆಲಸದ ದಿನದಂದು ಬೆಳಿಗ್ಗೆ9.00 ರಿಂದ ಸಂಜೆ 5.00ರವರೆಗೆ ಪಡೆಯಬಹುದು.
ಸಭೆಯಲ್ಲಿ ಭಾಗವಹಿಸಲು ಮತ್ತು ಮತಚಲಾಯಿಸಲು ಅರ್ಹ ವ್ಯಕ್ತಿಗಳು ಖುದ್ದಾಗಿ ಅಥವಾ ಪ್ರಾಕ್ಸಿ (ಖುದ್ದಾಗಿ ಹಾಜರಾಗುವವರಿಗೆ ಮಾತ್ರ ವಿಸಿ ಮೂಲಕ ಹಾಜರಾಗುವವರಿಗೆ ಪ್ರಾಕ್ಸಿಗೆ ಅವಕಾಶವಿಲ್ಲ) ಮೂಲಕ ಮತ ಚಲಾಯಿಸಬಹುದು ನಿಗದಿತ ನಮೂನೆಯಲ್ಲಿ ಎಲ್ಲಾ ಪ್ರಾಕ್ಸಿಗಳನ್ನು ಅರ್ಜಿದಾರ ಕಂಪನಿ/ವರ್ಗಾವಣೆಗಾರ ಕಂಪನಿಯ ನೊಂದಾಯಿತ ಕಚೇರಿ ಪ್ರೆಸ್ಟೀಜ್ ಡೈನಾಸ್ಟಿ, #33, ಹಲಸೂರು ರಸ್ತೆ, ಬೆಂಗಳೂರು–560042 ಇಲ್ಲಿಂದ ಸಭೆಯ 48 ಘಂಟೆಗಳ ಮೊದಲು ಪಡೆಯಬಹುದು. ಪ್ರಾಕ್ಸಿ ನಮೂನೆಗಳನ್ನು ಅರ್ಜಿದಾರ ಕಂಪನಿಯ ನೋಂದಾಯಿತ ಕಚೇರಿಯಿಂದಲೂ ಪಡೆಯಬಹುದು ಮತ್ತು ಸಭೆಯ ಸೂಚನೆಯನ್ನು ಸಹ ಲಗತ್ತಿಸಲಾಗಿದೆ.
ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ, ಬೆಂಗಳೂರು ಪೀಠವು ಅಸುರಕ್ಷಿತ ಸಾಲಗಾರರ ಸಭೆಗೆ ಅಧ್ಯಕ್ಷರಾಗಿ ಶ್ರೀ ವೆಂಕಟ ಸುಬ್ಬಾರಾವ್ ಕಲ್ವಾ ರವರನ್ನು ಪರಿಶೀಲಕರನ್ನಾಗಿ ನೇಮಿಸಿದೆ. ಮೇಲೆ ಹೇಳಲಾದ ಯೋಜನೆಯು ಅಸುರಕ್ಷಿತ ಸಾಲದಾತರ ಸಭೆಯಲ್ಲಿ ಅನುಮೋದಿತವಾದರೆ, ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ, ಬೆಂಗಳೂರು ಪೀಠ ಮತ್ತು ಇತರ ನಿಯಂತ್ರಣ ಪ್ರಾಧಿಕಾರಗಳ ನಂತರದ ಅನುಮೋದನೆಗಳಿಗೆ ಒಳಪಟ್ಟಿರುತ್ತದೆ.
ಮುಂದುವರಿದು ಎಲ್ಲಾ ಅಸುರಕ್ಷಿತ ಸಾಲದಾತರಿಗೆ ತಿಳಿಸುವುದೇನೆಂದರೆ,
1. ಎನ್‌ಸಿಎಲ್‌ಟಿ ಕರೆದ ಸಭೆಯ ಸೂಚನೆಯಲ್ಲಿ ವಿಶೇಷ ವ್ಯವಹಾರಗಳ ಮೇಲೆ ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಮತ ಚಲಾಯಿಸಬಹುದಾಗಿದೆ.
2. ಎನ್‌ಸಿಎಲ್‌ಟಿ ಕರೆದ ಸಭೆಯ ಸೂಚನೆಯ ರವಾನೆಯನ್ನು 16ನೇ ನವೆಂಬರ್ 2024 ರಂದೇ ಪೂರ್ಣಗೊಳಿಸಲಾಗಿದೆ.
3. ರಿಮೋಟ್ ಇ–ಮತದಾನವು ಮಂಗಳವಾರ, 17ನೇ ಡಿಸೆಂಬರ್ 2024ರಂದು ಬೆಳಿಗ್ಗೆ 9.00 ಘಂಟೆಯಿಂದ ಆರಂಭವಾಗಲಿದೆ.
4. ರಿಮೋಟ್ ಇ–ಮತದಾನವು ಗುರುವಾರ, 19ನೇ ಡಿಸೆಂಬರ್ 2024ರಂದು ಸಂಜೆ 5.00 ಘಂಟೆಗೆ ಮುಕ್ತಾಯಗೊಳ್ಳಲಿದೆ. ಹೇಳಲಾದ ದಿನಾಂಕ ಮತ್ತು ಸಮಯದ ನಂತರ ಇ–ಮತದಾನಕ್ಕೆ ಅವಕಾಶವಿರುವುದಿಲ್ಲ.
5. ಎನ್‌ಸಿಎಲ್‌ಟಿ ಆದೇಶದ ಪ್ರಕಾರ 31ನೇ ಜನವರಿ, 2024ರಂತೆ ಅಸುರಕ್ಷಿತ ಸಾಲದಾತರು ಸಭೆಗೆ ಹಾಜರಾಗಲು ಅರ್ಹರಾಗಿದ್ದು, ಮತದಾನವನ್ನು ರಿಮೋಟ್ ಇ–ಮತದಾನದ ಮೂಲಕ, ಸಭೆಯ ಸಮಯದಲ್ಲಿ ರಿಮೋಟ್ ಮತದಾನ ಅಥವಾ ಸಭೆಯ ಸಂದರ್ಭದಲ್ಲಿ ಮತಪತ್ರದ ಮೂಲಕ ಮತದಾನ ಮಾಡಬಹುದಾಗಿದೆ.
6. ಇ–ಮತದಾನ ಅಥವಾ ಮತಪತ್ರದ ಮೂಲಕ ಮತದಾನದ ಸೌಲಭ್ಯವು ಎನ್‌ಸಿಎಲ್‌ಟಿ ಕರೆದ ಸಭೆಯ ಸ್ಥಳದಲ್ಲಿ ಇರಲಿದ್ದು, ಮತ್ತು ಅಸುರಕ್ಷಿತ ಸಾಲದಾತರು ಯಾರು ತಮ್ಮ ಮತದಾನವನ್ನು ಇ–ಮತದಾನದ ಮೂಲಕ ಚಲಾಯಿಸಿರುವುದಿಲ್ಲವೋ ಅವರು ಮತಪತ್ರದ ಮೂಲಕ ಸಭೆಯಲ್ಲಿ ತಮ್ಮ ಹಕ್ಕನ್ನು ಚಲಾಯಿಸಲು ಅರ್ಹರಾಗಿರುತ್ತಾರೆ.
7. ತಮ್ಮ ಮತದಾನವನ್ನು ಇ–ಮತದಾನದ ಮೂಲಕ ಚಲಾಯಿಸಿದ ನಂತರ ಅಸುರಕ್ಷಿತ ಸಾಲದಾತರು ಎನ್‌ಸಿಎಲ್‌ಟಿ ಸಭೆಯಲ್ಲಿ ಭಾಗವಹಿಸಬಹುದು ಆದರೆ, ಎನ್‌ಸಿಎಲ್‌ಟಿ ಸಭೆಯ ಸಂದರ್ಭದಲ್ಲಿ ಅವರಿಗೆ ಮತ್ತೊಮ್ಮೆ ಮತದಾನಕ್ಕೆ ಅವಕಾಶವಿರುವುದಿಲ್ಲ.
8. ಸಭೆಯ ಸೂಚನೆಯು ಕಂಪನಿಯ ವೆಬ್‌ಸೈಟ್ www.cloud.com ಮತ್ತು www.right2vote.in ವೆಬ್‌ಸೈಟ್ ನಲ್ಲಿ ಲಭ್ಯವಿರುತ್ತದೆ.
I. ಒಂದು ವೇಳೆ ಇ–ಮತದಾನದ ಸೌಲಭ್ಯದ ಬಗ್ಗೆ ಯಾವುದೇ ವಿಚಾರಣೆ/ಕುಂದುಕೊರತೆಗಳಿದ್ದಲ್ಲಿ ನೀವು contact@Right2vote.in ಗೆ ಇ–ಮೇಲ್ ಮಾಡಬಹುದು.
9. ಸಭೆಯ ಬಗ್ಗೆ ಯಾವುದೇ ವಿಚಾರಣೆಗಳಿದ್ದಲ್ಲಿ, ಕಂಪನಿಯನ್ನು ಸಂಪರ್ಕಿಸಿ, ನೋಂದಾಯಿತ ಕಚೇರಿ ವಿಳಾಸ : ಪ್ರೆಸ್ಟೀಜ್ ಡೈನಾಸ್ಟಿ, #33, ಹಲಸೂರು ರಸ್ತೆ, ಬೆಂಗಳೂರು–560042, ಕರ್ನಾಟಕ ಅಥವಾ ಇ–ಮೇಲ್ : pragya.chakraborty1@cloud.com/amruta@dtsmindia.com

ಪ್ರಗ್ಯಾ ಚಕ್ರಬೊರ್ತಿ
ಡಿಐಎನ್: 10820038
ದಿನಾಂಕ: 18 ನವೆಂಬರ್, 2024 ಪೂರ್ಣಾವಧಿ ನಿರ್ದೇಶಕಿ
ಸ್ಥಳ: ಬೆಂಗಳೂರು ಕ್ಲೌಡ್ ಸಾಫ್ಟ್‌ವೇರ್ ಗ್ರೂಪ್ ಇಂಡಿಯ ಪ್ರೈವೇಟ್ ಲಿಮಿಟೆಡ್
(ಈ ಹಿಂದೆ ಸಿಟ್ರಿಕ್ಸ್ ಆರ್&ಡಿ ಇಂಡಿಯ ಪ್ರೈವೇಟ್ ಲಿಮಿಟೆಡ್ ಎಂದಿತ್ತು)

ಆಫರ್ ವಿವಾದಕ್ಕೆ ಇನ್ನಷ್ಟು ರಂಗು

← ಮೊದಲಪುಟದಿಂದ

ಕಾಂಗ್ರೆಸ್ ಶಾಸಕರನ್ನು ಕಳುಹಿಸಿದ್ದೇ ಸಿದ್ದರಾಮಯ್ಯ

ಕಳೆದ ಬಾರಿ ಬಿಜೆಪಿ ಸರಕಾರ (ಯಡಿಯೂರಪ್ಪ ನೇತೃತ್ವದ) ರಚನೆ ಮಾಡುವಾಗ ಕಾಂಗ್ರೆಸ್ ಶಾಸಕರನ್ನು ಸ್ವಂತ ಕಳುಹಿಸಿದ್ದೇ ಸಿದ್ದರಾಮಯ್ಯ. ಕೆಲವು ಕಾಂಗ್ರೆಸ್ ಶಾಸಕರನ್ನು ಅವರೇ ಕಳುಹಿಸಿದ್ದರು ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದ್ದಾರೆ.

ಕಾಂಗ್ರೆಸ್‌ನವರಿಗೆ ಆಡಳಿತ ನಡೆಸುವ ನೈತಿಕತೆ ಇರಲಿಲ್ಲ, ಹೀಗಾಗಿ, ನಾವು ಸರಕಾರ ರಚನೆ ಮಾಡಿದ್ದೆವು. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿ ಮುಂದುವರಿಯಬಾರದು ಎನ್ನುವ ಕಾರಣಕ್ಕೆ ಶಾಸಕರನ್ನು ಕಳುಹಿಸಿದ್ದೇ ಕಾಂಗ್ರೆಸ್. ಇನ್ನು ಬಿಜೆಪಿಯಿಂದ ಕಾಂಗ್ರೆಸ್ ಶಾಸಕರಿಗೆ 100 ಕೋಟಿ ವಿಚಾರ ಸಂಬಂಧ ಕಾಂಗ್ರೆಸ್ ಶಾಸಕ ರವಿ ಗಾಣಿಗ ದಾಖಲೆ ಇದ್ದರೆ ಬಿಡುಗಡೆ ಮಾಡಲಿ. ಅಂತಹವರ ವಿರುದ್ಧ ಭಾರತ ಸರಕಾರ ಕ್ರಮ ಕೈಗೊಳ್ಳತ್ತದೆ. ಈಗ ವಿಷಯ ಬೇರೆಡೆ ತಿರುಗಿಸಲು ಸುಮ್ಮನೆ ಮಾತನಾಡುತ್ತಿದ್ದಾರೆ ಎಂದಿದ್ದಾರೆ.

ಸಿದ್ದರಾಮಯ್ಯ ಸೇರಿ ಎಲ್ಲರೂ ಈ ವಿಷಯ ಮಾತನಾಡುತ್ತಿದ್ದಾರೆ. ಸಿದ್ದರಾಮಯ್ಯರ ವಿರುದ್ಧ ನ್ಯಾಯಾಲಯದ ಆದೇಶವಿದೆ. ಅದರ ಬಗ್ಗೆ ಯಾಕೆ ಮಾತನಾಡುತ್ತಿಲ್ಲ? ಎಂದು ಪ್ರಶ್ನೆ ಮಾಡಿದ್ದು, 100 ಕೋಟಿಯ ಬಗ್ಗೆ ಅಲ್ಲ, ಅವರು 500 ಕೋಟಿ ರು. ಬಗ್ಗೆ ಮಾತಾಡಲಿ ಎಂದು ಸವಾಲು ಹಾಕಿದ್ದಾರೆ.

ಬಿಜೆಪಿಯ ಯಾವ ನಾಯಕರೂ ಈಗ ನನ್ನನ್ನು ಸಂಪರ್ಕ ಮಾಡಿಲ್ಲ. ಆರಂಭದಲ್ಲಿ ಆಫರ್ ಬಂದಿತ್ತು. ಆಗ ಸ್ನೇಹ, ವಿಶ್ವಾಸದ ಹಿನ್ನೆಲೆ ಬಿಜೆಪಿಯಲ್ಲಿನ ಸ್ನೇಹಿತರು ಆಹ್ವಾನ ನೀಡಿದ್ದರು ಅಷ್ಟೇ. ಈಗ ಯಾರೂ ಸಂಪರ್ಕಿಸಿಲ್ಲ. ಯಾವುದೇ ದುಡ್ಡಿನ ಆಮಿಷ ಒಡ್ಡಿಲ್ಲ. ರವಿಕುಮಾರ್ ಗಣಿಗ ಹೇಳಿಕೆ ಸಂಪೂರ್ಣ ಸುಳ್ಳು. ಅವರ ಬಳಿ ಆಡಿಯೋ, ವಿಡಿಯೋ ದಾಖಲೆ ಇದ್ದರೆ ಬಿಡುಗಡೆ ಮಾಡಲಿ.

-ಬಾಬಾ ಸಾಹೇಬ್ ಪಾಟೀಲ್ ಕಿತ್ತೂರು ಕಾಂಗ್ರೆಸ್ ಶಾಸಕ

ಈ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಯಾರು ಈ ರೀತಿ ನನ್ನ ಹೆಸರು ಹೇಳಿದ್ದಾರೋ ಅವರನ್ನೇ ಕೇಳಬೇಕು. ನಾನು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತ. ನನ್ನನ್ನು ಯಾರೂ ಸಂಪರ್ಕಿಸಿಲ್ಲ. ಬಿಜೆಪಿಯ ಆಫರ್ ಬಗ್ಗೆ ನನಗೆ ಗೊತ್ತಿಲ್ಲ. ಆ ಬಗ್ಗೆ ಮಾತನಾಡುವಷ್ಟು ನಾನು ದೊಡ್ಡವನಲ್ಲ.

- ಎಚ್.ಡಿ.ತಮ್ಮಯ್ಯ
ಚಿಕ್ಕಮಗಳೂರು ಕಾಂಗ್ರೆಸ್ ಶಾಸಕ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ – ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಏಜೆನ್ಸಿಗಳಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ	ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	ದಕ್ಷಿಣ ಪೂರ್ವ–2	ಬೆಂಜಮಂ/ಕಾನಿಅ(ದಪೂ–2)/ತಾಂಅ/ಪಿಬಿ/2065/2024–25 ದಿನಾಂಕ: 14.11.2024	1	₹ 20,81,718/-	₹ 50,000/-	05.12.2024ರ ಸಂಜೆ 4.00 ಗಂಟೆಯವರೆಗೆ.	09.12.2024 ರಂದು ಸಂಜೆ 4.30 ಗಂಟೆಯ ನಂತರ.
			2	₹ 40,53,819/-	₹ 81,070/-		
			3	₹ 42,81,313/-	₹ 85,630/-		
			4	₹ 27,60,439/-	₹ 55,210/-		
			5	₹ 32,07,512/-	₹ 64,150/-		
			6	₹ 39,53,793/-	₹ 79,080/-		
			7	₹ 48,88,691/-	₹ 97,780/-		
		ಸಹಿ/– ಕಾರ್ಯ ನಿರ್ವಾಹಕ ಅಭಿಯಂತರರು (ದಕ್ಷಿಣ ಪೂರ್ವ–2)					
2	ಪೂರ್ವ–1	ಬೆಂಜಮಂ/ಕಾನಿಅ(ಪೂರ್ವ–1)/ಯೋ.ವಿ/3085/2024–25 ದಿನಾಂಕ: 12.11.2024	1	₹ 52,20,885/-	₹ 1,04,500/-	02.12.2024ರ ಸಂಜೆ 4.00 ಗಂಟೆಯವರೆಗೆ.	04.12.2024 ರಂದು ಸಂಜೆ 5.00 ಗಂಟೆಯ ನಂತರ.
			2	₹ 63,09,481/-	₹ 1,26,200/-		
3		ಬೆಂಜಮಂ/ಕಾನಿಅ(ಪೂರ್ವ–1)/ಯೋ.ವಿ/3087/2024–25 ದಿನಾಂಕ: 12.11.2024 (ಪರಿಶಿಷ್ಟ ಜಾತಿಗೆ ಮೀಸಲು)	1	₹ 76,20,587/-	₹ 76,210/-		
			2	₹ 66,29,095/-	₹ 66,300/-		
4		ಬೆಂಜಮಂ/ಕಾನಿಅ(ಪೂರ್ವ–1)/ಯೋ.ವಿ/3089/2024–25 ದಿನಾಂಕ: 12.11.2024	1	₹ 52,43,883/-	₹ 1,04,900/-		
			2	₹ 68,99,211/-	₹ 1,38,000/-		
			3	₹ 50,87,675/-	₹ 1,01,800/-		
		ಸಹಿ/– ಕಾರ್ಯ ನಿರ್ವಾಹಕ ಅಭಿಯಂತರರು (ಪೂರ್ವ–1)					

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/MIA/3254/2024-25

ಯಾರೂ ಬೆಟ್ಟಿಂಗ್ ಕಟ್ಟದಂತೆ ನಿಖಿಲ್ ಕುಮಾರಸ್ವಾಮಿ ಮನವಿ

ಹಾಸನ: ಯಾರೂ ಕೂಡ ಬೆಟ್ಟಿಂಗ್ ಕಟ್ಟಿ ಆರ್ಥಿಕ ನಷ್ಟ ಅನುಭವಿಸಬೇಡಿ. ತಮ್ಮ ಮೊಬೈಲ್ ಸ್ವಿಚ್ ಆಫ್ ಮಾಡಿ ಆರಾಮಾಗಿರಿ ಎಂದು ಚನ್ನಪಟ್ಟಣ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ, ಜೆಡಿಎಸ್ ಪಕ್ಷದ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಯುವಕರಲ್ಲಿ ಮನವಿ ಮಾಡಿಕೊಂಡರು. ಚನ್ನಪಟ್ಟಣ ಉಪಚುನಾವಣೆ ಫಲಿತಾಂಶಕ್ಕೆ ದಿನಗಣನೆ ಹಿನ್ನೆಲೆ ಜಿಲ್ಲೆಯ ಚನ್ನರಾಯಪಟ್ಟಣ, ಹೊಳೆನರಸೀಪುರದ ವಿವಿಧ ದೇವಾಲಯಕ್ಕೆ ಪತ್ನಿ ರೇವತಿ, ಪುತ್ರ ಅವ್ಯಾನ್ ಜೊತೆಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಅವರು ಮಾತನಾಡಿ, ಬೆಟ್ಟಿಂಗ್ ನಿಂದ ಎಷ್ಟೋ ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ. ಚುನಾವಣೆಯ ಫಲಿತಾಂಶ ವಿಚಾರವಾಗಿ ಯಾರೂ ಬೆಟ್ಟಿಂಗ್ ಕಟ್ಟಬೇಡಿ. ಫೋನ್ ಸ್ವಿಚ್ ಆಫ್ ಮಾಡಿ ಮಲಗಿಬಿಡಿ, ಬೆಟ್ಟಿಂಗ್ ಕಟ್ಟಿ ಆರ್ಥಿಕ ನಷ್ಟ ಅನುಭವಿಸಬೇಡಿ. ಮಾಧ್ಯಮದ ಮೂಲಕ ನಿಮ್ಮಲ್ಲಿ ಮನವಿ ಮಾಡುವೆ. ಎಲ್ಲದಕ್ಕೂ ದೇವರಿದ್ದಾನೆ. ಆರಾಮಾಗಿ ಮಲಗಿ ಎಂದರು.

ನಿಖಿಲ್ ಕುಮಾರಸ್ವಾಮಿ ಕುಟುಂಬ ಸಮೇತ ಹೊಳನರಸೀಪುರ ತಾಲೂಕಿನ ಹರದನಹಳ್ಳಿಯ ದೇವೇಶ್ವರ ದೇಗುಲಕ್ಕೆ ಭೇಟಿ ನೀಡಿ ಮನೆ ದೇವರಿಗೆ ಪೂಜೆ ನೆರವೇರಿಸಿದರು.

ಎಲ್ಲರ ಬೆಂಬಲ ಸಿಕ್ಕಿದ್ದರಿಂದ ಗೆಲುವಿನ ವಿಶ್ವಾಸ ಮೂಡಿದೆ: ಜನರ, ದೇವರ ಆಶೀರ್ವಾದದಿಂದ ಗೆಲ್ಲುವ ವಿಶ್ವಾಸವಿದೆ. ಮಾಜಿ ಸಚಿವರು, ಶಾಸಕರು, ಕಾರ್ಯಕರ್ತರು, ಅಭಿಮಾನಿಗಳು ಸೇರಿದಂತೆ ಸಾಕಷ್ಟು ಜನ ನನ್ನ ಚುನಾವಣೆಗಾಗಿ ದುಡಿದಿದ್ದಾರೆ. ಜೆಡಿಎಸ್ ಪಕ್ಷದ ಇತಿಹಾಸದಲ್ಲಿ ಇಂತಹ ಚುನಾವಣೆ ನಡೆದಿರಲಿಲ್ಲ. ಇದು ಇತಿಹಾಸದ ಪುಟಗಳಲ್ಲಿ ಉಳಿಯುವ ಚುನಾವಣೆ.

-ನಿಖಿಲ್ ಕುಮಾರಸ್ವಾಮಿ, ಎನ್‌ಡಿಎ ಅಭ್ಯರ್ಥಿ

ಬಿಜೆಪಿ-ಆರೆಸ್ಸೆಸ್ ವಿರುದ್ಧ ಟೀಕೆಗೆ ಬಿಜೆಪಿ ಶಾಸಕ ಗರಂ

ಖರ್ಗೆ ವಿರುದ್ಧ ಯತ್ನಾಳ ವಾಗ್ದಾಳಿ

ವಿಜಯಪುರ: ಬಿಜೆಪಿ ಹಾಗೂ ಆರ್‌ಎಸ್‌ಎಸ್ ವಿಷದ ಹಾವು ಇದ್ದಂತೆ, ಈ ವಿಷಕಾರಿ ಹಾವು ಕಚ್ಚಿದ್ರೆ, ವ್ಯಕ್ತಿ ಸತ್ತೇ ಹೋಗುತ್ತಾನೆ, ಹೀಗಾಗಿ ಈ ವಿಷಕಾರಿ ಹಾವನ್ನು ನೀವು ಸಾಯಿಸಬೇಕು ಎಂದು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೀಡಿದ ಹೇಳಿಕೆಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿಜಯಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಯತ್ನಾಳ , ಮಲ್ಲಿಕಾರ್ಜುನ ಖರ್ಗೆ ಅವರ ತಾಯಿ -ತಂಗಿಯನ್ನು ಯಾರು ಹೊಡೆದಿದ್ದು.? ಆರ್‌ಎಸ್‌ಎಸ್, ಬಿಜೆಪಿಯವರು ಹೊಡೆದಿದ್ದಾ? ರಜಾಕಾರರು ಮುಸ್ಲಿಮರಲ್ಲ ಪ್ರಿಯಾಂಕ ಖರ್ಗೆ ಎಂಬ ಬುದ್ಧಿವಂತ ಸಚಿವರು ಹೇಳಿದ್ದಾರೆ. ಹಾಗಾದರೆ ರಜಾಕಾರರು ಲಿಂಗಾಯತರಾ ಎಂದು ಪ್ರಶ್ನಿಸಿದರು.

ಹೇಳಿಕೆ ಸರಿಯಲ್ಲ : ರಾಷ್ಟ್ರೀಯ ಪಕ್ಷದ ಅಧ್ಯಕ್ಷ ಖರ್ಗೆ ಇಂತಹ ಹೇಳಿಕೆ ನೀಡಿದ್ದು ಸರಿಯಲ್ಲ ಎಂದು ವಾಗ್ದಾಳಿ ನಡೆಸಿದ ಅವರು, ದಲಿತರು ಕಾಂಗ್ರೆಸ್ ಗೆ ಸೇರಬಾರದು, ಕಾಂಗ್ರೆಸ್ ಪಕ್ಷವೇ ವಿಷದ ನಾಗರಹಾವು ಎಂದು ತಿರುಗೇಟು ನೀಡಿದರು.

ಕಾಂಗ್ರೆಸ್ ದಲಿತರ ಉದ್ಧಾರ ಮಾಡಲ್ಲಾ ಎಂದು ಬಾಬಾಸಾಹೇಬ್ ಹೇಳಿದ್ದರು.

ಅದರ ಉಲ್ಟಾ ಖರ್ಗೆ ಹೇಳುವ ಮೂಲಕ ಇವರು ಅಂಬೇಡ್ಕರ್ ವಿರೋಧಿಗಳು ಎಂಬುದನ್ನು ರುಜುವಾತು ಮಾಡಿದ್ದಾರೆ ಎಂದು ಯತ್ನಾಳ್ ಕಿಡಿಕಾರಿದರು.

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ನಂ:ದಾಮಪಾ:ಕಾಅ1.ಇ.ಟೆಂಡರ್:34:2024–25 ದಿನಾಂಕ: 16–11–2024

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ)

2024–25 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ (2ನೇ ಕರೆ) – 04 ಕಾಮಗಾರಿ, 2024–25 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ – 03 ಕಾಮಗಾರಿ, 2024–25 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (ಪಾಲಿಕೆಗೆ ನಿರ್ವಹಣೆ ವೆಚ್ಚ ಪಾವತಿಸುವ) (2ನೇ ಕರೆ) – 03 ಕಾಮಗಾರಿ ಒಟ್ಟು 07 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8068948777 ರಿಂದ ಮಾಹಿತಿ ಪಡೆಯಬಹುದು. ಅಂದಾಜು ಮೊತ್ತ, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ. ಮೊತ್ತ ಮತ್ತು ಟೆಂಡರ್ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ. ಕ್ರಮ ಸಂ.01 ರಿಂದ 07 ರ ಅಲ್ಪಾವಧಿ ಕಾಮಗಾರಿಗೆ : ಕೆ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 19–11–2024 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 25–11–2024 ಸಮಯ : 16.00 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 25–11–2024 ಸಮಯ : 17.00 ಟೆಂಡರ್ ತೆರೆಯುವ ದಿನಾಂಕ & ವೇಳೆ : 26–11–2024 ಸಮಯ : 17.05

ವಾಸಾಇ/ದಾವಣಗೆರೆ/507/ಕೆಎಸ್‌ಎಂಸಿಎ/2024–25

ಸಹಿ/–ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ದಾವಣಗೆರೆ

ಅಡಕೆ ಕಳ್ಳತನ ಐವರ ಬಂಧನ

ಶಿವಮೊಗ್ಗ: ಲಕ್ಷಾಂತರ ಮೌಲ್ಯದ ಅಡಕೆ ಕಳ್ಳತನ ಮಾಡಿದ ಆರೋಪದ ಮೇಲೆ ಐವರನ್ನು ಶಿವಮೊಗ್ಗ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಂಧಿತರನ್ನು ಆರ್. ಅನಿಲ್ ಅಲಿಯಾಸ್ ಜಾಕ್, ಲೋಕೇಶ್ ಅಲಿಯಾಸ್ ವಿಜಯ್, ಮನೋಜ್ ಅಲಿಯಾಸ್ ಮುರಗೋಡು, ಪಿ.ನವೀನ್ ಅಲಿಯಾಸ್ ನುಗ್ಗಿ ಹಾಗೂ ಎಸ್.ಚಂದು ಅಲಿಯಾಸ್ ಸುಣ್ಣ ಎಂದು ಗುರುತಿಸಲಾಗಿದೆ. ಆರೋಪಿಗಳು ಹಾಡೋನಹಳ್ಳಿ ಗ್ರಾಮದ ಗೋಡೌನಲ್ಲಿ ಸಂಗ್ರಹಿ ಸಿದ್ದ ಒಣ ಅಡಕೆಯನ್ನು ಕದ್ದಿದ್ದರು. ಅಲ್ಲದೇ ಇತರ ಮೂರು ಪ್ರಕರಣಗ ಳಲ್ಲಿ ಆರೋಪಿಗಳು 7.35 ಲಕ್ಷ ರು. ಮೌಲ್ಯದ ಒಣ ಅಡಕೆಯನ್ನು ಕಳವು ಮಾಡಿದ್ದರು. ಬಂಧಿತರಿಂದ 7.35 ಲಕ್ಷ ರು. ಮೌಲ್ಯದ ಅಡಕೆ ಸೇರಿದಂತೆ 10.25 ಲಕ್ಷ ರು. ಮೌಲ್ಯದ ಮಾಲನ್ನು ಜಪ್ತಿ ಮಾಡಲಾಗಿದೆ.

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

10 ಕೆಜಿ ಅಕ್ಕಿ ಬೇಕೋ ಬೇಡ್ವೋ ಎಂದು ಕೇಳಿದ ಸಿಎಂ ಸಿದ್ದರಾಮಯ್ಯ ಅವರು ಇದೀಗ11 ಲಕ್ಷ ಬಿಪಿಎಲ್ ಕಾರ್ಡುಗಳನ್ನು ರದ್ದುಮಾಡುವ ಮೂಲಕ ಬಡವರ ಅನ್ನಕ್ಕೂ ಕನ್ನ ಹಾಕಿದ್ದಾರೆ. ಕಾಂಗ್ರೆಸ್ ಸರಕಾರ ಅಕ್ಕಿ ಕೊಡಲು ಕೈಲಾಗದೆ ಬಿಪಿಎಲ್ ರದ್ದುಮಾಡಿ ಹೇಡಿತನ ಪ್ರದರ್ಶಿಸಿದೆ. ಮೊದಲು ಫ್ರೀ, ಆಮೇಲೆ ಕಂಡೀಷನ್. ನಂತರ ಬ್ಯಾನ್. ಇದೇ ಕಾಂಗ್ರೆಸ್ಸಿನ ಬೋಗಸ್ ಗ್ಯಾರಂಟಿಗಳ ಅಸಲಿಯತ್ತು..!

ಲಕ್ಷ್ಮಣ ಕಾರ್ಕಳ, ಬೆಂಗಳೂರು

ಇದು ಸರಕಾರ ಮಾಡಿದ ಒಳ್ಳೆಯ ಕೆಲಸ. ನನ್ನ ಮಾಜಿ ಸಹೋದ್ಯೋಗಿ ಕೇರಳ ಮೂಲದ ಮಲಯಾಳಿಗೆ ಬೆಂಗಳೂರಿನಲ್ಲಿ ಸ್ವಂತಮನೆ, ಕಾರು, ಬೈಕ್ ಇದೆ. ಆದಾಯ ತೆರಿಗೆ ರಿಟರ್ನ್ಸ್ ಫೈಲ್ ಮಾಡುವವ. ಅವನಿಗೂ ಬಿಪಿಎಲ್ ಕಾರ್ಡ್ ಇತ್ತು. ಇತ್ತೀಚೆಗೆ ಪ್ರೀ ನರ್ಸರಿ ಶಾಲೆ ಕೂಡ ನಡೆಸುತ್ತಿದ್ದ. ಅಂತಹವನಿಗೆ ಬಿಪಿಎಲ್ ಕಾರ್ಡ್ ಹೇಗೆ ಸಿಕ್ಕು ಅಂತಾ ಗೊತ್ತಿಲ್ಲ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೀದರ್**

ಸಮಸ್ಯೆಯೇನು..?

- ಬೀದರ್ ಹಳೆ ಆದರ್ಶ ಕಾಲೋನಿ ಶ್ರೀ ಗೋರಕ್‌ನಾಥ ಮಾಸ್ಟರ್ ಅವರ ಮನೆಯ ಹತ್ತಿರ ಡೇಕ್ ಸ್ಲ್ಯಾಬ್ ದುರಸ್ತಿ.
- **ಇಲಾಖೆ:** ನಗರ ಸಭೆ
- **ಪರಿಹಾರ:** ಬೀದರ್ ಹಳೆ ಆದರ್ಶ ಕಾಲೋನಿ ಶ್ರೀ ಗೋರಕ್‌ನಾಥ ಮಾಸ್ಟರ್ ಅವರ ಮನೆಯ ಹತ್ತಿರ ಡೇಕ್ ಸ್ಲ್ಯಾಬ್ ನಿರ್ಮಾಣ ಕಾಮಗಾರಿ ಪೂರ್ಣ ಗೊಂಡಿದ್ದು, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗಿದೆ.

ಸಮಾಚಾರ ಸಣ್ಣದಲ್ಲ

ಸಿದ್ದರಾಮಯ್ಯ ಐದು ವರ್ಷ ಸಿಎಂ ಆಗಿರಲಿ



ಕೋಲಾರ: ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ವಿರುದ್ಧ ಪ್ರಕರಣ ದಾಖಲಾಗಿದ್ದು ನನಗೆ ನೋವುಂಟು ಮಾಡಿದೆ. ಈಗ ನಡೆಯುತ್ತಿರುವ ಧರ್ಮಯುದ್ಧದಲ್ಲಿ ಸಿದ್ದರಾಮಯ್ಯ ಗೆಲ್ಲುತ್ತಾರೆ. ಹಾಗೆಂದು ನಾನೇನೂ ಕಾಂಗ್ರೆಸ್ ಗೆ ಹೋಗಲ್ಲ. ಆದರೆ, ನಾನು ಜಾತಿಪ್ರೇಮಿ. ಸಿದ್ದರಾಮಯ್ಯಗೆ ಮುಡಾ ಪ್ರಕರಣದಲ್ಲಿ ಕ್ಲೀನ್ ಚಿಟ್ ಸಿಗಲಿದ್ದು, ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ ಎಂದು ಬಿಜೆಪಿ ಮುಖಂಡ ವರ್ತೂರು ಪ್ರಕಾಶ್ ಹೇಳಿದ್ದಾರೆ. ನಗರದಲ್ಲಿ ಸೋಮವಾರ ನಡೆದ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರ ಸಮ್ಮುಖದಲ್ಲಿ ವರ್ತೂರು ಸಿಎಂ ಸಿದ್ದರಾಮಯ್ಯ ಅವರನ್ನು ಕೊಂಡಾಡಿದರು. ಸಿದ್ದರಾಮಯ್ಯ ಅವರಿಗೆ ಸ್ವಂತಮನೆ ಇಲ್ಲ, ಇನ್ನು ನಿವೇಶನ ತಿನ್ನುತ್ತಾರಾ? ಅವರ ಅಣ್ಣತಮ್ಮಂದಿರು ಚಡ್ಡಿಯಲ್ಲಿ ಇರುತ್ತಾರೆ. ಸಿದ್ದರಾಮಯ್ಯ ಬಿಟ್ಟರೆ ಕಾಂಗ್ರೆಸ್ ಇಲ್ಲ, ಅವರಿಲ್ಲದಿದ್ದರೆ ಕಾಂಗ್ರೆಸ್ ಶೂನ್ಯ. ನಾನು ಯಾರಿಗೂ ಕೇರ್ ಮಾಡಲ್ಲ, ನನಗೆ ಬೇಕಿರುವುದು ಜಾತಿ ಮಾತ್ರ. ನನ್ನ ಜಮೀನು ಕೂಡ ವಕ್ಫ್ ಎಂದು ನಮೂದಾಗಿದೆ ಎಂದು ವರ್ತೂರು ಪ್ರಕಾಶ್ ಸ್ಪಷ್ಟವಾಗಿ ಹೇಳಿದರು.

ವಿರಾಮ
ಪ್ರತಿ ಭಾನುವಾರ

ಸಮಾಜದಲ್ಲಿನ ಗೊಂದಲಗಳಿಗೆ ಶರಣ ಸಾಹಿತ್ಯದಲ್ಲಿ ಸರಳ ಉತ್ತರ ಇದೆ: ಬಸವರಾಜ ಬೊಮ್ಮಾಯಿ

ಸಮಾಜ ಇರುವ ತನಕ ಶರಣ ಸಾಹಿತ್ಯ ಜೀವಂತ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಈ ಭೂಮಿಯಲ್ಲಿ ಮಾನವ ಸಮಾಜ ಇರುವವರೆಗೂ ಶರಣ ಸಾಹಿತ್ಯ ಇರುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ಸಹಯೋಗ ರಮಣಶ್ರೀ ಪ್ರತಿಷ್ಠಾನ ವತಿಯಿಂದ ರಮಣಶ್ರೀ ಹೋಟೆಲ್‌ನಲ್ಲಿ ಆಯೋಜಿಸಿದ್ದ 19ನೇ ವರ್ಷದ ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ ಹಾಗೂ ಎಸ್. ಷಡಕ್ಷರಿ ಅವರ ಕ್ಷಣಹೊತ್ತು ಆಣಿಮುತ್ತು ಭಾಗ-14ರ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಕೇವಲ ಶರಣ ಸಾಹಿತ್ಯಕ್ಕೆ ದೊಡ್ಡ ಕೊಡುಗೆ ನೀಡಿದೆ. ಶರಣ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಕನ್ನಡಕ್ಕೆ ದೊಡ್ಡ ಶಕ್ತಿ ನೀಡಿದೆ. ಶರಣ ಸಾಹಿತ್ಯ ಮಾನವನ ಬದುಕೇ ಆಗಿದೆ. ಎಲ್ಲಿಯವರೆಗೆ ಮಾನವ ಬದುಕು ಈ ಭೂಮಿ ಮೇಲೆ ಇದೆ ಅಲ್ಲಿಯವರೆಗೆ ಶರಣ ಸಾಹಿತ್ಯ ಇರುತ್ತದೆ ಎಂದು ಬೊಮ್ಮಾಯಿ ವಿಶ್ಲೇಷಿಸಿದರು.

> **ಸಮಾಜದಲ್ಲಿ ಬದಲಾವಣೆ ತರುವ ಪ್ರಯತ್ನ ಆಗಲಿ. ಅಸಮಾನತೆ ಹೋಗಬೇಕಾದರೆ ಬದಲಾವಣೆ ಅಗತ್ಯ. ಎಲ್ಲರಿಗೂ ಆರ್ಥಿಕ, ಸಾಮಾಜಿಕ ಶಕ್ತಿ ಬಂದಾಗ ಮಾತ್ರ ಅಸಮಾನತೆ ಹೋಗಲು ಸಾಧ್ಯ. ಆ ಶಕ್ತಿಯನ್ನು ಜನರಲ್ಲಿ ತುಂಬುವ ಕೆಲಸ ಎಲ್ಲರೂ ಮಾಡೋಣ.**
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಕ್ಷಣಹೊತ್ತು ಆಣಿಮುತ್ತು ಕೃತಿ ಬಿಡುಗಡೆ ವೇಳೆ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ಡಾ.ಷಡಕ್ಷರಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಕೇಕ್ ತಿನ್ನಿಸಿ ಸಂಭ್ರಮಿಸಿದರು. ಸಂಸದ ಬಸವರಾಜ ಬೊಮ್ಮಾಯಿ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಡಾ. ಸಿ.ಸೋಮಶೇಖರ್, ಮನು ಬಳಿಗಾರ ಈ ದೃಶ್ಯವನ್ನು ಕಣ್ತುಂಬಿಕೊಂಡರು.

ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ಬೆಂಗಳೂರಿನ ರಮಣಶ್ರೀ ಪ್ರತಿಷ್ಠಾನದ ಸಹಯೋಗದಲ್ಲಿ 19ನೇ ವರ್ಷದ ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ ಹಾಗೂ ಎಸ್.ಷಡಕ್ಷರಿ ಅವರ 'ಕ್ಷಣ ಹೊತ್ತು ಆಣಿಮುತ್ತು' ಭಾಗ-14ರ ಪುಸ್ತಕ ಲೋಕಾರ್ಪಣೆ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಸದ ಬಸವರಾಜ ಬೊಮ್ಮಾಯಿ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಡಾ.ಎಸ್. ಷಡಕ್ಷರಿ, ಡಾ.ಸಿ.ಸೋಮಶೇಖರ್, ಮನು ಬಳಿಗಾರ್ ಮೊದಲಾದ ಗಣ್ಯರು ಇದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ವಿಶ್ವೇಶ್ವರ ಭಟ್ ವಿಚಾರ ವಿನಿಮಯ...

ಸಂಸದ ಬೊಮ್ಮಾಯಿ, ವಿಶ್ವವಾಣಿ ಪತ್ರಿಕೆ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಉಭಯ ಕುಶಲೋಪರಿ.

ಶರಣರ ಚಿಂತನೆಯಲ್ಲಿ ಎಲ್ಲಕ್ಕೂ ಉತ್ತರ: ಬಸವಣ್ಣನವರ ಚಿಂತನೆಯಲ್ಲಿ ಬದುಕಿನ ಎಲ್ಲ ಆಯಾಮಗಳಿಗೆ ಉತ್ತರ ಇದೆ. ಇತ್ತೀಚಿನ ದಿನಗಳಲ್ಲಿ ಗೊಂದಲ ಸೃಷ್ಟಿಸುವುದೆ ಒಂದು ಕಾಯಕವಾಗಿದೆ. ಇದಕ್ಕೆಲ್ಲ ಶರಣ ಸಾಹಿತ್ಯದಲ್ಲಿ ಸರಳ ಉತ್ತರ ಇದೆ. ಧರ್ಮದ ಬಗ್ಗೆ ದಯವಿಲ್ಲದ ಧರ್ಮ ಯಾವುದಯ್ಯ, ಬದುಕು ಹೇಗೆ ಇರಬೇಕು ಎಂದು ಹೇಳಲು ಕಳಬೇಡ ಕೊಲಬೇಡ ಹುಸಿಯನುಡಿಯಲು ಬೇಡ ವಚನ ಸಾಕ್ಷಿ. ಬಸವ ಸಾಹಿತ್ಯ ಈಗಲೂ ಪ್ರಸ್ತುತ ಇದೆ. ಅಸಮಾನತೆ ವಿರುದ್ಧ, ಲಿಂಗಭೇದ, ಮೌಢ್ಯದ ವಿರುದ್ಧ ಎಂಟು ನೂರು ವರ್ಷಗಳ ಹಿಂದೆ ಹೋರಾಟ ಮಾಡಿದ್ದರು. ವಚನಗಳು ಈಗಲೂ ಪ್ರಸ್ತುತ ಇವೆ ಎಂದು ಒಪ್ಪಿಕೊಂಡರೆ, ಅಸಮಾನತೆ, ಲಿಂಗಭೇದ ಈಗಲೂ ಇದೆ ಎನ್ನುವುದನ್ನು ಒಪ್ಪಿಕೊಂಡಂತಾಗುತ್ತದೆ. ಹಾಗಾದರೆ, ಎಂಟುನೂರು ವರ್ಷಗಳು ನಾವು ಏನು ಮಾಡಿದ್ದೇವೆ. ಸಮಾಜದಲ್ಲಿ ಜ್ಞಾನದ ಬೆಳವಣಿಗೆ ಆಗಿದೆ. ಜ್ಞಾನದ ಜೊತೆಗೆ ಮೌಲ್ಯಗಳ ಬದಲಾವಣೆ ಆಗಬೇಕು. ನಾಗರಿಕತೆ ಹಾಗೂ ಸಂಸ್ಕೃತಿ ನಡುವೆ ವ್ಯತ್ಯಾಸ ಇದೆ. ನಮ್ಮಲ್ಲೇನಿದೆ ಅದು ನಾಗರಿಕತೆ, ನಾವು ಏನಾಗಿದ್ದೇವೆ ಅದು ಸಂಸ್ಕೃತಿ ಎಂದು ಒಬ್ಬ ಪಾಶ್ಚಿಮಾತ್ಯ ದೇಶದ ವಿದ್ವಾಂಸ ಹೇಳಿದ್ದಾನೆ. ನಾವೇನಾಗಿದ್ದೇವೆ ಅಂತ ತಿಳಿದುಕೊಂಡರೆ ಖಂಡಿತವಾಗಿಯೂ ಬಸವಣ್ಣ ಹೇಳಿದಂತೆ ನಡೆಯಬೇಕಾಗುತ್ತದೆ ಎಂದರು.

ಆರ್ಥಿಕ ಪ್ರಗತಿಯಿಂದ ಸಮಾನತೆ: ದೇಶದಲ್ಲಿ ಆರ್ಥಿಕ ಅಸಮಾನತೆ ಕಡಿಮೆಯಾದರೆ ಸಾಮಾಜಿಕ ಅಸಮಾನತೆ ಕಡಿಮೆಯಾಗುತ್ತದೆ. ಸರಕಾರ ನೂರು ಕೋಟಿ ಹಣ ಬಿಡುಗಡೆ ಮಾಡಿದರೆ ಆರ್ಥಿಕತೆ ಬೆಳೆಯುವುದಿಲ್ಲ. ಅದನ್ನು ಸಮಾಜದ ಕಟ್ಟಕಡೆಯ ವ್ಯಕ್ತಿ ರಸ್ತೆಗೆ ಡಾಂಬರ್ ಹಾಕಿ ಅವನು ಆರ್ಥಿಕ ಚಟುವಟಿಕೆಗೆ ಬಳಸಿದಾಗ ಆರ್ಥಿಕ ಬೆಳವಣಿಗೆ ಆಗುತ್ತದೆ. ಆದ್ದರಿಂದ ಈ ಬಗ್ಗೆ ರಾಷ್ಟ್ರಮಟ್ಟದಲ್ಲಿ ಚರ್ಚೆ ಆಗಬೇಕು ಎಂದು ಸಂಸದ ಬೊಮ್ಮಾಯಿ ವಿವರಿಸಿದರು.

ಸಮಾಜದಲ್ಲಿ ಹಳೆಯ ಕಟ್ಟುಪಾಡುಗಳನ್ನು ಎದುರಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಕೆಳಸ್ತರದ ಜನರಲ್ಲಿ ಆತ್ಮವಿಶ್ವಾಸ ಮೂಡಿಸುವ ಕೆಲಸ ಮಾಡಬೇಕು. ಸಾಮಾನ್ಯ ಜನರಲ್ಲಿ ಕಾಯಕ ನಿಷ್ಠೆ ಬಸವ ಪ್ರಜ್ಞೆ ಮೂಡುವಂತೆ ಮಾಡಬೇಕು. ಬಸವ ಜಯಂತಿಯನ್ನು ಎಸ್ಸಿ ಎಸ್ಟಿ ಸೇರಿದಂತೆ ಎಲ್ಲ ಸಮಾಜದವರು ಆಚರಿಸುವಂತೆ ಆಗಬೇಕು ಎಂದರು. ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರತಿಷ್ಠಾನದ ಅಧ್ಯಕ್ಷ ಎಸ್.ಷಡಕ್ಷರಿ, ವಿಶ್ವವಾಣಿ ಪತ್ರಿಕೆ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಶರಣ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಗೊ.ರು.ಚನ್ನಬಸಪ್ಪ ಉಪಸ್ಥಿತರಿದ್ದರು.

ಸಿದ್ದರಾಮಯ್ಯ, ಸೋಮಣ್ಣ ಸ್ವಾರಸ್ಯಕರ ಮಾತು

ನೀನು ದೇವರ ಮೇಲೆ ನಂಬಿಕೆ ಇಟ್ಕೊಂಡಿದೀಯಾ. ನಾನು ದೇವರನ್ನ ನಂಬಲ್ಲ! ಎಂದು ಸಿದ್ದರಾಮಯ್ಯ ಹಾಸ್ಯ ಚಟಾಕಿ ಹಾರಿಸಿದ ಪ್ರಸಂಗ ನಡೆಯಿತು.

ರಮಣಶ್ರೀ ಹೋಟೆಲ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಂಸದ ವಿ.ಸೋಮಣ್ಣ ಎದುರಾದಾಗ, ಕುಶಲೋಪರಿ ಮಾತುಕತೆ ನಡೆಸಿದ ವೇಳೆ ಮುಡಾ ವಿವಾದ ಉಲ್ಲೇಖಿಸಿ ತಪ್ಪು ಮಾಡಿಬಿಟ್ಟರೀ ಸಿದ್ದಣ್ಣ, ಸಣ್ಣ ವಿಚಾರ ಇಷ್ಟೆಲ್ಲಾ ಆಗಿಹೋಯ್ತು, ಸೈಟ್ ವಾಪಸ್ ಕೊಡಿ ಎಂದು ನಾನು ಮೊದಲೇ ಹೇಳಿದ್ದೆ. ಸೈಟನ್ನು ಅಂದೇ ವಾಪಸ್ ಮಾಡಿದ್ದರೆ ಈ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ ಹೇಳಿದರು. ಸೋಮಣ್ಣ ಮಾತಿಗೆ ನಗುನಗುತ್ತಲೇ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ ಲ್ಯಾಂಡ್ ಗ್ರ್ಯಾಬಿಂಗ್ ಆಕ್ಟ್ ಬಗ್ಗೆ ಮೊದಲು ತಿಳಿದುಕೊಂಡು ಮಾತನಾಡು ಎಂಬ ಹೇಳಿಕೆಗೆ ಸುತ್ತಮುತ್ತ ಇದ್ದ ಮುಖಂಡರು ಕೂಡ ನಗೆಗಡಲಲ್ಲಿ ತೇಲಿಹೋದರು.

ವೀರಣ್ಣ ರಾಜೂರಗೆ ರಮಣಶ್ರೀ ಶರಣ ಜೀವಮಾನ ಸಾಧಕ ಪ್ರಶಸ್ತಿ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ರಮಣಶ್ರೀ ಪ್ರತಿಷ್ಠಾನ ನೀಡುವ ರಮಣಶ್ರೀ ಶರಣ ಜೀವಮಾನ ಸಾಧಕ ಪ್ರಶಸ್ತಿ ಧಾರವಾಡದ ಸಾಹಿತಿ ವೀರಣ್ಣ ರಾಜೂರಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು. ಈ ಪ್ರಶಸ್ತಿಯು 50 ಸಾವಿರ ನಗದು ಬಹುಮಾನ ಒಳಗೊಂಡಿದೆ.

ರಮಣಶ್ರೀ ಶರಣ ಹಿರಿಯ ಶ್ರೇಣಿ ಪ್ರಶಸ್ತಿ: ರಮಣಶ್ರೀ ಶರಣ ಹಿರಿಯ ಶ್ರೇಣಿ ಪ್ರಶಸ್ತಿಗೆ ಶರಣ ಸಾಹಿತ್ಯ ಅಧ್ಯಯನ ಮತ್ತು ಸಂಶೋಧನೆಗೆ ಬೆಂಗಳೂರಿನ ಎಚ್.ಎಸ್. ಸಿದ್ದಗಂಗಪ್ಪ ಮತ್ತು ಅಕ್ಕಲಕೋಟೆಯ ಗುರುಲಿಂಗಪ್ಪ ಧಬಾಲೆ, ಆಧುನಿಕ ವಚನ ರಚನೆಗೆ ಮೈಸೂರಿನ ಸಿ.ಪಿ.ಸಿದ್ಧಾಶ್ರಮ ಮತ್ತು ಹಾಸನದ ಸುಶೀಲಾ ಸೋಮಶೇಖರ್, ವಚನ ಸಂಗೀತಕ್ಕೆ ಬೆಂಗಳೂರಿನ ಎಂ.ಎಸ್. ಶೀಲಾ ಹಾಗೂ ಎಂ.ವಿ.ತ್ಯಾಗರಾಜ್ ಭಾಜನರಾಗಿದ್ದಾರೆ. ಈ ಪ್ರಶಸ್ತಿಯು ತಲಾ 40 ಸಾವಿರ ರು. ನಗದು ಒಳಗೊಂಡಿದೆ.

ರಮಣಶ್ರೀ ಶರಣ ಉತ್ತೇಜನ ಪ್ರಶಸ್ತಿ: ರಮಣಶ್ರೀ ಶರಣ ಉತ್ತೇಜನ ಪ್ರಶಸ್ತಿಗೆ ಶರಣ ಸಾಹಿತ್ಯ ಅಧ್ಯಯನ ಮತ್ತು ಸಂಶೋಧನೆಗೆ ಗದಗ್ ಜಿಲ್ಲೆಯ ಅಂದಯ್ಯ ಅರವಟಗಿಮಠ, ಆಧುನಿಕ ವಚನ ರಚನೆಗೆ ಉಡುಪಿ ಜಿಲ್ಲೆಯ ಕಾತ್ಯಾಯಿನಿ ಕುಂಜಿಬೆಟ್ಟು, ವಚನ ಸಂಗೀತಕ್ಕೆ ಬೆಂಗಳೂರಿನ ರಂಜನಿ ವಾಸುಕಿ ಹಾಗೂ ರಾಯಚೂರಿನ ವಡವಾಟಿ ಶಾರದಾ ಭರತ್ ಆಯ್ಕೆಯಾಗಿದ್ದಾರೆ. ಶರಣ ಸಂಸ್ಕೃತಿ ಪ್ರಸಾರ ಸೇವಾ ಸಂಸ್ಥೆಗೆ ಓಂ ಶಿವಪ್ರಕಾಶ್ ಎಚ್.ಎಲ್., ರಮಣಶ್ರೀ ಪ್ರೋತ್ಸಾಹ ಪುರಸ್ಕಾರ ಕ್ಕೆ ಬೆಂಗಳೂರಿನ ಸಂಗಮೇಶ್ ಉಪಾಸೆ ಭಾಜನರಾಗಿದ್ದಾರೆ. ಈ ಪ್ರಶಸ್ತಿಯು ತಲಾ 20 ಸಾವಿರ ರು. ನಗದು ಒಳಗೊಂಡಿದೆ.

ಬೆಳಗಾವಿ ತಹಸೀಲ್ದಾರ್ ಕಚೇರಿಯಲ್ಲಿ ನೌಕರ ಆತ್ಮಹತ್ಯೆ ಪ್ರಕರಣಕ್ಕೆ ತಿರುವು

ರುದ್ರಣ್ಣ ಆತ್ಮಹತ್ಯೆ ಅಲ್ಲ; ಕೊಲೆ

ಬೆಳಗಾವಿ: ತಹಸೀಲ್ದಾರ ಕಚೇರಿಯಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದ ದ್ವಿತೀಯ ದರ್ಜೆ ಸಹಾಯಕ ರುದ್ರಣ್ಣ ಯಡವಣ್ಣವರ ಪ್ರಕರಣಕ್ಕೆ ಸಂಬಂಧಿಸಿದಂತೆ ಅನಾಮಧೇಯ ಪತ್ರ ಹರಿದಾಡುತ್ತಿದೆ. ಇದು ಆತ್ಮಹತ್ಯೆಯಲ್ಲ ಕೊಲೆ ಎಂದು ಉಲ್ಲೇಖ ಮಾಡಲಾಗಿದೆ.

ತಹಸೀಲ್ದಾರ ಬಸವರಾಜ ನಾಗರಾಳ, ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಆಪ್ತ ಸಹಾಯಕ ಸೋಮು ನನ್ನ ಸಾವಿಗೆ ಕಾರಣ ಎಂದು ಸಂದೇಶ ಕಳುಹಿಸಿ ನಂತರ ತಹಸೀಲ್ದಾರ್ ಕಚೇರಿಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ರುದ್ರಣ್ಣನ ಮೃತದೇಹ ಪತ್ತೆಯಾಗಿತ್ತು. ಈ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದ ಸಂದರ್ಭದಲ್ಲೇ ಅನಾಮಧೇಯ ಪತ್ರ ಪ್ರಕರಣಕ್ಕೆ ರೋಚಕ ತಿರುವು ಕೊಟ್ಟಿದೆ.

ಚಾಲಕನೇ ಸೂತ್ರಧಾರ: ರುದ್ರಣ್ಣ ಯಡವಣ್ಣವರ ಆತ್ಮಹತ್ಯೆ ಮಾಡಿಕೊಂಡಿಲ್ಲ, ಕೊಲೆ ಆಗಿದೆ ಎಂದು ಉಲ್ಲೇಖಿಸಲಾದ ಅನಾಮಧೇಯ ಪತ್ರವೊಂದು ರಾಜ್ಯಪಾಲರು, ಮಾನವ ಹಕ್ಕುಗಳ ಆಯೋಗ, ಜಿಲ್ಲಾಧಿಕಾರಿ ಸೇರಿದಂತೆ ಅನೇಕರಿಗೆ ಬಂದಿದ್ದು ಪ್ರಕರಣ ತಿರುವು ಸಿಕ್ಕಿದೆ. ರುದ್ರಣ್ಣ ಸಾವಿಗೆ ತಹಸೀಲ್ದಾರ್ ಅವರ ವಾಹನ ಚಾಲಕ ಯಲ್ಲಪ್ಪ ಬಡಸದ ಮೂಲ ಸೂತ್ರಧಾರ ಎಂದು ಪತ್ರದಲ್ಲಿ ಬರೆಯಲಾಗಿದೆ. ರುದ್ರೇಶ್ ಆತ್ಮಹತ್ಯೆ ಮಾಡಿಕೊಂಡಿಲ್ಲ ಕೊಲೆ ಯಾಗಿದೆ. ತಹಸೀಲ್ದಾರ್‌ರ ಚಾಲಕನೇ ಸೂತ್ರಧಾರ. ತಹಸೀಲ್ದಾರರ ಜೀಪ್ ಪರಿಶೀಲಿಸಿ ದರೆ ಎಲ್ಲ ಬಯಲಾಗುತ್ತದೆ. ಅದು ಆತ್ಮಹತ್ಯೆ ಅಲ್ಲ, ಡ್ರೈವರ್ ಯಲ್ಲಪ್ಪನ ವಿಚಾರಣೆ ಮಾಡಿ ದರೆ ಕೊಲೆ ರಹಸ್ಯ ಹೊರಗೆ ಬರುತ್ತದೆ. ಯಲ್ಲಪ್ಪನ ಹೆಂಡತಿ ಅನೈತಿಕ ಸಂಬಂಧ ಇಟ್ಟುಕೊಂಡು ಅವನ ಎಲ್ಲ ದುಡ್ಡು ಹೊಡೆದಿದ್ದಾಳೆ. ಸತ್ತವನಿಗೆ ನ್ಯಾಯ ಸಿಗಬೇಕು. ಪ್ರಕರಣ ಮುಚ್ಚಿ ಹಾಕಬಾರದು ಎಂದು ಪತ್ರದಲ್ಲಿ ಮನವಿ ಮಾಡಲಾಗಿದೆ.

- ಜಿಲ್ಲಾಧಿಕಾರಿಗೆ ಬಂದ ಅನಾಮಧೇಯ ಪತ್ರದ ಸುಳಿವು
- ರಾಜ್ಯಪಾಲ, ಮಾನವ ಹಕ್ಕುಗಳ ಆಯೋಗಕ್ಕೂ ಅನಾಮಧೇಯ ಪತ್ರ
- ತಹಸೀಲ್ದಾರ್ ಕಚೇರಿಯ ಚಾಲಕನೇ ಮೂಲ ಸೂತ್ರಧಾರ: ಆರೋಪ

ಪರಿಶೀಲನೆ: ಕಮೀಷನರ್

ರುದ್ರಣ್ಣ ಯಡವಣ್ಣವರ ಪ್ರಕರಣದ ಬಗ್ಗೆ ಬಂದಿರುವ ಅನಾಮಧೇಯ ಬಗ್ಗೆ ಪರಿಶೀಲಿಸುವುದಾಗಿ ಬೆಳಗಾವಿ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ಹೇಳಿದರು. ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರುದ್ರಣ್ಣ ಆತ್ಮಹತ್ಯೆ ಪ್ರಕರಣದ ತನಿಖೆ ನಡೆಯುತ್ತಿದೆ. ಪೊಲೀಸ್ ಇಲಾಖೆ ಇದನ್ನು ಗಂಭೀರವಾಗಿ ಪರಿಗಣಿಸಿದೆ. ಅನಾಮಧೇಯ ಪತ್ರದ ಬಗ್ಗೆ ಮಾಹಿತಿ ಇಲ್ಲ. ಅದನ್ನು ಪರಿಶೀಲನೆ ಮಾಡುವೆ ಎಂದರು.

ಸಿದ್ದರಾಮಯ್ಯ ಸಮರ್ಥ ನಾಯಕ: ಡಾ.ಪರಮೇಶ್ವರ್

ಮೂರೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು

ಮೈಸೂರು: ರಾಜ್ಯದ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲುವುದರಲ್ಲಿ ಯಾವುದೇ ರೀತಿಯ ಅನುಮಾನವಿಲ್ಲ ಎಂದು ಗೃಹ ಸಚಿವ ಡಾ.ಜಿ ಪರಮೇಶ್ವರ್ ಹೇಳಿದರು.

ಚನ್ನಪಟ್ಟಣ ಫಲಿತಾಂಶದ ಬಗ್ಗೆ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ನಿರಾಶಾದಾಯಕವಾಗಿ ಮಾತನಾಡಿದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಕೆಲ ಮತಗಟ್ಟೆಗಳಲ್ಲಿ ಅವರಿಗೆ ಮತಗಳು ಬಿದ್ದಿರಲ್ಲ, ಅದನ್ನು ಗಮನಿಸಿ ಅವರು ಹಾಗೆ ಹೇಳಿದ್ದಾರೆ ಎಂದರು. ಸಿದ್ದರಾಮಯ್ಯ ಒಬ್ಬ ಸಮರ್ಥ ನಾಯಕ. ಹಿಂದೆ ಸಿಎಂ ಆಗಿ 5 ವರ್ಷ ಉತ್ತಮ ಆಡಳಿತ ನೀಡಿ ದ್ದಾರೆ ಮತ್ತು ಈಗಲೂ ಸರಕಾರವನ್ನು ಚೆನ್ನಾಗಿ ನಡೆಸುತ್ತಿ ದ್ದಾರೆ. ಹಾಗಾಗಿ ಬಿಜೆಪಿ ಮತ್ತು ಜೆಡಿಎಸ್ ನವರಿಗೆ ಅವರ ಮೇಲೆ ಅಸಮಾಧಾನ ಹುಟ್ಟಿಕೊಂಡು ಅವರನ್ನು ಪದಚ್ಯುತಗೊಳಿಸುವ ಪ್ರಯತ್ನ ನಡೆಸಿದ್ದಾರೆ. ಅದೇ ಕಾರಣಕ್ಕೆ ಸಿದ್ದರಾಮಯ್ಯ ಶಾಸಕರಿಗೆ 50 ಕೋಟಿ ರು. ಆಮಿಷ ಒಡ್ಡಿದ ಬಗ್ಗೆ ಮಾತಾಡಿದ್ದಾರೆ ಎಂದು ಡಾ. ಪರಮೇಶ್ವರ್ ಸ್ಪಷ್ಟಪಡಿಸಿದರು.

> **ಕೋವಿಡ್ ಹಗರಣದ ಬಗ್ಗೆ ತನಿಖೆ ನಡೆಯುತ್ತಿದೆ. ಕೋಟಿಗಟ್ಟಲೆ ಹಗರಣ ಆಗಿದೆ. ಮೆಡಿಸಿನ್ ಡ್ರಗ್ಸ್ ಖರೀದಿಯಲ್ಲಿ ಅಕ್ರಮ ಆಗಿದೆ. ಇದೆಲ್ಲದರ ರಿಪೋರ್ಟ್ ಬಂದ ಬಳಿಕ ಕ್ರಮ ಆಗತ್ತದೆ. ಸಿಎಂ ಬದಲಾವಣೆ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ ಬಿಜೆಪಿ-ಜೆಡಿಎಸ್ ಸುಮ್ಮನೆ ಸಿಎಂ ಬದಲಾವಣೆ ಬಗ್ಗೆ ಹೇಳುತ್ತಾರೆ. ನಮ್ಮಲ್ಲಿ ಚರ್ಚೆ ಆಗಿಲ್ಲ.**
> **-ಪರಮೇಶ್ವರ್,** ಗೃಹ ಸಚಿವ

ಸಮಿತಿ ವರದಿ ಕೊಡಲಿ

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಕರಿಯ ಎಂದು ಕರೆದು ವಿವಾದಕ್ಕೆ ಕಾರಣವಾಗಿರುವ ಸಚಿವ ಜಮೀರ್ ಅಹ್ಮದ್ ಖಾನ್ ವಿರುದ್ಧ ಕಾಂಗ್ರೆಸ್ ಪಕ್ಷದಲ್ಲಿ ಶಿಸ್ತು ಕ್ರಮ ಕೈಗೊಳ್ಳುವ ವಿಚಾರ ಕುರಿತು ಮಾತನಾಡಿದ ಗೃಹ ಸಚಿವರು, ಜಮೀರ್ ಹೇಳಿಕೆ ಪಕ್ಷಕ್ಕೆ ಹೊರೆಯಾಗಿದೆ ಎಂದು ಖುದ್ದು ಕೆಪಿಸಿಸಿ ಅಧ್ಯಕ್ಷರೇ ಹೇಳಿದ್ದಾರೆ. ಕೆಪಿಸಿಸಿ ಅಧ್ಯಕ್ಷರು ಬೇಕಾದರೆ ಪಕ್ಷದ ಶಿಸ್ತುಪಾಲನಾ ಸಮಿತಿಗೆ ವರದಿ ಕೊಟ್ಟರೆ ಶಿಸ್ತುಪಾಲನಾ ಅಧ್ಯಕ್ಷ ರಹೀಂ ಖಾನ್ ಕ್ರಮ ಕೈಗೊಳ್ಳಬಹುದು ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದರು.

ಕೋವಿಡ್ ಹಗರಣ ಬಗ್ಗೆ ಗೊತ್ತಿಲ್ಲ

ಮೈಸೂರು: ಕೋವಿಡ್ ಸಾಂಕ್ರಾಮಿಕದ ವೇಳೆ ನಾನು ಟಾಸ್ಕ್ ಫೋರ್ಸ್ ಮುಖ್ಯಸ್ಥನಾಗಿರಲಿಲ್ಲ. ನನ್ನದು ಸಲಹೆ ಮತ್ತು ಅಭಿಪ್ರಾಯ ಕೊಡುವುದು ಅಷ್ಟೇ. ಮೊದಲು ತನಿಖೆಯಾಗಲಿ ನೋಡೋಣ ಎಂದು ಸಂಸದ ಡಾ. ಸಿ ಎನ್ ಮಂಜುನಾಥ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾರ್ಯಪಡೆಯಲ್ಲಿ ಅನೇಕ ವೈದ್ಯರು, ತಜ್ಞರು, ಅಧಿಕಾರಿಗಳು ಇದ್ದರು. ಇಲಾಖೆಗಳೂ ಇದ್ದವು. ಅದು ಮೆಡಿಕಲ್ ಎಮರ್ಜೆನ್ಸಿ, ಗ್ಲೋಬಲ್ ಎಮರ್ಜೆನ್ಸಿ. ನನಗೆ ಆಡಳಿತಾತ್ಮಕ ಹಾಗೂ ಆರ್ಥಿಕ ಹೊಣೆ ನೀಡಿರಲಿಲ್ಲ. ಇದರಲ್ಲಿ ತಜ್ಞನಾಗಿ ನಾನೊಬ್ಬನೇ ಸದಸ್ಯ ಅಷ್ಟೇ. ನಮ್ಮದು ಏನಿದ್ದರೂ ಸಲಹೆ ನೀಡುವುದು ಎಂದು ಸ್ಪಷ್ಟಪಡಿಸಿದರು.

ನಿಖಿಲ್ ಗೆಲುವು: ಕಾರ್ಯಕರ್ತರ ಹಾಗೂ ಮತದಾರರ ಅಭಿಪ್ರಾಯವನ್ನು ನೋಡಿದಾಗ ನಿಖಿಲ್ ಗೆಲ್ಲುವ ವಿಶ್ವಾಸ ಜಾಸ್ತಿ ಇದೆ ಎಂದರು.

ಅಧಿಕಾರಕ್ಕಾಗಿ ಬಿಜೆಪಿಯವರು ಏನು ಮಾಡಲೂ ಹಿಂಜರಿಯರು



ಬೀದರ್: ಅಧಿಕಾರ ದಾಹಕ್ಕಾಗಿ ಏನು ಮಾಡಲು ಹಿಂಜರಿಯದವರು ಎಂದರೆ ಅದು ಬಿಜೆಪಿಯವರು ಎಂದು ಸಚಿವ ಈಶ್ವರ ಖಂಡ್ರೆ ಕಟುಟೀಕೆ ಮಾಡಿದ್ದಾರೆ. ಕಾಂಗ್ರೆಸ್ ಶಾಸಕರಿಗೆ ಬಿಜೆಪಿಯ 100 ಕೋಟಿ ರು. ಆಮಿಷದ ವಿಚಾರವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರ ದಾಹಕ್ಕಾಗಿ ಏನು ಮಾಡಲೂ ಹಿಂಜರಿಯದವರು ಬಿಜೆಪಿಯವರು. ಯಾವ ಮಟ್ಟಕ್ಕೂ ಇಳಿಯಲು ತಯಾರಾಗಿರುತ್ತಾರೆ. ಈ ರಾಜ್ಯದ ಜನರಿಗೆ ಬಿಜೆಪಿ ನಾಯಕರು ಉತ್ತರ ನೀಡಲಿ. 15 ಶಾಸಕರನ್ನು ಖರೀದಿ ಮಾಡಿದ್ದು ಎಲ್ಲರಿಗೂ ಗೊತ್ತಿದೆ. ಸಿಎಂ ಆಗಲು 2500 ಕೋಟಿ ರು. ಕೊಡಬೇಕು. ಸಚಿವರಾಗಲು 500 ಕೋಟಿ ಕೊಡಬೇಕು ಎಂದು ಸ್ವತಃ ಯತ್ನಾಳ್ ಹೇಳಿದ್ದರು. ಬಿಜೆಪಿ ವಿರುದ್ಧ ಯತ್ನಾಳ್ ಏನೇ ಹೇಳಿದ್ದರೂ ಪೂರ್ಣ ಸತ್ಯವಿದೆ ಎಂದರು.

ಕನಕದಾಸರ ಸಾಮಾಜಿಕ ಸಂದೇಶದ ಮೇಲೆ ಕೆಲಸ ಮಾಡುವುದಷ್ಟೇ ಮುಖ್ಯ | ಸಂವಿಧಾನ ವಿರೋಧಿಗಳು ಮನುಷ್ಯ ವಿರೋಧಿಗಳು: ಸಿದ್ದರಾಮಯ್ಯ

ಕನಕಶ್ರೀ ಪ್ರಶಸ್ತಿಗೆ ಜಾತಿ-ಧರ್ಮ ಮುಖ್ಯ ಅಲ್ಲ: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಂವಿಧಾನ-ಪ್ರಜಾಪ್ರಭುತ್ವ-ಜಾತ್ಯತೀತತೆ ಬಗ್ಗೆ ಪ್ರತಿಯೊಬ್ಬರೂ ಸ್ಪಷ್ಟತೆ ಬೆಳೆಸಿಕೊಳ್ಳಬೇಕು. ಸಂವಿಧಾನ ವಿರೋಧಿಗಳು ಮನುಷ್ಯ ವಿರೋಧಿಗಳು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಸಂತಶ್ರೇಷ್ಠ ಕನಕದಾಸ ಜಯಂತಿ ಉದ್ಘಾಟಿಸಿ, ವ್ಯಾಸನಕೆರೆ ಪ್ರಭಂಜನಾಚಾರ್ಯಗೆ ಕನಕಶ್ರೀ ಪ್ರಶಸ್ತಿ ಪ್ರದಾನ ಮಾಡಿ, ಸಮಗ್ರ ತತ್ವಪದ ಯೋಜನೆಯ 18 ಸಂಪುಟಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು. ಕನಕದಾಸರ 500ನೇ ಜಯಂತಿ ಆಚರಿಸುವ ಅವಕಾಶ ಸಿಕ್ಕಿದ್ದು, ಕನಕದಾಸರ ಕೀರ್ತನೆಗಳನ್ನು ಸುಲಭವಾಗಿ ಜನರ ಕೈಗೆ ತಲುಪಿಸುವ ಕಾರ್ಯ ಮಾಡಲಾಗಿದೆ ಎಂದು ಸ್ಮರಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವೀಂದ್ರ ಕಲಾ ಕ್ಷೇತ್ರದಲ್ಲಿ ಆಯೋಜಿಸಿದ್ದ ಸಂತ ಶ್ರೇಷ್ಠ ಕನಕದಾಸ ಜಯಂತಿ ಉದ್ಘಾಟಿಸಿ, ವ್ಯಾಸನಕರೆ ಪ್ರಭಂಜನಾಚಾರ್ಯಗೆ ಕನಕ ಶ್ರೀ ಪ್ರಶಸ್ತಿ ಪ್ರದಾನ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ. ತಿಂಥಿಣಿ ಕನಕ ಗುರುಪೀಠದ ಜಗದ್ಗುರು ಸಿದ್ದರಾಮಾನಂದ ಸ್ವಾಮಿ, ಸಚಿವ ಶಿವರಾಜ ತಂಗಡಗಿ, ಎಚ್.ಎಂ.ರೇವಣ್ಣ, ಮುಖ್ಯಸಚೇತಕ ಸಲೀಂ ಅಹಮದ್ ಮುಂತಾದವರು ಇದ್ದರು.

ಜಾತಿ-ಧರ್ಮ ತಾರತಮ್ಯ ವಿರೋಧಿಸಿದ್ದರು: ಕನಕಶ್ರೀ ಪ್ರಶಸ್ತಿಗೆ ಜಾತಿ-ಧರ್ಮ ಮುಖ್ಯ ಅಲ್ಲ. ಕನಕದಾಸರ ಸಾಮಾಜಿಕ ಸಂದೇಶದ ಮೇಲೆ ಕೆಲಸ ಮಾಡುವುದಷ್ಟೆ ಮುಖ್ಯ. ಬಸವಾದಿ ಶರಣರು, ಕನಕದಾಸರು ಇಬ್ಬರೂ ಮನುಷ್ಯರನ್ನು ವಿಭಜಿಸುವ ಜಾತಿ-ಧರ್ಮದ ತಾರತಮ್ಯ ವಿರೋಧಿಸಿದ್ದರು. ವಚನ ಚಳವಳಿಗೂ ಮೊದಲು ಜನರಿಗೆ ಅರ್ಥ ಆಗದ ಭಾಷೆಯಲ್ಲಿ ಧರ್ಮಪ್ರಚಾರ ನಡೆಯುದ್ದು, ಸಂಸ್ಕೃತ ಶ್ಲೋಕಗಳನ್ನು ಮುಟ್ಟದ ಬಸವಾದಿ ಶರಣರು ಜನರಿಗೆ ಅರ್ಥವಾಗುವ ಜನರ ಭಾಷೆಯಲ್ಲೇ ಅತ್ಯಂತ ಸರಳವಾಗಿ ಮಾನವೀಯ ಧರ್ಮವನ್ನು ಹೇಳಿದರು. ಮನುಷ್ಯ ನಿರ್ಮಿತ ಜಾತಿ ತಾರತಮ್ಯ, ಧಾರ್ಮಿಕ ತಾರತಮ್ಯ ಅಳಿಸಲು ಮಾನವೀಯ ಮೌಲ್ಯ ಎತ್ತಿಹಿಡಿದರು. ಬಸವಾದಿ ಶರಣರು 12 ನೇ ಶತಮಾನದಲ್ಲಿ ಮುನ್ನಡೆಸಿದ ಮಾನವೀಯ ಧರ್ಮವನ್ನು 15 ನೇ ಶತಮಾನದಲ್ಲಿ ಕನಕದಾಸರು ಮುಂದುವರಿಸಿದರು ಎಂದು ಸಿಎಂ ಸಿದ್ದರಾಮಯ್ಯ ಬಣ್ಣಿಸಿದರು.

ಜಾತಿವಾದಿಗಳಾದರೆ ಗೌರವ ಬರುತ್ತಾ?: ಬುದ್ಧ, ಬಸವ, ಕನಕದಾಸರು, ಅಂಬೇಡ್ಕರ್ ಅವರ ಆಶಯಗಳೆಲ್ಲಾ ಒಂದೇ ಆಗಿ ದ್ದವು. ಜಾತಿ, ಧರ್ಮದ ಹೆಸರಿನಲ್ಲಿ ನಡೆಯುವ ಮನುಷ್ಯ ತಾರತಮ್ಯ ನಿವಾರಿಸಲು ಶ್ರಮಿಸಿದರು. ವಿದ್ಯಾವಂತರಾದಷ್ಟೂ ಜಾತಿವಾದಿಗಳಾದರೆ ಆ ವಿದ್ಯೆಗೆ ಗೌರವ ಬರುತ್ತದಾ? ಸಂವಿಧಾನವನ್ನು ವಿರೋಧಿಸುವವರೂ ಈಗ ತಲೆಎತ್ತಿದ್ದಾರೆ. ಸಂವಿಧಾನ ವಿರೋಧಿಗಳು ನಿಜವಾದ ಮನುಷ್ಯ ವಿರೋಧಿಗಳು. ಮನುಷ್ಯ ಮನುಷ್ಯರನ್ನು ಜಾತಿ, ಧರ್ಮದ ಹೆಸರಲ್ಲಿ, ಮೇಲು-ಕೀಳು ಎನ್ನುವ ತಾರತಮ್ಯವನ್ನು ತ್ಯಜಿಸಿ ಮನುಷ್ಯರನ್ನು ಪ್ರೀತಿಸುವುದೇ ಕನಕದಾಸರಿಗೆ ನಾವು ಸಲ್ಲಿಸುವ ನಿಜವಾದ ಗೌರವ ಎಂದರು.

ಇಲಾಖೆ ಪ್ರಕಟಣೆಗಳಿಗೆ ಶೇ.50 ರಿಯಾಯ್ತಿ ನೀಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಡಿಯಲ್ಲಿ ಬರುವ ಎಲ್ಲಾ ಅಕಾಡೆಮಿಗಳು ಮತ್ತು ಪ್ರಾಧಿಕಾರಿಗಳು ಪ್ರಕಟಿಸುವ ಪುಸ್ತಕಗಳನ್ನು ವಿಶೇಷ ಸಂದರ್ಭಗಳಲ್ಲಿ ಶೇ.50 ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ಮಾಡುವಂತೆ ಇದೇ ಸಂದರ್ಭದಲ್ಲಿ ಘೋಷಿಸಿದರು.

ರಾಜ್ಯದಲ್ಲಿ ಎಪಿಎಲ್ ಕಾರ್ಡು ರದ್ದಾಗದು

ಚಿಕ್ಕಬಳ್ಳಾಪುರ: ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಎ.ಪಿ.ಎಲ್.ಪಡಿತರ ಕಾರ್ಡ್‌ಗಳನ್ನು ರದ್ದುಪಡಿಸಿಲ್ಲ, ಮುಂದೆಯೂ ರದ್ದುಗೊಳಿಸುವುದಿಲ್ಲ. ಜನರು ಗೊಂದಲಕ್ಕೆ ಒಳಗಾಗಬಾರದು. ಅಪಪ್ರಚಾರಗಳಿಗೆ ಕಿವಿಗೊಡಬಾರದು. ಬಿಪಿಎಲ್ ಕಾರ್ಡ್ ಹೊಂದಲು ಅರ್ಹರಲ್ಲವರ ಪರಿಷ್ಕರಣೆ ನಡೆಯುತ್ತಿದೆ. ಅರ್ಹರಲ್ಲದವರನ್ನು ಎಪಿಎಲ್ ಪಟ್ಟಿಗೆ ಸೇರಿಸಲಾಗುತ್ತದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಸ್ಪಷ್ಟಪಡಿಸಿದ್ದಾರೆ.

ದೇವನಹಳ್ಳಿ ತಾಲೂಕು ಗೊಡ್ಲುಮುದ್ದೇನಹಳ್ಳಿಯಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಶೇ 80 ರಷ್ಟು ಮಂದಿ ಬಿಪಿಎಲ್ ಕಾರ್ಡುಗಳು ಹೊಂದಿದ್ದಾರೆ. ತಮಿಳುನಾಡು, ಆಂಧ್ರ ಪ್ರದೇಶ, ತೆಲಂಗಾಣ, ಕೇರಳ ರಾಜ್ಯಗಳಲ್ಲಿ ಶೇ. 50 ರಷ್ಟು ಮಂದಿ ಬಿಪಿಎಲ್ ಕಾರ್ಡ್ ಹೊಂದಿದ್ದಾರೆ. ರಾಜ್ಯದಲ್ಲಿ ಆದಾಯ ತೆರಿಗೆ ಪಾವತಿದಾರರು, ಕಾರು ಹೊಂದಿರುವವರು, ಅನುಕೂಲಸ್ಥರ ಕುರಿತು ಪರಿಶೀಲನೆ ನಡೆಸಿ, ಅವರನ್ನು ಎಪಿಎಲ್‌ಗೆ ಸೇರಿಸುತ್ತೇವೆ. 1 ಕೋಟಿ 26 ಲಕ್ಷ ಬಿಪಿಎಲ್. ಕಾರ್ಡುಗಳಿಗೆ ಪಡಿತರ ನೀಡುತ್ತಿದ್ದೇವೆ. ಇದನ್ನು ಅರಿಯದೆ ಪ್ರತಿಪಕ್ಷಗಳು ರಾಜಕೀಯ ಪ್ರೇರಿತ ಮಾತು ಆಡುತ್ತಿದ್ದಾರೆ ಎಂದು ದೂರಿದರು.

ವಿಶ್ವವಾಣಿ

ಸಂಪಾದಕೀಯ

ನಶೆಯ ಆಪತ್ತಿನ ಬಗ್ಗೆ ಜಾಗೃತಿ ಬೇಕು

ರಾಜ್ಯದಲ್ಲಿ ಮಾದಕ ದ್ರವ್ಯ ಮತ್ತು ಡ್ರಗ್ಸ್ ಅನ್ನು ಮಾತ್ರೆ, ಇಂಜೆಕ್ಷನ್ ಹಾಗೂ ಚಾಕಲೇಟ್ ರೂಪದಲ್ಲಿ ಮೆಡಿಕಲ್ ಸ್ಟೋರ್‌ಗಳಲ್ಲಿ ಮಾರಾಟ ಮಾಡಲಾಗುತ್ತಿರುವ ವಿಚಾರ ಆತಂಕಕಾರಿ. ಬೆಂಗಳೂರಿಗೆ ಸೀಮಿತವಾಗಿದ್ದ ಈ ಪ್ರಕರಣ ಈಗ ರಾಜ್ಯದ ಹಲವು ನಗರಗಳಿಂದಲೂ ವರದಿಯಾಗುತ್ತಿದೆ. ಗೃಹ ಸಚಿವ ಜಿ.ಪರಮೇಶ್ವರ ಅವರೇ ಈ ವಿಷಯವನ್ನು ದೃಢಪಡಿಸಿದ್ದಾರೆ. ಬೆಂಗಳೂರಿನ ಮುಸ್ಲಿಂ ಮಹಿಳೆಯೊಬ್ಬರು ತಮ್ಮ ಏರಿಯಾದ ಸುತ್ತಮುತ್ತ ನಿಷೇಧಿತ ಡ್ರಗ್ಸ್ ಮೆಡಿಕಲ್ ಸ್ಟೋರ್‌ಗಳಲ್ಲಿ ಲಭ್ಯವಾಗುತ್ತಿರುವ ಬಗ್ಗೆ ವಿಡಿಯೋ ಶೇರ್ ಮಾಡಿಕೊಂಡಿದ್ದಾರೆ. ಇದನ್ನು ತಡೆಯಲು ಅಧಿಕಾರಿಗಳು ಮತ್ತು ಪೊಲೀಸರು ಏಕೆ ಮುಂದಾಗುತ್ತಿಲ್ಲ ಎಂದು ಪ್ರಶ್ನಿಸಿದ್ದಾರೆ. ಕಳೆದ ಒಂದು ವರ್ಷದಿಂದ ರಾಜ್ಯದಲ್ಲಿ ಮಾದಕ ದ್ರವ್ಯ ಸಂಗ್ರಹ, ಮಾರಾಟ, ಸಾಗಾಟ ಮತ್ತು ಸೇವನೆ ಸಂಬಂಧ 100ಕ್ಕೂ ಹೆಚ್ಚು ಜನರ ಮೇಲೆ ಪ್ರಕರಣ ದಾಖಲಿಸಲಾಗಿದೆ. ನೂರಾರು ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದೆ. ಆದರೆ ದಿನದಿಂದ ದಿನಕ್ಕೆ ಈ ಪ್ರಕರಣಗಳು ಹೆಚ್ಚುತ್ತಿವೆಯೇ ಹೊರತು ಕಡಿಮೆಯಾಗುತ್ತಿಲ್ಲ. ಬೆಂಗಳೂರು ನಗರವೊಂದರಲ್ಲಿಯೇ ಸೆಪ್ಟೆಂಬರ್ ತಿಂಗಳಲ್ಲಿ ಮಾದಕದ್ರವ್ಯ ದಂಧೆಯಲ್ಲಿ ತೊಡಗಿದ್ದ ಮೂವರು ವಿದೇಶಿಯರು ಸೇರಿದಂತೆ 67 ಮಂದಿಯನ್ನು ಬಂಧಿಸಲಾಗಿತ್ತು. ಇವರಿಂದ ನೂರಾರು ಕೋಟಿ ರೂ. ಮೌಲ್ಯದ ಮಾದಕ ದ್ರವ್ಯ ವಶಪಡಿಸಿಕೊಳ್ಳಲಾಗಿತ್ತು. ಕಳೆದ ತಿಂಗಳು ಮಂಗಳೂರಿನಲ್ಲಿ ಬಂಧಿತ ನೈಜೀರಿಯಾ ಪ್ರಜೆಯಿಂದ ಆರು ಕೋಟಿಗೂ ಹೆಚ್ಚು ಮೊತ್ತದ ಮಾದಕ ದ್ರವ್ಯ ವಶಪಡಿಸಿಕೊಳ್ಳಲಾಗಿತ್ತು. ಡ್ರಗ್ಸ್ ದಂಧೆಯಲ್ಲಿ ಪಾಲ್ಗೊಂಡ ಆರೋಪದಲ್ಲಿ ಕಳೆದ ಎಳೆಂಟು ತಿಂಗಳಲ್ಲಿ ಸುಮಾರು 80 ವಿದೇಶಿಗರನ್ನು ಅವರ ದೇಶಗಳಿಗೆ ಗಡೀಪಾರು ಮಾಡಲಾಗಿದೆ ಎಂದು ಸಚಿವ ಪರಮೇಶ್ವರ್ ತಿಳಿಸಿದ್ದಾರೆ. ಇವರನ್ನು ಬಂಧಿಸಿ ಜೈಲಿಗೆ ಕಳುಹಿಸಿದರೆ ನಮ್ಮ ಜೈಲುಗಳೆಲ್ಲವೂ ಇವರಿಂದಲೇ ತುಂಬುವ ಸಾಧ್ಯತೆ ಇದೆ. ಗುಜರಾತ್ ತೀರದಲ್ಲಿ ಕಳೆದ ವಾರ ಭಾರತೀಯ ನೌಕಾಪಡೆ ನಡೆಸಿದ ಕಾರ್ಯಾಚರಣೆಯಲ್ಲಿ ಮಂಗಳವಾರ 600 ಕೋಟಿ ರುಪಾಯಿಗಳಿಗೂ ಅಧಿಕ ಮೌಲ್ಯದ ಮಾದಕ ದ್ರವ್ಯ ವಶಪಡಿಸಿಕೊಂಡು ಎಂಟು ಮಂದಿ ಇರಾನ್ ಪ್ರಜೆಗಳನ್ನು ಬಂಧಿಸಲಾಗಿತ್ತು. ಖಲಿಸ್ತಾನಿ ಉಗ್ರರು ಸೇರಿದಂತೆ ವಿದೇಶಿ ಶಕ್ತಿಗಳು ಭಾರತದಲ್ಲಿ ಮಾದಕ ದ್ರವ್ಯ ಜಾಲ ಹರಡಲು ಸತತ ಪ್ರಯತ್ನ ನಡೆಸುತ್ತಿರುವ ಬಗ್ಗೆ ನಮ್ಮ ಗುಪ್ತಚರ ದಳ ಈ ಹಿಂದೆಯೇ ಮಾಹಿತಿ ನೀಡಿದೆ. ಈ ಖದೀಮರನ್ನು ಗುರುತಿಸಿ ಬಂಧಿಸುವ ಜತೆಗೆ ನಮ್ಮ ಯುವಕ/ ಯುವತಿಯರಲ್ಲಿ ಮಾದಕ ದ್ರವ್ಯ ಸೇವನೆಯ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಬೇಕಾಗಿದೆ.

ಸೊಂಪಾದಕೀಯ

ಕೇಸು ಹಾಕಲಾದೀತೇ?!

ನಮ್ಮ ಜನ ಸಿನಿಮಾಗಳಿಂದ ಪ್ರೇರೇಪಿತರಾಗುವುದು ಹೊಸ ವಿಷಯವೇನಲ್ಲ. ಡಾ. ರಾಜ್‌ಕುಮಾರ್-ಭಾರತಿ ಅಭಿನಯದ, ಸಿದ್ದಲಿಂಗಯ್ಯ ನಿರ್ದೇಶನದ 'ಬಂಗಾರದ ಮನುಷ್ಯ' ಚಲನಚಿತ್ರವನ್ನು ವೀಕ್ಷಿಸಿ ಎಷ್ಟೋ ಜನ ವಿದ್ಯಾವಂತರು ಕೃಷಿಕಾರ್ಯಕ್ಕೆ ಇಳಿದ ಉದಾಹರಣೆಗಳಿವೆ. ಆದರೆ ಪ್ರತಿ ಬಾರಿಯೂ ಈ ಪ್ರಭಾವ ಪಾಸಿಟಿವ್ ಆಗೇ ಇರುತ್ತೆ ಅನ್ನೋಕ್ಕಾಗಲ್ಲ. ಯಾಕೆಂದರೆ ಒಳ್ಳೆಯದಕ್ಕಿಂತ ಕೆಟ್ಟ ವಿಷಯಕ್ಕೇ ಜನ ಸ್ಪಂದಿ ಸೋದು ಹೆಚ್ಚು. 'ದೃಶ್ಯ' ಸಿನಿಮಾದ ಮೇಲೆ ಕೆಲ ದಿನಗಳ ಹಿಂದೆ ಇಂಥ ದೊಂದು ಆರೋಪ ಬಂತು. ವ್ಯಕ್ತಿಯೊಬ್ಬ ತನ್ನ ಹೆಂಡತಿಯ ಕೊಲೆ ಕೇಸ್‌ನಲ್ಲಿ ಸಿಕ್ಕಿಬಿದ್ದ ಕಥೆಯಿದು. ಅಕ್ಕ ಪಕ್ಕದವರಿಗಷ್ಟೇ ಅಲ್ಲದೆ ಪೊಲೀಸರಿಗೂ 'ನನ್ನ ಹೆಂಡತಿ 5 ವರ್ಷಗಳ ಹಿಂದೆ ಯಾರ ಜತೆಗೋ ಓಡಿಹೋಗಿದ್ದಾಳೆ' ಎಂದು ಹೇಳಿ ಚಳ್ಳೆಹಣ್ಣು ತಿನ್ನಿಸಿದ್ದ ಈತ ಕೊನೆಗೂ ಸಿಕ್ಕಿಬಿದ್ದ. ಇವನನ್ನು ಪೊಲೀಸರು ತಮ್ಮದೇ ಆದ ಭಾಷೆಯಲ್ಲಿ ವಿಚಾರಿಸಿದಾಗ 5 ವರ್ಷಗಳ ಹಿಂದೆ ಹೆಂಡತಿ ಯನ್ನು ತಾನೇ ಕೊಂದಿರುವುದಾಗಿ ಒಪ್ಪಿಕೊಂಡ. ಅಂದಹಾಗೆ, 2019ರಲ್ಲಿ ಕೊಲೆ ಮಾಡಿದ್ದ ಈತ ದೇಹವನ್ನು ಹೂತಿಟ್ಟಿದ್ದ. ಆದರೆ ನಂತರ ಬಿಡುಗಡೆ ಯಾಗಿದ್ದ 'ದೃಶ್ಯ' ಸಿನಿಮಾ ನೋಡಿ ಹೆಣವನ್ನು ಮಣ್ಣಿನಲ್ಲಿ ಬಿಟ್ಟರೆ ಯಾವ ತ್ತಾದರೂ ಸಿಕ್ಕಿಕೊಳ್ಳುತ್ತೇನೆ ಎಂದು ಹೆದರಿಕೊಂಡು, ಸಿನಿಮಾದ ರೀತಿ ಯಲ್ಲಿಯೇ ಹೆಣವನ್ನು ಮತ್ತೆ ಭೂಮಿಯಿಂದ ಹೊರ ತೆಗೆದು 2 ದಿನ ಅದನ್ನು ಸಂಪೂರ್ಣ ಸುಟ್ಟು ಹಾಕಿದ್ದನಂತೆ. ಆದರೆ ಮಣ್ಣಿನಲ್ಲಿ ಹೂತಿದ್ದ ಹೆಣ ವನ್ನೇನೋ ತೆಗೆದು ಸುಟ್ಟವನು, ಪೊಲೀಸರ ಎದುರಿಗೆ ಮಾತ್ರ ಬಾಲಸುಟ್ಟ ಬೆಕ್ಕಿನಂತೆ ಗಾಬರಿಗೊಂಡು ಎಲ್ಲವನ್ನು ಕಕ್ಕಿದ, 'ಹೆಂಡತಿಯನ್ನು ನಾನೇ ಕೊಲೆ ಮಾಡಿದ್ದು, ಈ ಕೇಸನ್ನು ಮುಚ್ಚಿ ಹಾಕಲು ನನಗೆ ದೃಶ್ಯ ಚಿತ್ರವೇ ಪ್ರೇರಣೆ ಎಂದು ಒಪ್ಪಿಕೊಂಡ. ಹಾಗಂತ ಪಾಪ 'ದೃಶ್ಯ' ಚಿತ್ರತಂಡದ ಮೇಲೆ ಕೇಸು ಹಾಕಲು ಆಗುತ್ತದೆಯೇ? ಹೋಗಲಿ ಬಿಡಿ.

ಸಂಪಾದಕರ ಸದ್ಯಶೋಧನೆ

ದುಬೈನ ಕೆಲವು ವೈಶಿಷ್ಟ್ಯಗಳು

ಯುನೈಟೆಡ್ ಅರಬ್ ಎಮಿರೇಟ್ಸ್ (UAE)ನ ಅತಿದೊಡ್ಡ ನಗರವಾದ ದುಬೈನಲ್ಲಿ ಏನು ಬೇಕಾದರೂ ಸಾಧ್ಯ. ಅದನ್ನು 'ಅಂತ್ಯವಿಲ್ಲದ ಸಾಧ್ಯತೆಗಳ ನಗರ' ಎಂದು ಕರೆಯುತ್ತಾರೆ. ನೀವು ಊಹಿಸಿದ್ದೆಲ್ಲವೂ ದುಬೈನಲ್ಲಿ ಸಾಧ್ಯವಂತೆ. ಅಲ್ಲಿ ಯಾವುದೂ ಅಸಾಧ್ಯ ಎಂಬುದೇ ಇಲ್ಲ. ಹಲವಾರು ದಾಖಲೆ ಮುರಿಯುವ ಆಕರ್ಷಣೆಗಳು, ಐಷಾರಾಮಿ ಹೋಟೆಲ್‌ಗಳು, ಕುಟುಂಬ-ಸ್ನೇಹಿ ಥೀಮ್ ಪಾರ್ಕ್‌ಗಳು, ವಿಶ್ವ ದರ್ಜೆಯ ಶಾಪಿಂಗ್ ಮಾಲ್‌ಗಳು ಮತ್ತು ಮಾಡಬೇಕಾದ ಕೆಲಸಗಳೊಂದಿಗೆ, ದುಬೈ ಪ್ರಪಂಚದಾದ್ಯಂತದ ಜನರಿಗೆ ಹೆಚ್ಚು ಇಷ್ಟವಾದ ಸ್ಥಳಗಳಲ್ಲಿ ಒಂದಾಗಿದೆ. ನಿರಂತರವಾಗಿ ಹೆಚ್ಚುತ್ತಿರುವ ಪ್ರವಾಸಿಗರ ಒಳಹರಿವಿನಿಂದಾಗಿ ದುಬೈ ಮಧ್ಯಪ್ರಾಚ್ಯ ಮತ್ತು ವಿಶ್ವದ ಜನಪ್ರಿಯ ಪ್ರವಾಸಿ ತಾಣವಾಗಿದೆ. ವಾಸ್ತವವಾಗಿ, ಟ್ರಿಪ್ ಅಡ್ವೈಸರ್ಸ್, ಟ್ರಾವೆಲರ್ಸ್ ಚಾಯ್ಸ್ ಅವಾರ್ಡ್ಸ್, ದುಬೈಗೆ 2022 ಮತ್ತು 2023ರಲ್ಲಿ ವಿಶ್ವದ ಅತ್ಯುತ್ತಮ ತಾಣ ಎಂಬ ಬಿರುದನ್ನು ನೀಡಿರುವುದು ಗಮನಾರ್ಹ. ದುಬೈ ಒಂದು ಕಾಲದಲ್ಲಿ ಪ್ರಾಚೀನ ಬೆಡೋಯಿನ್‌ಗಳಿಂದ ಪೋಷಿತವಾದ ಕೃಷಿ ಗ್ರಾಮವಾಗಿತ್ತು. ಯುಎಇಯ ಕರಾವಳಿಯನ್ನು ನಕ್ಷೆ ಮಾಡಿದ 10ನೇ ಶತಮಾನದ ಕಾರ್ಟೋಗ್ರಾಫರ್ ಮುಹಮ್ಮದ್ ಅಲ್-ಇದ್ರಿಸಿಯಿಂದಾಗಿ 'ದಿಬೈ' ಎಂದು ಕರೆಯಲ್ಪಟ್ಟು ನಂತರ 'ದುಬೈ' ಆಯಿತು. ಯುಎಇಯ 7 ಎಮಿರೇಟ್‌ಗಳಲ್ಲಿ ದುಬೈ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದೆ. 1950ರ ದಶಕದಲ್ಲಿ ತೈಲವನ್ನು ಕಂಡುಹಿಡಿಯುವ ಮೊದಲು, ದುಬೈನ ಆರ್ಥಿಕತೆಯು ಮೀನುಗಾರಿಕೆ ಹಾಗೂ ಮುತ್ತು ಉದ್ಯಮವನ್ನು ಅವಲಂಬಿಸಿತ್ತು. ದುಬೈ ಹೆಸರಿನಲ್ಲಿ ಸುಮಾರು 300 ವಿಶ್ವ ದಾಖಲೆಗಳಿವೆ. ವಿಶ್ವದ ಅತಿ ಎತ್ತರದ ಕಟ್ಟಡ ಬುರ್ಜ್ ಖಲೀಫಾದಿಂದ, ವಿಶ್ವದ ಅತಿದೊಡ್ಡ ಫ್ರೇಮ್ ದುಬೈ ಫ್ರೇಮ್, ಅತಿದೊಡ್ಡ ಶಾಪಿಂಗ್ ಮಾಲ್ ದುಬೈ ಮಾಲ್, ವಿಶ್ವದ ಅತಿ ಎತ್ತರದ ಇನ್-ಸೂಟ್ ಹೋಟೆಲ್ ಬುರ್ಜ್ ಅಲ್ ಅರಬ್ ಸೇರಿದಂತೆ ಇಂಥ 300ಕ್ಕೂ ಹೆಚ್ಚು ವಿಶ್ವ ದಾಖಲೆಗಳನ್ನು ದುಬೈ ಹೊಂದಿದೆ. ದುಬೈ ಪೊಲೀಸರ ಬಳಿ ಅತ್ಯಂತ ವೇಗದ ಮತ್ತು ಐಷಾರಾಮಿ ಬುಗಾಟಿ ವೆಯ್ರಾನ್, ಫೆರಾರಿ ಎಫ್‌ಎಫ್ ಮತ್ತು ಲಂಬೋರ್ಗಿನಿ ಅವೆಂಟಡೋರ್ ಮುಂತಾದ ಕಾರುಗಳಿವೆ. ದುಬೈನ ಜನಸಂಖ್ಯೆಯು ಸುಮಾರು 35 ಲಕ್ಷ ಜನರನ್ನು ಒಳಗೊಂಡಿದೆ. ಆದರೆ ಈ ಪೈಕಿ ಸ್ಥಳೀಯರಿಗಿಂತ ವಿದೇಶಿಯರೇ ಹೆಚ್ಚು. ದುಬೈ ಆರ್ಥಿಕತೆಯು ಭಾರತೀಯ, ಪಾಕಿಸ್ತಾನಿ, ಬಾಂಗ್ಲಾದೇಶಿ, ಬ್ರಿಟಿಷ್, ಅಮೆರಿಕನ್ ಮತ್ತು ಆಫ್ರಿಕನ್ ಸಮುದಾಯಗಳನ್ನು ಒಳಗೊಂಡಂತೆ ಹೆಚ್ಚಿನ ಸಂಖ್ಯೆಯ ವಿದೇಶಿ ವಲಸಿಗರಿಗೆ ನೆಲೆಯಾಗಿದೆ. ಇದು ವೈವಿಧ್ಯಮಯ ಮತ್ತು ಬಹುಸಂಸ್ಕೃತಿಯ ಕೇಂದ್ರವಾಗಿದೆ. ದುಬೈನ ವಿಶಿಷ್ಟ ಲಕ್ಷಣವೆಂದರೆ ತಾಳೆಗರಿ (ಪಾಮ್) ಆಕಾರದ ಅದರ ಕೃತಕ ದ್ವೀಪಗಳ ಗುಂಪು. ಇದನ್ನು 'ದುಬೈ ಪಾಮ್ ಜುಮೇರಾ' ಎಂದು ಕರೆಯುತ್ತಾರೆ. ಇದು ಪ್ರಪಂಚದ ಅತಿದೊಡ್ಡ ಕೃತಕ ದ್ವೀಪಸಮೂಹವಾಗಿದೆ. ಸಮುದ್ರವನ್ನು ಮುಚ್ಚಿ ಸಂಪೂರ್ಣವಾಗಿ ಮರಳು ಮತ್ತು ಬಂಡೆಗಳಿಂದ ಇದನ್ನು ರಚಿಸಲಾಗಿದೆ. ದುಬೈ ತನ್ನ ಕಟ್ಟುನಿಟ್ಟಾದ ನಿಯಮಗಳಿಗೆ ಹೆಸರುವಾಸಿ. ನೀವು ವ್ಯಾಪಾರ ಅಥವಾ ವಿರಾಮಕ್ಕಾಗಿ ದುಬೈಗೆ ಆಗಮಿಸಿರಬಹುದು, ಆದರೆ ಸ್ಥಳೀಯ ನಿಯಮಗಳನ್ನು ಪಾಲಿಸಲೇಬೇಕು. ಪ್ರೀತಿಯ ಸಾರ್ವಜನಿಕ ಪ್ರದರ್ಶನವನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ. ಅಲ್ಲಿ ಯಾರೂ ಸಾರ್ವಜನಿಕವಾಗಿ ಚುಂಬಿಸುವಂತಿಲ್ಲ. ರೆಸ್ಟೋರೆಂಟ್‌ಗಳಲ್ಲಿ ಕೈ-ಕೈ ಹಿಡಿದು ಓಡಾಡಬಹುದು. ಆದರೆ ಬೀದಿಗಳಲ್ಲಿ ನಡೆಯುವಾಗ ಹಾಗೆ ಮಾಡುವಂತಿಲ್ಲ. ದುಬೈ ವಿದೇಶಿ ನಾಗರಿಕರನ್ನು ಬರಮಾಡಿಕೊಳ್ಳುತ್ತದೆ, ಆದರೆ ಅವರಿಗೆ ಪೌರತ್ವವನ್ನು ನೀಡುವುದಿಲ್ಲ. ದುಬೈ ಆದಾಯ ತೆರಿಗೆ ಮುಕ್ತ ವ್ಯವಸ್ಥೆಯನ್ನು ಹೊಂದಿದೆ. ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ವಿಶ್ವದ ಅತಿದೊಡ್ಡ ವಿಮಾನ ನಿಲ್ದಾಣದ ಟರ್ಮಿನಲ್‌ಗೆ ನೆಲೆಯಾಗಿದೆ. ದುಬೈನಲ್ಲಿ 1991ರಲ್ಲಿ ಒಂದೇ ಒಂದು ಗಗನಚುಂಬಿ ಕಟ್ಟಡವಿತ್ತು. ಈಗ ಎಲ್ಲಿ ನೋಡಿದರೂ ಅಂಥ ಕಟ್ಟಡಗಳು ತಲೆಯೆತ್ತಿವೆ. ಪ್ರತಿ 4 ತಿಂಗಳಿಗೆ ಹೊಸ ಗಗನಚುಂಬಿ ಕಟ್ಟಡ ನಿರ್ಮಾಣವಾಗುತ್ತದೆ. ದುಬೈನ ಆರ್ಥಿಕ ಜಿಲ್ಲೆ 'ಬಿಸಿನೆಸ್ ಬೇ'ನಲ್ಲಿ ಹೊಸ ಗಗನಚುಂಬಿ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ. ವಿಶ್ವದ ಶೇ.25 ಕ್ರೇನ್‌ಗಳು ದುಬೈನಲ್ಲಿ ಕೆಲಸ ಮಾಡುವುದರಿಂದ ದುಬೈ ಅನ್ನು ಒಮ್ಮೆ 'ವಿಶ್ವದ ಕ್ರೇನ್ ರಾಜಧಾನಿ' ಎಂದೂ ಕರೆಯಲಾಗುತ್ತಿತ್ತು.

ಮಾತು ಚುನಾವಣೆಯನ್ನು ಕೆಡಿಸಿತು!

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

ranjith.hoskere@gmail.com

'ಮಾತು ಬೆಳ್ಳಿ, ಮೌನ ಬಂಗಾರ' ಎನ್ನುವುದು ಸತ್ಯ. ರಾಜಕೀಯದಲ್ಲಿ ಮಾತು ಎಷ್ಟು ಮುಖ್ಯವೋ, ಮೌನವೂ ಅಷ್ಟೇ ಮುಖ್ಯವಾಗುತ್ತದೆ. ಕೇವಲ ಮಾತುಗಳ ಮೂಲಕವೇ ಚುನಾವಣೆಗಳನ್ನು ಗೆದ್ದಿರುವ ಅನೇಕರಿದ್ದಾರೆ. ಈ ಮಾತುಗಳ ಮೂಲಕ ಇಂದಿನ ಚುನಾವಣೆಯನ್ನು ಗೆಲ್ಲಲು ಸಾಧ್ಯವೋ ಇಲ್ಲವೋ ಗೊತ್ತಿಲ್ಲ, ಆದರೆ ಅದೇ ಮಾತುಗಳಿಂದ ಚುನಾವಣೆಗಳನ್ನು ಸೋಲಬಹುದು ಎನ್ನುವುದಕ್ಕಂತೂ ಹಲವು ಉದಾಹರಣೆಗಳಿವೆ. ಈ 'ರಾಂಗ್ ಟಾಕ್' ಮಾಡುವವರು ಯಾವುದೋ ಒಂದು ಪಕ್ಷಕ್ಕೆ ಮಾತ್ರವೇ ಸೀಮಿತವಾಗಿಲ್ಲ. ಪ್ರತಿ ಚುನಾವಣೆಯ ಸಮಯದಲ್ಲಿ ಅತಿರೇಕದ ಮಾತುಗಳಿಂದ ಪಕ್ಷಕ್ಕೆ ಸಮಸ್ಯೆ ತಂದೊಡ್ಡುವವರ ಪಟ್ಟಿ ದೊಡ್ಡಮಟ್ಟದಲ್ಲಿದೆ.

ಚುನಾವಣಾ ಸಮಯದಲ್ಲಿ ನಾಯಕರು ಬಂದು ಭಾಷಣ ಮಾಡಿದರೆ ಸಾಕು ಎನ್ನುವ ಲೆಕ್ಕಾಚಾರದಲ್ಲಿ ಅಭ್ಯರ್ಥಿಗಳಿರುತ್ತಾರೆ. ಆದರೆ ಕೆಲ ನಾಯಕರ ವಿಷಯದಲ್ಲಿ, 'ಇವರು ಮೌನವಾಗಿದ್ದರೆ ಸಾಕು' ಎನ್ನುವ ಮನಸ್ಥಿತಿ ಈ ಅಭ್ಯರ್ಥಿಗಳಲ್ಲಿ ಕೆನೆಗಟ್ಟಿರುತ್ತದೆ. ಇನ್ನು ಕೆಲವೊಮ್ಮೆ, ಕೆಲ ನಾಯಕರನ್ನು ಬಿಡಲಾಗದೇ, ಪ್ರಚಾರಕ್ಕೆ ಕರೆತಂದರೆ ಆಗಬಹುದಾದ ಡ್ಯಾಮೇಜ್ ಅನ್ನು ಎದುರಿಸಲು ಆಗದ ಸ್ಥಿತಿಯಲ್ಲಿ ಅಭ್ಯರ್ಥಿಗಳಿರುತ್ತಾರೆ. ಅಂಥ ಇಕ್ಕಟ್ಟಿನ ಪರಿಸ್ಥಿತಿ ಚನ್ನಪಟ್ಟಣದಲ್ಲಿಯೂ ನಿರ್ಮಾಣವಾಗಿತ್ತು ಎನ್ನುವುದು ರಾಜಕೀಯ ಪಡಸಾಲೆಯ ಈಗಿನ 'ಹಾಟ್-ಟಾಕ್' ಆಗಿದೆ ಎಂದರೆ ತಪ್ಪಾಗುವುದಿಲ್ಲ.

ವಕ್ಫ್ ವಿವಾದ ಭುಗಿಲೇಳಲು ಕಾರಣರಾಗಿದ್ದ ಸಚಿವ ಜಮೀರ್ ಆಡಿದ ಮಾತನ್ನು ಪಕ್ಷವು ಸಮರ್ಥಿಸಿಕೊಳ್ಳುವ ಮೊದಲೇ, ಚನ್ನಪಟ್ಟಣ ಚುನಾವಣಾ ರ‍್ಯಾಲಿಯ ವೇಳೆ ಕುಮಾರಸ್ವಾಮಿ ಅವರ ಬಗ್ಗೆ 'ಫ್ರೆಂಡ್ಲಿ ಟಾಕ್' ಮಾಡಲು ಹೋಗಿ ಜಮೀರ್ ಎಡವಟ್ಟು ಮಾಡಿಕೊಂಡರು. ಬಳಿಕ ಇದನ್ನು ಸಮರ್ಥಿಸಿಕೊಳ್ಳಲು ಕಾಂಗ್ರೆಸ್‌ನ ಹಲವರು ಶತಪ್ರಯತ್ನ ಪಟ್ಟರೂ ಸಾಧ್ಯವಾಗದೇ ಇದೀಗ 'ಜಮೀರ್ ಮಾಡಿದ್ದು ತಪ್ಪು' ಎನ್ನುವ ಷರಾ ಬರೆಯುತ್ತಿದ್ದಾರೆ. ಆದರೆ ಈ ಎಲ್ಲ ಆರೋಪ-ಪ್ರತ್ಯಾರೋಪಗಳನ್ನು ಮೀರಿ, ಜಮೀರ್ ಹೇಳಿಕೆ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರುವುದೇ ಎನ್ನುವುದು ಕಾಂಗ್ರೆಸ್ ಪಾಳಯದಲ್ಲಿ ಈಗಿರುವ ಆತಂಕ!

ಅಷ್ಟಕ್ಕೂ ಸಚಿವ ಜಮೀರ್ ಚನ್ನಪಟ್ಟಣದಲ್ಲಿ ಮಾಡಿದ ಎಡವಟ್ಟು ಏನು ಎನ್ನುವುದನ್ನು ಗಮನಿಸಬೇಕಿದೆ. ಅಲ್ಲಿನ ರ‍್ಯಾಲಿಯೊಂದರಲ್ಲಿ ಜಮೀರ್ ಮಾತನಾಡುವಾಗ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು 'ಕರಿಯ' ಎಂದು ಕರೆದರು. ಜತೆಗೆ ದೇವೇಗೌಡರ ಕುಟುಂಬವನ್ನೇ ಖರೀದಿಸುವೆ ಎನ್ನುವ ಹೇಳಿಕೆ ನೀಡಿದರು. ಕುಮಾರಸ್ವಾಮಿ ಕುರಿತು ಹೀಗೆ ಆಡಿದ ಮಾತಿಗೆ 'ಮೊದಲಿನಿಂದಲೂ ನಾನು ಅವರನ್ನು ಹಾಗೇ ಕರೆಯುತ್ತಿದ್ದೆ' ಎನ್ನುವ ಸಮರ್ಥನೆ ನೀಡಿದರೂ, ಆ ವೇಳೆಗಾಗಲೇ ಆಗಬೇಕಾದ ಡ್ಯಾಮೇಜ್ ಆಗಿ ಹೋಗಿತ್ತು. ಇನ್ನು ದೇವೇಗೌಡರ ಕುಟುಂಬವನ್ನು ಖರೀದಿಸಬಹುದು ಎನ್ನುವ ಹೇಳಿಕೆಯಿಂದ ಒಕ್ಕಲಿಗ ಸಮುದಾಯದ 'ಅಸ್ಮಿತೆ'ಗೆ ಹೊಡೆತ ಬಿದ್ದಿದ್ದರಿಂದ ಚುನಾವಣೆ ಮೇಲೂ ಹೊಡೆತ ಬಿದ್ದಿದೆ ಎನ್ನುವ ಆತಂಕದಲ್ಲಿ ಅನೇಕರಿದ್ದಾರೆ.

ಉಪಚುನಾವಣೆ ಘೋಷಣೆಯಾದ ಕ್ಷಣದಿಂದ ಚನ್ನಪಟ್ಟಣ ಕಣವು ತೀವ್ರ ಪೈಪೋಟಿಯಿಂದ ಕೂಡಿತ್ತು. ಯೋಗೇಶ್ವರ ಅವರು ಕಾಂಗ್ರೆಸ್‌ಗೆ ಸೇರಿ ಸ್ಪರ್ಧಿಸುತ್ತಿದ್ದಂತೆ ಕಣ ಮತ್ತಷ್ಟು ರಂಗೇರಿತ್ತು. ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಹಾಗೂ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಯೋಗೇಶ್ವರ ಇಬ್ಬರಿಗೂ ಈ ಚುನಾವಣೆಯ ಫಲಿತಾಂಶ ನಿರ್ಣಾಯಕವಾಗಿತ್ತು ಹಾಗೂ ಸೋತವರಿಗೆ 'ಡೆಡ್ ಎಂಡ್' ಎನ್ನುವ ಮಾತಿತ್ತು. ಕಣವು ಆರಂಭದಲ್ಲಿ ಯೋಗೇಶ್ವರ ಪರವಾಗಿದ್ದಂತೆ ಕಂಡರೂ, ಪ್ರಚಾರಕ್ಕೆ ದೇವೇಗೌಡರು ಎಂಟ್ರಿ ಕೊಡುತ್ತಿದ್ದಂತೆ 'ಫಿಫ್ಟಿ-ಫಿಫ್ಟಿ ಚಾನ್ಸ್' ಎನ್ನುವ ಸ್ಥಿತಿ ನಿರ್ಮಾಣವಾಗಿತ್ತು. ಈ ಎಲ್ಲದರ ನಡುವೆ ಜಮೀರ್ ಅವರ 'ಕರಿಯ' ಹೇಳಿಕೆ ಬಿಜೆಪಿ ನಾಯಕರಿಗೆ ಬ್ರಹ್ಮಾಸ್ತ್ರದ ರೀತಿ ಸಿಕ್ಕಿತ್ತು. ಮತದಾನಕ್ಕೂ ಮೊದಲ ಮೂರು ದಿನ ಇಡೀ ಚುನಾವಣಾ ಪ್ರಚಾರವು ಈ 'ಕರಿಯ' ಹೇಳಿಕೆಯ ಸುತ್ತಮುತ್ತಲೇ ನಡೆದಿದ್ದರಿಂದ ಈ ಹೇಳಿಕೆಯ 'ಆಫ್ಟರ್ ಎಫೆಕ್ಟ್' ಸ್ಪಷ್ಟವಾಯಿತು.

ಹಾಗೆ ನೋಡಿದರೆ, ಜಮೀರ್ ಈ ರೀತಿಯ ವಿವಾದಾತ್ಮಕ ಹೇಳಿಕೆ ನೀಡಿರುವುದು ಇದೇ ಮೊದಲಲ್ಲ. ಈ ಹಿಂದೆಯೂ ಹಲವು ಬಾರಿ ಈ ರೀತಿಯ ಹೇಳಿಕೆಯಿಂದ ಅವರು ಪಕ್ಷವನ್ನು

ಇಕ್ಕಟ್ಟಿಗೆ ಸಿಲುಕಿಸಿರುವ ಉದಾಹರಣೆಗಳಿವೆ. ಹಾಗೆಂದು ಚನ್ನಪಟ್ಟಣ ಉಪಚುನಾವಣೆಯಿಂದ ಅವರನ್ನು ದೂರವಿಡುವ ಸ್ಥಿತಿಯಲ್ಲಿ ಕಾಂಗ್ರೆಸ್ ಇರಲಿಲ್ಲ. ಏಕೆಂದರೆ ಸದ್ಯಕ್ಕೆ ಕಾಂಗ್ರೆಸ್ ಪಾಲಿಗೆ ಅಲ್ಪಸಂಖ್ಯಾತ ಸಮುದಾಯದ ಮಾಸ್ ನಾಯಕನಾಗಿ ಕಾಣಿಸುತ್ತಿರುವುದು ಜಮೀರ್ ಅಹ್ಮದ್ ಮಾತ್ರ. ಆದ್ದರಿಂದ ಚನ್ನಪಟ್ಟಣದಲ್ಲಿರುವ ಮುಸ್ಲಿಂ ಮತಗಳನ್ನು ಒಗ್ಗೂಡಿಸಲು ಜಮೀರ್ ಅವರನ್ನು ಮತದಾನಕ್ಕೆ ಕೆಲ ದಿನಗಳ ಮೊದಲು ಕರೆದುಕೊಂಡು ಹೋಗಬೇಕಾಯಿತು,.

ಜಮೀರ್ ಮಾತ್ರವಲ್ಲದೆ ಕಾಂಗ್ರೆಸ್‌ನ ಅನೇಕ ನಾಯಕರು ಈ ಹಿಂದೆ ಬಿಜೆಪಿ ನಾಯಕರ ವಿರುದ್ಧ ಮಾಡಿದ ವಿವಿಧ ಆರೋಪಕ್ಕೆ ಬೆಲೆ ತೆತ್ತಿರುವ ಉದಾಹರಣೆಗಳಿವೆ. 2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸಿದ್ದ ಮಣಿಶಂಕರ್ ಅಯ್ಯರ್, ರಾಹುಲ್ ಗಾಂಧಿ ಅವರಿಂದಾಗಿಯೇ ದೇಶದ ಹಲವು ಭಾಗಗಳಲ್ಲಿ ಬಿಜೆಪಿ ಪರವಾದ ಅಲೆಯೇಳುವಂತಾಗಿತ್ತು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. 2019ರ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದ ನಿಖಿಲ್ ಕುಮಾರಸ್ವಾಮಿ ಅವರ ಸೋಲಿಗೆ ಮತ್ತು ಸುಮಲತಾರ ಗೆಲುವಿಗೆ ಕಾರಣವಾಗಿದ್ದು ಸಹ, ಆ ಸಮಯದಲ್ಲಿ ಶಿವರಾಮೇಗೌಡ, ಎಚ್.ಡಿ.ರೇವಣ್ಣ ಅವರು ಸುಮಲತಾ ಅವರ ಬಗ್ಗೆ ಆಡಿದ ಮಾತುಗಳು. ಈ ಎಲ್ಲ ಗೊತ್ತಿದ್ದರೂ, ಪ್ರತಿ ಚುನಾವಣೆಯಲ್ಲಿ ಈ ರೀತಿಯ ವಿವಾದಾತ್ಮಕ ಹೇಳಿಕೆಗಳ ಮೂಲಕ, 'ಎದುರಾಳಿ'ಗೆ ಸಹಾಯ ಮಾಡುವ ಕಾರ್ಯವನ್ನು ಮಾತ್ರ ನಾಯಕರು ಬಿಟ್ಟಿಲ್ಲ.

ಹಾಗೆ ನೋಡಿದರೆ, ಜಮೀರ್ ತಮ್ಮ ಹೇಳಿಕೆಯನ್ನು ಚುನಾವಣೆಯಲ್ಲದ ಸಮಯದಲ್ಲಿ, ವಕ್ಫ್ ಗದ್ದಲ ಇಲ್ಲದ ಕಾಲಘಟ್ಟದಲ್ಲಿ ನೀಡಿದ್ದರೆ ಈ ಪ್ರಮಾಣದಲ್ಲಿ ಗಲಾಟೆಯಾಗುತ್ತಿರಲಿಲ್ಲ. ಆದರೆ ವಕ್ಫ್ ಕಾವು ಜೋರಿರುವಾಗ ಹಾಗೂ ಎನ್‌ಡಿಎ ಅಭ್ಯರ್ಥಿಯು ಕಾಂಗ್ರೆಸ್ ವಿರುದ್ಧ ಅಸ್ತ್ರದ ಹುಡುಕಾಟದಲ್ಲಿರುವಾಗ ಈ ರೀತಿಯ ಹೇಳಿಕೆ ನೀಡಿದ್ದು, ಅದರಲ್ಲಿಯೂ ವ್ಯಕ್ತಿಯೊಬ್ಬರ ಮೈಬಣ್ಣದ ಬಗ್ಗೆ ಮಾತನಾಡಿದ್ದು, ಮತದಾರರ ವಿರೋಧಕ್ಕೆ ಕಾರಣವಾಯಿತು. ಈ ರೀತಿಯ ವಿವಾದಾತ್ಮಕ ಹೇಳಿಕೆಯನ್ನು ಹಲವು ಬಾರಿ ನೀಡಿದ್ದರೂ, ಈ ಬಾರಿ ಕಾಂಗ್ರೆಸ್ ನಾಯಕರು ಜಮೀರ್ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಈ ಕಾರಣಕ್ಕಾಗಿಯೇ ಮುಸ್ಲಿಂ ನಾಯಕರು ಜಮೀರ್ ಹೇಳಿಕೆಯನ್ನು ಪ್ರಶ್ನಿಸಿದ್ದಾರೆ. ಪದೇಪದೆ ಈ ರೀತಿಯ ಹೇಳಿಕೆ ನೀಡುತ್ತಿದ್ದರೂ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅತ್ಯಾಪ್ತ ವಲಯದಲ್ಲಿ ಗುರುತಿಸಿಕೊಂಡಿರುವುದರಿಂದ ಕಾಂಗ್ರೆಸ್‌ಗೆ 'ಬಿಸಿ ತುಪ್ಪವಾಗಿ' ಪರಿಣಮಿಸಿದ್ದಾರೆ.

ವಿವಾದಾತ್ಮಕ ಹೇಳಿಕೆ ನೀಡುವ ನಾಯಕರು ಕಾಂಗ್ರೆಸ್‌ಗೆ ಮಾತ್ರ ಸೀಮಿತವಾಗದೇ, ಎಲ್ಲ ಪಕ್ಷಗಳಲ್ಲಿಯೂ ಇದ್ದಾರೆ. ಬಿಜೆಪಿಯ ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ಹಲವು ನಾಯಕರು, ಈ ಹಿಂದೆ ಬಿಜೆಪಿಯಲ್ಲಿದ್ದ ಕೆ.ಎಸ್. ಈಶ್ವರಪ್ಪರಂಥ ನಾಯಕರು 'ಹಿಂದುತ್ವ'ದ ಬಗ್ಗೆ ಮಾತನಾಡುವ ನೆಪದಲ್ಲಿ ಹೇಳಿಕೆಗಳ ಮೂಲಕ ಬಿಜೆಪಿಗೆ ತಿರುಗುಬಾಣವಾಗುವಂತೆ ಮಾಡಿದ್ದಾರೆ. ಯಾವುದೇ ಪಕ್ಷದ ನಾಯಕರು ನೀಡುವ ಹೇಳಿಕೆಗಳು ಎಷ್ಟು ಜನರ ಮೇಲೆ ಭಾವನಾತ್ಮಕ ಪ್ರಭಾವ ಬೀರುತ್ತವೆ ಎನ್ನುವುದರ ಆಧಾರದ ಮೇಲೆ ಅದರ ಪರಿಣಾಮ ತಿಳಿಯುತ್ತದೆ. ಈ ಹಿಂದೆ ಜೆಡಿಎಸ್ ರಾಜ್ಯಾಧ್ಯಕ್ಷರಾಗಿದ್ದ ಸಿ.ಎಂ.ಇಬ್ರಾಹಿಂ ಹಲವು ವಿವಾದಾತ್ಮಕ ಹೇಳಿಕೆ ನೀಡಿದ್ದರೂ, ಅದನ್ನು ಸಮರ್ಥಿಸಿಕೊಳ್ಳುವ/ಜೀರ್ಣಿಸಿಕೊಳ್ಳುವ ಶಕ್ತಿ ಅವರಿಗಿತ್ತು. ಆದರೆ ಕೆಲ ನಾಯಕರಿಗೆ ತಾವಾಡಿದ ಮಾತುಗಳನ್ನು ಅರಗಿಸಿಕೊಳ್ಳಲು ಆಗದಿದ್ದಾಗ ಈ ರೀತಿಯ ವಿವಾದಗಳು ಮೈಸುತ್ತಿಕೊಳ್ಳುತ್ತವೆ.

ಮೊದಲೇ ಹೇಳಿದಂತೆ, ಜಮೀರ್ ಅಹ್ಮದ್‌ರಂಥ ನಾಯಕರು ಎಲ್ಲ ಪಕ್ಷದಲ್ಲಿಯೂ ಇದ್ದಾರೆ. ಅನೇಕ ಸಮಯದಲ್ಲಿ ಅವರ ಮಾತು ಒಂದಿಷ್ಟು ಜನರನ್ನು ಸೆಳೆಯಲು ಸಹಾಯ ಮಾಡಿದರೂ, ಬಹುತೇಕ ಸಮಯದಲ್ಲಿ ಪಕ್ಷಕ್ಕೆ ಪ್ರತಿಕೂಲ ವಾತಾವರಣವನ್ನೇ ನಿರ್ಮಿಸಿರುತ್ತದೆ. ಸದ್ಯ ಜಮೀರ್ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ ಬಹುತೇಕ ನಾಯಕರು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕೆಲವರಂತೂ ಪಕ್ಷದ ವೇದಿಕೆಯಲ್ಲೇ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಮುಸ್ಲಿಂ ಸಮುದಾಯದ ಮಾಸ್ ಲೀಡರ್ ಆಗಬೇಕೆಂಬ ಜಮೀರ್ ಆಸೆಗೆ ಈ ರೀತಿಯ ಹೇಳಿಕೆಗಳೇ 'ಅಡ್ಡಿ'ಯಾಗದಿರಲಿ ಎನ್ನುವುದು ಅವರ ಆಪ್ತರ ಆಶಯವಾಗಿದೆ.

ಈ ಎಲ್ಲವನ್ನೂ ಮೀರಿ ನಾಲಿಗೆ ಹರಿಬಿಡುವ ನಾಯಕರು ಕಾಂಗ್ರೆಸ್ ಅಥವಾ ಬಿಜೆಪಿಗೆ ಹೊಸತೇನಲ್ಲ. ಈ ನಾಯಕರನ್ನು ಎಷ್ಟು ಹದ್ದುಬಸ್ತಿನಲ್ಲಿಡಲಾಗುತ್ತದೆ ಎನ್ನುವುದರ ಮೇಲೆ ರಾಜಕೀಯದ ಲಾಭ-ನಷ್ಟಗಳು ನಿಂತಿರುತ್ತವೆ. ಕೊನೆಯದಾಗಿ ಜಮೀರ್ ಅವರ 'ಕರಿಯ' ಹೇಳಿಕೆಯಿಂದಲೇ ನಿಖಿಲ್ ಅದೃಷ್ಟ ಖುಲಾಯಿಸುವುದೋ ಅಥವಾ ಈ ಹೇಳಿಕೆಯನ್ನೂ ಮೀರಿ 'ಸೈನಿಕ' ಯೋಗೇಶ್ವರ್ ವಿಜಯದ ಗಡಿದಾಟುವರೇ? ಎಂಬ ಪ್ರಶ್ನೆಗೆ ಫಲಿತಾಂಶದ ದಿನ ಉತ್ತರ ಸಿಗಲಿದೆ.

ನಿಮ್ಮ ಮತ ನಿಮ್ಮ ಸರಕಾರವನ್ನು ನಿರ್ಧರಿಸುತ್ತದೆ!

ಸಂಗತ

ಡಾ.ವಿಜಯ್ ದರಡಾ

vveditoped@gmail.com

ಮಹಾರಾಷ್ಟ್ರದ ವಿಧಾನಸಭೆ ಚುನಾವಣೆಯ ಮತದಾನಕ್ಕೆ ಕ್ಷಣಗಣನೆ ಶುರುವಾಗಿದೆ. ಮತದಾರರ ಮನ ಗೆಲ್ಲಲು ಎಲ್ಲಾ ರಾಜಕೀಯ ಪಕ್ಷಗಳ ಅಭ್ಯರ್ಥಿಗಳೂ ತಮ್ಮ ಕೈಲಾದ ಪ್ರಯತ್ನಗಳನ್ನು ಮಾಡಿದ್ದಾರೆ. ಬೇಕಾದಷ್ಟು ಭರವಸೆಗಳನ್ನೂ, ವಚನಗಳನ್ನೂ ನೀಡಿದ್ದಾರೆ. ಜನರೂ ಅದನ್ನು ಕೇಳಿದ್ದಾರೆ. ಅಭ್ಯರ್ಥಿಗಳ ನಡೆ-ನುಡಿಯನ್ನು ಗಮನಿಸಿದ್ದಾರೆ. ಅವರು ನೀಡಿದ ಭರವಸೆಗಳ ತೂಕವನ್ನು ಅಳೆದು ನೋಡಿದ್ದಾರೆ. ಯಾವುದು ಕಾರ್ಯಸಾಧು, ಯಾವುದು ಆಮಿಷ, ಯಾವುದು ಅಸಾಧ್ಯ ಎಂಬುದನ್ನೆಲ್ಲ ಮತದಾರರು ಮನಸ್ಸಿನಲ್ಲೇ ಲೆಕ್ಕ ಹಾಕಿದ್ದಾರೆ. ಈಗ ತೀರ್ಪು ನೀಡುವ ಸಮಯ. ಮತದಾರರು ಮತ ಚಲಾಯಿಸುವುದಕ್ಕಿಂತ ಮೊದಲು ತಮ್ಮ ಅಭ್ಯರ್ಥಿಯನ್ನು ಬಹಳ ಎಚ್ಚರಿಕೆಯಿಂದ ನಿರ್ಧರಿಸಬೇಕು. ತಾವು ಆಯ್ಕೆ ಮಾಡುವ ಅಭ್ಯರ್ಥಿ ಎಷ್ಟು ಸಮರ್ಥ? ಅವನ ವಿದ್ಯಾರ್ಹತೆ ಏನು? ಹಿಂದೆ ಸಾರ್ವಜನಿಕ ಜೀವನದಲ್ಲಿ ಅವನು ನಡೆದುಕೊಂಡ ರೀತಿ ಹೇಗಿದೆ? ನಮ್ಮ ಪ್ರದೇಶದ ಅಗತ್ಯಗಳ ಬಗ್ಗೆ ಅವನಿಗೆ ಎಷ್ಟು ಮಾಹಿತಿಯಿದೆ? ಯಾವುದೇ ಚುನಾವಣೆಯಲ್ಲಿ ಮತದಾನ ಮಾಡುವುದಕ್ಕಿಂತ ಮೊದಲು ಜನರು ಈ ಸಂಗತಿಗಳ ಬಗ್ಗೆ ಒಮ್ಮೆ ಯೋಚಿಸಬೇಕು. ಇವು ಮೂಲಭೂತ ಸಂಗತಿಗಳು. ಇವುಗಳ ಜತೆಗೆ ಮತದಾರರಿಗೆ ತಮ್ಮದೇ ಆದ ಆದ್ಯತೆಗಳು ಬೇರೆ ಇರಬಹುದು. ಅವುಗಳನ್ನೆಲ್ಲ ಸರಿಯಾಗಿ ವಿಮರ್ಶಿಸಿದ ಮೇಲೇ ಯಾರಿಗೆ ಮತ ನೀಡಬೇಕೆಂಬುದನ್ನು ನಿರ್ಧರಿಸಬೇಕು. ನೆನಪಿಡಿ, ನಿಮ್ಮ ಮತ ನಿಮ್ಮನ್ನಾಳುವ ಸರಕಾರವನ್ನು ನಿರ್ಧರಿಸುತ್ತದೆ. ದೇಶದ ಅಥವಾ ರಾಜ್ಯದ ಮುಂದಿನ 5 ವರ್ಷಗಳ ಭವಿಷ್ಯ ನಿಮ್ಮ ಆಯ್ಕೆಯನ್ನು ಅವಲಂಬಿಸಿದೆ. ಹೀಗಾಗಿ ಮತದಾನ ಮಾಡಲು ಯಾವುದೇ ಕಾರಣಕ್ಕೂ ಮರೆಯಬಾರದು!

ನನಗೆ ಗೊತ್ತು, ಮುಂದೆ ಸಾಕಷ್ಟು ಸವಾಲುಗಳಿವೆ. ಮಹಾರಾಷ್ಟ್ರದಲ್ಲಿ ಚುನಾವಣೆ ಪ್ರಚಾರದ ವೇಳೆ ಜನರನ್ನು ಜಾತಿ, ಧರ್ಮ, ಭಾಷೆಯ ಆಧಾರದಲ್ಲಿ ದಾರಿತಪ್ಪಿಸಲು ಸಾಧ್ಯವಿರುವ ಎಲ್ಲಾ ಪ್ರಯತ್ನಗಳೂ ನಡೆದಿವೆ. ಹಾಗೆ ನೋಡಿದರೆ ಎಲ್ಲಾ ಚುನಾವಣೆಗಳಲ್ಲೂ ಇದು ನಡೆಯುತ್ತದೆ. ಪತ್ರಿಕೆಗಳಲ್ಲೂ, ಟಿವಿ ಚಾನಲ್ಲುಗಳಲ್ಲೂ ಇಂತಿಂತಹ ಊರಿನಲ್ಲಿ ಅಥವಾ ವಿಧಾನಸಭಾ ಕ್ಷೇತ್ರದಲ್ಲಿ ಇಂತಿಂತಹ ಜಾತಿ, ಧರ್ಮ ಅಥವಾ ಭಾಷೆಯ ಜನರಿದ್ದಾರೆ ಎಂಬಂಥ ವಿಶ್ಲೇಷಣೆಗಳನ್ನು ನಾನೂ ಕೇಳಿದ್ದೇನೆ. ಸಹಜವಾಗಿಯೇ ಇದು ಜನರ ಮೇಲೆ ಪ್ರಭಾವ ಬೀರುತ್ತದೆ. ಕೆಲವರಾದರೂ 'ಈ ಅಭ್ಯರ್ಥಿ ನಮ್ಮ ಜಾತಿಯವನು, ಹೀಗಾಗಿ ಇವನಿಗೇ ನಾನು ಮತ ಹಾಕಬೇಕು' ಎಂದು ಯೋಚಿಸಬಹುದು. ಆದರೆ, ಜಾತಿ, ಧರ್ಮ, ಪಂಥವನ್ನು ನೋಡಿಕೊಂಡು ಮತದಾನ ಮಾಡುವುದು ಸರಿಯಾದ ಯೋಚನೆಯೇ? ನಿಮ್ಮ ಮತ ಯಾರಿಗೆ ಎಂಬುದನ್ನು ಹೀಗೆ ನಿರ್ಧರಿಸಬೇಕೇ? ಜಾತಿಯು ನಮ್ಮ ಸಾಂಪ್ರದಾಯಿಕ ಗುರುತಿನ ಒಂದು ಭಾಗವೇ ಆಗಿರಬಹುದು. ಆದರೆ, ಅಭಿವೃದ್ಧಿ ಹೊಂದಿದ ಸಮೃದ್ಧ ರಾಜ್ಯ ಮತ್ತು ದೇಶವನ್ನು ಕಟ್ಟುವ ಗುರಿಯನ್ನು ಕಣ್ಣಮುಂದೆ ತಂದುಕೊಂಡಾಗ ನಾವೇಕೆ ಜಾತಿ ಮತ್ತು ಧರ್ಮದ ರಾಜಕೀಯವನ್ನು ಮೀರಿ ಯೋಚಿಸಬೇಕು ಎಂಬುದು ಅರ್ಥವಾಗುತ್ತದೆ. ಮಹಾರಾಷ್ಟ್ರದಲ್ಲಿ 96.3 ಮಿಲಿಯನ್ ಮತದಾರರಿದ್ದಾರೆ. ಅದರಲ್ಲಿ 18.5 ಮಿಲಿಯನ್ ಮತದಾರರು ಯುವಕರು. ಕೊನೆಯ ಪಕ್ಷ ಈ ಯುವ ಮತದಾರರಾದರೂ ಜಾತಿ, ಧರ್ಮ, ಭಾಷೆಯ ರಾಜಕೀಯವನ್ನು ಮೀರಿ, ಉತ್ತಮ ಅಭ್ಯರ್ಥಿಗೆ ಮತ ಚಲಾಯಿಸುತ್ತಾರೆ ಎಂಬ ನಂಬಿಕೆ ನನ್ನದು.

ಯುವ ಮತದಾರರ ವಿಷಯದಲ್ಲಿ ನಾನೊಂದು ಅಂಶವನ್ನು ಚುನಾವಣಾ ಆಯೋಗದ ಗಮನಕ್ಕೆ ತರಬೇಕು. ಅನೇಕ ಯುವ ಹಾಗೂ ಪ್ರಜಾಪ್ರಭುತ್ವಪ್ರೇಮಿ ಮತದಾರರು ಬೇರೆ ಬೇರೆ ರಾಜ್ಯ ಅಥವಾ ನಗರಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ಕಳೆದ ಲೋಕಸಭೆ ಚುನಾವಣೆಯಲ್ಲಿ ನಾನು ಗಮನಿಸಿದ್ದೇನೆ. ಎಷ್ಟೊಂದು ಯುವಕರು ಸಾವಿರಾರು ರುಪಾಯಿ ಖರ್ಚು ಮಾಡಿಕೊಂಡು ದೂರದ ಊರುಗಳಿಂದ ತಮ್ಮ ಊರಿಗೆ ಮತದಾನ ಮಾಡಲೆಂದೇ ಬಂದು ಹೋಗಿದ್ದಾರೆ. ಅಂಥವರ ಸಂಖ್ಯೆ ಇನ್ನೂ ಹೆಚ್ಚಬೇಕು. ಬೇರೆ ಊರುಗಳಲ್ಲಿ ವಾಸಿಸುವ ಯುವ ಮತದಾರರಿಗೆ ಆನ್‌ಲೈನ್‌ನಲ್ಲಿ ಮತದಾನ ಮಾಡುವ ಅವಕಾಶ ಕಲ್ಪಿಸಿದರೆ ಅದು ನಮ್ಮ ಪ್ರಜಾಪ್ರಭುತ್ವವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ. ಇದೇನೂ ಅಸಾಧ್ಯ ಸಂಗತಿಯಲ್ಲ. ಇಂದು ಆನ್‌ಲೈನ್ ವೋಟಿಂಗ್ ಸಾಕಾರಗೊಳಿಸುವಷ್ಟು ನಮ್ಮ ತಾಂತ್ರಿಕತೆ ಬೆಳೆದಿದೆ. ಆದರೆ, ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಅದಿನ್ನೂ ಸಾಧ್ಯವಾಗಿಲ್ಲ. ಈ ಬಗ್ಗೆ ಚುನಾವಣಾ ಆಯೋಗ ಹಾಗೂ ಕೇಂದ್ರ ಸರಕಾರ ಗಂಭೀರವಾಗಿ ಚಿಂತನೆ ನಡೆಸಬೇಕಿದೆ. ನಮ್ಮ ದೇಶದಲ್ಲಿ ಈಗಾಗಲೇ ಅಂಚೆ ಮತದಾನ ಎಂಬೊಂದು ವ್ಯವಸ್ಥೆಯಿದೆಯಲ್ಲವೇ? ಎಷ್ಟು ಜನರಿಗೆ ಅದರ ಬಗ್ಗೆ ಗೊತ್ತಿದೆ? ಸಾಮಾನ್ಯವಾಗಿ ಸರಕಾರಿ ನೌಕರರು ಹಾಗೂ ಸಶಸ್ತ್ರ ಪಡೆಗಳಲ್ಲಿ ಕೆಲಸ ಮಾಡುವ ಸೈನಿಕರು ಮಾತ್ರ ಈ ವ್ಯವಸ್ಥೆಯನ್ನು ಬಳಸುತ್ತಾರೆ. ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಅನೇಕ ಸರಕಾರಿ ನೌಕರರು ಹಾಗೂ ಭದ್ರತಾ ಸಿಬ್ಬಂದಿ ಮತದಾನವನ್ನೇ ಮಾಡುವುದಿಲ್ಲ. ಅವರ ಮತದಾನದ ಹಕ್ಕನ್ನು ಗೌರವಿಸಲು ನಮ್ಮ ವ್ಯವಸ್ಥೆ ಏನು ಕ್ರಮ ಕೈಗೊಂಡಿದೆ? ಇತ್ತೀಚೆಗೆ ಅಮೆರಿಕದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. ಅಲ್ಲಿ ಬಹಳ ದೊಡ್ಡ ಸಂಖ್ಯೆಯ ಮತದಾರರು ಅಂಚೆ ಮತದಾನದ ವ್ಯವಸ್ಥೆಯನ್ನು ಬಳಸಿ ಕೊಂಡರು. ಭಾರತದಲ್ಲೂ ಯಾವೊಬ್ಬ ಮತದಾರನೂ ತನ್ನ ಹಕ್ಕಿನಿಂದ ಯಾವುದೇ ಕಾರಣಕ್ಕೂ ವಂಚಿತನಾಗದಂತೆ ನೋಡಿ ಕೊಳ್ಳುವ ದಿನ ಬರಲಿದೆ ಎಂಬ ಆಶಾಭಾವನೆ ನನ್ನಲ್ಲಿದೆ. ನಾವು ಬ್ಯಾಂಕ್ ವ್ಯವಹಾರವನ್ನು, ಷೇರು ಖರೀದಿ ಅಥವಾ ಮಾರಾಟವನ್ನು, ವಿಮಾನ, ಬಸ್, ರೈಲ್ವೆ ಟಿಕೆಟ್‌ಗಳ ಬುಕಿಂಗ್ ಅನ್ನು ಆನ್‌ಲೈನ್‌ನಲ್ಲಿ ಮಾಡಬಹುದು ಅಂತಾದರೆ ಏಕೆ ಮತದಾನವನ್ನು ಆನ್‌ಲೈನ್‌ನಲ್ಲಿ ಮಾಡಲು ಸಾಧ್ಯವಿಲ್ಲ? ಖಂಡಿತ ಸಾಧ್ಯವಿದೆ. ಅದಕ್ಕೆ ಸರಕಾರ ಮನಸ್ಸು ಮಾಡಬೇಕಷ್ಟೆ.

ಸ್ವಾತಂತ್ರ್ಯಾನಂತರ ಭಾರತದ ಚುನಾವಣಾ ವ್ಯವಸ್ಥೆ ಸಾಕಷ್ಟು ಮೈಲಿಗಲ್ಲುಗಳನ್ನು ದಾಟಿ ಮುಂದೆ ಸಾಗಿ ಎತ್ತರದ ಸ್ಥಾನವನ್ನು ತಲುಪಿದೆ. ಕಾಲಕಾಲಕ್ಕೆ ಸಾಕಷ್ಟು ಸುಧಾರಣಾ ಕ್ರಮಗಳು ಜಾರಿಗೆ ಬಂದಿವೆ. ಹೀಗಾಗಿ ಬಹಳ ಕಡಿಮೆ ಅವಧಿಯಲ್ಲಿ ದೊಡ್ಡ ಸುಧಾರಣೆಯನ್ನು ನಮ್ಮ ಚುನಾವಣಾ ವ್ಯವಸ್ಥೆ ಕಂಡಿದೆ. 1951ರಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಭಾರತದ ಮೊದಲ ಮುಖ್ಯ ಚುನಾವಣಾ ಆಯುಕ್ತ ಸುಕುಮಾರ ಸೇನ್ ಅವರು ಸಾಕಷ್ಟು ಸವಾಲುಗಳನ್ನು ಎದುರಿಸಿದ್ದರು. ಆಗ ದೇಶದಲ್ಲಿ ಹೆಚ್ಚಿನ ಜನರು ಅನಕ್ಷರಸ್ಥರಾಗಿದ್ದರು. ಅನೇಕ ಹೆಂಗಸರನ್ನು ಅವರ ಹೆಸರಿನಿಂದ ಗುರುತಿಸುವ ಅಭ್ಯಾಸವೇ ಇರಲಿಲ್ಲ. ಹೀಗಾಗಿ ಎಲ್ಲ ಮತದಾರರಿಗೂ ಮತದಾನದ ಅವಕಾಶ ಕಲ್ಪಿಸುವ ಕಾರ್ಯದಲ್ಲಿ ಚುನಾವಣಾ ಆಯೋಗ ಹೈರಾಣಾಗಿತ್ತು. ಆದರೂ ಸುಕುಮಾರ ಸೇನ್ ಅವರ ತಂಡದ ಪ್ರಯತ್ನ ಫಲ ನೀಡಿತ್ತು. ಸರಕಾರ ಕೂಡ ಚುನಾವಣಾ ಆಯೋಗಕ್ಕೆ ಸಂಪೂರ್ಣ ಬೆಂಬಲ ನೀಡಿತ್ತು. ನಮ್ಮ ದೇಶದಲ್ಲಿ ಮೊಟ್ಟ ಮೊದಲ ಚುನಾವಣೆಯಿಂದಲೇ, 21 ವರ್ಷ ಮೇಲ್ಪಟ್ಟ ಎಲ್ಲಾ ನಾಗರಿಕರಿಗೆ ಮತದಾನದ ಹಕ್ಕು ನೀಡಲಾಗಿದೆ. ಕೆಲವು ದೇಶಗಳಲ್ಲಿರುವಂತೆ ನಮ್ಮ ದೇಶದಲ್ಲಿ ಮತದಾನದ ಹಕ್ಕು ನೀಡುವಾಗ ಜಾತಿ, ಲಿಂಗ, ಧರ್ಮ, ಬಡವ-ಬಲ್ಲಿದ ಹೀಗೆ ಯಾವುದೇ ತಾರತಮ್ಯ ಮಾಡುವುದಿಲ್ಲ. ಹೀಗೆ ಸಾರ್ವತ್ರಿಕ ಮತದಾನದ ಹಕ್ಕನ್ನು ನೀಡಿರುವುದೇ ಒಂದು ಕ್ರಾಂತಿಕಾರಿ ವ್ಯವಸ್ಥೆ. ನಿಮಗೆ ಇದು ಚೆನ್ನಾಗಿ ಅರ್ಥವಾಗಬೇಕು ಅಂದರೆ ಒಂದು ಉದಾಹರಣೆ ನೀಡಬೇಕು. ಅಮೆರಿಕ ತುಂಬಾ ಮುಂದುವರಿದ ದೇಶವಲ್ಲವೇ? ಆದರೆ ಅಲ್ಲಿ ಕರಿಯರು ಮತದಾನದ ಹಕ್ಕು ಪಡೆಯಲು ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ 100 ವರ್ಷ ಕಾಯಬೇಕಾಯಿತು. ಅಮೆರಿಕದ ಕೆಲ ರಾಜ್ಯಗಳಲ್ಲಿ ಹೆಂಗಸರು ಮತದಾನದ ಹಕ್ಕು ಪಡೆಯಲು 150 ವರ್ಷ ಕಾದಿದ್ದಾರೆ. ಸ್ವಿಜರ್‌ಲೆಂಡ್‌ನಂಥ ಶ್ರೀಮಂತ ದೇಶದಲ್ಲಿ ಮಹಿಳೆಯರು ಮತದಾನದ ಹಕ್ಕುಗಳನ್ನು ಪಡೆಯಲು ಶತಮಾನಗಳ ಕಾಲ ಹೋರಾಡಿದ್ದಾರೆ. ಹೀಗಾಗಿ ಭಾರತವು ಸ್ವಾತಂತ್ರ್ಯ ಪಡೆದಾಗ ಬಡ ಹಾಗೂ ಹಿಂದುಳಿದ ರಾಷ್ಟ್ರವಾಗಿದ್ದರೂ, ಜನರಿಗೆ ಹಕ್ಕುಗಳನ್ನು ನೀಡುವ ವಿಷಯದಲ್ಲಿ ಎಷ್ಟು ಉನ್ನತ ಮಟ್ಟದ ಚಿಂತನೆಯನ್ನು ಹೊಂದಿತ್ತು ಎಂಬುದನ್ನು ಗಮನಿಸಬೇಕು.

ಭಾರತದ ಚುನಾವಣಾ ಆಯೋಗವು ಮತದಾನದ ವ್ಯವಸ್ಥೆಯನ್ನು ಅತ್ಯಂತ ಪವಿತ್ರ ವ್ಯವಸ್ಥೆ ಯೆಂಬಂತೆ ಪರಿಗಣಿಸುತ್ತದೆ. ಮೊದಲ ಚುನಾ ವಣೆಯಲ್ಲಿ ಅನಕ್ಷರತೆ ಎಲ್ಲೆಡೆ ದೊಡ್ಡ ಪ್ರಮಾಣ ದಲ್ಲಿ ಇದ್ದುದರಿಂದ ಮತದಾರರಿಗೆ ತಮ್ಮ ಆಯ್ಕೆಯ ರಾಜಕೀಯ ಪಕ್ಷ ಮತ್ತು ಅಭ್ಯರ್ಥಿ ಯನ್ನು ಗುರುತಿಸಲು ಸುಲಭವಾಗಲಿ ಎಂದು ಚಿಹ್ನೆಗಳನ್ನು ನೀಡಲಾಗಿತ್ತು. ಅದು ಇಂದಿಗೂ ಮುಂದುವರಿದಿದೆ. ಚುನಾವಣೆಯಲ್ಲಿ ಮೋಸ ಹಾಗೂ ವಂಚನೆಯನ್ನು ತಡೆಯಲು ಅಳಿಸಲಾ ಗದ ಶಾಯಿಯನ್ನು ಕೈಬೆರಳಿಗೆ ಹಚ್ಚುವ ವ್ಯವಸ್ಥೆ ತರಲಾಗಿದೆ. ಹಲವು ದಿನಗಳವರೆಗೆ ಅದನ್ನು ಅಳಿಸಲು ಸಾಧ್ಯ ವಿಲ್ಲ. ಆ ಶಾಯಿಯನ್ನು ಹೇಗೆ ತಯಾರಿಸುತ್ತಾರೆ ಎಂಬುದು ಇಂದಿಗೂ ರಹಸ್ಯವಾಗಿಯೇ ಇದೆ.

ಭಾರತದ ಚುನಾವಣಾ ವ್ಯವಸ್ಥೆಯನ್ನು ಗಟ್ಟಿಯಾಗಿ ಕಟ್ಟಿ ಬೆಳೆಸಲು ಹಾಗೂ ಕಾಲಕಾಲಕ್ಕೆ ಅದರಲ್ಲಿ ಸುಧಾರಣೆ ತರಲು ಎಲ್ಲಾ ರಾಜಕೀಯ ಪಕ್ಷಗಳೂ ಸಾಕಷ್ಟು ಕೊಡುಗೆ ನೀಡಿವೆ. ಆರಂಭದಲ್ಲಿ ರಾಜಕೀಯ ಪಕ್ಷಗಳು ಸೈದ್ಧಾಂತಿಕ ಚರ್ಚೆಗೆ ಹೆಚ್ಚು ಒತ್ತು ನೀಡುತ್ತಿದ್ದವು. ವ್ಯಕ್ತಿಗೆ ಹೆಚ್ಚು ಮಹತ್ವ ನೀಡುತ್ತಿರಲಿಲ್ಲ. ದುರದೃಷ್ಟವಶಾತ್ ಇಂದು ರಾಜಕೀಯದಲ್ಲಿ ಸೈದ್ಧಾಂತಿಕ ಬದ್ಧತೆ ಕಡಿಮೆಯಾಗಿದೆ. ರಾಜಕೀಯ ಪಕ್ಷಗಳು ಚುನಾವಣೆಯನ್ನು ತಮ್ಮ ಎದುರಾಳಿಯನ್ನು ಹಣಿಯುವ ಅವಕಾಶ ಎಂಬಂತೆ ನೋಡುತ್ತಿವೆ. ಆದರೂ ಭಾರತದ ಮತದಾರರು ಸಾಕಷ್ಟು ಪ್ರೌಢರಾಗಿದ್ದಾರೆ. ರಾಜಕಾರಣಿಗಳ ಆಶಯವನ್ನು ಅವರು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ. ಯಾರಿಂದ ತಮಗೆ ಅನುಕೂಲವಾಗುತ್ತದೆ, ಯಾರಿಂದ ತಮ್ಮ ರಾಜ್ಯ ಅಭಿವೃದ್ಧಿಯಾಗುತ್ತದೆ, ಯಾರನ್ನು ಆರಿಸಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ ಎಂಬುದನ್ನು ಅವರು ಅಳೆದು ತೂಗಿ ಮತದಾನ ಮಾಡುತ್ತಾರೆ. ಈಗ ಮಹಾರಾಷ್ಟ್ರದ ಮತದಾರರು ಮತ್ತೊಮ್ಮೆ ಬಹಳ ಪ್ರಮುಖವಾದ ಪರೀಕ್ಷೆಯ ಫಲಿತಾಂಶ ನೀಡಲು ಸಿದ್ಧರಾಗಿದ್ದಾರೆ. ಮುಂದಿನ ಕೆಲ ದಿನಗಳಲ್ಲಿ ಮಹಾರಾಷ್ಟ್ರದ ಭವಿಷ್ಯ ನಿರ್ಧಾರವಾಗಲಿದೆ. ಎಲ್ಲರೂ ಮನೆ ಯಿಂದ ಹೊರಬಂದು ಮತದಾನ ಮಾಡಿದರೆ ಪ್ರಜಾಪ್ರಭುತ್ವ ಇನ್ನಷ್ಟು ಗಟ್ಟಿಯಾಗುತ್ತದೆ. ಪ್ರಜಾಪ್ರಭುತ್ವದ ಈ ಸುಂದರ ಹಬ್ಬದಲ್ಲಿ ಎಲ್ಲರೂ ಸಂಭ್ರಮದಿಂದ ಪಾಲ್ಗೊಳ್ಳೋಣ.

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇವರೊಂದು ಆಣಿಮುತ್ತು

ಎಸ್.ಷಡಕ್ಷರಿ ಅವರ 76ನೇ ಜನ್ಮದಿನದ ಪ್ರಯುಕ್ತ ವಿಶ್ವವಾಣಿ ಪತ್ರಿಕೆಯು 'ಸ್ಫೂರ್ತಿ ಚಿಲುಮೆ ಷಡಕ್ಷರಿ-76' ಎಂಬ ವಿಶೇಷ ಪುರವಣಿ ಪ್ರಕಟಿಸಿದ್ದು ಅರ್ಥಪೂರ್ಣವೆನಿಸಿತು. ನಾನಾಗ ಉಜಿರೆಯ ಎಸ್‌ಡಿಎಂ ಕಾಲೇಜಿನಲ್ಲಿ ಪ್ರಥಮ ವರ್ಷದ ಡಿ.ಇಡಿ ತರಗತಿಗೆ ಪ್ರವೇಶ ಪಡೆದಿದ್ದೆ. ಅಲ್ಲಿಯ ತನಕ ಊರು-ಮನೆ ಬಿಟ್ಟು ಬೇರೆ ಕಡೆ ಒಬ್ಬನೇ ಇದ್ದವನಲ್ಲ. ಒಂದು ದಿನ ಕಾಲೇಜಿನ ಗ್ರಂಥಾಲಯದಲ್ಲಿ 'ಕ್ಷಣಹೊತ್ತು ಆಣಿಮುತ್ತು' ಪುಸ್ತಕ ಕಣ್ಣಿಗೆ ಬಿತ್ತು. ತೆರೆದು ನೋಡಿದರೆ, ಒಂದೂವರೆ ಪುಟದ ಚಿಕ್ಕ ಚಿಕ್ಕ ಲೇಖನಗಳಿದ್ದವು. ಓದಲು ಶುರುಮಾಡಿದ ಮೇಲೆ ಅದೇನೋ ಸಕಾರಾತ್ಮಕ ಪ್ರೇರಣೆ ಸಿಕ್ಕು, ಒಂಟಿತನದ ಭಾವನೆ ಕಾಣೆಯಾಯಿತು. ಆಗ ಅವರೊಬ್ಬ ಹೋಟೆಲ್ ಉದ್ಯಮಿ ಎಂದು ಗೊತ್ತಿರಲಿಲ್ಲ. ಒಬ್ಬ ವ್ಯಕ್ತಿ ತನ್ನ ವೃತ್ತಿಯ ಜತೆಗೆ ಬರವಣಿಗೆಯನ್ನೂ ಪ್ರವೃತ್ತಿಯಾಗಿಸಿಕೊಂಡು ಹೇಗೆ ಸಾವಿರಾರು ಜನರ ಮನ ಗೆಲ್ಲಲು ಮತ್ತು ಪ್ರೇರಣೆಯಾಗಲು ಸಾಧ್ಯ ಎಂಬುದನ್ನು ಎಸ್.ಷಡಕ್ಷರಿಯವರು ತೋರಿಸಿಕೊಟ್ಟಿದ್ದಾರೆ. ನ.18ರ ಈ ವಿಶೇಷ ಪುರವಣಿಯಿಂದಾಗಿ ಅವರ ಬಗ್ಗೆ ಇನ್ನಷ್ಟು ತಿಳಿಯಲು ಸಾಧ್ಯವಾಯಿತು. ಈ ಅಕ್ಷರ ಮಾಂತ್ರಿಕನಿಗೆ ಹೀಗೆ ಶುಭಾಶಯ ಕೋರಿದ್ದು ಅವರಿಗೆ ನೀಡಿದ ದೊಡ್ಡ ಗೌರವವೇ ಸರಿ.

– **ಸುರೇಂದ್ರ ಪೈ**, ಭಟ್ಕಳ

ಚಂದಕಿಂತ ಚಂದ!

ಬೆಂಗಳೂರಿನ ಜಯನಗರದಲ್ಲಿ ಇತ್ತೀಚೆಗೆ ನಡೆದ 'ಪುಸ್ತಕ ಸಂತೆ' ಅನಿರ್ವಚನೀಯ ರೋಮಾಂಚನ ನೀಡಿತು. 100 ಪುಸ್ತಕ ಮಳಿಗೆಗಳು, ಲಕ್ಷಾಂತರ ವೀಕ್ಷಕರು, ವಿವಿಧ ಮಳಿಗೆಗಳಲ್ಲಿ ಉದರಪೂಜೆಗೆ ಬಗೆಬಗೆಯ ತಿಂಡಿಗಳು, ಚೊಕ್ಕ ವ್ಯವಸ್ಥೆ, ಮಳೆಗೆ ಒದ್ದೆಯಾಗದ ಚಾವಣಿ, 19 ಪುಸ್ತಕಗಳ ಅದ್ದೂರಿ ಬಿಡುಗಡೆ ಸಮಾರಂಭ, ಎಲ್ಲವೂ ಚಂದವೋ ಚಂದ! ಇದರ ರೂವಾರಿ ವೀರ(ಕ)ಪುತ್ರ ಶ್ರೀನಿವಾಸರನ್ನು ಎಷ್ಟು ಹೊಗಳಿದರೂ ಕಡಿಮೆಯೇ. ಕನ್ನಡದ ಮೇಲಿನ ಪ್ರೀತಿಯಿಂದ ಲಕ್ಷಗಟ್ಟಲೆ ಹಣ ವ್ಯಯಿಸಿ, ನಿದ್ರೆಗೆಟ್ಟು ಅವರು ಇಂಥ ಅಭೂತಪೂರ್ವ ಕಾರ್ಯಕ್ರಮ ಆಯೋಜಿಸಿದ ಬಗೆ ಅದ್ಭುತ. ಅವರ ವಿನೀತ, ಹಿತಮಿತ ನಡೆ-ನುಡಿ, ಲೇಖಕರನ್ನು ಸನ್ಮಾನಿಸುವಿಕೆ, ಜತೆಗಿದ್ದು ಅಹರ್ನಿಶಿ ದುಡಿದ ಹುಡುಗರನ್ನು ವೇದಿಕೆಗೆ ಕರೆದು ಗೌರವಿಸುವಿಕೆ, ವಿನೂತನ ಯೋಜನೆಗಳ ಮೂಲಕ ಕನ್ನಡ ಸಾರಸ್ವತ ಲೋಕದ ಏಳಿಗೆ ಬಗೆಗಿನ ಕನವರಿಕೆ ಇವೆಲ್ಲವೂ ಜನಮನವನ್ನು ಗೆದ್ದಿವೆ. ಇದಕ್ಕೆ 3 ದಿನಾವಧಿಯಲ್ಲಿ ಸುಮಾರು 3 ಕೋಟಿ ರು.ಮೌಲ್ಯದ ಪುಸ್ತಕಗಳು ಮಾರಾಟವಾಗಿದ್ದೇ ಸಾಕ್ಷಿ. 315 ಕಿ.ಮೀ. ದೂರದ ನನ್ನೂರಿನಿಂದ ಬಂದು ಸುಸ್ತಾಗಿದ್ದರೂ, ಈ ಅಕ್ಷರಲೋಕದಲ್ಲಿ ಸಂಚರಿಸಿ ಸರಸ್ವತಿಯ ಮಡಿಲಲ್ಲಿ ಮಿಂದಾಗ ದಣಿವೆಲ್ಲ ಮಾಯವಾಗಿ ಮನಸ್ಸು ಗರಿಗೆದರಿ ಹಾರಾಡಿತ್ತು. ಶ್ರೀನಿವಾಸ್ ಅವರು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಇಂಥ ಸಂತೆಗಳನ್ನು ಆಯೋಜಿಸುವಂತಾಗಲಿ.

– **ಕೆ.ಶ್ರೀನಿವಾಸರಾವ್**, ಹರಪನಹಳ್ಳಿ

ಅಪರೂಪದ ಮಾಹಿತಿ

ಕನ್ನಡ ಚಿತ್ರರಂಗ ಕಂಡ ಅಪ್ರತಿಮ ನಿರ್ದೇಶಕರಲ್ಲಿ ಒಬ್ಬರಾದ ಪುಟ್ಟಣ್ಣ ಕಣಗಾಲರ ಚಾತುರ್ಯದ ನಿರ್ದೇಶನಗಳನ್ನು ಒಳಗೊಂಡ 'ರಸದೌತಣ' ಅಂಕಣ (ವಿಶ್ವವಾಣಿ ನ.17) ಖುಷಿ ಕೊಟ್ಟಿತು. ಅವರು ನಿರ್ದೇಶಿಸಿದ ಸಾಕಷ್ಟು ಚಿತ್ರಗಳು ನಮ್ಮ ಸಮಾಜದಲ್ಲಿ ನಡೆಯುವ ಸಾಮಾನ್ಯ ವಿಚಾರಗಳ ಕುರಿತಾಗಿಯೇ ಇದ್ದವು. ಹೀಗಾಗಿ ಅವು ಪ್ರೇಕ್ಷಕರ ಮನಸ್ಸಿಗೆ

ತೀರಾ ಹತ್ತಿರವಾಗಿ ಯಶಸ್ಸು ಕಂಡವು. ಇಂಥ ವಿಶೇಷ ವ್ಯಕ್ತಿ, ತಮ್ಮ ಚಿತ್ರದ ಪ್ರತಿಯೊಂದು ದೃಶ್ಯದಲ್ಲಿ ನೈಜತೆಯನ್ನು ತರಲು ಇಷ್ಟೊಂದು ಗಾಢವಾಗಿ ತೊಡಗಿಸಿಕೊಳ್ಳುತ್ತಿದ್ದರು ಅಂತ ತಿಳಿದು, ಇದು ಬಹಳ ಅಪರೂಪದ ನಡೆ ಎನಿಸಿತು. ಅವರ ಸಾಕಷ್ಟು ಚಿತ್ರಗಳನ್ನು ನೋಡಿ ಆನಂದಿಸಿ, ಅವರಿಗೆ ಸಲಾಂ ಹೊಡೆದವರಲ್ಲಿ ನಾನೂ ಒಬ್ಬ. 'ಸಂತೆಗೆ ಹೋಗುವ ಹೊತ್ತಿಗೆ ಮೂರು ಮೊಳ ಸೀರೆ ನೇಯ್ದು ಮಾರುವ' ಇಂದಿನ ಕೆಲ ವಿಚಿತ್ರ ನಿರ್ದೇಶಕರಿಗೆ ಹೋಲಿಸಿದಾಗ ಪುಟ್ಟಣ್ಣ ನಿಜಕ್ಕೂ ಒಂದು 'ಚಲನಚಿತ್ರ ವಿಶ್ವವಿದ್ಯಾಲಯ' ಇದ್ದಂತೆ. ಅವರ ಗರಡಿ ಯಲ್ಲಿದ್ದ ನಟ-ನಟಿಯರು, ತಂತ್ರಜ್ಞರು ಮುಂದೆ ಸಾಕಷ್ಟು ಬೆಳೆದದ್ದು ನಮಗೆಲ್ಲಾ ಗೊತ್ತೇ ಇದೆ. ಹೀಗಾಗಿ ಭಾವಿ ನಿರ್ದೇ ಶಕರು ಅವರ ಚಿತ್ರಗಳನ್ನು 'ನೋಡಿ ತಿಳಿ, ಮಾಡಿ ಕಲಿ' ಮಾದರಿ ಯಲ್ಲಿ ಅರ್ಥಮಾಡಿಕೊಂಡರೆ ಒಳಿತು ಅಂತ ನನ್ನ ಭಾವನೆ.

– **ಲಕ್ಷ್ಮೀಕಾಂತ ಪಾಟೀಲ**, ಮೈಸೂರು

ಇದು ನ್ಯಾಯವೇ?

ಕಸ ಸಂಗ್ರಹಣೆ ಶುಲ್ಕ ವಸೂಲಿಯ ವಿಷಯದ ಬಗ್ಗೆ ಬಿಬಿಎಂಪಿಯು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ಪತ್ರಿಕೆಗಳಲ್ಲಿ ಕೆಲ ದಿನಗಳ ಹಿಂದೆ ವರದಿಯಾಗಿದೆ. ಆದರೆ, ಈಗಾಗಲೇ ನಾವು ಪ್ರತಿ ವರ್ಷ ಆಸ್ತಿ ತೆರಿಗೆ ಪಾವತಿಸುವಾಗ, ನಮ್ಮ ಮನೆಗೆ 360 ರುಪಾಯಿ ತ್ಯಾಜ್ಯ ನಿರ್ವಹಣಾ ವೆಚ್ಚ ಸೇರಿಸಿ ನೀಡುತ್ತಿದ್ದೇವೆ. ಇದಲ್ಲದೆ ಈಗ ತಿಂಗಳಿಗೆ 200ರಿಂದ 400 ರು.ವರೆಗೆ (ಅಂದರೆ ವರ್ಷಕ್ಕೆ 2,400ರಿಂದ 4,800 ರು. ವರೆಗೆ) ಶುಲ್ಕ ಪಾವತಿಸಬೇಕಾದರೆ ಅದು ಸುಲಿಗೆ ಆಗುತ್ತದೆಯೇ ವಿನಾ ಶುಲ್ಕವಾಗುವುದಿಲ್ಲ. ಬೇರೆ ಎಲ್ಲಾ ಬೆಲೆಗಳು ಜಾಸ್ತಿ ಆಗಿರುವ ಸಂದರ್ಭದಲ್ಲಿ ಈ ಶುಲ್ಕವನ್ನು ಜಾಸ್ತಿ ಮಾಡಿದರೆ ತೆರಿಗೆ ಪಾವತಿಸುವವರಿಗೆ ಬರೆ ಹಾಕಿದಂತೆ ಆಗುತ್ತದೆ. ಸರಕಾರ ಈ ಬಗ್ಗೆ ಆಲೋಚಿಸುವುದು ಒಳ್ಳೆಯದು. ಬಾಕಿ ಇರುವ ಕೋಟ್ಯಂತರ ರುಪಾಯಿ ಆಸ್ತಿ ತೆರಿಗೆಯನ್ನು ವಸೂಲಿ ಮಾಡುವುದು ಬಿಟ್ಟು, ಸರಿಯಾಗಿ ತೆರಿಗೆ ಪಾವತಿಸುತ್ತಿರುವವರ ಮೇಲೆ ಬಿಬಿಎಂಪಿಯು ಇನ್ನಷ್ಟು ಭಾರ ಹೇರುವುದು ನ್ಯಾಯವೇ?

– **ದಾವಣಗೆರೆ ಮುಕುಂದ**, ಬೆಂಗಳೂರು

ಮದುವೆ ಭಾಗ್ಯದ ಭರವಸೆ

ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ರಸ್ತೆ, ನೀರು, ಆಸ್ಪತ್ರೆಗಳು, ರೈಲುಮಾರ್ಗ, ಹೊಸ ರೈಲು, ವಿಮಾನ ನಿಲ್ದಾಣ, ಕಾಲೇಜುಗಳು (ಮುಖ್ಯವಾಗಿ ಮೆಡಿಕಲ್ ಮತ್ತು ಎಂಜಿನಿಯರಿಂಗ್), ಹೊಸ ಉದ್ಯಮಗಳು, ಸಾಲಮನ್ನಾ, ಬೆಲೆಯೇರಿಕೆ ತಡೆ ಮುಂತಾದ ಭರವಸೆಗಳನ್ನು ನೀಡುವುದು ಈಗ ಹಳೆಯ ಸುದ್ದಿ. ಇತ್ತೀಚೆಗೆ ಹಲವು ಉಚಿತ ಗ್ಯಾರಂಟಿಗಳು ಈ ಪಟ್ಟಿಗೆ ಸೇರಿರುವುದು ವಿಶೇಷ. ಆದರೆ ಇವೆಲ್ಲವನ್ನೂ ನೀವಾಳಿಸಿ ತೆಗೆಯುವಂಥ ಭರವಸೆಗೆ ಮಹಾರಾಷ್ಟ್ರದ ರಾಜಕಾರಣಿಯೊಬ್ಬರು ಮುಂದಾಗಿದ್ದಾರೆ. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ತಾವು ಗೆದ್ದರೆ 'ಅವಿವಾಹಿತರಿಗೆ ಮದುವೆ ಭಾಗ್ಯ'ದ ಸೌಲಭ್ಯವನ್ನು ಕಲ್ಪಿಸುವುದಾಗಿ ರಾಷ್ಟ್ರೀಯ ಕಾಂಗ್ರೆಸ್-ಎಸ್.ಪಿ. ಪಕ್ಷದ ಅಭ್ಯರ್ಥಿ ರಾಜಾಸಾಹೇಬ್ ದೇಶಮುಖ್ ಭರವಸೆ ನೀಡಿದ್ದಾರೆ. ಇದರಿಂದಾಗಿ, ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡುವಾಗ ಆಕಾಶವೇ ಮಿತಿ ಎಂಬುದು ಇನ್ನೊಮ್ಮೆ ದೃಢಪಟ್ಟಿದೆ. ಜತೆಗೆ, ಸಮಕಾಲೀನ ಸಮಸ್ಯೆಗಳನ್ನು ನಮ್ಮ ರಾಜಕಾರಣಿಗಳು ಹೇಗೆ ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತಾರೆ ಎಂಬುದಕ್ಕೆ ಇದು ಇನ್ನೊಂದು ನಿದರ್ಶನವಾಗಿದೆ.

–**ರಮಾನಂದ ಶರ್ಮಾ**, ಬೆಂಗಳೂರು

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, 'ಆಡಿ' ಕಾರ್ ತಗೋಳೋಣ ಅಂದ್ರೆ, ನನ್ನವಳು ಬೇಡ 'ಮಾರುತಿ ಸುಜುಕಿ' ಕಾರೇ ಸಾಕು ಅಂತಾಳಲ್ಲ?
- **ನಿಮ್ಮ ಹೆಸರಿನ ಮೇಲೆ ಅಷ್ಟು ಮೋಹ!**

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಐಪಿಎಲ್‌ನಲ್ಲಿ ಹರಾಜಾಗುವ ಕ್ರಿಕೆಟ್ ಆಟಗಾರರಿಗೂ, ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೂ ಏನು ವ್ಯತ್ಯಾಸ?
- **ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಮಾನವೂ ಹರಾಜಾಗಿರುತ್ತದೆ!**

- **ಅನಂತ ಪದ್ಮನಾಭ, (ಇಮೇಲ್ ಮೂಲಕ)**
ಭಟ್ರೇ, ವಿಧಾನ ಸೌಧದಲ್ಲಿರಲು ಕನಿಷ್ಠ ಅರ್ಹತೆ ಏನು?
- **ಅರ್ಹತೆ ಕನಿಷ್ಠವಾಗಿರಬೇಕು!**

- **ಹೇಮಲತಾ ಕಿರಣ್, (ಇಮೇಲ್ ಮೂಲಕ)**
ಭಟ್ರೇ, ಮನುಷ್ಯರಿಗೆ ದೇವರು ಯಾಕೆ ಬಾಲ ಕೊಟ್ಟಿಲ್ಲ?
- **ಅದರ ಅಗತ್ಯವಿಲ್ಲದಿದ್ದರೂ ಜಗಿಯುತ್ತಾರಲ್ಲ, ಹೀಗಾಗಿ ಕೊಟ್ಟಿಲ್ಲ!**

- **ವಾಸುದೇವ ಸುತಾರ, ಬೆಳಗಾವಿ**
ಭಟ್ರೇ, ನಮ್ಮೂರಿನ ದೇವಸ್ಥಾನವೂ ವಕ್ಫ್ ಆಸ್ತಿಯಂತೆ?
- ಚಂದ್ರಲೋಕವೂ ವಕ್ಫ್ ವಶವಾಗದಿದ್ದರೆ ಸಾಕು!

- **ಸಾಮಗ ದತ್ತಾತ್ರಿ, ಬೆಂಗಳೂರು**
ಭಟ್ರೇ, ಜಮೀರ್ ಅಹಮದ್ ಅವರ ಕನ್ನಡ ದೇವರಿಗೆ ಪ್ರೀತಿಯಂತೆ?
- **ಮಧು ಬಂಗಾರಪ್ಪನವರ ಕನ್ನಡ ಕೇಳಿದ್ದರೆ ಏನು ಹೇಳ್ತಿದ್ನೋ?!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ರೈಲ್ವೆ ಸಚಿವನಾದ ಬಳಿಕ ನಾನು ಒಂದೇ ಸುಳ್ಳನ್ನು ಹೇಳಿಲ್ಲ ಅಂತ ಸಚಿವ ಸೋಮಣ್ಣ ಹೇಳಿದ್ದಾರಲ್ಲ?
- **ನಿಜ, ಅವರು ಬರೀ ಒಂದು ಸುಳ್ಳನ್ನು ಹೇಳಿಲ್ಲ!**

- **ಸಿದ್ದವನಳ್ಳಿ ಗೋಪಿ, ಹಾಸನ**
ಭಟ್ರೇ, ಯಾವತ್ತೂ ಹಿಂದಿನವರೇ ಒಳ್ಳೆಯವರು ಅಂತ ಅನಿಸುವುದಲ್ಲ?
- **ಈ ಮಾತು ನಿಮ್ಮೂರಿನ ಲೋಕಸಭಾ ಸದಸ್ಯರಿಗೂ ಅನ್ವಯಿಸುವುದಾ?!**

- **ಅನಿಲ್ ಭೋಸಗಿ, ಬೆಂಗಳೂರು**
ಭಟ್ರೇ, ಆಟೋ ಚಾಲಕರಿಲ್ಲದೇ ಬೆಂಗಳೂರು ಇಲ್ವಂತೆ, ಹಾಗಂತ ರಾಮಲಿಂಗಾರೆಡ್ಡಿ ಹೇಳಿದ್ದಾರಲ್ಲಾ?
- **ಕನ್ನಡ ಜೀವಂತವಾಗಿರೋದು ಅವರಲ್ಲಿ ಅಲ್ವೇ ?!**

- **ಶ್ರೀಧರ ಮೊಕಾಶಿ, ಧಾರವಾಡ**
ಸರ್, ಭಟ್ರು ಬಾ ಅಂದ್ರೆ, ಹೋಗಬೇಡ ಅಂತಾಳಲ್ಲ?
- **'ಕುಡಿಯೋಣು ಬಾರಾ' ಪುಸ್ತಕದ ಟೈಟಲ್ ನೋಡಿ ಈ ನಿರ್ಧಾರಕ್ಕೆ ಬರಬಾರದಿತ್ತು ಅಂತ ಹೇಳಬೇಕಿತ್ತು!**

ಸನ್ನದ್ಧವಾಗಿರುವುದು ನಮ್ಮ ಕೈಲಿದೆ!

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಅಪಾಯವು ಬದುಕಿನ ಅವಿಭಾಜ್ಯ ಅಂಗ ಎನ್ನುವುದನ್ನು ನಾವು ಅರಿತುಕೊಳ್ಳಬೇಕು. ಅಪಾಯವಿಲ್ಲದ ಯಾವುದೇ ಸಮಯ, ಕೆಲಸ ಈ ಭೂಮಿಯ ಮೇಲಿಲ್ಲ. ಭದ್ರತೆ, ಸ್ಥಿರತೆ ಎನ್ನುವುದು ಮಾನಸಿಕ ಸ್ಥಿತಿಗಳು, ಅದನ್ನು ನಾವು ಕಂಡುಕೊಳ್ಳಬೇಕು. ಬಾಹ್ಯ ಕಾರಣಗಳು ಅವನ್ನು ಪ್ರೋತ್ಸಾಹಿಸುವ ಮಟ್ಟಕ್ಕೆ ಬಿಡಬಾರದು. ಅಪಾಯವನ್ನು ಒಪ್ಪಿಕೊಂಡು ಅಪ್ಪಿಕೊಂಡು ಮುಂದುವರಿಯುವುದರಲ್ಲಿ ಜಾಣತನವಿದೆ.

ನಾವು ಮನೆ ಬಿಟ್ಟ ತಕ್ಷಣ, ಮನೆಯಲ್ಲಿ ಕುಳಿತಿದ್ದಾಗ, ಕೆಲಸದ ಜಾಗದಲ್ಲಿ, ಪ್ರಯಾಣದ ವೇಳೆ ಹೀಗೆ ಎಲ್ಲಾ ಕಡೆ ಎಲ್ಲಾ ಸಮಯದಲ್ಲೂ ಅಪಾಯ ಇದ್ದೇ ಇರುತ್ತದೆ. ಅಪಾಯ ಎಂದು ಸುಮ್ಮನೆ ಕೂರುವುದಕ್ಕಿಂತ ದೊಡ್ಡ ಅಪಾಯ ಬೇರೇನಿದ್ದೀತು ಅಲ್ವಾ? ನೀವು ನಮ್ಮ ದೇಶದ ವ್ಯಾಪಾರಿ ಸಮುದಾಯವನ್ನು ಗಮನಿಸಿ ನೋಡಿ. ಸಿಂಧಿಗಳು, ಮಾರ್ವಾಡಿಗಳು, ಗುಜರಾತಿಗಳು ತಮ್ಮ ನೆಲವನ್ನು ಬಿಟ್ಟು ಸಾವಿರಾರು ಮೈಲಿ ಪ್ರಯಾಣ ಮಾಡುತ್ತಾರೆ. ವಲಸೆ ಹೋಗುತ್ತಾರೆ. ಬೇರೆಡೆ ನೆಲೆಸುತ್ತಾರೆ. ಅಲ್ಲಿನ ಭಾಷೆ , ರೀತಿ-ರಿವಾಜು ಕಲಿಯುತ್ತಾರೆ, ತಮ್ಮದನ್ನೂ ಉಳಿಸಿಕೊಂಡು ನಡೆಯುತ್ತಾರೆ. ದೂರದ ಅಮೆರಿಕದಲ್ಲಿ ಹೆಚ್ಚು ಓದಿರದ ಗುಜರಾತಿಗಳಿಗೆ ಉತ್ತಮ ಕೆಲಸ ಸಿಕ್ಕುತ್ತಿರಲಿಲ್ಲ, ಹೀಗಾಗಿ ಅವರು ಹೋಟೆಲ್‌ನಲ್ಲಿ ಕೆಲಸ ಮಾಡಲು ಶುರು ಮಾಡಿದರು. ಇಂದಿಗೆ ಹೋಟೆಲ್ ಬಿಸಿನೆಸ್‌ನಲ್ಲಿ ಅವರದ್ದೇ ಕಾರುಬಾರು. ವಜ್ರದ ವ್ಯಾಪಾರದಲ್ಲಿ ಕೂಡ ಇದೇ ಕಥೆ, ಸಣ್ಣ ಪುಟ್ಟ ಪುಡಿಯನ್ನು ಕೊಳ್ಳಲು ಶುರುಮಾಡಿದ ಗುಜರಾತಿಗಳು ಇಂದು ಬೆಲ್ಜಿಯಂ ದೇಶವನ್ನು ಹಿಂದಿಕ್ಕಿ ವಜ್ರದ ವ್ಯಾಪಾರದಲ್ಲಿ ಮೊದಲ ಸ್ಥಾನ ಪಡೆದುಕೊಂಡಿದ್ದಾರೆ. ಓಮನ್ ದೇಶದಲ್ಲಿ 'ಮೊದಲ ಹಿಂದೂ ಶೇಕ್' ಎಂದು ಹೆಸರು ಪಡೆದುಕೊಂಡ ರಾಮ್ಜೀ ಕಥೆಯೂ ರೋಚಕವಾಗಿದೆ.

ಇಂದು ನಾವು ಯಶಸ್ವಿ ಎಂದು ಯಾರನ್ನು ನೋಡಿದರೂ ಅವರೆಲ್ಲಾ ಅಪಾಯವನ್ನು ಒಪ್ಪಿಕೊಂಡವರೇ; ಅಪಾಯದ ಬಗ್ಗೆ ಅವರ ಜಡ್ಜ್‌ಮೆಂಟ್ ಸರಿಯಾಗಿತ್ತು ಅಷ್ಟೇ. ಉಳಿದವರ ಜಡ್ಜ್‌ಮೆಂಟ್‌ನಲ್ಲಿ ವ್ಯತ್ಯಾಸವಾದ ಕಾರಣ ಅವರು ಯಶಸ್ವಿ ಅಥವಾ ಶ್ರೀಮಂತ ಎನ್ನಿಸಿಕೊಳ್ಳುವುದರಲ್ಲಿ ಎಡವಿರುತ್ತಾರೆ. ಮುಖ್ಯವಾಗಿ ನಾವು ಅಪಾಯದ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕು. ಎಲ್ಲಕ್ಕೂ ಮುಖ್ಯವಾಗಿ ನಾವು ಯಾವುದೇ ವೆಂಚರ್ ತೆಗೆದುಕೊಂಡರೂ ಅದರಲ್ಲಿ ಒಂದಷ್ಟು ಅಪಾಯಗಳು ಇದ್ದೇ ಇರುತ್ತವೆ. ಅದ್ಯಾವುದು ಎನ್ನುವುದನ್ನು ತಿಳಿದುಕೊಳ್ಳುವುದು ಮುಖ್ಯ.

ಅಪಾಯ ಎಂದರೇನು ಗೊತ್ತಾ? ನಾವು ಮಾಡುವ ಯಾವುದೇ ಕೆಲಸದ ಫಲಿತಾಂಶ ಅಂದರೆ 'ಔಟ್‌ಕಮ್' ಮೇಲೆ ಯಾವುದೇ ಹಿಡಿತ ಇಲ್ಲದಿರುವುದು. ಲಾಭ ಅಥವಾ ನಷ್ಟ ಯಾವುದು ಉತ್ಪತ್ತಿಯಾಗುತ್ತದೆ ಎನ್ನುವುದು ಗೊತ್ತಾಗುವುದಿಲ್ಲ. ಈಗ ಹೇಳಿ ನಾವೆಲ್ಲರೂ ಜೀವಿಸುತ್ತಿರುವುದೇ ಅಪಾಯದಲ್ಲಿ ಅಲ್ವಾ? ಹೀಗಾಗಿ ಅಪಾಯಕ್ಕೆ ಹೆದರುವ ಅವಶ್ಯಕತೆಯಿಲ್ಲ. ಅದರ ಬಗ್ಗೆ ಹೆಚ್ಚು ಮಾಹಿತಿಯನ್ನು ತಿಳಿದುಕೊಂಡು ಸನ್ನದ್ಧರಾಗಬೇಕು.

- **ಬೇಸಿಕ್ ರಿಸ್ಕ್:** ನಾವ್ಯಾರೇ ಆಗಿರಲಿ ಮೂಲಭೂತ ಅಪಾಯ ಅಥವಾ ಬೇಸಿಕ್ ರಿಸ್ಕ್ ಇದ್ದೇ ಇರುತ್ತದೆ. ಇದರಿಂದ ದೂರವಾಗಲು ಸಾಧ್ಯವಿಲ್ಲ. ಉದಾಹರಣೆಗೆ ಅನಿರೀಕ್ಷಿತ ಅಪಘಾತಗಳು, ಸಾವು, ನೈಸರ್ಗಿಕ ವಿಕೋಪಗಳು. ನಾವು ಯಾವುದೇ ರೀತಿಯ ರಿಸ್ಕ್ ತೆಗೆದುಕೊಳ್ಳದೆ ಸುಮ್ಮನೆ ಕುಳಿತಿದ್ದರೂ ತಲೆಯ ಮೇಲೆ ಸುತ್ತುವ ಫ್ಯಾನ್ ಮುರಿದುಬೀಳುವ ಸಾಧ್ಯತೆಯನ್ನು ಅಲ್ಲಗಳೆಯಲು ಬರುವುದಿಲ್ಲ. ವ್ಯಾಪಾರದಲ್ಲಿರಲಿ, ವೇತನಕ್ಕೆ ದುಡಿಯುವ ಕೆಲಸಗಾರನಾಗಿರಲಿ, ಮಗುವಾಗಿರಲಿ, ಹೆಣ್ಣಾಗಿರಲಿ ಅಥವಾ ಗಂಡಾಗಿರಲಿ, ಕೆಲವೊಂದು ಅಪಾಯಗಳು ಎಲ್ಲರಿಗೂ ಅನ್ವಯವಾಗುತ್ತವೆ.
- **ಫೈನಾನ್ಷಿಯಲ್ ರಿಸ್ಕ್:** ಇದರಲ್ಲಿ ಎರಡು ವಿಧ- ಸಿಸ್ಟಮ್ಯಾಟಿಕ್ ಮತ್ತು ಅನ್-ಸಿಸ್ಟಮ್ಯಾಟಿಕ್. ಹಣಕಾಸು ಅಪಾಯ ಅಥವಾ ಫೈನಾನ್ಷಿಯಲ್ ರಿಸ್ಕ್ ಎನ್ನುವುದು ಕೂಡ ಜೀವನದ ಭಾಗ. ಅಪಾಯ ಬೇಡ ಎಂದು ಬ್ಯಾಂಕಿನಲ್ಲಿಟ್ಟ ಹಣಕ್ಕೂ ಇಂದು ಗ್ಯಾರಂಟಿಯಿಲ್ಲ. ಬ್ಯಾಂಕ್ ಮುಳುಗಿದರೆ ನಮಗೆ ಸಿಗುವುದು ಐದು ಲಕ್ಷದ ವಿಮೆ ಮಾತ್ರ. ಅಲ್ಲಿಗೆ ನಾವಿಟ್ಟಿರುವ ಹೆಚ್ಚುವರಿ ಹಣ ಅಪಾಯದಲ್ಲಿದೆ ಎಂದೇ ಅರ್ಥ. ಸಿಸ್ಟಮ್ಯಾಟಿಕ್ ರಿಸ್ಕ್ ಎಂದರೆ ಸಮಾಜದಲ್ಲಿ ಒಟ್ಟಾರೆ ಕುಸಿತ ಅಥವಾ ಬಿಕ್ಕಟ್ಟು ಉಂಟಾಗುವುದು ಎಂದರ್ಥ. ಅನ್-ಸಿಸ್ಟಮ್ಯಾಟಿಕ್ ರಿಸ್ಕ್ ಎಂದರೆ ಸಮಾಜದ ಇತರ ವಲಯಗಳಲ್ಲಿ ಯಾವುದೇ ತೊಂದರೆಯಿಲ್ಲದೆ ಕಾರ್ಯನಿರ್ವಹಣೆ ಆಗುತ್ತಿದ್ದು ನಾವು ಹೂಡಿಕೆ ಮಾಡಿದ ವಲಯದಲ್ಲಿ ಮಾತ್ರ ಅಪಾಯ ಎದುರಾಗಿರುತ್ತದೆ ಎಂದರ್ಥ. ಯಾವುದೇ ವ್ಯಾಪಾರ ಶುರುಮಾಡಿದರೂ ಈ ರಿಸ್ಕ್ ಇದ್ದೇ ಇರುತ್ತದೆ. ರಿಸ್ಕ್ ಅನಾಲಿಸಿಸ್ ಬಹಳ ಮುಖ್ಯವಾಗುತ್ತದೆ. ನಮ್ಮ ಬಳಿ ಎಷ್ಟು ಹಣವಿದೆ, ಎಷ್ಟು ಅಪಾಯವನ್ನು ಎದುರಿಸುವ ಕ್ಷಮತೆಯಿದೆ ಎನ್ನುವುದು ಒಂದು ಹಂತವಾದರೆ, ಎಲ್ಲಿಯವರೆಗೆ ನಾವು ಅಪಾಯವನ್ನು ಸ್ವೀಕರಿಸಲು ಸಿದ್ಧ ಎನ್ನುವುದು ಇನ್ನೊಂದು ಹಂತವಾಗುತ್ತದೆ. ಅಪಾಯ ತಡೆದುಕೊಳ್ಳುವ ಶಕ್ತಿ ಬೇರೆ ಮನಸ್ಥಿತಿ ಬೇರೆ, ಇದನ್ನು ಅರ್ಥ ಮಾಡಿಕೊಳ್ಳಬೇಕು.
- **ಬಿಸಿನೆಸ್ ರಿಸ್ಕ್:** ಹಣಕಾಸು ಅಥವಾ ಫೈನಾನ್ಷಿಯಲ್ ರಿಸ್ಕ್ ನಂತರದ ದೊಡ್ಡ ರಿಸ್ಕ್ ಬಿಸಿನೆಸ್ ರಿಸ್ಕ್. ವ್ಯಾಪಾರ ಎಂದರೆ ಕೇವಲ ಹಣಕಾಸು ಹೊಂದಿಸುವುದು ಮಾತ್ರವಲ್ಲ, ಅದರ ಜತೆಗೆ ವ್ಯಾಪಾರವನ್ನು ನಡೆಸಲು ಹಲವು ಹತ್ತು ಆಯಾಮಗಳಲ್ಲಿ ಪರಿಣತಿ ಬೇಕಾಗುತ್ತದೆ. ಹೋಟೆಲ್ ಉದ್ಯಮವನ್ನು ಉದಾಹರಣೆಯನ್ನಾಗಿ ತೆಗೆದುಕೊಳ್ಳಿ. ಬಂಡವಾಳ ಹಾಕಿ ಹೋಟೆಲ್ ತೆರೆಯುವುದು ಬಹಳ ಸುಲಭದ ಕೆಲಸ. ಆದರೆ ಅದನ್ನು ಲಾಭದಾಯಕವಾಗಿ ನಡೆಸುವುದು ಕಷ್ಟದ ಕೆಲಸ. ಏಕೆಂದರೆ ಮೊದಲಿಗೆ ಇಲ್ಲಿ ಬೇಕಾಗುವ ಕೆಲಸಗಾರರ ಕೊರತೆ, ಕೆಲಸಗಾರರು ಸಿಕ್ಕರೂ ಅವರಲ್ಲಿ ಕ್ಷಮತೆ ಇರಬೇಕಾದದ್ದು, ದಿನದಿಂದ ದಿನಕ್ಕೆ, ವಾರದಿಂದ ವಾರಕ್ಕೆ, ವರ್ಷಾನುಗಟ್ಟಲೆ ಅದೇ ಶುಚಿ-ರುಚಿ ಕಾಯ್ದುಕೊಳ್ಳುವುದು ಸವಾಲಿನ ಕೆಲಸ. ಇದೇ ರೀತಿ ಯಾವುದೇ ವ್ಯಾಪಾರವಾದರೂ ಅದರಲ್ಲಿ ಒಂದಷ್ಟು ಸವಾಲುಗಳು ನಮ್ಮ ಮುಂದೆ ಬಂದು ನಿಲ್ಲುತ್ತವೆ. ಅವುಗಳನ್ನು ಎದುರಿಸಿ ಗೆದ್ದವನು ಮಾತ್ರ ಶ್ರೀಮಂತನಾಗಲು ಸಾಧ್ಯ.
- **ಕ್ರೆಡಿಟ್ ರಿಸ್ಕ್:** ವ್ಯಾಪಾರ ಅಂದಮೇಲೆ ಅದಕ್ಕೆ ಬಂಡವಾಳ ಬೇಕು. ವ್ಯಾಪಾರ ಮಾತ್ರವೇ ಅಲ್ಲ, ಇಂದಿನ ಜಗತ್ತಿನಲ್ಲಿ ಎಲ್ಲದಕ್ಕೂ ಹಣ ಬೇಕು. ಸ್ವಂತ ಹಣವಿದ್ದರೆ ಪರವಾಗಿಲ್ಲ, ಇಲ್ಲದಿದ್ದ ಪಕ್ಷದಲ್ಲಿ ಬಂಡವಾಳವನ್ನು ಹೂಡಿಕೆದಾರರಿಂದ ತಂದಿರುತ್ತೇವೆ. ಅವರಿಗೆ ತಿಂಗಳಿಗೆ ಅಥವಾ ವರ್ಷಕ್ಕೆ ಹಣವನ್ನು ಬಡ್ಡಿಯ ರೂಪದಲ್ಲಿ ನೀಡಬೇಕಾಗುತ್ತದೆ. ಬ್ಯಾಂಕ್ ಮೂಲಕ ತಂದ ಹಣಕ್ಕೂ ಬಡ್ಡಿ ನೀಡಬೇಕಾಗುತ್ತದೆ. ಈ ರೀತಿ ಬಡ್ಡಿ ಮತ್ತು ಅಸಲು ತೀರಿಸುವಲ್ಲಿ ವಿಫಲರಾಗುವ ಅಪಾಯವನ್ನು ಕ್ರೆಡಿಟ್ ರಿಸ್ಕ್ ಎನ್ನಲಾಗುತ್ತದೆ. ಇದು ಕೂಡ ಸಾಮಾನ್ಯ. ಹೂಡಿಕೆಗೆ ಮುನ್ನ ಇದನ್ನು ಕೂಡ ಅವಲೋಕಿಸುವ ಅವಶ್ಯಕತೆಯಿದೆ.
- **ದೇಶಗಳಲ್ಲಿ ಆಗುವ ಅಪಾಯ:** ಇಸ್ರೇಲ್-ಗಾಜಾ ಯುದ್ಧವಿರಬಹುದು ಅಥವಾ ಉಕ್ರೇನ್-ರಷ್ಯಾ ಯುದ್ಧವಿರಬಹುದು, ಆ ದೇಶಗಳಲ್ಲಿ ಹೂಡಿಕೆ ಮಾಡಿರುವ ಸಂಸ್ಥೆಗಳ ಗತಿಯೇನು? ವರ್ಷಾನುಗಟ್ಟಲೆ ಗಳಿಸಿದ್ದ ಆದಾಯವೆಲ್ಲಾ ಒಂದೆರಡು ತಿಂಗಳಲ್ಲಿ ಕರಗಿಹೋಗುತ್ತದೆ. ದೇಶದ



ಆಂತರಿಕ ಬದಲಾವಣೆಗಳು ಕೂಡ ಈ ನಿಟ್ಟಿನಲ್ಲಿ ಅಪಾಯವನ್ನು ತಂದೊಡ್ಡುವ ಸಾಧ್ಯತೆಗಳು ಹೇರಳವಾಗಿರುತ್ತವೆ. ಯುದ್ಧ ಎನ್ನುವುದು ಕೊನೆಯ ಪರಿಣಾಮ. ಅದನ್ನು ಮೀರಿ ಕೂಡ ಸರಕಾರಗಳು ಮಾಡುವ ಸಣ್ಣಪುಟ್ಟ ಬದಲಾವಣೆಗಳು ದೊಡ್ಡ ಮಟ್ಟದ ಅಪಾಯವನ್ನು ತರಬಲ್ಲವು. ಇದರ ಬಗ್ಗೆ ಮಾಹಿತಿ ಇರಬೇಕು.
- **ವಿದೇಶಿ ವಿನಿಮಯದಲ್ಲಿನ ಬದಲಾವಣೆ ಅಪಾಯ:** ಇಂಪೋರ್ಟ್-ಎಕ್ಸ್‌ಪೋರ್ಟ್ ವ್ಯಾಪಾರದಲ್ಲಿ ತೊಡಗಿರುವ ಸಂಸ್ಥೆಗಳ ಮೇಲೆ, ವಿನಿಮಯ ದರದಲ್ಲಿ ಆಗುವ ಬದಲಾವಣೆ ನೇರವಾಗಿ ಪರಿಣಾಮವನ್ನು ಬೀರುತ್ತದೆ. ಉಳಿದಂತೆ ಕೂಡ ಪರೋಕ್ಷವಾಗಿ ಪರಿಣಾಮಗಳು ಇದ್ದೇ ಇರುತ್ತವೆ.
- **ಇಂಟರೆಸ್ಟ್ ರೇಟ್ ರಿಸ್ಕ್:** ಬಡ್ಡಿ ದರದಲ್ಲಿ ಆಗುವ ಬದಲಾವಣೆಗಳು ಸಂಸ್ಥೆಯ ಅಳಿವು-ಉಳಿವನ್ನು ನಿರ್ಧರಿಸುವ ಮಟ್ಟದಲ್ಲಿರುತ್ತವೆ. 'ಡೆಟ್' ಚೀಪ್ ಇದ್ದಾಗ ತೆಗೆದುಕೊಂಡ ನಿರ್ಧಾರಗಳು 'ಡೆಟ್ ರೇಟ್' ಏರುತ್ತ ಹೋದಂತೆ ಮುಳುವಾಗಬಲ್ಲವು. ಹೀಗಾಗಿ ಬಡ್ಡಿ ದರ ಕಡಿಮೆಯಿದೆ ಎಂದು ಆತುರದಲ್ಲಿ ಕೆಲಸಕ್ಕೆ ಕೈ ಹಾಕುವ ಮೊದಲು ಮುಂದಾಗುವ ಬದಲಾವಣೆಗಳನ್ನು ಕೂಡ ಗಮನಿಸಬೇಕು.
- **ಪೊಲಿಟಿಕಲ್ ರಿಸ್ಕ್:** ರಾಜಕೀಯ ಸ್ಥಿರತೆಯು ದೇಶದ ಆಮೂಲಾಗ್ರ ಬದಲಾವಣೆಗೆ, ಅಭಿವೃದ್ಧಿಗೆ ಕಾರಣವಾಗುತ್ತದೆ. ಯಾವ ದೇಶದಲ್ಲಿ ರಾಜಕೀಯ ಸ್ಥಿರತೆ ಇರುವುದಿಲ್ಲವೋ ಅಲ್ಲೆಲ್ಲಾ ಅರಾಜಕತೆ ತಾಂಡವವಾಡುತ್ತದೆ. ಉದಾಹರಣೆಗೆ ದೂರ ಹೋಗುವುದು ಬೇಡ, ಪಕ್ಕದ ಪಾಕಿಸ್ತಾನವನ್ನು ಒಮ್ಮೆ ನೋಡಿ ಸಾಕು. ಆ ದೇಶ ದಿವಾಳಿಯ ಅಂಚಿಗೆ ಬಂದು ನಿಂತಿರುವುದು ರಾಜಕೀಯ ಅಸ್ಥಿರತೆಯ ಕಾರಣದಿಂದ. ಎಲ್ಲಿ ವ್ಯಾಪಾರ ಮಾಡುತ್ತಿದ್ದೇವೆ ಎನ್ನುವುದರ ಆಧಾರದ ಮೇಲೆ ಮತ್ತು ಅಲ್ಲಿನ ರಾಜಕೀಯ ಪರಿಸ್ಥಿಗಳ ಮೇಲೆ ನಿಗಾ ಇರಬೇಕು.
- **ಲಿಕ್ವಿಡಿಟಿ ರಿಸ್ಕ್:** ವ್ಯಾಪಾರ ಅಂದ ಮೇಲೆ ಡಿಮಾಂಡ್ ಹೆಚ್ಚಾದ ಸಮಯದಲ್ಲಿ ಅಥವಾ ಹೆಚ್ಚಾಗುತ್ತದೆ ಎನ್ನುವ ಆಶಾಭಾವದಲ್ಲಿ ಹೆಚ್ಚು ಪದಾರ್ಥವನ್ನು ತಯಾರಿಸುವುದು ಸಹಜ. ಅನೇಕ ಕಾರಣಗಳಿಂದ ಹೆಚ್ಚಿನ ಪದಾರ್ಥ ವ್ಯಾಪಾರವಾಗದೆ ಉಳಿದರೆ ಅದು ಇನ್ವೆಂಟರಿ, ಸ್ಟಾಕ್ ಹೆಚ್ಚಾಗಲು ಕಾರಣವಾಗುತ್ತದೆ. ಹೀಗಾಗಿ ಲಾಭವೆಲ್ಲ, ಇನ್ವೆಂಟರಿಯಲ್ಲಿ ಮತ್ತು 'ಡೆಟಾರ್ಸ್' ರೂಪದಲ್ಲಿ ಕುಳಿತಿರುತ್ತದೆ. ಪರಿಣಾಮವಾಗಿ, ಅವಶ್ಯಕವಾಗಿ ಬೇಕಾಗುವ ಖರ್ಚುಗಳಿಗೆ ಹಣ ಇರುವುದಿಲ್ಲ. ಇದಕ್ಕೆ ಲಿಕ್ವಿಡಿಟಿ ರಿಸ್ಕ್ ಎನ್ನಲಾಗುತ್ತದೆ. ಇದು ಕೂಡ ಸಂಸ್ಥೆಯ ಅಳಿವು-ಉಳಿವುಗಳನ್ನು ನಿರ್ಧರಿಸುತ್ತದೆ.
- **ಮಾಡೆಲ್ ರಿಸ್ಕ್:** ನಮ್ಮ ವ್ಯಾಪಾರದ ಮಾದರಿಯಲ್ಲಿ ಅಪಾಯ ಎದುರಾಗುವ ಸಾಧ್ಯತೆ ಕೂಡ ಇರುತ್ತದೆ. ಉದಾಹರಣೆಗೆ ರಾಮೇಶ್ವರಂ ಎನ್ನುವ ಹೋಟೆಲ್ ನೋಡಿ. ಅದು ಪ್ರಸಿದ್ಧವಾದ ಮರುಗಳಿಗೆ ಅದೇ ಮಾಡೆಲ್ ಬಳಸಿಕೊಂಡು ಹತ್ತಾರು ಹೋಟೆಲ್‌ಗಳು ತಲೆ ಎತ್ತಿವೆ. ಇಂಥ ಸಮಯದಲ್ಲಿ ವ್ಯಾಪಾರದಲ್ಲಿ ಪೈಪೋಟಿ ಹೆಚ್ಚಾಗುತ್ತದೆ. ನಿಧಾನವಾಗಿ ಹಿಂದಿನ ಪ್ರಸಿದ್ಧಿ ಕಡಿಮೆಯಾಗುತ್ತ ಹೋಗುತ್ತದೆ. ಸೋಶಿಯಲ್ ಮೀಡಿಯಾದಲ್ಲಿ ಈಗಾಗಲೇ 'ಇದೊಂದು ಓವರ್ ರೇಟೆಡ್ ಹೋಟೆಲ್' ಎನ್ನಲು ಶುರುಮಾಡಿದ್ದಾರೆ. ರಾಮೇಶ್ವರಂ ಒಂದು ಉದಾಹರಣೆ ಮಾತ್ರ. ಭಾರತದಲ್ಲಿ ನಕಲು ಮಾಡುವವರ ಸಂಖ್ಯೆ ಬಹಳ ಹೆಚ್ಚು. ಅಲ್ಲದೆ ಒರಿಜಿನಲ್ ಅನ್ನು ಮೀರಿಸುವ ಮಟ್ಟಿಗೆ ಇಂಪ್ರೊವೈಸ್ ಮಾಡಿಕೊಂಡು ನಕಲು ಮಾಡುವವರ ಸಂಖ್ಯೆ ಕೂಡ ಹೆಚ್ಚಾಗಿದೆ. ನಮ್ಮ ಮಾಡೆಲ್ ಅನ್ನು ಮತ್ತೊಬ್ಬರು ನಕಲು ಮಾಡಲಾಗದಂತೆ ಕೊನೇಪಕ್ಷ ಒಂದಷ್ಟು ವಿಶಿಷ್ಟ ಅಂಶಗಳಾದರೂ ಇರಬೇಕು.
- **ರೆಪ್ಯೂಟೇಷನ್ ರಿಸ್ಕ್:** ಭಾರತದಂಥ ಭಾವುಕ ದೇಶದಲ್ಲಿ ಇದು ಎಲ್ಲಕ್ಕಿಂತ ದೊಡ್ಡ ಅಪಾಯ. ಗೆದ್ದಾಗ ಎಲ್ಲರೂ ನಮ್ಮವರೇ, ಸೋತಾಗ ನೀನ್ಯಾರು ಎನ್ನುವುದು ಇಲ್ಲಿನ ಸಂಪ್ರದಾಯ. ಹೀಗಾಗಿ ಸೋಲಿನ ಭಯ, ಜನ ಏನೆಂದುಕೊಂಡಾರು? ಎನ್ನುವ ಭಯ, ಅದರಿಂದ ಉಂಟಾಗುವ ಅಪಾಯಗಳು ಕೂಡ ಸಿರಿವಂತಿಕೆಯ ದಾರಿಯಲ್ಲಿ ದೊಡ್ಡ ಅಡಚಣೆ.
- **ಇನ್ನಿತರೆ ಅಪಾಯಗಳು:** ಮೊದಲೇ ಹೇಳಿದಂತೆ ಅಪಾಯ ಯಾವ ರೂಪದಲ್ಲಿ, ಯಾವ ಸಮಯದಲ್ಲಿ ಬರುತ್ತದೆ ಹೇಳಲು ಬಾರದು. ಅಗ್ನಿ ಅವಘಡ, ಅತ್ಯುತ್ತಮ ನೌಕರನ ಸಾವು ಅಥವಾ ಅಪಘಾತ, ಹೊಸ ಬದಲಾವಣೆಗೆ ಸಿದ್ಧರಿಲ್ಲದ ಸಿಬ್ಬಂದಿ ಹೀಗೆ ಏನು ಬೇಕಾದರೂ ಆಗಬಹುದು. ಈ ಪಟ್ಟಿ ಅಪೂರ್ಣ. ಯಾವುದು ಬೇಕಾದರೂ ಈ ಪಟ್ಟಿಯನ್ನು ಸೇರಬಹುದು.

ಮೇಲೆ ಹೇಳಿದ ಅಪಾಯಗಳಲ್ಲಿ ಎಲ್ಲವೂ ನಮಗೆ ಅನ್ವಯವಾಗಬೇಕು ಎಂದಿಲ್ಲ. ನಮ್ಮ ನಮ್ಮ ಸನ್ನಿವೇಶಕ್ಕೆ ತಕ್ಕಂತೆ ಇದು ನಮ್ಮದಾಗುತ್ತಾ ಹೋಗುತ್ತದೆ. ಆದರೆ ಇವುಗಳ ಜ್ಞಾನ ನಮಗಿರಬೇಕು. 'ನನಗೇನಾಗುತ್ತದೆ? ಇದು ನನಗೆ ತಟ್ಟುವುದಿಲ್ಲ' ಎನ್ನುವ ಕಾಲಘಟ್ಟದಲ್ಲಿ ನಾವಿಲ್ಲ. ಇಲ್ಲಿ ಯಾವಾಗ ಏನು ಬೇಕಾದರೂ ಆಗಬಹುದು. ಸನ್ನದ್ಧವಾಗಿರುವುದೊಂದೇ ನಮ್ಮ ಕೈಲಿರುವುದು. ಉಳಿದೆಲ್ಲಾ ಅಂಶಗಳು ನಮ್ಮ ನಿಯಂತ್ರಣದಲ್ಲಿ ಇಲ್ಲ.

ಒಡಲಾಳ

ಸಂದೀಪ್‌ಶರ್ಮಾ ಮೂಟೇರಿ

ಅಭಿವೃದ್ಧಿ ನೆಪದಲ್ಲಿ ಅಪಸವ್ಯ!

ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಅಭಿವೃದ್ಧಿಯ ನೆಪದಲ್ಲಿ ಹಲವು ಅನಾಹುತಗಳಾಗುತ್ತಿವೆ. ಇಷ್ಟಾಗಿಯೂ ಆಳುಗರು ಕಣ್ಣಿದ್ದೂ ಕುರುಡರಂತಿರುವುದು, ಇನ್ನೂ ಎಚ್ಚೆತ್ತುಕೊಂಡಿಲ್ಲದಿರುವುದು ಖೇದಕರ. ನಂದಿಬೆಟ್ಟ ಒಂದು ಗಿರಿಧಾಮ. ಇದು ಒಂದು ಕಾಲದಲ್ಲಿ ಅರ್ಕಾವತಿ, ಕುಮುದ್ವತಿ, ಪಾಪಾಗ್ನಿ, ಪಾಲಾರ್, ಪೆನ್ನಾರ್ ನದಿಗಳ ಉಗಮಸ್ಥಾನವಾಗಿತ್ತು. ಅವು ಸಮೃದ್ಧವಾಗಿ ಹರಿದು, ಹಲವು ಉಪನದಿಗಳನ್ನು ಜತೆಗೂಡಿಸಿಕೊಂಡು ಬಂಗಾಳ ಕೊಲ್ಲಿಯನ್ನು ಸೇರುತ್ತಿದ್ದವು ಎಂದು ಹೇಳಿದರೆ, ಇಂದಿನ ಪೀಳಿಗೆಯವರಿಗೆ ಅದು ಹುಬ್ಬೇರಿಸುವ ಸಂಗತಿಯಾಗುತ್ತದೆ! ನಂದಿಬೆಟ್ಟ ಸೇರಿದಂತೆ ಪರಿಸರದ ಸಮಸ್ತ ಅಸ್ತಿತ್ವಗಳು ನಮ್ಮ ಬದುಕಿನ ಅವಿಭಾಜ್ಯ ಅಂಗಗಳು. ಅವುಗಳನ್ನು ತುಂಡರಿಸುವ ಮೂಲಕ ನಾವೇ ವಿಪತ್ತನ್ನು ಆಹ್ವಾನಿಸುತ್ತಿದ್ದೇವೆ. ನಂದಿಬೆಟ್ಟದ ತಪ್ಪಲಿನಲ್ಲಿ ಅದೆಷ್ಟೋ ರೆಸಾರ್ಟುಗಳು, ಹೋಮ್‌ಸ್ಟೇಗಳು ನಿರ್ಮಾಣವಾಗಿವೆ. ರಸ್ತೆ ನಿರ್ಮಾಣ, ಅಭಿವೃದ್ಧಿಯ ನೆಪದಲ್ಲಿ ಪರಿಸರಭಂಜನೆ ನಿತ್ಯವೂ ಆಗುತ್ತಲೇ ಇದೆ. ಇದು ಹೀಗೇ ಮುಂದುವರಿದಲ್ಲಿ, ಕೇರಳದ ವಯನಾಡಿನಲ್ಲಾದ ದುರಂತ ನಮ್ಮಲ್ಲೂ ಸಂಭವಿಸಬಹುದು.

ನಂದಿಬೆಟ್ಟದ ಆಸುಪಾಸಿನಲ್ಲಿ ನಡೆಯುತ್ತಿರುವ ಅನಪೇಕ್ಷಿತ ಚಟುವಟಿಕೆಗಳಿಂದ ಆ ಬೆಟ್ಟಕ್ಕೆ ಹೇಗೆ ಅಪಾಯ ಒದಗಲಿದೆ ಎಂಬುದರ ಕುರಿತು ಸಮಾನಮನಸ್ಕರು ಮತ್ತು ಪರಿಸರದ ಬಗ್ಗೆ ಕಾಳಜಿಯುಳ್ಳವರ ಸಭೆಯೊಂದು ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆಯಿತು. ನಂದಿಬೆಟ್ಟದ ಸಂರಕ್ಷಣೆ ಸೇರಿದಂತೆ, ಪರಿಸರವನ್ನು ಉಳಿಸಿ ಮುಂದಿನ ಪೀಳಿಗೆಗೆ ದಾಟಿಸುವ ದಿಸೆಯಲ್ಲಿ ನಾವೇನು ಮಾಡಬೇಕು? ಈಗ ಆಗುತ್ತಿರುವ ವಿಧ್ವಂಸಕ ಕೃತ್ಯಗಳಿಗೆ ಕಡಿವಾಣ ಹಾಕಬೇಕಿರುವುದು ಎಷ್ಟು ಅನಿವಾರ್ಯ? ಅದಕ್ಕಿರುವ ಮಾರ್ಗೋಪಾಯಗಳೇನು? ಎಂಬುದರ ಬಗ್ಗೆ ಆ ವೇಳೆ ವಿಸ್ತೃತ ಮತ್ತು ಆರೋಗ್ಯಪೂರ್ಣ ಚರ್ಚೆ ನಡೆಯಿತು. ನಂದಿಬೆಟ್ಟವನ್ನು ಭೌಗೋಳಿಕ, ಜೈವಿಕ ಮತ್ತು ಜಲಸಂಪತ್ತಿನ ಮೂಲತಾಣವೆಂದು ಪರಿಗಣಿಸಿ, ಅಲ್ಲಿ ಯಾವುದೇ ಪರಿಸರ-ವಿರೋಧಿ ಕೃತ್ಯಗಳಿಗೆ ಅವಕಾಶ ಕೊಡದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಅಂದು ಕೈಗೊಳ್ಳಲಾಯಿತು.

ಬೆಂಗಳೂರಿನಲ್ಲಿ ಗಗನಚುಂಬಿ ಕಟ್ಟಡಗಳ ನಿರ್ಮಾಣಕ್ಕೆ ಅಗತ್ಯವಾದ ಮರಳು ಇಂದು ಎಲ್ಲೂ ಸಿಗುತ್ತಿಲ್ಲ. ಹೀಗಾಗಿ, ಮೊದಮೊದಲು ಹೆಣ್ಣೂರು ಬಂಡೆಯನ್ನು ನಾಶಮಾಡಿ, ತದನಂತರ ನಂದಿಬೆಟ್ಟದ ತಪ್ಪಲಿನ ಬಂಡೆಗಳನ್ನು ಪುಡಿಗಟ್ಟಿ 'ಎಂ.ಸ್ಯಾಂಡ್' ತಯಾರಿಸಿ, ಅದನ್ನು ಬೆಂಗಳೂರಿಗೆ ಸಾಗಿಸಿ, ಅಲ್ಲಿನ ನಿರ್ಮಿತಿಗಳಿಗೆ ಬಳಸುವ ದೊಡ್ಡ ದಂಧೆ ವರ್ಷಗಳಿಂದ ಅವ್ಯಾಹತವಾಗಿ ನಡೆಯುತ್ತಲೇ ಬಂದಿದೆ. ಇದರ ಹಿಂದೆ ಸ್ಥಾಪಿತ ಹಿತಾಸಕ್ತಿಗಳು, ಲಾಭಬಡುಕರಿದ್ದಾರೆ. ಪಾರಂಪರಿಕ ಇತಿಹಾಸವುಳ್ಳ ಬೆಟ್ಟದ ಆಸುಪಾಸಿನಲ್ಲಿ ಹೀಗೆ ಡೈನಮೈಟ್ ಇಟ್ಟು ಧ್ವಂಸಮಾಡಿ, ಅಲ್ಲಿನ ಸಂಪನ್ಮೂಲವನ್ನು ಬಳಸಿಕೊಂಡು ಬೆಂಗಳೂರನ್ನು 'ಬ್ರ್ಯಾಂಡ್ ಬೆಂಗಳೂರು', 'ಸ್ಮಾರ್ಟ್ ಸಿಟಿ' ಮಾಡುವುದೆಂದರೆ ಅದು ಖಂಡಿತವಾಗಿ ಅಭಿವೃದ್ಧಿ ಎನಿಸಿಕೊಳ್ಳುವುದಿಲ್ಲ, ಅದು ಬೆಂಗಳೂರಿಗರ ಪಾಲಿಗೆ ಶಾಪವಾಗುವುದೇ ವಿನಾ, ವರದಾನವಾಗುವುದಿಲ್ಲ. ಮೂರು ದಶಕಗಳಿಂದ, ಬೆಂಗಳೂರಿನಲ್ಲಿ 'ಅಭಿವೃದ್ಧಿ' ಎಂಬ ವಿಷಯ ಬಂದಾಗಲೆಲ್ಲ ರಿಯಲ್ ಎಸ್ಟೇಟ್ ಉದ್ದಿಮೆ ಮುಂಚೂಣಿಯಲ್ಲಿ ನಿಲ್ಲುತ್ತದೆ. ಅಂದರೆ ರಸ್ತೆ, ಕಟ್ಟಡ, ಸೇತುವೆಯಂಥ ಮೂಲಸೌಕರ್ಯಗಳ ನಿರ್ಮಾಣ. ಅದಕ್ಕೆ ಬೇಕಾದ ಕಚ್ಚಾವಸ್ತುಗಳನ್ನು, ನಂದಿಬೆಟ್ಟ, ರಾಮನಗರದ ಬೆಟ್ಟ, ಕನಕಪುರದ ಬೆಟ್ಟದ ಹೃದಯಭಾಗವನ್ನು ಛಿದ್ರಮಾಡಿ ತರಲಾಗುತ್ತದೆ. ಪರಿಸರವನ್ನು ಹಾಳುಗೆಡಹುವ ಈ ಕಾರ್ಯದಲ್ಲಿ ಎಲ್ಲ ರಾಜಕೀಯ ಪಕ್ಷಗಳವರೂ ಕೈಜೋಡಿಸಿದ್ದಾರೆ. ಇವರಿಗೆ ಪರಿಸರದ ಬಗ್ಗೆ ಇಂಥ ಅನಾದರವೇಕೋ ಗೊತ್ತಾಗುತ್ತಿಲ್ಲ.

ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಕಾಮಗಾರಿಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳು/ರಾಜಕಾರಣಿಗಳು, ಕಂಪನಿಗಳ ಪಾತ್ರ ಇರುತ್ತದೆ. ಹೀಗಾಗಿ, ಉಸಿರಾಡಲು ಯೋಗ್ಯವಾದ ಪ್ರಾಣವಾಯು, ಪಾನಯೋಗ್ಯ ಶುದ್ಧನೀರು ಸಿಗುವುದೇ ದುಸ್ತರವಾಗಿದೆ. ಮಣ್ಣು ಕೂಡ ಮಾಲಿನ್ಯದಿಂದ ಹೊರತಾಗಿಲ್ಲ- ಬಹುರಾಷ್ಟ್ರೀಯ ಕಂಪನಿಗಳ ಮೂಲಕ ಬರುವ ಕಳೆನಾಶಕಗಳಿಂದ ಮಣ್ಣು ಮತ್ತು ಸೂಕ್ಷ್ಮ ಜೀವಜಾಲ ನಶಿಸಿಹೋಗಿವೆ. ಪರಾಗಸ್ಪರ್ಶದ ಕೆಲಸ ಮಾಡುವ ಜೇನ್ನೊಣಗಳು ಕೂಡ ಅಳಿವಿನ ಅಂಚಿಗೆ ಬರುತ್ತಿವೆ. ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ಮಾರಾಟ ಮಾಡುವ 'ರೌಂಡಪ್' ಎಂಬ ಕಳೆನಾಶಕವು ವಿಶ್ವದ ಹಲವೆಡೆ ನಿಷೇಧಕ್ಕೆ ಒಳಗಾಗಿದೆ. ಅದೊಂದು ಕಾರ್ಕೋಟಕ ವಿಷ, ಅದರಿಂದಾಗುವ ಹಾನಿ ಅಷ್ಟು ಘೋರವಾದದ್ದು. ಹೀಗಾಗಿ ರೋಗ-ರುಜಿನಗಳು ಹೆಚ್ಚಿವೆ. ಬೆಂಗಳೂರಿನಲ್ಲಿ ನಾವು ಸೇವಿಸುತ್ತಿರುವ ಗಾಳಿಯಲ್ಲಿರುವ ವಿಷಕಾರಕ ಅಂಶಗಳ ಪ್ರಮಾಣವನ್ನು ಲೆಕ್ಕಿಸಲು ವಿಜ್ಞಾನಿಗಳ ವಿಶ್ಲೇಷಣೆ ಬೇಕಿಲ್ಲ, ಎಲ್ಲವೂ ನಮ್ಮ ಅನುಭವಕ್ಕೇ ಬರುತ್ತಿವೆ. ಆದರೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಜೋರುನಿದ್ರೆ!

ಬೆಂಗಳೂರಿನಲ್ಲಿ ಇತ್ತೀಚೆಗೆ ಮೆಟ್ರೋ ಕಾಮಗಾರಿ ಭರದಿಂದ ಸಾಗಿದ್ದು, ನೂರಾರು ಕಿ.ಮೀ.ಗಳಷ್ಟು ಸುರಂಗ ಮಾರ್ಗಗಳನ್ನು ಕೊರೆಯಲಾಗುತ್ತಿದೆ. ಅಭಿವೃದ್ಧಿಯ ಹೆಸರಲ್ಲಿ ಇವೆಲ್ಲವೂ ಮುಂದುವರಿದರೆ ಪ್ರಳಯಕಾಲ ಸನ್ನಿಹಿತವಾಗುತ್ತದೆ ಎಂಬುದನ್ನು ನಾವು ನೆನಪಿಡಬೇಕು. ಹಾಗೆಂದ ಮಾತ್ರಕ್ಕೆ ಅಭಿವೃದ್ಧಿ ಕಾರ್ಯಗಳು ನಡೆಯಲೇಬಾರದು ಅಂತಲ್ಲ; ಆದರೆ ಅದು ಪ್ರಕೃತಿಗೆ ಪೂರಕವಾಗಿರಬೇಕು. ತೀರಾ ಅತಿಯಾದರೆ ಅದರ ಪರಿಣಾಮ ವಿನಾಶವೇ ವಿನಾ ಮತ್ತೇನಲ್ಲ. ಆದ್ದರಿಂದ ಅಭಿವೃದ್ಧಿಯ ಹುಕಿಗೆ ಬಿದ್ದವರು ಈ ಸೂಕ್ಷ್ಮವನ್ನು ತಕ್ಷಣ ಗಮನಿಸಿ, ಸಂಭಾವ್ಯ ಅನಾಹುತಗಳನ್ನು ತಪ್ಪಿಸಬೇಕು. ನಂದಿಬೆಟ್ಟ ಸೇರಿದಂತೆ, ಕೊಂಕಣ, ಅರಾವಳಿ, ಸಹ್ಯಾದ್ರಿಯನ್ನೊಳಗೊಂಡ ಪೂರ್ವ ಮತ್ತು ಪಶ್ಚಿಮ ಘಟ್ಟಗಳನ್ನು ಕಾಪಾಡುವ ಕೆಲಸಕ್ಕೆ ಮುಂದಾಗದಿದ್ದರೆ, ಮುಂಬರುವ ದಿನಗಳು ಕರಾಳವಾಗಲಿವೆ. ಬೆಂಗಳೂರಿನಲ್ಲಂತೂ ಅಭಿವೃದ್ಧಿಯ ಹೆಸರಲ್ಲಿ ನಡೆಯುತ್ತಿರುವ ಅಪಸವ್ಯಗಳು ಮೇರೆಮೀರಿವೆ. ಭೂಮಿಯ ಬೆಲೆ ಗಗನಕ್ಕೇರಿದ್ದು, ಸಣ್ಣ ದುಡಿಮೆಯ ಕುಟುಂಬಿಕರು ಸ್ವಂತದ ಸೂರನ್ನು ಕಟ್ಟಿಕೊಳ್ಳಲಾಗದ ಪರಿಸ್ಥಿತಿಯಿದೆ. ಬೆಂಗಳೂರಿನ ಸರಹದ್ದುಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಸ್ಟಾರ್ ಹೋಟೆಲ್‌ಗಳು ನಾಯಿಕೊಡೆಗಳಂತೆ ತಲೆಯೆತ್ತಿದ್ದು, ಅಲ್ಲಿನ ದರಗಳನ್ನು ಕಂಡು ಮಧ್ಯಮ ವರ್ಗದವರು ಹುಬ್ಬೇರಿಸುವಂಥ ಸ್ಥಿತಿಯಿದೆ. ಅಂದರೆ, ಬೆಂಗಳೂರಿನಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಆಗುತ್ತಿರುವುದೆಲ್ಲವೂ ಸಿರಿವಂತರ ಪ್ರಯೋಜನಕ್ಕೆ ಎಂಬುದು ಗಮನಿಸಬೇಕಾದ ಸಂಗತಿ.

ಕೊಡಗಿನಲ್ಲಿ 'ಟಿಂಬರ್ ಮಾಫಿಯಾ'ದ ದರ್ಬಾರು ಎಗ್ಗಿಲ್ಲದೆ ನಡೆಯುತ್ತಿದೆ. ಅಲ್ಲಿನ ಕರಡ ಮತ್ತು ಚೆಯ್ಯಂಡಾಣೆ ಗ್ರಾಮಗಳ ಸಮೀಪಕ್ಕೆ ಆತುಕೊಂಡಿರುವ ಮಲೆತಿರಿಕೆ ಬೆಟ್ಟದ ಮಡಿಲಲ್ಲಿರುವ ಕಾಡನ್ನು ಸಂಪೂರ್ಣ ನಾಶಮಾಡಲು ಹೊರಟಿದ್ದಾರೆ ಈ ಮಾಫಿಯಾದವರು. ಇವರ ಉಪಟಳದಿಂದಾಗಿ ದಿನದಿಂದ ದಿನಕ್ಕೆ ಆಗುತ್ತಿರುವ ಅನಾಹುತ, ಸರಕಾರಕ್ಕೆ ಆಗುತ್ತಿರುವ ಮೋಸ ಎಲ್ಲವನ್ನೂ ಪತ್ತೆ ಹಚ್ಚಿ ಸಲ್ಲಿಸಿದ ಒಕ್ಕಣೆ ಪತ್ರಗಳು ಗೊತ್ತಿಲ್ಲದಂತೆ ಕಸದಬುಟ್ಟಿ ಸೇರಿವೆ. ಇದು ಟಿಂಬರ್ ಮಾಫಿಯಾದ ಸ್ಥಾಪಿತ ಹಿತಾಸಕ್ತಿಗಳು ರುಷುವತ್ತು ಕೊಟ್ಟು ಅಧಿಕಾರಿಗಳನ್ನು ಜೇಬಿನಲ್ಲಿರಿಸಿಕೊಂಡಿರುವುದರ ಫಲಶ್ರುತಿ ಎಂಬುದನ್ನು ವಿಷಾದದಿಂದಲೇ ಹೇಳಬೇಕಾಗಿದೆ.

ವಿಶೇಷ ಭೂಪ್ರದೇಶಗಳಾಗಿರುವ ಕುದುರೆಮುಖ ಮತ್ತು ಗಂಗಡಿಕಲ್ಲು ಪರ್ವತಶ್ರೇಣಿಯಲ್ಲಿ ಸಿಗುವಷ್ಟು ಉತ್ಕೃಷ್ಟ ಕಬ್ಬಿಣದ ಅದಿರು ವಿಶ್ವದ ಬೇರೆಲ್ಲೂ ಸಿಗುವುದಿಲ್ಲ. ಇಂಥ ಬೆಟ್ಟಸಾಲುಗಳನ್ನು ಕೆಐಒಸಿಎಲ್ ಕಂಪನಿಗೆ ದಶಕಗಳ ಅವಧಿಗೆ ಗುತ್ತಿಗೆಗೆ ಕೊಟ್ಟು, ಅದು ಕೈಗೊಂಡ ಗಣಿಗಾರಿಕೆಯಿಂದ ಆಗಿರುವ ಅಪಾರ ಪರಿಸರ ನಾಶಕ್ಕೆ ಯಾರು ಹೊಣೆ? ಇದೀಗ, ಅದಿರು ತೆಗೆಯುವುದಕ್ಕೆಂದು ಅದೇ ಕಂಪನಿಗೆ ಬಳ್ಳಾರಿಯ ಗುಡ್ಡಗಳನ್ನೂ ಗುತ್ತಿಗೆ ಮೇರೆಗೆ ವಹಿಸಿಕೊಡಲು ಮುಂದಾಗಿರುವ ಕುರಿತು ಚರ್ಚೆ ನಡೆಯುತ್ತಿದೆ. ಇದು ಸಮೃದ್ಧ ಪ್ರದೇಶವನ್ನು ಮರುಭೂಮಿಯಾಗಿಸುವ ಬಾಬತ್ತಲ್ಲದೆ ಮತ್ತೇನು? ಕೆಐಒಸಿಎಲ್‌ಗೆ ತಿಂಗಳಿಗೆ ಅಂದಾಜು 25 ಕೋಟಿ ರುಪಾಯಿ ನಷ್ಟವಾಗುತ್ತಿರುವ, ಅಲ್ಲಿನ 300 ಕಾರ್ಮಿಕರು ವಜಾಗೊಳ್ಳಲಿರುವ ಸುದ್ದಿ ಇತ್ತೀಚೆಗೆ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಎಲ್ಲರೂ ಆ ಕಂಪನಿಯ ಹಿತಾಸಕ್ತಿ ಮತ್ತು ನಷ್ಟದ ಬಗ್ಗೆಯೇ ಕಾಳಜಿ ವಹಿಸುವವರಾಗಿದ್ದಾರೆಯೇ ವಿನಾ, ಆ ಕಂಪನಿಯಿಂದ ಪರಿಸರಕ್ಕೆ ಆಗುತ್ತಿರುವ ಹಾನಿಯ ಬಗ್ಗೆ ಕಳವಳಿಸುತ್ತಿಲ್ಲ. ಪರಿಸರ ನಾಶವು ನರಹತ್ಯೆಗೆ ಸಮನಾದ ಅಪರಾಧ. ಇದಕ್ಕೆ ಕಡಿವಾಣ ಹಾಕದಿದ್ದಲ್ಲಿ, ನಮ್ಮ ಮತ್ತು ನಮ್ಮ ಮುಂದಿನ ಪೀಳಿಗೆಯ ಭವಿಷ್ಯ ಕರಾಳವಾಗಲಿದೆ ಎಂಬುದಂತೂ ಕಟುಸತ್ಯ.

(ಲೇಖಕರು ಸಿವಿಲ್ ಎಂಜಿನಿಯರ್)

ಮಹಾಯುತಿ ವ್ಯೂಹದಿಂದ ಪಾರಾಗುವರಾ ಉದ್ಧವ್?

ರಾಜಬೀದಿ

ವಿನಾಯಕ ಮಠಪತಿ
vveditoped@gmail.com

ಶಿವಸೈನಿಕರ ದಶಕಗಳ ಹೋರಾಟದ ಪ್ರಮುಖ ಅಸ್ತ್ರವೇ 'ಉಗ್ರ ಹಿಂದುತ್ವ'. ದೇಶದ ಯಾವುದೇ ಭಾಗದಲ್ಲಿ ಹಿಂದೂಗಳು ಹಿಂಸೆ ಅನುಭವಿಸುತ್ತಿದ್ದರೆ, ಶಿವಸೈನಿಕರ ಗಟ್ಟಿದನಿ ಅವರ ನೆರವಿಗೆ ಬರುತ್ತಿತ್ತು. ರಾಜಕೀಯ ಕಾರಣಕ್ಕಾಗಿ ಶಿವಸೇನೆ ಪಕ್ಷದವರ ಹೋರಾಟದ ದಿಕ್ಕು ಹಲವು ಬಾರಿ ಬದಲಾಗಿರಬಹುದು, ಆದರೆ ಪ್ರಬಲ ಹಿಂದುತ್ವದ ಮನೋಭಾವ ಬದಲಾಗಿರಲೇ ಇಲ್ಲ. ಕಾಂಗ್ರೆಸ್ ಸೇರಿದಂತೆ ಎಡಪಕ್ಷಗಳಿಂದ ಸದಾಕಾಲವೂ ಸಮಾನ ಅಂತರ ಕಾಯ್ದುಕೊಂಡು, ಕೇವಲ ಬಲಪಂಥೀಯ ವಿಚಾರಧಾರೆಯವರ ಜತೆ ಸುಮಾರು 25 ವರ್ಷಗಳಿಂದ ರಾಜಕಾರಣ ಮಾಡುತ್ತಿದ್ದ 'ಶಿವಸೈನಿಕ'ರಿಗೆ ಈಗ ಅಗ್ನಿಪರೀಕ್ಷೆ ಎದುರಾಗಿದೆ.

ಕೇಸರಿ ಸಾಮ್ರಾಜ್ಯದ ಪ್ರಶ್ನಾತೀತ ನಾಯಕನಾಗಿ, ಯಾವುದೇ ಸಾಂವಿಧಾನಿಕ ಹುದ್ದೆಯನ್ನು ಅನುಭವಿಸದೆಯೇ ಭಾರತೀಯ ರಾಜಕಾರಣದಲ್ಲಿ ಸಿಂಹದಂತೆ ಗರ್ಜಿಸುತ್ತಿದ್ದ ಬಾಳಾಸಾಹೇಬ್ ಠಾಕ್ರೆ ಅವರ ಪುತ್ರ ಉದ್ಧವ್ ಠಾಕ್ರೆ ಇಂದು ವಿಚಿತ್ರ ರಾಜಕೀಯ ವ್ಯೂಹದಲ್ಲಿ ಸಿಲುಕಿದ್ದಾರೆ. ಕಾಂಗ್ರೆಸ್ ಮತ್ತು ಎನ್‌ಸಿಪಿಯನ್ನು ಒಳಗೊಂಡಿರುವ ಮೈತ್ರಿಕೂಟದ ಜತೆ ಕಳೆದ 5 ವರ್ಷದಿಂದ ಗುರುತಿಸಿಕೊಂಡಿದ್ದ ಉದ್ಧವ್ ಠಾಕ್ರೆ, 2019ರಲ್ಲಿ 'ಮಹಾವಿಕಾಸ್ ಅಘಾಡಿ' ಜತೆಗೂಡಿ, ಮಹಾರಾಷ್ಟ್ರದ ಸಿಎಂ ಹುದ್ದೆ ಅಲಂಕರಿಸಿದ ಠಾಕ್ರೆ ಮನೆತನದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ರಾಜಕೀಯವಾಗಿ ಇಷ್ಟೆಲ್ಲಾ ದೂರ ಕ್ರಮಿಸಿರುವ ಉದ್ಧವ್ ಠಾಕ್ರೆ, ಸದ್ಯ ಬಲಪಂಥೀಯ ವಿಚಾರಧಾರೆಗಳನ್ನು ಒಡಲಲ್ಲಿರಿಸಿಕೊಂಡು ಎಡಪಂಥೀಯ ಸಹಚರರ ಜತೆಗೂಡಿ ಮೊದಲ ವಿಧಾನಸಭಾ ಚುನಾವಣೆಯನ್ನು ಎದುರಿಸುತ್ತಿದ್ದಾರೆ.

ಮಹಾರಾಷ್ಟ್ರ ರಾಜಕಾರಣ ಈ ಬಾರಿ ವಿಚಿತ್ರ ಸನ್ನಿವೇಶದಲ್ಲಿ ಸಿಲುಕಿದೆ. ದಶಕಗಳ ಕಾಲ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ತಮ್ಮದೇ ಆದ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದ 2 ಪ್ರಮುಖ ಪಕ್ಷಗಳು ಇಬ್ಭಾಗಗೊಂಡಿವೆ. ಸೈದ್ಧಾಂತಿಕ ಭಿನ್ನಾಭಿಪ್ರಾಯವಿಟ್ಟುಕೊಂಡು ಪರಸ್ಪರ ಹೋರಾಡುತ್ತಿದ್ದವರೇ ಈಗ ಒಂದುಗೂಡಿ ಮತ ಕೇಳುವ ಪರಿಸ್ಥಿತಿ ಸೃಷ್ಟಿಯಾಗಿದ್ದು, ಇದನ್ನು ಜನ ಹೇಗೆ ಸ್ವೀಕರಿಸುತ್ತಾರೆ ಎಂಬ ಚಿಂತೆ ಅನೇಕರನ್ನು ಕಾಡುತ್ತಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರದ ಜನ ಬಿಜೆಪಿಯನ್ನು ತಿರಸ್ಕರಿಸಿ ಕಾಂಗ್ರೆಸ್ ಹಾಗೂ ಮಿತ್ರಪಕ್ಷದ ಪರ ಒಲವು ತೋರಿದ್ದರು. ಆದರೀಗ, ವಿಧಾನಸಭಾ ಚುನಾವಣೆಯಲ್ಲಿ ಅವರು ಕೊಡಲಿರುವ ತೀರ್ಮಾನವು ಅನೇಕರ 'ರಾಜಕೀಯ ಭವಿಷ್ಯ ನಿರ್ಣಯ'ದಲ್ಲಿ ಮಹತ್ತರ ಪಾತ್ರವನ್ನು ವಹಿಸುವುದರಲ್ಲಿ ಅನುಮಾನವಿಲ್ಲ. ಕಾಂಗ್ರೆಸ್, ಎನ್‌ಸಿಪಿ (ಶರದ್ ಪವಾರ್ ಬಣ) ಹಾಗೂ ಶಿವಸೇನೆ (ಉದ್ಧವ್ ಠಾಕ್ರೆ ಬಣ) ಸೇರಿ ರಚನೆಯಾದ 'ಮಹಾವಿಕಾಸ್ ಅಘಾಡಿ' ಮೈತ್ರಿಕೂಟಕ್ಕೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಜನರು ಭರ್ಜರಿ ಯಶಸ್ಸು ನೀಡಿದರು. 40ಕ್ಕೂ ಅಧಿಕ ಸ್ಥಾನ ಗೆಲ್ಲುವ ಹುಮ್ಮಸ್ಸಿನಲ್ಲಿದ್ದ ಬಿಜೆಪಿ ಮೈತ್ರಿಕೂಟ ಹೀನಾಯ ಸೋಲನುಭವಿಸಿತು. ರಾಷ್ಟ್ರಮಟ್ಟದಲ್ಲಿ ಇದರ ಪರಿಣಾಮವೇನಾಗಿದೆ ಎಂಬುದು ಗೊತ್ತಿರುವ ಸಂಗತಿಯೇ. ಸೈದ್ಧಾಂತಿಕ ಭಿನ್ನಾಭಿಪ್ರಾಯ ಮೆಟ್ಟಿನಿಂತ ಉದ್ಧವ್ ಠಾಕ್ರೆ ಅವರ ಶಿವಸೇನೆ ಬಣವು 9 ಸ್ಥಾನಗಳನ್ನೂ, ಮಹಾವಿಕಾಸ್ ಅಘಾಡಿ ಮೈತ್ರಿಕೂಟ 30 ಸ್ಥಾನಗಳನ್ನೂ ಗೆಲ್ಲುವ ಮೂಲಕ ಬಿಜೆಪಿ ಮೈತ್ರಿಕೂಟಕ್ಕೆ ತೀವ್ರ ಮುಖಭಂಗವಾಗುವುದಕ್ಕೆ ಕಾರಣವಾದವು.

ಲೋಕಸಭಾ ಚುನಾವಣೆಯಲ್ಲಿ 'ಅಘಾಡಿ' ಕೂಟಕ್ಕೆ ಯಶಸ್ಸು ಸಿಕ್ಕಿರಬಹುದು, ಆದರೆ ದೇಶದ ಬಹುಪಾಲು ಜನರು ವಿಧಾನಸಭಾ ಚುನಾವಣೆಯಲ್ಲಿ ವ್ಯತಿರಿಕ್ತ ಫಲಿತಾಂಶವನ್ನೇ ಕೊಡುವುದು ವಾಡಿಕೆ. ಸ್ಥಳೀಯ ನಾಯಕತ್ವ, ಜಾತಿ ರಾಜಕಾರಣದ ಸಮೀಕರಣದಲ್ಲಿ ಯಶಸ್ವಿಯಾಗುವವರೇ ಈ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯ. ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ ಬಣಕ್ಕೆ ಸದ್ಯಕ್ಕಿರುವ ಸಮಸ್ಯೆಯೆಂದರೆ, ಅವರ ಹಿಂದಿನ ರಾಜಕೀಯ ಸಿದ್ಧಾಂತ ಮತ್ತು ಈಗಿನ ಬದಲಾದ ಪರಿಸ್ಥಿತಿಯಲ್ಲಿನ ರಾಜಕೀಯ ನಿಲುವಿನ ನಡುವಿನ ಒಳತೋಟಿಯ ನಿರ್ವಹಣೆ. ಅಂದರೆ, ಒಂದು ಕಾಲಕ್ಕೆ ಪ್ರಬಲ ಹಿಂದುತ್ವದ ಅಲೆಯೊಂದಿಗೆ ಸಂಚಲನ ಮೂಡಿಸುತ್ತಿದ್ದ ಅವರ ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಈಗ, ದಶಕಗಳ ಹಿಂದೆ ಯಾರ ವಿರುದ್ಧ ಮತ್ತು ಯಾವ ಸಿದ್ಧಾಂತದ ವಿರುದ್ಧ ತಾವು ಹೋರಾಡಿದ್ದರೋ ಅವರ ಪರವಾಗಿಯೇ ನಿಂತು ಕೆಲಸ ಮಾಡಬೇಕಾದ ಅನಿವಾರ್ಯತೆಯ ಶಿಶುಗಳಾಗಿದ್ದಾರೆ! ಇದು ಎಷ್ಟರಮಟ್ಟಿಗೆ ಫಲ ನೀಡುತ್ತದೆ ಎಂಬುದನ್ನು ಕಾದುನೋಡಬೇಕು. ತಮ್ಮ ತಂದೆ ಹುಟ್ಟುಹಾಕಿದ್ದ ಶಿವಸೇನೆಯನ್ನು ಉದ್ಧವ್ ಠಾಕ್ರೆಯವರು ಅನೇಕ ಕಾರಣಗಳಿಂದಾಗಿ ಇಬ್ಭಾಗ ಮಾಡಿಕೊಂಡಿರುವುದು ಗೊತ್ತಿರುವ ಸಂಗತಿಯೇ. ಒಂದು ಕಾಲಕ್ಕೆ ಬಾಳಾಸಾಹೇಬ್ ಠಾಕ್ರೆಯವರ ಬಲಗೈನಂತಿದ್ದ ಏಕನಾಥ ಶಿಂದೆ ಈಗ ವಿರೋಧಿ ಪಾಳಯದಲ್ಲಿದ್ದಾರೆ. ಇನ್ನು, ಉದ್ಧವ್ ಪುತ್ರ ಹಾಗೂ ಮಾಜಿ ಸಚಿವ ಆದಿತ್ಯ ಠಾಕ್ರೆ, ಸೆಂಟ್ರಲ್ ಮುಂಬೈನ ವರ್ಲಿ ಕ್ಷೇತ್ರದಿಂದ ಕಣಕ್ಕಿಳಿಯುತ್ತಿದ್ದಾರೆ. ಉದ್ಧವ್ ಬಣದ ಶಿವಸೇನೆ ಈ ಬಾರಿ 'ಮಾಡು ಇಲ್ಲವೇ ಮಡಿ' ಎಂಬ ನಿರ್ಧಾರಕ್ಕೆ ಬಂದಿದೆ.



ಒಂದೊಮ್ಮೆ 'ಅಘಾಡಿ'ಗೆ ಸ್ಪಷ್ಟ ಬಹುಮತ ಬಂದರೂ, ಉದ್ಧವ್‌ರನ್ನು ಮತ್ತೊಂದು ಅವಧಿಗೆ ಒಪ್ಪಿಕೊಳ್ಳುವ ಮನಸ್ಥಿತಿಯಲ್ಲಿ ಶರದ್ ಪವಾರ್ ಇಲ್ಲ. ಕಡಿಮೆ ಸೀಟು ಪಡೆದರೆ ತಮ್ಮ ರಾಜಕೀಯ ಭವಿಷ್ಯ ಏನಾದೀತು ಎಂಬ 'ಕೊಂಚ-ಭಯ' ಉದ್ಧವ್‌ರನ್ನು ಆವರಿಸಿರುವುದು ಸ್ಪಷ್ಟ.

ಈ ಬಾರಿಯ ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಈ ಮಟ್ಟಿಗಿನ ಕುತೂಹಲ ಕೆರಳಿಸಲು ಕಾರಣ- ಇಬ್ಭಾಗಗೊಂಡ ರಾಜಕೀಯ ಪಕ್ಷಗಳನ್ನು ಜನ ಹೇಗೆ ಸ್ವೀಕರಿಸಿದ್ದಾರೆ ಎಂಬುದನ್ನು ಅದು ಹರವಿಡಲಿದೆ. ಜತೆಗೆ, ಮತದಾರರು ಕೈಗೊಳ್ಳುವ ನಿರ್ಧಾರದಲ್ಲೇ ಅನೇಕರ ರಾಜಕೀಯ ಭವಿಷ್ಯವೂ ಅಡಗಿದೆ. ಹಿಂದುತ್ವದ ಪ್ರಬಲ ಪ್ರತಿಪಾದನೆಯ ತೆಕ್ಕೆಯಿಂದ ಕೊಂಚ ಹೊರಬಂದಿರುವ ಶಿವಸೇನೆಯನ್ನು ಮಹಾರಾಷ್ಟ್ರದ ಹಿಂದೂಗಳು ಹೇಗೆ ನೋಡುತ್ತಾರೆ ಎಂಬುದು ಸದ್ಯದ ಕುತೂಹಲ. ಕಾರಣ, ಕಾಂಗ್ರೆಸ್‌ನ ಮತ್ತು ಎನ್‌ಸಿಪಿ ಪಕ್ಷದ ಶರದ್ ಪವಾರರ ಸೈದ್ಧಾಂತಿಕ ನಿಲುವು ಬೇರೆ. ಆದರೆ 'ಅಘಾಡಿ'ಯ ಮಿತ್ರಪಕ್ಷಗಳಿಗೆ ದಕ್ಕುವ ಮತಗಳು ಉದ್ಧವ್‌ರನ್ನು ಯಾವ ರೀತಿಯಲ್ಲಿ ಗಟ್ಟಿಗೊಳಿಸಬಹುದು ಎಂಬ ಪ್ರಶ್ನೆಗೆ ಈಗ ಯಾರಲ್ಲೂ ಉತ್ತರವಿಲ್ಲ. ತನ್ನ ಸಾಂಪ್ರದಾಯಿಕ ಮತಗಳನ್ನು 'ಸಮಾನಮನಸ್ಕ' ಪಕ್ಷಕ್ಕೆ ಕೊಡಿಸುವಲ್ಲಿ ಯಶಸ್ವಿಯಾಗುತ್ತಿದ್ದ ಬಿಜೆಪಿಯಂತೆ ಅಘಾಡಿ ಕೂಡ ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತದೆ ಎಂಬುದು ಜನರ ನಿರ್ಧಾರದಿಂದ ತಿಳಿದು ಬರಲಿದೆ.

***

ಅದೊಂದು ಕಾಲವಿತ್ತು. ಅಂದಿನ ಶಿವಸೇನೆ ಮುಖ್ಯಸ್ಥ ಬಾಳಾ ಠಾಕ್ರೆ ಸಿಡಿದೆದ್ದರೆ ಇಡೀ ಮುಂಬೈ ಅರೆಕ್ಷಣ ಅವರತ್ತ ಚಿತ್ತ ಹರಿಸುತ್ತಿತ್ತು. ವಿವಾದಗಳನ್ನು ಬೆನ್ನಿಗೆ ಕಟ್ಟಿಕೊಂಡೇ ತಿರುಗುತ್ತಿದ್ದ ಬಾಳಾ ಠಾಕ್ರೆ, ಇದ್ದಷ್ಟು ದಿನ ಹುಲಿಯಂತೆ ಮೆರೆದರು. ಆದರೆ ಅವರಿಲ್ಲದ ಮತ್ತು ಎರಡು ಹೋಳಾಗಿರುವ ಶಿವಸೇನೆಯಲ್ಲಿ ಹಿಂದಿನ ಕಸುವಿಲ್ಲ. 1966ರಲ್ಲಿ ಸ್ಥಾಪನೆಗೊಂಡ ಶಿವಸೇನೆ, ವರ್ಷಗಳು ಉರುಳಿದಂತೆ ತನ್ನ ರಾಜಕೀಯ ಪ್ರಭಾವವನ್ನು ಬೆಳೆಸಿಕೊಳ್ಳುತ್ತಾ ಸಾಗಿತ್ತು. ಹಾಗೆ ನೋಡಿದರೆ, ಜನತಾ ಪರಿವಾರದಿಂದ ಬೇರ್ಪಟ್ಟು ಹುಟ್ಟಿಕೊಂಡ ಬಿಜೆಪಿಗಿಂತ ಹಳೆಯ ಪಕ್ಷ ಶಿವಸೇನೆ. 'ಬಿಲ್ಲು-ಬಾಣ'ವನ್ನು ಚಿಹ್ನೆಯಾಗಿ ಹೊಂದಿದ್ದ ಇದರ ಮೊದಲ ಅಧಿವೇಶನ 1966ರ ಅಕ್ಟೋಬರ್ 30ರಂದು ಮುಂಬೈನ ಶಿವಾಜಿ ಪಾರ್ಕ್‌ನಲ್ಲಿ ನಡೆದಿತ್ತು. ಆಗ ಸುಮಾರು 5 ಲಕ್ಷ ಜನ ಸೇರಿದ್ದು ಒಂದು ದಾಖಲೆ. ಮುಂಬೈ ಮಹಾನಗರಪಾಲಿಕೆ ಅಖಾಡಕ್ಕೆ ಇಳಿದು ರಾಜಕೀಯ ಹಿಡಿತ ಸಾಧಿಸಿದ್ದ ಶಿವಸೇನೆ, ನಂತರ 1995ರಲ್ಲಿ ಮೊದಲ ಬಾರಿಗೆ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಬಿಜೆಪಿ ಜತೆ ಮೈತ್ರಿ ಸರಕಾರ ರಚಿಸಿ ಇತಿಹಾಸ ನಿರ್ಮಿಸಿತ್ತು.

ಅಂದಿನ ಅವಿಭಜಿತ ಶಿವಸೇನೆಗೂ, ಇಂದಿನ ವಿಭಜಿತ ಶಿವಸೇನೆಗೂ ಸಾಕಷ್ಟು ವ್ಯತ್ಯಾಸಗಳಿವೆ. ರಾಜಕೀಯದ ಸ್ಥಿತ್ಯಂತರಗಳಿಗೆ ಸಿಲುಕಿ ಸದ್ಯ ಇಬ್ಭಾಗಗೊಂಡಿರುವ ಶಿವಸೇನೆಗೆ ಕೊಂಚ ಹಿನ್ನಡೆ ಉಂಟಾಗಿದೆ. ಮಹಾವಿಕಾಸ್ ಅಘಾಡಿಯಲ್ಲಿ ಮಹಾರಾಷ್ಟ್ರದ ರಾಜಕೀಯದ 'ಮಾಸ್ಟರ್ ಮೈಂಡ್' ಶರದ್ ಪವಾರ್ ಇದ್ದಾರೆ. ಅವರು ಕಾಲಕಾಲಕ್ಕೆ ಕೈಗೊಳ್ಳುವ ನಿರ್ಧಾರಗಳು ಅಲ್ಲಿನ ರಾಜಕೀಯ ಸಮೀಕರಣವನ್ನೇ ಬದಲಿಸುತ್ತಾ ಬಂದಿವೆ. 2019ರ ವಿಧಾನಸಭಾ ಚುನಾವಣೆಯ ಫಲಿತಾಂಶದ ನಂತರ, 'ತನ್ನ ಬಳಿ ಬರದೆ ಶಿವಸೇನೆಗೆ ಬೇರೆ ದಾರಿಯಿಲ್ಲ' ಎಂದು ಬಿಜೆಪಿ ಯೋಚಿಸುವಷ್ಟರಲ್ಲಿ, ಶಿವಸೇನೆಗೆ ಅಧಿಕಾರ ಕೊಟ್ಟು ಬಿಜೆಪಿಗೆ ಮುಖಭಂಗ ಮಾಡುವಲ್ಲಿ ಶರದ್ ಪವಾರ್ ಯಶಸ್ವಿಯಾಗಿದ್ದರು. ಈ ಬಾರಿಯ ವಿಧಾನಸಭಾ ಚುನಾವಣಾ ಫಲಿತಾಂಶದಲ್ಲಿ ಏರಿಳಿತವಾದರೆ ಪವಾರರ ನಿರ್ಧಾರ ಉದ್ಧವ್ ಠಾಕ್ರೆಗೆ ಎಂಥ ಹೊಡೆತ ನೀಡುತ್ತದೆ ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ.

***

ಕಳೆದ ಒಂದು ವರ್ಷದಿಂದ, ಮಹಾರಾಷ್ಟ್ರದಲ್ಲಿ ಮರಾಠಾ ಸಮುದಾಯಕ್ಕೆ ಮೀಸಲಾತಿ ನೀಡುವಂತೆ ಆಗ್ರಹಿಸಿ ಹೋರಾಟದ ಕಿಚ್ಚು ಹಚ್ಚಿದ್ದ ಜಾಲ್ನಾ ಮೂಲದ ಸಾಮಾಜಿಕ ಕಾರ್ಯಕರ್ತ ಮನೋಜ್ ಜಾರಂಗೆ ಪಾಟೀಲ್ ಅವರು, ಲೋಕಸಭಾ ಚುನಾವಣೆ ಹಾಗೂ ಪ್ರಸ್ತುತ ನಡೆಯುತ್ತಿರುವ ವಿಧಾನಸಭಾ ಚುನಾವಣೆಯಲ್ಲಿ ಬಹುಚರ್ಚಿತ ವ್ಯಕ್ತಿಯಾಗಿದ್ದಾರೆ. ಕಾರಣ, ವಿಧಾನಸಭಾ ಚುನಾವಣೆಯಲ್ಲಿ ಅವರು ತಮ್ಮ ಬೆಂಬಲಿತ ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತಾರೆ ಎಂದು ಅನೇಕರು ನಿರೀಕ್ಷಿಸಿದ್ದರು. ಆದರೆ, ಕೊನೇಕ್ಷಣದಲ್ಲಿ ನಿರ್ಧಾರದಿಂದ ಹಿಂದೆ ಸರಿಯುವ ಚಾಣಾಕ್ಷ ನಡೆ ಅನುಸರಿಸಿರುವ ಮನೋಜ್, ಮೀಸಲಾತಿ ಹೋರಾಟವನ್ನು ಮುಂದುವರಿಸುವುದಾಗಿ ಹೇಳಿಕೊಂಡಿದ್ದಾರೆ. ಕಳೆದ ವಿಧಾನಸಭಾ ಚುನಾವಣೆ ವೇಳೆ ಸಾಲು ಸಾಲು ಮೀಸಲಾತಿ ಹೋರಾಟದಿಂದಾಗಿ ಅಂದಿನ ಆಡಳಿತಾರೂಢ ಬಿಜೆಪಿ ಯಾವ ಮಟ್ಟಿಗೆ ಸೋಲನುಭವಿಸಬೇಕಾಯಿತು ಎಂಬುದು ಗೊತ್ತಿರುವಂಥದ್ದೇ. ತಮ್ಮ ಉಪವಾಸ ಸತ್ಯಾಗ್ರಹದ ಮೂಲಕ ಆಡಳಿತ ಪಕ್ಷಕ್ಕೆ ತಲೆನೋವಾಗಿದ್ದ ಮನೋಜ್, ಈ ಬಾರಿಯ ಚುನಾವಣಾ ಕಣದಿಂದ ಹಿಂದೆ ಸರಿದಿರುವುದರಿಂದ, ಮರಾಠವಾಡ ಭಾಗದಲ್ಲಿ, ವಿದರ್ಭ ಮತ್ತು ಪಶ್ಚಿಮ ಮಹಾರಾಷ್ಟ್ರದ ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಮಹಾಯುತಿ ಮೈತ್ರಿಕೂಟಕ್ಕೆ ಆಗುತ್ತಿದ್ದ ನಷ್ಟ ಕಡಿಮೆಯಾಗಲಿದೆ ಎಂಬ ಲೆಕ್ಕಾಚಾರವಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಇದೇ ಭಾಗದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಸಾಕಷ್ಟು ಹಿನ್ನಡೆ ಅನುಭವಿಸಿತ್ತು. ಒಟ್ಟಿನಲ್ಲಿ ವ್ಯಕ್ತಿಯೊಬ್ಬ ಪ್ರಾರಂಭಿಸಿದ ಹೋರಾಟವು ರಾಜಕೀಯ ವ್ಯವಸ್ಥೆಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದಕ್ಕೆ ಮನೋಜ್ ಪಾಟೀಲರೇ ಸ್ಪಷ್ಟ ಉದಾಹರಣೆ. ಈ ಎಲ್ಲ ಕಾರಣಗಳಿಂದಾಗಿ ಈ ಸಲದ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯು ಸಾಕಷ್ಟು ಕುತೂಹಲ ಕೆರಳಿಸಿರುವುದಂತೂ ಖರೆ.

(ಲೇಖಕರು ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 330

ಸಮಾಚಾರ ಸಣ್ಣದಲ್ಲ

ಊಟದಲ್ಲಿ ಹುಳು; 50,000 ರು. ದಂಡ

ಚೆನ್ನೈ: ಭಾರತೀಯ ರೈಲ್ವೆಯ ಹೆಮ್ಮೆಯ 'ವಂದೇಭಾರತ್' ಎಕ್ಸ್‌ಪ್ರೆಸ್ ರೈಲಿನ ಊಟದಲ್ಲಿ ಹುಳುವಿದ್ದ ಹಿನ್ನೆಲೆ ಕೇಟರಿಂಗ್ ಸಿಬ್ಬಂದಿಗೆ ರೈಲ್ವೆ ಇಲಾಖೆ 50 ಸಾವಿರ ರು. ದಂಡ ವಿಧಿಸಿದೆ. ತಮಿಳುನಾಡಿನ ತಿರುನಲ್ವೇಲಿ ಜಂಕ್ಷನ್‌ನಿಂದ ಚೆನ್ನೈನ ಎಗ್‌ಮೋರ್‌ಗೆ ತೆರಳುತ್ತಿದ್ದ 'ವಂದೇ ಭಾರತ್' ಪ್ರಯಾಣಿಕರೊಬ್ಬರಿಗೆ ರೈಲಿನಲ್ಲಿ ನೀಡಿದ ಊಟದ ಸಾಂಬಾರ್‌ನಲ್ಲಿ ಸಣ್ಣ ಕೀಟಗಳಿದ್ದವು. ಅದನ್ನು ಕಂಡು ಪ್ರಯಾಣಿಕ ಆಘಾತಕ್ಕೊಳಗಾಗಿದ್ದಾರೆ. ಐಆರ್‌ಸಿಟಿಸಿಗೆ ದೂರು ಸಲ್ಲಿಸಿ ಆಹಾರದ ಫೋಟೋ ತೆಗೆದು ಜಾಲತಾಣಗಳಲ್ಲಿ ಅಪ್ಲೋಡ್ ಮಾಡಿದ್ದಾರೆ. ಇದನ್ನು ಗಮನಿಸಿದ ಕಾಂಗ್ರೆಸ್ ಸಂಸದ ಮಾಣಿಕಂ ಟ್ಯಾಗೋರ್, ಮೇಲ್ದರ್ಜೆ ರೈಲುಗಳಲ್ಲಿನ ಆಹಾರ ಸುರಕ್ಷತೆ ಬಗ್ಗೆ ಕಳವಳ ವ್ಯಕ್ತಪಡಿಸಿ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಎಕ್ಸ್ ಸಂದೇಶ ರವಾನಿಸಿದ್ದಾರೆ. ಬಳಿಕ ಎಚ್ಚೆತ್ತ ದಕ್ಷಿಣ ರೈಲ್ವೆ ಅಧಿಕಾರಿಗಳು ಆಹಾರ ಸರಬರಾಜು ಗುತ್ತಿಗೆದಾರ ಏಜೆನ್ಸಿ ಎಂಎಸ್ ಬೃಂದಾವನ್‌ಗೆ 50,000 ರು. ದಂಡ ವಿಧಿಸಿದ್ದಾರೆ.

ಎಐಎಡಿಎಂಕೆ ಜತೆ 'ಟಿವಿಕೆ' ಮೈತ್ರಿ ಇಲ್ಲ

ಚೆನ್ನೈ: ತಮಿಳುನಾಡಿನ ಖ್ಯಾತ ಚಿತ್ರನಟ ವಿಜಯ್ ಸ್ಥಾಪಿಸಿದ 'ತಮಿಳಗ ವೆಟ್ರಿ ಕಳಗಂ'(ಟಿವಿಕೆ) ಪಕ್ಷ ಎಐಎಡಿಎಂಕೆ ಜತೆ ಮೈತ್ರಿ ಮಾಡಿಕೊಳ್ಳುತ್ತಿಲ್ಲ ಎಂದು ಹೇಳಿದೆ. 2026ರ ತಮಿಳುನಾಡು ವಿಧಾನಸಭಾ ಚುನಾವಣೆಗೆ ಎಐಎಡಿಎಂಕೆ ಜತೆಗಿನ ಮೈತ್ರಿ ಬಗೆಗಿನ ಊಹಾಪೋಹಗಳಿಗೆ ತೆರೆ ಎಳೆದಿದೆ. ಪಕ್ಷದ ಪ್ರಾರಂಭೋತ್ಸವದಂದೇ ವಿಜಯ್, ಡಿಎಂಕೆ ರಾಜಕೀಯ ಎದುರಾಳಿ, ಬಿಜೆಪಿ ಸೈದ್ಧಾಂತಿಕ ಎದುರಾಳಿ ಎಂದಿದ್ದರು. ಹಾಗಾಗಿ ಎಐಎಡಿಎಂಕೆ ಜತೆ ಟಿವಿಕೆ ಮೈತ್ರಿ ಮಾಡಿಕೊಳ್ಳಬಹುದೆಂಬ ಮಾತು ಕೇಳಿಬಂದಿದ್ದವು. ಆದರೆ, ಪಕ್ಷದ ಪ್ರಧಾನ ಕಾರ್ಯದರ್ಶಿ ಆನಂದ್ ಪ್ರತಿಕ್ರಿಯಿಸಿ, 2026ರ ವಿಧಾನಸಭಾ ಚುನಾವಣೆಗೆ ಪಕ್ಷ ತಯಾರಿ ನಡೆಸುತ್ತಿದೆ. ನಿರ್ಣಾಯಕ ಗೆಲುವು ಸಾಧಿಸುವ ವಿಶ್ವಾಸವಿದೆ ಎಂದು ಹೇಳಿದ್ದಾರೆ.

ಮೋದಿಗೆ ನೈಜೀರಿಯ 2ನೇ ಅತ್ಯುನ್ನತ ಗೌರವ

ಅಬುಜಾ: ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೈಜೀರಿಯ ಸರಕಾರ 2ನೇ ಅತ್ಯುನ್ನತ ರಾಷ್ಟ್ರೀಯ ಪುರಸ್ಕಾರ 'ಗ್ರ್ಯಾಂಡ್ ಕಮಾಂಡರ್ ಆಫ್ ದಿ ಆರ್ಡರ್ ಆಫ್ ದಿ ನೈಜರ್' ಪ್ರದಾನ ಮಾಡಿ ಗೌರವಿಸಿದೆ. ನೈಜೀರಿಯ ಸರಕಾರದ ಪ್ರತಿಷ್ಠಿತ

ಗೌರವ ಪಡೆದ 2ನೇ ವಿದೇಶಿ ಗಣ್ಯ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಮೋದಿ ಪಾತ್ರರಾಗಿದ್ದಾರೆ. ನೈಜೀರಿಯ ಅಧ್ಯಕ್ಷ ಬೋಲಾ ಅಹ್ಮದ್ ತಿನುಡು ಗೌರವ ಸಮ್ಮಾನ ಪ್ರದಾನ ಮಾಡಿದರು. ಬಳಿಕ ಅನಿವಾಸಿ ಭಾರತೀಯ ರನ್ನು ಉದ್ದೇಶಿಸಿ ಮಾತನಾಡಿದ ಮೋದಿ, ಭಾರತ-ನೈಜೀರಿಯ ಸ್ನೇಹ ಹಾಗೂ ಭಾರತದ 140 ಕೋಟಿ ಜನತೆಗೆ ಈ ಪ್ರಶಸ್ತಿ ಅರ್ಪಿಸುವೆ. ಎರಡೂ ದೇಶಗಳ ಜನರ ಯೋಗಕ್ಷೇಮಕ್ಕಾಗಿ ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ ಎಂದರು. ಅಧ್ಯಕ್ಷ ಬೋಲಾ ಅಹ್ಮದ್ ತಿನುಡು ಜತೆ ದ್ವಿಪಕ್ಷೀಯ ಸಂಬಂಧ ವೃದ್ಧಿ, ರಕ್ಷಣೆ, ಇಂಧನ, ತಂತ್ರಜ್ಞಾನ, ವ್ಯಾಪಾರ, ಆರೋಗ್ಯ, ಶಿಕ್ಷಣ ಮತ್ತಿತರ ಕ್ಷೇತ್ರಗಳ ಅಭಿವೃದ್ಧಿಗೆ ಇರುವ ವಿಪುಲ ಅವಕಾಶಗಳ ಬಗೆಗೂ ಮೋದಿ ಚರ್ಚೆ ನಡೆಸಿದರು.

ಕೈಲಾಶ್ ಗೆಹ್ಲೋಟ್ ಬಿಜೆಪಿಗೆ ಸೇರ್ಪಡೆ

ದೆಹಲಿ: ದೆಹಲಿ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದೆ. ಈ ಮಧ್ಯೆಯೇ ಪಕ್ಷಾಂತರ ಪರ್ವ ಶುರುವಾಗಿದೆ. ಭಾನುವಾರ ಆಮ್ ಆದ್ಮಿ ಪಕ್ಷ ತೊರೆದ ದೆಹಲಿ ಎಎಪಿ ಸರಕಾರದ ಸಚಿವ ಕೈಲಾಶ್ ಗೆಹ್ಲೋಟ್, ಸೋಮವಾರ ಬಿಜೆಪಿ ಸೇರಿದ್ದಾರೆ. ಕೇಂದ್ರ ಸಚಿವ ಮನೋಹರ ಲಾಲ್ ಖಟ್ಟರ್, ಜಯ್ ಪಾಂಡಾ, ದುಷ್ಯಂತ್ ಗೌತಮ್, ಹರ್ಷ್ ಮಲ್ಹೋತ್ರಾ ಮತ್ತಿತರೆ ಬಿಜೆಪಿ ನಾಯಕರ ಸಮ್ಮುಖ ಗೆಹ್ಲೋಟ್ ಕಮಲ ಪಕ್ಷವನ್ನು ಸೇರಿಕೊಂಡರು. ಬಳಿಕ ಮಾತನಾಡಿ, ಸಾಮಾನ್ಯ ಜನರಿಗೆ ಸೇವೆ ಸಲ್ಲಿಸಲು ಎಎಪಿಗೆ ಸೇರಿದ್ದೆ. ಆದರೆ, ಎಎಪಿ ಅದರ ಮೂಲ ಮೌಲ್ಯಗಳು ಮತ್ತು ನೈತಿಕತೆಯಿಂದ ದೂರ ಸರಿದಿದೆ. ಹಾಗಾಗಿ ಪಕ್ಷ ತೊರೆದೆ. ಪಕ್ಷದ ನಾಯಕರು ಸಾಮಾನ್ಯ(ಆಮ್)ರಿಂದ ಗಣ್ಯರಾಗಿ ಬದಲಾಗಿದ್ದಾರೆ ಎಂದು ಹೇಳಿದರು. ಕೈಲಾಶ್ ಗೃಹ, ಸಾರಿಗೆ, ಐಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸೇರಿದಂತೆ ಪ್ರಮುಖ ಖಾತೆಗಳ ಸಚಿವರಾಗಿದ್ದರು. ವಿಧಾನಸಭಾ ಚುನಾವಣೆಗೆ 2 ತಿಂಗಳಷ್ಟೇ ಬಾಕಿಯಿರುವಾಗ ಸಚಿವರೊಬ್ಬರು ಪಕ್ಷ ತೊರೆದಿರುವುದು ಆಮ್ ಆದ್ಮಿ ಪಕ್ಷಕ್ಕೆ ಭಾರೀ ಹಿನ್ನಡೆ ಎಂದು ವಿಶ್ಲೇಷಿಸಲಾಗಿದೆ. ಗೆಹ್ಲೋಟ್ ನಿರ್ಧಾರ ತೆಗೆದುಕೊಳ್ಳಲು ಸ್ವತಂತ್ರರು. ಯಾವುದೇ ನಿರ್ಧಾರ ತೆಗೆದುಕೊಳ್ಳಬಹುದು ಎಂದು ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಪ್ರತಿಕ್ರಿಯಿಸಿದ್ದಾರೆ.

{ ಜೈರಾಮ್ ರಮೇಶ್ } ಕಾಂಗ್ರೆಸ್ ಪ್ರ.ಕಾರ್ಯದರ್ಶಿ

ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದೆ. ಸಂಸತ್ ಅಧಿವೇಶನ ಆರಂಭಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ರಾಜ್ಯಕ್ಕೆ ಭೇಟಿ ನೀಡಿ ಮಣಿಪುರದ ಸರ್ವಪಕ್ಷಗಳ ನಿಯೋಗದ ಜತೆ ಮಾತನಾಡಬೇಕು. ನ.25ರಂದು ಸಂಸತ್ ಅಧಿವೇಶನ ಆರಂಭಕ್ಕೂ ಮುನ್ನ ರಾಷ್ಟ್ರಮಟ್ಟದ ಸರ್ವಪಕ್ಷ ಸಭೆ ಕರೆಯಬೇಕು. ವೈಫಲ್ಯಕ್ಕಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜೀನಾಮೆ ನೀಡಬೇಕು.

ರಾಷ್ಟ್ರ ರಾಜಧಾನಿ ದೆಹಲಿ ವಿಷಗಾಳಿ ಗೂಡು

ಸೋಮವಾರ ಮುಂಜಾನೆ ದೆಹಲಿಯ ಎಕ್ಯುಐ ಪ್ರಮಾಣ 484 | ಅತ್ಯಂತ ಅಪಾಯಕಾರಿ ಮಟ್ಟಕ್ಕೇರಿದ ದೆಹಲಿ ವಾಯುಮಾಲಿನ್ಯ

ದೆಹಲಿ: ರಾಷ್ಟ್ರದ ರಾಜಧಾನಿ ದೆಹಲಿ ಅಕ್ಷರಶಃ ವಿಷಗಾಳಿಯ ಗೂಡಾಗಿದೆ. ದೇಶದ ಪ್ರಧಾನ ಆಡಳಿತ ಕೇಂದ್ರದಲ್ಲೇ ಗಾಳಿಯ ಗುಣಮಟ್ಟ ಸೋಮವಾರ 'ಅತ್ಯಂತ ಅಪಾಯಕಾರಿ' ಮಟ್ಟಕ್ಕೇರಿದೆ. ವಾಯು ಗುಣಮಟ್ಟ ಸೂಚಿ(ಏರ್ ಕ್ವಾಲಿಟಿ ಇಂಡೆಕ್ಸ್-ಎಕ್ಯುಐ) 484ರಷ್ಟು ದಾಖಲಾಗಿದೆ. ಇದು ಈ ಋತುವಿನಲ್ಲೇ ಅತ್ಯಂತ ಕಳಪೆ ಮಟ್ಟವಾಗಿದೆ.

ಹಾಗಾಗಿ ಕೇಂದ್ರಾಡಳಿತ ಪ್ರದೇಶ ದೆಹಲಿಯ ಸರಕಾರ, ಸೋಮವಾರ ಬೆಳಗ್ಗೆಯೇ ಆದೇಶ ಹೊರಡಿಸಿ ತಕ್ಷಣದಿಂದಲೇ ಜಿಆರ್‌ಎಪಿ-4 ನಿಯಮವನ್ನು ಜಾರಿ ಮಾಡಿರುವುದಾಗಿ ಪ್ರಕಟಿಸಿದೆ. ನಿಯಮವನ್ನು ಕಟ್ಟುನಿಟ್ಟು ಪಾಲನೆ ಮಾಡುವಂತೆಯೂ ನಾಗರಿಕರಿಗೆ ಸೂಚನೆ ನೀಡಿದೆ. ಆರ್‌ಟಿಒ, ಸಂಚಾರ ಪೊಲೀಸ್, ಕಂದಾಯ ಇಲಾಖೆ ಅಧಿಕಾರಿಗಳಿಗೂ ನಿಯಮದ ಕಟ್ಟುನಿಟ್ಟು ಜಾರಿಗೆ ಕ್ರಮ ಕೈಗೊಳ್ಳುವಂತೆ ಆದೇಶಿಸಿದೆ.



ದೆಹಲಿಯಲ್ಲಿನ ವಾಯುಮಾಲಿನ್ಯದ ಉಪಗ್ರಹ ಚಿತ್ರ.

ಕಮಿಷನ್ ಫಾರ್ ಏರ್ ಕ್ವಾಲಿಟಿ ಮ್ಯಾನೇಜ್‌ಮೆಂಟ್(ಸಿಎಕ್ಯುಎಂ) ಪರಿಷ್ಕೃತ 'ಗ್ರೇಡೆಡ್ ರೆಸ್ಪಾನ್ಸ್ ಆಕ್ಷನ್ ಪ್ಲಾನ್'(ಜಿಆರ್‌ಎಪಿ) ಅನ್ವಯ ದೆಹಲಿ-ರಾಷ್ಟ್ರೀಯ ರಾಜಧಾನಿ ವಲಯ(ಎನ್‌ಸಿಆರ್)ದಲ್ಲಿ 'ಸ್ಟೇಜ್-4' ನಿರ್ಬಂಧಗಳನ್ನು ದೆಹಲಿಯಲ್ಲಿ ಸೋಮವಾರ ಬೆಳಗ್ಗೆ 8ರಿಂದಲೇ ಜಾರಿಗೊಳಿಸಿದೆ. ಎಚ್ಚರಿಕೆ ಗಂಟೆ ಬಾರಿಸುತ್ತಿರುವ ವಾಯುಮಾಲಿನ್ಯವನ್ನು ಕ್ಷಿಪ್ರಗತಿಯಲ್ಲಿ ನಿಯಂತ್ರಣಕ್ಕೆ ತರುವ ಸಲುವಾಗಿಯೇ 'ಜಿಆರ್‌ಎಪಿ-4' ನಿಯಮವನ್ನು ಜಾರಿಗೊಳಿಸಲಾಗಿದೆ ಎಂದು 'ಸಿಎಂಕ್ಯುಎಂ' ಹೇಳಿದೆ.

ಅ.14ರಂದು ಸ್ಟೇಜ್-1, ಅ.21ರಂದು ಸ್ಟೇಜ್-2, ನ.14ರಂದು ಸ್ಟೇಜ್-3 ಜಿಆರ್‌ಎಪಿ ಜಾರಿಗೊಳಿಸಲಾಗಿತ್ತು. ಹಾಗಿದ್ದೂ ವಾಯುಮಾಲಿನ್ಯ ಪ್ರಮಾಣ ನಿಯಂತ್ರಣಕ್ಕೆ ಬಾರದೇ ಹೋಗಿದ್ದರಿಂದ ಸೋಮವಾರ ಜಿಆರ್‌ಎಪಿ-4 ನಿಯಮ ಜಾರಿತೆ ತರಲಾಗಿದೆ ಎಂದು 'ಸಿಎಕ್ಯುಎಂ' ವಿವರಿಸಿದೆ.

ದೆಹಲಿ-ಎನ್‌ಸಿಆರ್‌ನಲ್ಲಿ ಸೋಮವಾರ ಬೆಳಗ್ಗೆ ಕಂಡುಬಂದ ದೃಶ್ಯ. ಹೊಗೆ, ಧೂಳು ದಟ್ಟವಾಗಿ ಆವರಿಸಿದ ಕಾರಣ ದೆಹಲಿಯ ಹೃದಯಭಾಗದಲ್ಲಿನ ಪ್ರದೇಶದಲ್ಲಿ ಗೋಚರಿಸುವಿಕೆ ಬಹಳ ಕಡಿಮೆ ಪ್ರಮಾಣದಲ್ಲಿತ್ತು.

ಪ್ರಮುಖಾಂಶ

- ಜಿಆರ್‌ಎಪಿ-4 ನಿಯಮ ಸೋಮವಾರದಿಂದ ಕಟ್ಟುನಿಟ್ಟು ಜಾರಿ
- ಟ್ರಕ್ ಸೇರಿ ಹೊಗೆಕಾರುವ ವಾಹನಗಳಿಗೆ ದೆಹಲಿಗೆ ಪ್ರವೇಶ ಇಲ್ಲ
- ಕಟ್ಟಡ ಮತ್ತಿತರ ನಿರ್ಮಾಣ ಕಾಮಗಾರಿಗಳಿಗೆ ತಕ್ಷಣದಿಂದ ತಡೆ
- ತರಗತಿ 10-12 ಹೊರತುಪಡಿಸಿ ಉಳಿದೆಲ್ಲಾ ತರಗತಿ ಆನ್‌ಲೈನ್
- ಗಮನಕ್ಕೆ ತಾರದೇ ನಿಯಮಗಳ ಸಡಿಲಿಸದಂತೆ ಸುಪ್ರೀಂ ಆದೇಶ

ದೆಹಲಿ ಎಕ್ಯುಐ 484ಕ್ಕೆ!

ದೆಹಲಿಯ ವಾಯುಗುಣಮಟ್ಟ ಸೋಮವಾರ ಬೆಳಗ್ಗೆಯೇ 458(ಎಕ್ಯುಐ) ಮಟ್ಟಕ್ಕೇರಿದೆ. ಭಾನುವಾರ ಬೆಳಗ್ಗೆ ಎಕ್ಯುಐ 441 ಮಟ್ಟದಲ್ಲಿದ್ದುದು ಸಂಜೆ 5ರ ವೇಳೆಗೆ 457ಕ್ಕೇರಿತ್ತು. ಸೋಮವಾರ ಮುಂಜಾನೆ ಹೊತ್ತಿಗೆ ಇನ್ನಷ್ಟು ಅಪಾಯಕಾರಿ ಮಟ್ಟಕ್ಕೇರಿತು.

ದೆಹಲಿಯ ವಾಯುಮಂಡಲವನ್ನು ವಿಷಕಾರಿ ಹೊಗೆ, ಧೂಳು ದಟ್ಟವಾಗಿ ಆವರಿಸಿದ್ದರಿಂದ ಸೋಮವಾರ ಬೆಳಗ್ಗೆ ತುಸು ದೂರದವರೆಗಿನ ಎದುರಿನ ಜಾಗ, ರಸ್ತೆ ಗೋಚರವೇ ಆಗದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ರಸ್ತೆಗಳಲ್ಲಿ ವಾಹನಗಳ ಮುಂದಿನ ಪ್ರಖರ ದೀಪಗಳನ್ನು ಬೆಳಗಿಸಿದರೂ ರಸ್ತೆ ಗೋಚರಿಸುವುದು ಕಷ್ಟವೇ ಆಗಿತ್ತು. ಪರಿಣಾಮ, ರಸ್ತೆಗಳಲ್ಲಿ ವಾಹನ ಸಂಚಾರ ಕಡಿಮೆಯಾಯಿತು. ರೈಲು, ವಿಮಾನಗಳ ಸಂಚಾರದ ಮೇಲೆಯೂ ಪರಿಣಾಮ ಬೀರಿತು.

ಅಧಿಕಾರಿಗಳ ಪ್ರಕಾರ, ಸಫ್ದರ್‌ಜಂಗ್ ವಿಮಾನ ನಿಲ್ದಾಣದಲ್ಲಿ 150 ಮೀ.ವರೆಗಷ್ಟೇ ಗೋಚರಿಸುವ ಪರಿಸ್ಥಿತಿ ಇತ್ತು. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಕಾರ, ಬೆಳಗ್ಗೆ 8 ಗಂಟೆಗೆ ದೆಹಲಿಯ ವಾಯು ಗುಣಮಟ್ಟ ಸೂಚಿ(ಎಕ್ಯುಐ) 484ರಷ್ಟಿತ್ತು.

ಜಿಆರ್‌ಎಪಿ-4 ನಿಯಮ

ಜಿಆರ್‌ಎಪಿ-4 ನಿಯಮದನ್ವಯ, ರಾಷ್ಟ್ರ ರಾಜಧಾನಿ ದೆಹಲಿ ಮಹಾನಗರದೊಳಗೆ ಸರಕು ಸಾಗಣೆ ಟ್ರಕ್‌ಗಳ ಪ್ರವೇಶ ನಿಷೇಧಿಸಲಾಗಿದೆ. ಕಟ್ಟಡ ನಿರ್ಮಾಣ, ಸೇತುವೆ, ಕಾಲುವೆ ಸೇರಿದಂತೆ ಯಾವುದೇ ನಿರ್ಮಾಣ ಕಾಮಗಾರಿ, ನೆಲಸಮ ಕಾರ್ಯ ತಕ್ಷಣವೇ ಸ್ಥಗಿತಗೊಳಿಸಲು ಕಟ್ಟುನಿಟ್ಟು ಸೂಚನೆ ನೀಡಲಾಗಿದೆ. 10 ಮತ್ತು 12ನೇ ತರಗತಿ ಹೊರತುಪಡಿಸಿ ಉಳಿದೆಲ್ಲಾ ತರಗತಿಗಳ ಮಕ್ಕಳಿಗೆ ಶಾಲೆ ಬದಲು ಮನೆಯಲ್ಲೇ ಆನ್‌ಲೈನ್ ಶಿಕ್ಷಣಕ್ಕೆ ಸೂಚನೆ ನೀಡಲಾಗಿದೆ. ವಾಯು ಮಾಲಿನ್ಯ ನಿಯಂತ್ರಣಕ್ಕೆ ಕಠಿಣ ಕ್ರಮಗಳಿರುವ ಜಿಆರ್‌ಎಪಿ-4 ನಿಯಮಗಳು ಸೋಮವಾರ ಬೆಳಗ್ಗೆಯಿಂದಲೇ ಜಾರಿಗೆ ಬಂದಿವೆ. ಅಗತ್ಯ ವಸ್ತುಗಳ ಸಾಗಣೆ, ಶುದ್ಧ ಇಂಧನ (ಎಲ್‌ಎನ್‌ಜಿ/ಸಿಎನ್‌ಜಿ/ಬಿಎಸ್-4 ಡೀಸೆಲ್/ವಿದ್ಯುತ್) ಚಾಲಿತ ಟ್ರಕ್‌ಗಳ ಹೊರತು ಬೇರಾವುದೇ ಟ್ರಕ್‌ಗಳಿಗೆ ದೆಹಲಿ ಎನ್‌ಸಿಆರ್ ಪ್ರವೇಶಕ್ಕೆ ಅವಕಾಶವಿಲ್ಲ. ವಿದ್ಯುತ್, ಸಿಎನ್‌ಜಿ ಮತ್ತು ಬಿಎಸ್-6 ಡೀಸೆಲ್ ವಾಹನಗಳ ಹೊರತು ದೆಹಲಿಯ ಹೊರಗೆ ನೋಂದಾಯಿಸಿದ ಲಘು ವಾಣಿಜ್ಯ ವಾಹನಗಳ ದೆಹಲಿ ಎನ್‌ಸಿಆರ್ ಪ್ರವೇಶಕ್ಕೆ ನಿಷೇಧ.

ನಿಯಮ-4 ಸಡಿಲಿಸುವಂತಿಲ್ಲ: ಸುಪ್ರೀಂ ಕೋರ್ಟ್

ದೆಹಲಿ: ದೆಹಲಿ ರಾಷ್ಟ್ರ ರಾಜಧಾನಿ ವಲಯ(ಎನ್‌ಸಿಆರ್)ದಲ್ಲಿ ವಾಯು ಗುಣಮಟ್ಟ ಆತಂಕಕಾರಿ ಮಟ್ಟ ಮುಟ್ಟಿದೆ. ಜಿಆರ್‌ಎಪಿ-4 ನಿಯಮ ಜಾರಿಗೊಳಿಸುವುದರಲ್ಲಿ ತೀರಾ ವಿಳಂಬವಾಗಿದೆ ಎಂದಿರುವ ನ್ಯಾ.ಅಭಯ್ ಎಸ್.ಓಕಾ ಮತ್ತು ನ್ಯಾ.ಅಗಸ್ಟಿನ್ ಜಾರ್ಜ್ ಮಸಿಹ್ ಅವರ ಪೀಠ, ದೆಹಲಿ ಸರಕಾರವನ್ನು ಆ ಬಗ್ಗೆ ಪ್ರಶ್ನೆ ಮಾಡಿದೆ. ಎಕ್ಯುಐ 300-400 ಮಟ್ಟ ತಲುಪಿದಾಗಲೇ ಜಿಆರ್‌ಎಪಿ-4 ಜಾರಿಗೆ ತರಬಹುದಾಗಿತ್ತು ಎಂದಿರುವ ಪೀಠ, ಈಗ ಜಾರಿಗೊಳಿಸಿದ ಜಿಆರ್‌ಎಪಿ-4 ನಿಯಮವನ್ನು ನ್ಯಾಯಾಲಯದ ಗಮನಕ್ಕೆ ತಾರದೇ ಯಾವುದೇ ಕಾರಣಕ್ಕೂ ಸಡಿಲಿಸುವಂತಿಲ್ಲ. ಎಕ್ಯುಐ- 400ಕ್ಕಿಂತ ತಗ್ಗಿದರೂ ಜಿಆರ್‌ಎಪಿ-4 ನಿಯಮವನ್ನೇ ಮುಂದುವರಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದೆ. ಪರಿಶುದ್ಧ ಗಾಳಿ ಇರುವಂತೆ ನೋಡಿಕೊಳ್ಳುವುದು ಪ್ರತಿಯೊಂದು ಸರಕಾರದ ಕರ್ತವ್ಯವಾಗಿದೆ. ಅದನ್ನು ಸಂವಿಧಾನದಲ್ಲಿಯೇ ಹೇಳಲಾಗಿದೆ ಎಂದು ಪೀಠ ಹೇಳಿದೆ.

ಕಚೇರಿ ಕೆಲಸದ ವೇಳೆ ತಗ್ಗಿಸಿ: ನೌಕರರ ಪತ್ರ

ದೆಹಲಿ: ರಾಷ್ಟ್ರ ರಾಜಧಾನಿ ವಲಯದಲ್ಲಿ ವಾಯುಮಾಲಿನ್ಯ ಅಪಾಯಕಾರಿ ಮಟ್ಟ ಮುಟ್ಟಿರುವುದರಿಂದ ಕಚೇರಿ ನೌಕರರ ಆರೋಗ್ಯದ ಮೇಲೆ ಋಣಾತ್ಮಕ ಪರಿಣಾಮ ಉಂಟಾಗುತ್ತಿದೆ. ಹಾಗಾಗಿ, ಎಲ್ಲಾ ಸರಕಾರಿ ಕಚೇರಿಗಳಲ್ಲಿ ಕೆಲಸದ ಸಮಯ ಕಡಿಮೆ ಮಾಡಬೇಕಿದೆ. ವಾಯು ಶುದ್ಧೀಕರಣ ಯಂತ್ರಗಳನ್ನು ಕಚೇರಿಗಳಲ್ಲಿ ಅಳವಡಿಸಬೇಕಿದೆ. ವಯಸ್ಸಿನಲ್ಲಿ ಹಿರಿಯರಾದ ಸಿಬ್ಬಂದಿಗೆ ಮನೆಯಿಂದಲೇ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕಿದೆ ಎಂದು ಕೇಂದ್ರ ಸಚಿವಾಲಯ ಸೇವೆ(ಸಿಎಸ್‌ಎಸ್) ಪ್ರತಿನಿಧಿಸುವ ಸಂಸ್ಥೆ ಕೇಂದ್ರ ಸರಕಾರದ ಸಿಬ್ಬಂದಿ ಇಲಾಖೆಗೆ ಸೋಮವಾರ ಪತ್ರ ಬರೆದು ಮನವಿ ಮಾಡಿದೆ.

ವಿಶೇಷವಾಗಿ ಸರಕಾರಿ ಸೇವೆಗಳಲ್ಲಿ ತೊಡಗಿರುವವರ ಯೋಗಕ್ಷೇಮ ಖಚಿತಪಡಿಸಿಕೊಳ್ಳಲು ತುರ್ತುಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಗತ್ಯವಾಗಿದೆ. ನೌಕರರು, ಅವರ ಕುಟುಂಬದವರಲ್ಲಿ ಉಸಿರಾಟದ ತೊಂದರೆ, ಇತರೆ ಆರೋಗ್ಯ ಸಮಸ್ಯೆಗಳ ಉಲ್ಬಣಕ್ಕೆ ಕಾರಣವಾಗುತ್ತದೆ ಎಂದು ಸಿಎಸ್‌ಎಸ್ ಫೋರಂ ಪ್ರಧಾನ ಕಾರ್ಯದರ್ಶಿ ಅಶುತೋಷ್ ಮಿಶ್ರಾ ಪತ್ರದಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

ಆ್ಯಂಬುಲೆನ್ಸ್‌ಗೆ ಅಡ್ಡಿ; ಕಾರು ಚಾಲಕನಿಗೆ 2.5 ಲಕ್ಷ ರು. ದಂಡ

ತಿರುವನಂತಪುರಂ: ಕೇರಳದ ತಿರುವನಂತಪುರದಲ್ಲಿ ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ ರೋಗಿಯನ್ನು ಆದಷ್ಟೂ ಬೇಗ ಆಸ್ಪತ್ರೆಗೆ ತಲುಪಿಸಲು ವೇಗವಾಗಿ ಹೋಗುತ್ತಿದ್ದ ಆ್ಯಂಬುಲೆನ್ಸ್‌ಗೆ ದಾರಿ ಕೊಡದೇ ಸತಾಯಿಸಿದ ಕಾರು ಚಾಲಕನಿಗೆ 2.50 ಲಕ್ಷ ರು. ದಂಡ ವಿಧಿಸಿ, ಆತನ ಚಾಲನಾ ಪರವಾನಗಿ(ಡಿಎಲ್) ರದ್ದುಪಡಿಸಲಾಗಿದೆ. ಆ್ಯಂಬುಲೆನ್ಸ್ ಚಾಲಕ ಅದೆಷ್ಟೇ ಬಾರಿ ಹಾರ್ನ್ ಮಾಡಿದರೂ ಕಾರು ಚಾಲಕ ದಾರಿ ಬಿಟ್ಟಿಲ್ಲ, ರಸ್ತೆ ಮಧ್ಯೆಯೇ ಕಾರನ್ನು ಚಲಾಯಿಸಿ ತುರ್ತು ವಾಹನಕ್ಕೆ ಅಡ್ಡಿ ಮಾಡಿದ್ದಾರೆ. ಈ ಸಂದರ್ಭವನ್ನು ಆ್ಯಂಬುಲೆನ್ಸ್ ಚಾಲಕ ಮೊಬೈಲ್‌ನಲ್ಲಿ ಸೆರೆ ಹಿಡಿದು ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ವಿಡಿಯೋ ವೈರಲ್ ಆಗಿದ್ದು, ಕೇರಳ ಸಂಚಾರ ವಿಭಾಗ ಪೊಲೀಸರ ಗಮನಕ್ಕೂ ಬಂದಿದೆ. ವಿಡಿಯೊದಿಂದಲೇ ಕಾರಿನ ನಂಬರ್ ಕಂಡುಕೊಂಡ ಪೊಲೀಸರು, ಬಳಿಕ ಅದರ ಮಾಲೀಕನನ್ನು ಪತ್ತೆ ಮಾಡಿ ಆತನ ಮನೆಗೇ ಹೋಗಿ 2.50 ಲಕ್ಷ ರು. ದಂಡ ವಿಧಿಸಿ ನೋಟಿಸ್ ಜಾರಿ ಮಾಡಿದ್ದಾರೆ. ಅಲ್ಲದೇ ಆತನ ಚಾಲನಾ ಪರವಾನಗಿಯನ್ನೂ ರದ್ದು ಮಾಡಿದ್ದಾರೆ.

ಪ್ರಧಾನಿ ಮೋದಿಗೆ ಬ್ರೆಜಿಲ್ ಅದ್ದೂರಿ ಸ್ವಾಗತ

ವಿಶ್ವ ನಾಯಕರ ಜತೆ ಜಿ-20 ಶೃಂಗಸಭೆಗೆ ಸಜ್ಜಾದ ಬ್ರೆಜಿಲ್ | ದಕ್ಷಿಣ ದೇಶಗಳ ವಿಷಯ-ಗಂಭೀರ ಸಮಸ್ಯೆ ಚರ್ಚೆ: ಮೋದಿ

ರಿಯೊ ಡಿ ಜನೈರೊ: ಆಫ್ರಿಕಾ ಖಂಡದ ನೈಜೀರಿಯ ಭೇಟಿ ಬಳಿಕ ಪ್ರಧಾನಿ ನರೇಂದ್ರ ಮೋದಿ ಬ್ರೆಜಿಲ್ ತಲುಪಿದ್ದಾರೆ. ಜಿ-20 ವಿಶ್ವ ನಾಯಕರ ಶೃಂಗಸಭೆಯಲ್ಲಿ ಮೋದಿ ಪಾಲ್ಗೊಳ್ಳಲಿದ್ದಾರೆ.

ಬ್ರೆಜಿಲ್‌ನಲ್ಲಿರುವ ಭಾರತೀಯ ರಾಯಭಾರಿ ಸುರೇಶ್ ರೆಡ್ಡಿ ನೇತೃತ್ವದ ಭಾರತೀಯ ಪ್ರತಿನಿಧಿಗಳ ತಂಡ ಪ್ರಧಾನಿ ಮೋದಿ ಅವರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿತು. ಅಲ್ಲದೇ ಸಾವಿರಾರು ಅನಿವಾಸಿ ಭಾರತೀಯರು ನೆರೆದಿದ್ದು, ತ್ರಿವರ್ಣ ಧ್ವಜ, ಮೋದಿ ಭಾವಚಿತ್ರ ಹಿಡಿದು ನೆಚ್ಚಿನ ಪ್ರಧಾನಿಯನ್ನು ಸಂಭ್ರಮದಿಂದ ಬರಮಾಡಿಕೊಂಡರು. ಭಾರತೀಯ ಸಮುದಾಯದ ಜತೆ ಮೋದಿ ಆತ್ಮೀಯವಾಗಿ ಸಂವಹನ ನಡೆಸಿದರು. ಪುಟ್ಟ ಮಕ್ಕಳ ಜತೆ ಸಂಭ್ರಮಿಸಿದರು.

ಜಿ-20 ಶೃಂಗಸಭೆಯಲ್ಲಿ ವಿಶ್ವ ನಾಯಕರ ಜತೆ ಫಲಪ್ರದ ಮಾತುಕತೆ ಎದುರು ನೋಡುತ್ತಿರುವೆ ಎಂದು ಮೋದಿ ಹೇಳಿದ್ದಾರೆ.

ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಮತ್ತು ಅಮೆರಿಕ ಅಧ್ಯಕ್ಷ ಜೋ ಬೈಡನ್, ಫ್ರಾನ್ಸ್ ಅಧ್ಯಕ್ಷ ಎರ್ಡೋಗನ್ ಮತ್ತಿತರ ನಾಯಕರು ಶೃಂಗದಲ್ಲಿ ಪಾಲ್ಗೊಳ್ಳಲಿದ್ದಾರೆ. ಶೃಂಗಸಭೆ ಬಳಿಕ ವಿವಿಧ ದೇಶಗಳ ಮುಖ್ಯಸ್ಥರನ್ನು ಭೇಟಿಯಾಗಲಿರುವ ಮೋದಿ, ದ್ವಿಪಕ್ಷೀಯ ಸಭೆಗಳನ್ನು ನಡೆಸಲಿದ್ದಾರೆ. ನಂತರ ಮೋದಿ ನ.21ರವರೆಗೆ ಗಯಾನ ಪ್ರವಾಸ ಕೈಗೊಳ್ಳಲಿದ್ದಾರೆ.

ಮೋದಿಗೆ ಬ್ರೆಜಿಲ್ ವಿದ್ವಾಂಸರಿಂದ ವೇದ ಮಂತ್ರಗಳ ಸ್ವಾಗತ: ರಾಜಧಾನಿ ರಿಯೊ ಡಿ ಜನೈರೊ ನಗರದಲ್ಲಿ ಭಾರತದ ಪ್ರಧಾನಿಗೆ ಅದ್ದೂರಿ ಸ್ವಾಗತ ದೊರೆತಿದೆ. ಹಿಂದೂ ಧರ್ಮವನ್ನು ಅನುಸರಿಸುತ್ತಿರುವ ಬ್ರೆಜಿಲ್ ನಾಗರಿಕರ ಒಂದು ತಂಡ ಕಚ್ಚೆಪಂಚೆ-ಶಲ್ಯ ಧರಿಸಿ, ವಿಭೂತಿ ಬಳಿದುಕೊಂಡು ವೇದಮಂತ್ರ ಘೋಷದೊಂದಿಗೆ ಪ್ರಧಾನಿ ಮೋದಿ ಅವರನ್ನು ಸ್ವಾಗತಿಸಿತು. ನಾಲ್ವರು ಮಹಿಳೆಯರೂ ಭಾರತೀಯ ನಾರಿಯರಂತೆಯೇ ಸೀರೆ-ಕುಪ್ಪಸ ತೊಟ್ಟು, ಹಣೆಗೆ ತಿಲಕವಿದ್ದು ಸ್ಪಷ್ಟವಾಗಿ ಮಂತ್ರಘೋಷ ನಡೆಸಿದರು. ಮೋದಿ ಚಪ್ಪಾಳೆ ತಟ್ಟಿ ಮೆಚ್ಚಿಗೆ ವ್ಯಕ್ತಪಡಿಸಿದರು. ಗುಜರಾತ್ ಮೂಲದ ಮಹಿಳೆಯರ ತಂಡ ರಾಜ್ಯದ ನೃತ್ಯ ಪ್ರದರ್ಶನ ನೀಡಿ ತವರೂರ ವಿಶೇಷ ಅತಿಥಿಯನ್ನು ಬರಮಾಡಿಕೊಂಡಿತು. ರಿಯೊ ಡಿ ಜನೈರೊದಲ್ಲಿನ ಹೋಟೆಲ್‌ಗೆ ಮೋದಿ ಆಗಮಿಸುತ್ತಿದ್ದಂತೆ ಅನಿವಾಸಿ ಭಾರತೀಯರು 'ಮೋದಿ ಮೋದಿ' ಘೋಷಣೆ ಮೊಳಗಿಸಿದರು.

ಮಣಿಪುರ: ಹೆಚ್ಚುವರಿ 5000 ಯೋಧರ ರವಾನೆ

ದೆಹಲಿ: ಮಣಿಪುರ ರಾಜ್ಯದಲ್ಲಿ ಹಿಂಸಾಚಾರ ದಿನೇ ದಿನೇ ಉಲ್ಬಣಗೊಳ್ಳುತ್ತಿರುವುದರಿಂದ ಹೆಚ್ಚುವರಿಯಾಗಿ 5000 ಯೋಧರನ್ನು ತಕ್ಷಣವೇ ರವಾನೆ ಮಾಡಲು ಕೇಂದ್ರ ಗೃಹ ಸಚಿವಾಲಯ ಆದೇಶಿಸಿದೆ.

ಕೇಂದ್ರ ಸರಕಾರ ಮಣಿಪುರಕ್ಕೆ ಹೆಚ್ಚುವರಿಯಾಗಿ ಸಿಎಪಿಎಫ್‌ನ ಹೆಚ್ಚುವರಿ 50 ಕಂಪನಿಗಳನ್ನು ರಾಜ್ಯಕ್ಕೆ ಕಳುಹಿಸುತ್ತಿದೆ. ಇದಕ್ಕೂ ಮುನ್ನ ಕೆಲವೇ ದಿನಗಳ ಹಿಂದೆ ಸಿಎಪಿಎಫ್‌ನ 20 ಬೆಟಾಲಿಯನ್‌ಗಳನ್ನು ಹಿಂಸಾಗ್ರಸ್ತ ಮಣಿಪುರಕ್ಕೆ ಕಳುಹಿಸಿಕೊಡಲಾಗಿದೆ. ಹಾಗಿದ್ದೂ ಹಿಂಸಾಚಾರ ಹತೋಟಿಗೆ ಬರದ ಕಾರಣ, ಹೆಚ್ಚುವರಿ 50 ಬೆಟಾಲಿಯನ್‌ಗಳ ರವಾನೆಗೆ ಸಚಿವ ಅಮಿತ್ ಶಾ ನೇತೃತ್ವದ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.

ಇದೊಂದು ವಾರದಲ್ಲೇ ಹೆಚ್ಚುವರಿಯಾಗಿ 70 ಬೆಟಾಲಿಯನ್ ಯೋಧರ ಪಡೆಯನ್ನು ರಾಜ್ಯಕ್ಕೆ ರವಾನಿಸಿದಂತಾಗಿದೆ. ಅಷ್ಟೇ ಅಲ್ಲದೇ, ಸಿಆರ್‌ಪಿಎಫ್ ಮಹಾನಿರ್ದೇಶಕ ಎ.ಡಿ.ಸಿಂಗ್ ಮತ್ತು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ (ಸಿಎಪಿಎಫ್) ಹಿರಿಯ ಅಧಿಕಾರಿಗಳು ಸಹ ರಾಜ್ಯದಲ್ಲಿಯೇ ಉಳಿದು ಪರಿಸ್ಥಿತಿ ನಿಯಂತ್ರಣ ಕಾರ್ಯದ ಉಸ್ತುವಾರಿ ವಹಿಸಿಕೊಂಡಿದ್ದಾರೆ.

ಗೃಹ ಸಚಿವ ಅಮಿತ್ ಶಾ ಸರಣಿ ಸಭೆ

ದೆಹಲಿ: ಈಶಾನ್ಯ ರಾಜ್ಯ ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಉಲ್ಬಣಿಸಿರುವ ಹಿನ್ನೆಲೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನೇತೃತ್ವದಲ್ಲಿ ಸೋಮವಾರ ಉನ್ನತ ಮಟ್ಟದ ಸಭೆ ನಡೆಸಲಾಗಿದೆ. ಕೇಂದ್ರ ಮೀಸಲು ಪಡೆಗಳು, ಸಶಸ್ತ್ರ ಪೊಲೀಸ್ ಪಡೆಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದು, ರಾಜ್ಯದಲ್ಲಿನ ಪರಿಸ್ಥಿತಿಯ ಕುರಿತು ಚರ್ಚಿಸಲಾಯಿತು. ಮಣಿಪುರ ರಾಜ್ಯದ ಭದ್ರತೆಗೆ ಸಂಬಂಧಿಸಿದ ಗೃಹ ಸಚಿವರ ನೇತೃತ್ವದಲ್ಲಿ ಸತತ 2ನೇ ದಿನವೂ ಸರಣಿ ಸಭೆಗಳನ್ನು ನಡೆಸಲಾಗಿದೆ. ಈಶಾನ್ಯ ರಾಜ್ಯದಲ್ಲಿ ಹಿಂಸಾಚಾರ ನಿಯಂತ್ರಿಸಲೆಂದೇ ಕೇಂದ್ರ ಗೃಹ ಸಚಿವಾಲಯ, ಭದ್ರತಾ ಪಡೆಗಳ ನಿಯೋಜನೆ ಪ್ರಮಾಣವನ್ನು ಹೆಚ್ಚಿಸಲು ನಿರ್ಧರಿಸಿದೆ. ಅಲ್ಲದೇ, ರಾಜ್ಯದಲ್ಲಿ ಶಾಂತಿ-ಸುವ್ಯವಸ್ಥೆ ಕಾಪಾಡಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುವಂತೆ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳು(ಸಿಎಪಿಎಫ್) ಮತ್ತು ರಾಜ್ಯ ಪೊಲೀಸ್ ಅಧಿಕಾರಿಗಳಿಗೆ ಸಚಿವ ಅಮಿತ್ ಶಾ ನಿರ್ದೇಶನ ನೀಡಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಗೋಲಿಬಾರ್‌ಗೆ ಯುವಕ ಬಲಿ: ಈ ಮಧ್ಯೆ, ಮಣಿಪುರದ ಜಿರಿಬಾಮ್ ಜಿಲ್ಲೆಯಲ್ಲಿ ಮೈತೇಯಿ ಸಮುದಾಯದವರು ಭಾನುವಾರ ಪ್ರತಿಭಟನೆ ನಡೆಸಿದಾಗ ಕೆಲ ಸಮಯದ ನಂತರ ಹಿಂಸಾಚಾರಕ್ಕೆ ತಿರುಗಿತು. ಕೋಪೋದ್ರಿಕ್ತ ಜನರನ್ನು ನಿಯಂತ್ರಿಸಲು ಭದ್ರತಾ ಪಡೆಗಳು ಗೋಲಿಬಾರ್ ನಡೆಸಬೇಕಾಯಿತು. ಪರಿಣಾಮ 20 ವರ್ಷದ ಯುವಕ ಸಾವನ್ನಪ್ಪಿದ.

ಆ ಬಳಿಕ ಇಂಫಾಲ ಪಶ್ಚಿಮ ಮತ್ತು ಪೂರ್ವ ಜಿಲ್ಲೆಗಳಲ್ಲಿ ಕರ್ಫ್ಯೂ ವಿಧಿಸಲಾಯಿತು. 7 ಜಿಲ್ಲೆಗಳಲ್ಲಿ ಇಂಟರ್ನೆಟ್ ಸೇವೆ ಸ್ಥಗಿತಗೊಳಿಸಲಾಗಿದೆ.

ಎನ್‌ಐಎ ತನಿಖೆ: ಮಣಿಪುರದಲ್ಲಿ ಇತ್ತೀಚೆಗೆ ನಡೆದ ಹಿಂಸಾಚಾರ ಪ್ರಕರಣಗಳಿಗೆ ಸಂಬಂಧಿಸಿ ಕೇಂದ್ರ ಗೃಹ ಸಚಿವಾಲಯದ ನಿರ್ದೇಶನದ ಮೇರೆಗೆ ಮೂರು ಪ್ರಕರಣಗಳ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಹಿಸಿಕೊಂಡಿದೆ.

ಖಮೇನಿ ಉತ್ತರಾಧಿಕಾರಿ ಮೊಜ್ತಾಬಾ ರಹಸ್ಯ ಆಯ್ಕೆ

ಟೆಹರಾನ್: ಇರಾನ್ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಆರೋಗ್ಯ ವಯೋಸಹಜವಾಗಿ ಕ್ಷೀಣವಾಗುತ್ತಿರುವ ಹಿನ್ನೆಲೆ ಅವರ ಉತ್ತರಾಧಿಕಾರಿ ಆಯ್ಕೆ ರಹಸ್ಯವಾಗಿ ನೆರವೇರಿದೆ ಎಂದು ತಿಳಿದುಬಂದಿದೆ.

ಅನಾರೋಗ್ಯಕ್ಕೊಳಗಾಗಿರುವ 85 ವರ್ಷದ ಅಲಿ ಖಮೇನಿ ಉತ್ತರಾಧಿಕಾರಿಯಾಗಿ ಅವರ 2ನೇ ಪುತ್ರ ಮೊಜ್ತಾಬಾ ಖಮೇನಿ ಅವರನ್ನು ಆಯ್ಕೆ ಮಾಡಲಾಗಿದೆ. ಟೆಹ್ರಾನ್‌ನಲ್ಲಿ ನಡೆದ ರಹಸ್ಯ ಸಭೆಯಲ್ಲಿ ದೇಶದ ಮುಂದಿನ ಮುಖ್ಯಸ್ಥರಾಗಿ ಮೊಜ್ತಾಬಾ ಖಮೇನಿ ಆಯ್ಕೆಯಾಗಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಇಸ್ರೇಲ್ ಜತೆಗಿನ ಯುದ್ಧ-ಉದ್ವಿಗ್ನತೆ ಮಧ್ಯೆಯೇ ಷಿಯಾ ಮುಸ್ಲಿಂ ರಾಷ್ಟ್ರ ಇರಾನ್‌ನಲ್ಲಿ ಈ ವರ್ಷವೇ ನಾಯಕತ್ವ ಬದಲಾವಣೆ ಕಾಣಬರುವ ಸಾಧ್ಯತೆಯಿದೆ ಎಂದು ಪರ್ಷಿಯನ್ ಅಂತಾರಾಷ್ಟ್ರೀಯ ಮಾಧ್ಯಮ ಸಂಸ್ಥೆ 'ಇರಾನ್ ಇಂಟರ್‌ನ್ಯಾಷನಲ್' ವರದಿ ಮಾಡಿದೆ.

ವರದಿಗಳ ಪ್ರಕಾರ, ವಯೋಸಹಜ ಕಾರಣದಿಂದ ತೀವ್ರ ಅನಾರೋಗ್ಯಕ್ಕೊಳಗಾಗಿರುವ ಆಯತೊಲ್ಲಾ ಅವರು ಸದ್ಯದಲ್ಲೇ ಅಧಿಕಾರ ತೊರೆದು ಪುತ್ರ ಮೊಜ್ತಾಬಾಗೆ ಅಧಿಕಾರ ಹಸ್ತಾಂತರಿಸಬಹುದು. 2 ವರ್ಷಗಳಿಂದಲೇ ಮೊಜ್ತಾಬಾ ತನ್ನ ತಂದೆಯ ಜವಾಬ್ದಾರಿ ತೆಗೆದುಕೊಳ್ಳಲು ತಯಾರಿ ನಡೆಸುತ್ತಿದ್ದಾರೆ ಎಂಬ ಮಾತುಗಳೂ ಕೇಳಿಬರುತ್ತಿವೆ. ಆಯತೊಲ್ಲಾ ಅವರ ಸೂಚನೆ ಮೇರೆಗೇ ಇರಾನ್ ತಜ್ಞರ ಅಸೆಂಬ್ಲಿಯ 60 ಸದಸ್ಯರ ರಹಸ್ಯ ಸಭೆ ನಡೆದಿದೆ. ಉತ್ತರಾಧಿಕಾರಿ ಆಯ್ಕೆ ಬಗ್ಗೆ ನಿರ್ಧಾರ ಕೈಗೊಳ್ಳಲು ಸದಸ್ಯರಿಗೆ ಸೂಚಿಸಲಾಗಿದೆ. ಸಭೆಯಲ್ಲಿದ್ದ ಸದಸ್ಯರು ಸರ್ವಾನುಮತದಿಂದ ಮೊಜ್ತಾಬಾ ಅವರನ್ನು ಉತ್ತರಾಧಿಕಾರಿ ಎಂದು ಘೋಷಿಸಿದರು. ಸಭೆ ವಿವರಗಳನ್ನು 5 ವಾರ ಗೌಪ್ಯವಾಗಿಡಲಾಗಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಆಯೋಧ್ಯೆ ಆಯಿತು, ಮಥುರಾ ಬಾಕಿ: ಯೋಗಿ

ಜಾರ್ಖಂಡ್‌ನಲ್ಲಿ ಉ.ಪ್ರ. ಸಿಎಂ ಚುನಾವಣಾ ಪ್ರಚಾರ

ರಾಂಚಿ: ಶ್ರೀರಾಮ ಭಗವಾನರ ಜನ್ಮಭೂಮಿಯಲ್ಲೇ ಶ್ರೀರಾಮಲಲ್ಲಾಗಾಗಿ ಭವ್ಯ ರಾಮಮಂದಿರ ನಿರ್ಮಾಣವಾಗಿದೆ. ಈಗ ಮಥುರಾದಲ್ಲಿನ ಶ್ರೀಕೃಷ್ಣ ಜನ್ಮಸ್ಥಳದಲ್ಲಿ ಕೃಷ್ಣ ಕನ್ನಯ್ಯಾನಿಗೆ ದೇಗುಲ ನಿರ್ಮಾಣ ಆಗಬೇಕಿದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದ್ದಾರೆ.

ನ.20ರಂದು ಎರಡನೇ ಹಂತದಲ್ಲಿ 38 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ಎದುರಿಸಲಿರುವ ಜಾರ್ಖಂಡ್‌ನಲ್ಲಿ ಬಿಜೆಪಿ ಸೇರಿ ಎನ್‌ಡಿಎ ಅಭ್ಯರ್ಥಿಗಳ ಪರವಾಗಿ ಸೋಮವಾರ ಪ್ರಚಾರ ನಡೆಸಿದ ಯೋಗಿ, ಮುಖ್ಯಮಂತ್ರಿ ಹೇಮಂತ್ ಸೊರೇನ್ ಆಡಳಿತ ಅವಧಿಯಲ್ಲಿ ಬಾಂಗ್ಲಾದೇಶಿ ಮುಸ್ಲಿಮರ ಒಳನುಸುಳುವಿಕೆ ಮಿತಿಮೀರಿದೆ. ರಾಜ್ಯ ಸರಕಾರದ ಆಡಳಿತದಲ್ಲಿ ಭ್ರಷ್ಟಾಚಾರವೇ ತಾಂಡವವಾಡುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಸರಕಾರ ಜಾರ್ಖಂಡ್‌ನಲ್ಲಿ ರಚನೆಯಾದ ಬಳಿಕ ಬುಲ್ಡೋಜರ್ ಘರ್ಜಿಸಲಿದೆ. ಜನರ ತೆರಿಗೆ ಹಣ ನುಂಗಿ ಸಿರಿವಂತರಾದವರ ಆಸ್ತಿಗಳನ್ನು ಧ್ವಂಸ ಮಾಡಲಿದೆ. ಅಕ್ರಮವಾಗಿ ನುಸುಳಿಕೊಂಡು ಜಾರ್ಖಂಡ್‌ನಲ್ಲಿ ಬುಡಕಟ್ಟು ಜನರ ಜಾಗದಲ್ಲಿ ನೆಲೆಸಿದವರನ್ನು ಒದ್ದು ಓಡಿಸಲಾಗುವುದು ಎಂದು ಗುಡುಗಿದರು. ಒಳನುಸುಳುಕೋರರಿಂದಲೇ ಜಾರ್ಖಂಡ್‌ನಲ್ಲಿ ಲವ್ ಜಿಹಾದ್ ನಡೆದಿದೆ. ನುಸುಳುಕೋರರಿಂದ ಸ್ಥಳೀಯರ, ಬುಡಕಟ್ಟು ಜನರ ಬೇಟಿ-ರೋಟಿ-ಮಾಟಿ(ಮಣ್ಣು) ರಕ್ಷಿಸಬೇಕಿದೆ. ಆ ಕೆಲಸವನ್ನು ಎನ್‌ಡಿಎ ಸರಕಾರ ಮಾಡಲಿದೆ ಎಂದು ಭರವಸೆ ನೀಡಿದರು.

ದೇಗುಲ ಬಳಿ ಸ್ಫೋಟ: ಅರ್ಚಕರಿಗೆ ಗಾಯ

ಹೈದರಾಬಾದ್: ತೆಲಂಗಾಣದಲ್ಲಿನ ಮೈಲಾರದೇವಪಲ್ಲಿ ಪಟ್ಟಣದಲ್ಲಿನ ದೇವಸ್ಥಾನವೊಂದರ ಸಮೀಪ ಸೋಮವಾರ ಬೆಳಗ್ಗೆ ಸ್ಫೋಟವಾಗಿದ್ದು, ದೇಗುಲದ ಅರ್ಚಕರು ಗಾಯಗೊಂಡಿದ್ದಾರೆ.

ಮೈಲಾರ ದೇವಪಲ್ಲಿಯ ಲಕ್ಷ್ಮಿಗುಡ ರಸ್ತೆಯಲ್ಲಿರುವ ದೇಗುಲದ ಹೊರಗಿದ್ದ ಕಸದ ರಾಶಿಯನ್ನು ತೆರವುಗೊಳಿಸಲು ಅರ್ಚಕರು ಮುಂದಾಗಿದ್ದಾಗ ಸಣ್ಣ ಪ್ರಮಾಣದ ಸ್ಫೋಟ ಸಂಭವಿಸಿದೆ. ಗಾಯಗೊಂಡ ಅರ್ಚಕರನ್ನು ಬಳಿಕ ಸ್ಥಳೀಯರೇ ಸಮೀಪದ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ. ಸದ್ಯ ಅರ್ಚಕರ ದೇಹಸ್ಥಿತಿ ಸ್ಥಿರವಾಗಿದೆ.

ಸುದ್ದಿ ತಿಳಿದ ತಕ್ಷಣವೇ ಮೈಲಾರದೇವಪಲ್ಲಿ ಪೊಲೀಸರು, ಮತ್ತು ಹೈದರಾಬಾದ್‌ನಿಂದ ಬಾಂಬ್ ನಿಷ್ಕ್ರಿಯ ದಳದವರೂ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದರು. ಸ್ಫೋಟ ಸ್ಥಳದಲ್ಲಿ ಸಾಕ್ಷ್ಯ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿದೆ. ನಿಗೂಢ ಸ್ಫೋಟ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ಆರಂಭಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಆನೆ ದಾಳಿಗೆ ಮಾವುತ ಸೇರಿ ಇಬ್ಬರು ಬಲಿ

ಚೆನ್ನೈ: ತಿರುಚೆಂದೂರ್ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಆನೆ ದಾಳಿ ನಡೆಸಿದ ನಂತರ ಮಾವುತ ಸೇರಿದಂತೆ ಇಬ್ಬರು ಮೃತಪಟ್ಟಿರುವುದಾಗಿ ದೇವಸ್ಥಾನದ ಆಡಳಿತ ಮಂಡಳಿ ತಿಳಿಸಿದೆ. ಮಾವುತ ಉದಯಕುಮಾರ್ ಮತ್ತು ಅವರ ಸಂಬಂಧಿ ಶಿಶುಪಾಲನ್ ಗಂಭೀರವಾಗಿ ಗಾಯಗೊಂಡಿದ್ದರು. ನಂತರ ಇಬ್ಬರನ್ನೂ ತಿರುಚೆಂದೂರ್ ಸರಕಾರಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ, ಮಾರ್ಗ ಮಧ್ಯೆ ಅವರು ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದ್ದಾರೆ. ಆನೆಗೆ ಆಹಾರ ನೀಡುತ್ತಿದ್ದಾಗ ಏಕಾಏಕಿ ಕೋಪಗೊಂಡಿತು. ನಂತರ, ಮಾವುತ ಉದಯಕುಮಾರ್ ಮತ್ತು ಶಿಶುಪಾಲನ್ ಮೇಲೆ ದಾಳಿ ಮಾಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಲಾನ್ ಮಸ್ಕ್‌ಗೆ ಟಕ್ಕರ್ ಕೊಡಲು ಬ್ಲೂಸ್ಕೈ ಎಂಟ್ರಿ

ವಾಷಿಂಗ್ಟನ್: ಏಕಮೇವಾದ್ವಿತೀಯನಂತೆ ಮೆರೆಯುತ್ತಿರುವ ಎಕ್ಸ್ ಜಾಲತಾಣದ ಅಧ್ಯಕ್ಷ ಎಲಾನ್ ಮಸ್ಕ್‌ಗೆ ಈಗ ಹೊಸ ಪೈಪೋಟಿ ಆರಂಭವಾಗಿದೆ.

ಈ ಹಿಂದೆ ಟ್ವಿಟ್ಟರ್ ಅನ್ನು ಹುಟ್ಟಿಹಾಕಿದ್ದ ಜಾಕ್ ಡೋರ್ಸೆ ಈಗ ಮತ್ತೊಂದು ಸೋಷಿಯಲ್ ಬ್ಲಾಗ್ ಬ್ಲೂಸ್ಕೈ ಹೆಸರಿನಲ್ಲಿ ಹೊಸ ಜಾಲ ಆರಂಭಿಸಿದ್ದಾರೆ. ಎಕ್ಸ್ ಖಾತೆಯ ಬಳಕೆದಾರರು ಆತುರಾತುರದಿಂದ, ಬ್ಲೂಸ್ಕೈ ಜಾಲತಾಣಕ್ಕೆ ವರ್ಗಾವಣೆಯಾಗುತ್ತಿದ್ದಾರೆ.

ಎಲಾನ್ ಮಸ್ಕ್‌ನ ಎಕ್ಸ್ ಖಾತೆಯಿಂದ ಈಗಾಗಲೇ ಬರೋಬರಿ 16 ಮಿಲಿಯನ್ ಗೂ ಹೆಚ್ಚು ಬಳಕೆದಾರರು ಸೈನ್‌ಅಪ್ ಆಗುವ ಮೂಲಕ ಖಾತೆ ತೆರೆದಿದ್ದಾರೆ. ಎಲಾನ್ ಮಸ್ಕ್‌ನ ಎಕ್ಸ್ ಖಾತೆ ಬಳಸಲು ಸಬ್‌ಸ್ಕ್ರಿಪ್ಶನ್ ಕಿರಿಕಿರಿ ಹೆಚ್ಚಾಗುತ್ತಿದ್ದಂತೆ, ಬ್ಲೂಸ್ಕೈ ಗೆ ಸೈನಪ್ ಆಗುವವರ ಸಂಖ್ಯೆಯೂ ತೀರ ಹೆಚ್ಚಾಗಿದೆ ಎನ್ನಲಾಗಿದೆ.

ಬ್ಲೂಸ್ಕೈ ಎಂದರೇನು?: ಬ್ಲೂಸ್ಕೈ ಎಂಬುದು ಸಹ ಒಂದು ಮೈಕ್ರೋ ಸೋಷಿಯಲ್ ಮೀಡಿಯಾ ಬ್ಲಾಗಿಂಗ್ ವೇದಿಕೆ. 2019 ರಲ್ಲಿ ಜಾಕ್ ಡೋರ್ಸೆ ಟ್ವಿಟ್ಟರ್‌ಗೆ ವಿಕೇಂದ್ರಿತ ಪ್ರತಿರೂಪವಾಗಿ ಸ್ಥಾಪಿಸಿದ್ದಾರೆ. ಈ ವೇದಿಕೆಯು 2024ರ ಆರಂಭದವರೆಗೆ ಆಹ್ವಾನಿತ ಮಾತ್ರವಾಗಿ ಇತ್ತು. ಡೆವಲಪರ್‌ಗಳಿಗೆ ಅದರ ವೈಶಿಷ್ಟಗಳನ್ನು ಪರಿಷ್ಕರಿಸಲು ಅನುವು ಮಾಡಿಕೊಡುತ್ತದೆ. ಬ್ಲೂಸ್ಕೈ ನ ಸಿಇಒ ಜೇ ಗ್ರಾಬರ್ ಈಗ ಈ ಯೋಜನೆಯನ್ನು ಮುನ್ನಡೆಸುತ್ತಿದ್ದಾರೆ. ಇದು ಸಾರ್ವಜನಿಕ ಲಾಭ ನಿಗಮವಾಗಿ ಕಾರ್ಯನಿರ್ವಹಿಸುತ್ತಿದೆ. ಬ್ಲೂಸ್ಕೈ ಬಳಕೆದಾರರಿಗೆ ಕಿರು ಸಂದೇಶಗಳನ್ನು ಕಳುಹಿಸಲು, ಫೋಟೋಗಳನ್ನು, ವಿಡಿಯೋಗಳನ್ನು ಪೋಸ್ಟ್ ಮಾಡಲು, ನೇರ ಮೆಸೇಜ್‌ಗಳನ್ನು ಕಳುಹಿಸಲು ಅವಕಾಶ ನೀಡಿದೆ. ಅದರ ವ್ಯಾಖ್ಯಾನಿಸುವ ವೈಶಿಷ್ಟ್ಯವೆಂದರೆ ಅದರ ವಿಕೇಂದ್ರೀಕೃತ ಚೌಕಟ್ಟು, ಕೇಂದ್ರೀಕೃತ ಕಂಪನಿ – ಮಾಲೀಕತ್ವದ ಸರ್ವರ್‌ಗಳಿಗಿಂತ ಸ್ವತಂತ್ರ ಸರ್ವರ್‌ಗಳಲ್ಲಿ ಡಾಟಾ ಸಂಗ್ರಹಣೆಯನ್ನು ಸಕ್ರಿಯಗೊಳಿಸುತ್ತದೆ. ಈ ಆರ್ಕಿಟೆಕ್ಚರ್ ಬಳಕೆದಾರರಿಗೆ ಸೇರಲು ಅಥವಾ ಅವರ ಸಮುದಾಯಗಳ ಮೌಲ್ಯಗಳು ಮತ್ತು ನಿಯಮಗಳೊಂದಿಗೆ ಜೋಡಿಸಲಾದ ಸರ್ವರ್‌ಗಳನ್ನು ರಚಿಸಲು ನಮ್ಯತೆಯನ್ನು ನೀಡುತ್ತದೆ. ಎಕ್ಸ್‌ನ ರೀತಿಯಲ್ಲದೇ, ಇದು ಆಲ್ಗೋರಿಥ್ಮಿಕ್ ಫೀಡ್‌ಗಳನ್ನು ಬಳಸಿಕೊಳ್ಳುತ್ತದೆ. ಬಳಕೆದಾರರು ಅನುಸರಿಸದಿರುವ ಖಾತೆಗಳ ಪೋಸ್ಟ್‌ಗಳಿಗೆ ಗೋಚರಿಸುವ ವಿಷಯವನ್ನು ನಿರ್ಬಂಧಿಸುತ್ತದೆ.

ಇಸ್ರೇಲ್‌ನ 2 ನಗರಕ್ಕೆ ಹೌತಿ ಡ್ರೋನ್ ದಾಳಿ

ಟೆಲ್‌ಅವಿವ್: ಇಸ್ರೇಲ್‌ನ ಎರಡು ನಗರಗಳ ಮೇಲೆ ಹೌತಿ ಉಗ್ರರು ಡ್ರೋನ್ ದಾಳಿ ನಡೆಸಿದ್ದಾರೆ. ಇಸ್ರೇಲ್‌ನ ಜಫ್ಫಾ ಮತ್ತು ಆಶ್‌ಕೆಲೋನ್ ನಗರಗಳ ಮೇಲೆ ಹೌತಿ ಉಗ್ರ ಸಂಘಟನೆ ಭಾನುವಾರ ಹಾರಿಸಿದ ಡ್ರೋನ್‌ಗಳು ದಾಳಿ ನಡೆಸಿ ಹಾನಿ ಮಾಡಿವೆ ಎಂದು ವರದಿಯಾಗಿದೆ.

ಕಸದ ಸೆಸ್ ವಿಧಿಸಿರುವ ಬಗ್ಗೆ ನೋಟಿಸ್ ಜಾರಿ

ಬೆಂಗಳೂರು: ನಗರದಲ್ಲಿನ ಸಾವಿರಾರು ಅಪಾರ್ಟ್‌ಮೆಂಟ್ ಮತ್ತು ಕಾರ್ಪೋರೇಟ್ ಕಚೇರಿಗಳಿಗೆ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್‌ನಿಂದ ಕಸದ ಸೆಸ್ ವಿಧಿಸಿರುವ ಕುರಿತು ನೋಟಿಸ್ ಜಾರಿಯಾಗಿದೆ. ಏ.1ರಿಂದ ಪೂರ್ವಾನ್ವಯವಾ ಗುವಂತೆ ಪಾವತಿಸಲು ಶುಲ್ಕ ವಿಧಿಸಲಾಗಿದ್ದು, ಮಾಲೀಕರಿಂದ ಏಳು ದಿನಗಳಲ್ಲಿ ಉತ್ಪತ್ತಿಯಾಗುವ ಒಟ್ಟು ತ್ಯಾಜ್ಯ ಮತ್ತು ಅವುಗಳನ್ನು ವಿಲೇವಾರಿ ಮಾಡಿದ ವಿಧಾನದ ಬಗ್ಗೆಯೂ ವಿವರಣೆ ಕೇಳಲಾಗಿದೆ. ನೋಟಿಸ್‌ನಲ್ಲಿ ಪಾವತಿಸಬೇಕಾದ ಎರಡು ವಿಭಿನ್ನ ರೀತಿಯ ಶುಲ್ಕದ ಬಗ್ಗೆ ಹೇಳಲಾಗುತ್ತಿದ್ದು, ಅಪಾರ್ಟ್‌ಮೆಂಟ್ ಸ್ಥಳದಲ್ಲಿ ಸಂಸ್ಕರಣೆ ಅಳವಡಿಸಿಕೊಂಡರೆ ಪ್ರತಿ ಕೆಜಿಗೆ 3 ರು. ಹಾಗೂ ತ್ಯಾಜ್ಯದ ಸ್ಥಳದಲ್ಲಿಯೇ ವಿಲೇವಾರಿ ಮಾಡಿ ಸಂಸ್ಕರಣೆ ಅಳವಡಿಸಿಕೊಳ್ಳದಿದ್ದರೆ ಕೆ.ಜಿ ಗೆ 12 ರು. ವಿಧಿಸಲಾಗುತ್ತದೆ. ಮನೆಯೊಳಗೆ ವಿಲೇವಾರಿ ಮಾಡದಿದ್ದಲ್ಲಿ ನೋಟರೈಸ್ ಮಾಡಿದ ಅಫಿಡವಿಟ್‌ಗಳನ್ನು ಸಲ್ಲಿಸುವುದನ್ನು ಸಹ ನೋಟಿಸ್ ಕಡ್ಡಾಯಗೊಳಿಸಿದೆ.

ಉಕ್ರೇನ್ ಮೇಲೆ ರಷ್ಯಾ ದಾಳಿ: 11 ಜನ ಸಾವು

ಕೀವ್: ರಷ್ಯಾ ಪಡೆಗಳು ಉಕ್ರೇನ್‌ನ ಉತ್ತರ ಭಾಗದಲ್ಲಿರುವ ಸುಮಿ ನಗರದ ಜನವಸತಿ ಪ್ರದೇಶದ ಮೇಲೆ ಭಾನುವಾರ ತಡರಾತ್ರಿ ಖಂಡಾಂತರ ಕ್ಷಿಪಣಿ ದಾಳಿ ನಡೆಸಿದೆ. ದಾಳಿಯಲ್ಲಿ ಇಬ್ಬರು ಮಕ್ಕಳು ಸೇರಿ 11 ಮಂದಿ ಮೃತಪಟ್ಟಿದ್ದು, 84 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ. ಸುಮಿ ನಗರದ ಮೇಲೆ ನಡೆದ ಕ್ಷಿಪಣಿ ದಾಳಿಯಲ್ಲಿ ಮೃತಪಟ್ಟವರಲ್ಲಿ 9 ವರ್ಷದ ಬಾಲಕ, 14 ವರ್ಷದ ಬಾಲಕಿಯೂ ಸೇರಿದ್ದಾರೆ. ಈ ವೇಳೆ ಗಾಯಗೊಂಡ 6 ಮಕ್ಕಳ ಸ್ಥಿತಿ ಗಂಭೀರವಾಗಿದೆ. ದಾಳಿಯಿಂದಾಗಿ ಎರಡು ಶಾಲೆಗಳು ಸೇರಿ 15 ಕಟ್ಟಡಗಳಿಗೆ ಹಾನಿಯಾಗಿದೆ ಎಂದು ಪ್ರಾದೇಶಿಕ ಪ್ರಾಸಿಕ್ಯೂಟರ್ ಕಚೇರಿ ತಿಳಿಸಿದೆ. ಸುಮಿ ನಗರವು ರಷ್ಯಾದ ಗಡಿಯಿಂದ 40 ಕಿ.ಮೀ. ದೂರದಲ್ಲಿದೆ.

ಕ್ಯಾಲಿಫೋರ್ನಿಯಾದಲ್ಲಿ ಗ್ಯಾಂಗ್‌ಸ್ಟರ್ ಲಾರೆನ್ಸ್ ಸಹೋದರ ಪೊಲೀಸರ ವಶಕ್ಕೆ

ಅನ್ಮೋಲ್ ಬಿಷ್ಣೋಯ್ ಬಂಧನ

ವಾಷಿಂಗ್ಟನ್: ಜೈಲಿನಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಸಹೋದರ ಅನ್ಮೋಲ್ ಬಿಷ್ಣೋಯ್‌ನನ್ನು ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಅಲ್ಲಿನ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಕೆನಡಾದಲ್ಲಿರುವ ಗ್ಯಾಂಗ್‌ಸ್ಟರ್ ಗೋಲ್ಡಿ ಬ್ರಾರ್‌ನೊಂದಿಗೆ ಸೇರಿ ಅಮೆರಿಕದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅನ್ಮೋಲ್ ಬಿಷ್ಣೋಯ್‌ನನ್ನು ನಾಲ್ಕೈದು ದಿನಗಳ ಹಿಂದೆ ಕ್ಯಾಲಿಫೋರ್ನಿಯಾದಲ್ಲಿ ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

- ಅನ್ಮೋಲ್ ಬಿಷ್ಣೋಯ್ ಬಗ್ಗೆ ಮಾಹಿತಿ ನೀಡಿದವರಿಗೆ 10 ಲಕ್ಷ ರು. ಬಹುಮಾನ ಘೋಷಿಸಿದ್ದ ಎನ್‌ಐಎ
- ಅನ್ಮೋಲ್‌ನನ್ನು ಹಸ್ತಾಂತರಿಸುವಂತೆ ಅಮೆರಿಕಕ್ಕೆ ಮನವಿ ಸಲ್ಲಿಸಲು ಮುಂಬೈ ಪೊಲೀಸರಿಂದ ಸಿದ್ಧತೆ

ಇತ್ತೀಚೆಗೆ ನಡೆದ ಶೂಟೌಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಖಲಿಸ್ತಾನಿ ಭಯೋತ್ಪಾದಕ ಮತ್ತು ಭಾರತದ ಮೋಸ್ಟ್ ವಾಂಟೆಡ್ ಅಪರಾಧಿ ಅರ್ಶ್ ದಲ್ಲಾ ಆಲಿಯಾಸ್ ಅರ್ಷದೀಪ್ ಸಿಂಗ್‌ನನ್ನು ಕೆನಡಾದಲ್ಲಿ ಕಳೆದ ವಾರ ಬಂಧಿಸಲಾಗಿತ್ತು. ಅದಾಗಿ ಕೆಲವೇ ದಿನಗಳಲ್ಲಿ ಮತ್ತೊಬ್ಬ ಅಪರಾಧಿಯನ್ನು ವಶಕ್ಕೆ ಪಡೆದಂತಾಗಿದೆ. ಈ ಬಗ್ಗೆ ಭಾರತೀಯ ಅಧಿಕಾರಿಗಳು ಮಾಹಿತಿ ಕಲೆ ಹಾಕುತ್ತಿದ್ದಾರೆ.

ಅಮೆರಿಕ ಅಧಿಕಾರಿಗಳು ಈಗಾಗಲೇ ಮುಂಬೈ ಪೊಲೀಸರನ್ನು ಸಂಪರ್ಕಿಸಿದ್ದಾರೆ ಎನ್ನಲಾಗಿದೆ. ಈ ವರ್ಷದ ಏ.14ರಂದು ನಟ ಸಲ್ಮಾನ್ ಖಾನ್ ಅವರ ನಿವಾಸದ ಹೊರಗೆ ನಡೆದ ಗುಂಡಿನ ದಾಳಿ ಮತ್ತು ಅ.12ರಂದು ನಡೆದ ಎನ್‌ಸಿಪಿ ನಾಯಕ ಬಾಬಾ ಸಿದ್ದಿಕಿ ಅವರ ಹತ್ಯೆಯಲ್ಲಿ ಅನ್ಮೋಲ್ ಬಿಷ್ಣೋಯ್ ಕೈವಾಡ ಇರುವ ಬಗ್ಗೆ ಮುಂಬೈ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಅನ್ಮೋಲ್ ಬಿಷ್ಣೋಯ್‌ನನ್ನು ಹಸ್ತಾಂತರಿಸುವಂತೆ ಅಮೆರಿಕಕ್ಕೆ ಮನವಿ ಸಲ್ಲಿಸಲು ಮುಂಬೈ ಪೊಲೀಸರು ಸಿದ್ಧತೆ ನಡೆಸುತ್ತಿದ್ದಾರೆ.

ರಾಷ್ಟ್ರೀಯ ತನಿಖಾ ಸಂಸ್ಥೆ ಈಗಾಗಲೇ ಅನ್ಮೋಲ್ ಬಿಷ್ಣೋಯ್‌ನನ್ನು 'ಮೋಸ್ಟ್ ವಾಂಟೆಡ್ ಅಪರಾಧಿ' ಪಟ್ಟಿಗೆ ಸೇರಿಸಿದೆ.

ಯಾರು ಈ ಅನ್ಮೋಲ್ ಬಿಷ್ಣೋಯ್?

ಜೈಲಿನಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್‌ನ ಸಹೋದರ ಈ ಅನ್ಮೋಲ್ ಬಿಷ್ಣೋಯ್. ಪಂಜಾಬಿ ಗಾಯಕ ಸಿಧು ಮೂಸೆವಾಲಾ ಹತ್ಯೆಯಲ್ಲೂ ಆತನ ಕೈವಾಡವಿತ್ತು ಎನ್ನಲಾಗಿದೆ. ಸಿಧು ಮೂಸೆವಾಲಾ ಹತ್ಯೆಯ ಬಳಿಕ ಅನ್ಮೋಲ್ ನಕಲಿ ಪಾಸ್‌ಪೋರ್ಟ್ ಬಳಸಿ ಭಾರತದಿಂದ ವಿದೇಶಕ್ಕೆ ಪರಾರಿಯಾಗಿದ್ದ. ಕಳೆದ ವರ್ಷ ಆತ ಅಜರ್ಬೈಜಾನ್‌ನಲ್ಲಿ ಪತ್ತೆಯಾಗಿದ್ದರೂ ಅಲ್ಲಿಂದ ತಪ್ಪಿಸಿಕೊಂಡಿದ್ದ. ಬಳಿಕ ಅಮೆರಿಕದಲ್ಲಿ ಕಂಡುಬಂದಿದ್ದ. ಕೆಲವು ತಿಂಗಳ ಹಿಂದೆ ಮದುವೆ ಸಮಾರಂಭಕ್ಕೆ ಆತ ತೆರಳಿದ್ದ ವಿಡಿಯೊ ವೈರಲ್ ಆಗಿತ್ತು. ಏಪ್ರಿಲ್‌ನಲ್ಲಿ ಸಲ್ಮಾನ್ ಖಾನ್ ಮನೆಯ ಹೊರಗೆ ನಡೆದ ಗುಂಡಿನ ದಾಳಿಯನ್ನು ಆತ ಹೊತ್ತುಕೊಂಡಿದ್ದ. ಘಟನೆ ಬಳಿಕ ಸಲ್ಮಾನ್ ಮನೆಯ ಹೊರಗೆ ನಡೆದ ಗುಂಡಿನ ದಾಳಿಯ ಹೊಣೆ ಹೊತ್ತಿರುವ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ನೀಡಿದ್ದ. ತಲೆ ಮರೆಸಿಕೊಂಡಿರುವ ಅನ್ಮೋಲ್ ಬಿಷ್ಣೋಯ್ ಮತ್ತು ಗೋಲ್ಡಿ ಬ್ರಾರ್ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನ ಚಟುವಟಿಕೆ ನಡೆಸುತ್ತಿದ್ದಾರೆ. ಇವರ ಜಾಲ ಪಂಜಾಬ್, ಹರಿಯಾಣ, ಚಂಡಿಘಡ, ರಾಜಸ್ಥಾನ, ಉತ್ತರಪ್ರದೇಶ, ಮಧ್ಯಪ್ರದೇಶ, ಗುಜರಾತ್, ಮಹಾರಾಷ್ಟ್ರ, ಬಿಹಾರ ಮತ್ತು ಜಾರ್ಖಂಡ್ ಮುಂತಾದ ಕಡೆ ವಿಸ್ತರಿಸಿದೆ.

ಮದುವೆ, ಗೃಹ ಪ್ರವೇಶಕ್ಕೆ ಕನ್ನಡ ಪುಸ್ತಕ ಉಡುಗೊರೆ ನೀಡಿ: ನಟ ಪ್ರೇಮ್

ಡೆಹ್ರಾಡೂನ್: ಕನ್ನಡ ಭಾಷೆಯನ್ನು ಪಸರಿಸುವ ಕಾರ್ಯ ಪ್ರತಿಯೊಬ್ಬರೂ ಮಾಡಬೇಕು. ಬೇರೆ ಭಾಷೆಯನ್ನು ದ್ವೇಷ ಮಾಡುವುದಿಲ್ಲ, ನಮ್ಮ ಭಾಷೆ ಬಿಟ್ಟುಕೊಡಬಾರದು. ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಕನ್ನಡ ಪುಸ್ತಕದ ಮಳಿಗೆ ತೆರೆಯಬೇಕು ಎಂದು ನಟ ಪ್ರೇಮ್ ಹೇಳಿದರು.

ಅವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಉತ್ತರಾಖಂಡದ ಹರಿದ್ವಾರ ಮತ್ತು ಋಷಿ ಕೇಶದ ಸನ್ನಿಧಿಯಲ್ಲಿ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಆದಾಯ ತೆರಿಗೆ ಇಲಾಖೆಯ ಆಯುಕ್ತ ಆರ್.ಎಲ್. ದೀಪಕ್ ಮತ್ತು ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಎ.ಅಮೃತ್ ರಾಜ್, ಮಾಜಿ ಮಹಾಪೌರ ಎಂ. ಗೌತಮ್ ಕುಮಾರ್ ್, ಹರಿದ್ವಾರ ಫಲಿಮಾರು ಮಠದ ಪ್ರಬಂಧಕ ಹಾಗೂ ಹಿಂದು ರಕ್ಷಾ, ಸೇನಾ ಗೋ ಸೇವಾ ಸಮಿತಿಯ ರಾಜ್ಯಾಧ್ಯಕ್ಷ ಪ್ರಭಾಕರ್ ಮಂಜುನಾಥ್ ಮಹದೇವಪುರ ವಲಯ ಜಂಟಿ ಆಯುಕ್ತರಾದ ಡಾ.ದಾಕ್ಷಾಯಿಣಿ, ಕೆ.ಎ.ಎಸ್,ವಕೀಲರಾದ ವಿ. ಶ್ರೀನಿವಾಸ್ ,ಭೀಮಪುತ್ರಿ ಬ್ರಿಗೇಡ್ ಅಧ್ಯಕ್ಷ ಭೀಮಪುತ್ರಿ ರೇವತಿರಾಜ್ ಪಾಲ್ಗೊಂಡಿದ್ದರು.

ಚಿತ್ರದುರ್ಗದಲ್ಲಿ 6 ಮಂದಿ ಬಾಂಗ್ಲಾದೇಶಿಯರು ವಶಕ್ಕೆ

ಚಿತ್ರದುರ್ಗ: ಖಾಸಗಿ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ಆರು ಮಂದಿ ಬಾಂಗ್ಲಾದೇಶದ ಪ್ರಜೆಗಳನ್ನು ಚಿತ್ರದುರ್ಗ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಡಿವೈಎಸ್‌ಪಿ ದಿನಕರ್ ನೇತೃತ್ವದಲ್ಲಿ ಸಿಪಿಐ ಗುಡ್ಡಪ್ಪ ಮತ್ತು ವೆಂಕಟೇಶ್ ಅವರು ಸೋಮವಾರ ನಗರದಲ್ಲಿ ಗಾರ್ಮೆಂಟ್ಸ್‌ಗಳ ಮೇಲೆ ದಾಳಿ ಮಾಡಿದ ವೇಳೆ ಒಟ್ಟು 15 ಮಂದಿ ಶಂಕಿತರನ್ನು ವಶಕ್ಕೆ ಪಡೆಯಲಾಯಿತು. ಇವರಲ್ಲಿ ಶೇಕ್ ಶೈಫುರ್ ರೆಹಮಾನ್, ಸುಮನ್ ಹುಸೇನ್ ಬಾಂಗ್ಲಾದೇಶದಿಂದ ಅಕ್ರಮವಾಗಿ ದೇಶದೊಳಗೆ ನುಸುಳಿರುವುದು ಪಕ್ಕಾ ಆಗಿದೆ. ವಶಕ್ಕೆ ಪಡೆದವರನ್ನು ಪೊಲೀಸರು ಚಿತ್ರದುರ್ಗದ ಕೋಟೆ, ಗ್ರಾಮಾಂತರ ಠಾಣೆಯಲ್ಲಿ ಚಿತ್ರದುರ್ಗ ಎಸ್‌ಪಿ ರಂಜಿತ್ ಬಂಡಾರು ನೇತೃತ್ವದಲ್ಲಿ ವಿಚಾರಣೆ ಮಾಡಲಾಗುತ್ತಿದೆ. ಬಹುತೇಕರ ಬಳಿ ಪಶ್ಚಿಮ ಬಂಗಾಳದ ಆಧಾರ್ ಕಾರ್ಡ್‌ಗಳು ಪತ್ತೆಯಾಗಿವೆ.

ಕರ್ನಾಟಕದ ಪೊಲೀಸರು ಕಳೆದ ಹಲವು ತಿಂಗಳಿಂದ ಕಾರ್ಯಾಚರಣೆ ನಡೆಸುತ್ತಿದ್ದು, ನಾಡಿನಲ್ಲಿ ಅಕ್ರಮವಾಗಿ ವಾಸಿಸುತ್ತಿದ್ದ ಬಾಂಗ್ಲಾದೇಶ ಪ್ರಜೆಗಳನ್ನು ವಶಕ್ಕೆ ಪಡೆಯುತ್ತಿದ್ದಾರೆ.

40% ಕಮಿಷನ್ ಹಗರಣದ ವಿಚಾರಣೆ ಇನ್ನೂ ಮುಗಿದಿಲ್ಲ, ಕೋವಿಡ್ ಹಗರಣವೇ ಭ್ರಷ್ಟಾಚಾರಕ್ಕೆ ಸಾಕ್ಷಿ ಎಂದ ಸಚಿವ

ಬಿಜೆಪಿಗೆ ಕ್ಲೀನ್ ಚಿಟ್ ಸಿಕ್ಕಿಲ್ಲ: ಪ್ರಿಯಾಂಕ್ ಖರ್ಗೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಆಟದ ಮೈದಾನಕ್ಕೆ ಸಂಬಂಧಿಸಿದ ಕೇವಲ ಒಂದು ಕಾಮಗಾರಿಗೆ ಸಂಬಂಧಿಸಿದಂತೆ ಮಾಡಿರುವ ಲೋಕಾಯುಕ್ತ ತನಿಖೆಯಲ್ಲಿ, ಗುತ್ತಿಗೆದಾರ ದಿವಂಗತ ಆರ್. ಅಂಬಿಕಾಪತಿ ಅವರು ಮಾಡಿರುವ ಆರೋಪಗಳು ಸಾಬೀತಾಗಿಲ್ಲ ಎಂದು ಲೋಕಾಯುಕ್ತ ವರದಿ ಸಲ್ಲಿಸಿದೆ. ಆದರೆ, ಇದು ಬಿಜೆಪಿ ಸರ್ಕಾರದ 40% ಹಗರಣಕ್ಕೆ ಸಿಕ್ಕಿರುವ ಕ್ಲೀನ್ ಚಿಟ್ ಅಲ್ಲ, ಅಥವಾ ಅಕ್ರಮದ ನಿರಾಕರಣೆಯೂ ಅಲ್ಲ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಬಿಜೆಪಿ ಸರ್ಕಾರದ ವಿರುದ್ಧದ 40% ಕಮಿಷನ್ ಆರೋಪ ಪ್ರಕರಣದಲ್ಲಿ ಲೋಕಾಯುಕ್ತ ಕ್ಲೀನ್ ಚಿಟ್ ನೀಡಿದೆ ಎಂಬ ಬಿಜೆಪಿ ನಾಯಕರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಸಚಿವರು, 40% ಕಮಿಷನ್ ಆರೋಪಗಳ ಬಗ್ಗೆ ತನಿಖೆ ನಡೆಸಲು ಬಿಜೆಪಿ ಸರ್ಕಾರವೇ 2023ರ ಮಾರ್ಚ್ 27ರಂದು ಲೋಕಾಯುಕ್ತ ತನಿಖೆಗೆ ಆದೇಶಿಸಿತ್ತು. ಈ ಸಂದರ್ಭದಲ್ಲಿ ಗುತ್ತಿಗೆದಾರರೊಬ್ಬರು ಖಾಸಗಿ ಚಾನೆಲ್‌ಗೆ ನೀಡಿದ ಹೇಳಿಕೆ ಆಧರಿಸಿ ತನಿಖೆಗೆ ವಹಿಸಲಾಗಿತ್ತು. ಇನ್ನುಳಿದ ಆರೋಪಗಳನ್ನು ತನಿಖೆಗೆ ವಹಿಸಲಿಲ್ಲ ಏಕೆ? ಇದಲ್ಲದೆ 40% ಕಮಿಷನ್ ಗೆ ಸಂಬಂಧಿಸಿದಂತೆ ಇನ್ನೂ ಹಲವು ವಿಷಯಗಳ ಬಗ್ಗೆ ದಾಖಲೆಗಳೊಂದಿಗೆ ದೂರು ಸಲ್ಲಿಸಿದ್ದರೂ ಏಕೆ ತನಿಖೆಗೆ ವಹಿಸಲು ಗಂಭೀರವಾಗಿ ಪರಿಗಣಿಸಲಿಲ್ಲ ಎಂದು ಖರ್ಗೆ ಪ್ರಶ್ನಿಸಿದ್ದಾರೆ.

2022ರ ಆ.30ರಂದು ದಿವಂಗತ ಗುತ್ತಿಗೆದಾರ ಆರ್.ಅಂಬಿಕಾಪತಿ ಹಾಗೂ ಗುತ್ತಿಗೆದಾರರ ಸಂಘದ ಇತರ ಪದಾಧಿಕಾರಿಗಳು ನೀಡಿದ ಹೇಳಿಕೆಯಲ್ಲಿ, ಪಿಡಬ್ಲ್ಯುಡಿ, ಆರೋಗ್ಯ, ವಸತಿ, ಉನ್ನತ ಶಿಕ್ಷಣ, ಸಣ್ಣ ನೀರಾವರಿ ಹೀಗೆ ಹಲವು ಇಲಾಖೆಗಳಲ್ಲಿನ ಕಮಿಷನ್ ಹಾಗೂ ಕೋಲಾರ ಜಿಲ್ಲೆಯ ಹಿಂದಿನ ಉಸ್ತುವಾರಿ ಸಚಿವರಾದ ಮುನಿರತ್ನ ಅವರ ವಿರುದ್ಧ ಲಂಚದ ಆರೋಪ ಹಾಗೂ ಕರ್ನಾಟಕ ಖಾಸಗಿ ಶಾಲಾ ಮಾಲೀಕರ ಎರಡು ಸಂಘಟನೆಗಳ ಲಂಚದ ಆರೋಪ, ಅಲ್ಲದೆ ಪಾವಗಡ ಆಸ್ಪತ್ರೆ ನಿರ್ಮಾಣ ಕಾಮಗಾರಿಯಲ್ಲಿ ಲಂಚದ ಅಕ್ರಮದ ಬಗ್ಗೆ ಆರೋಪಿಸಿದ್ದರು. ಆದರೆ ಬಿಜೆಪಿ ಸರ್ಕಾರ ಕೇವಲ ಬಿಬಿಎಂಪಿ ಪೂರ್ವ ವಲಯಕ್ಕೆ ಸಂಬಂಧಿಸಿದ ಆಟದ ಮೈದಾನ ಕಾಮಗಾರಿಯ ಒಂದು ಆರೋಪವನ್ನು ಮಾತ್ರ ತನಿಖೆಗೆ ವಹಿಸಿತ್ತು, ಇನ್ನುಳಿದ ಆರೋಪಗಳ ಬಗ್ಗೆ ಯಾಕೆ ತನಿಖೆಯಾಗಲಿಲ್ಲ ಎಂದು ಅವರು ಕಿಡಿಕಾರಿದ್ದಾರೆ.

ಲೋಕಾಯುಕ್ತ ವರದಿಯಲ್ಲಿ ಅಂಬಿಕಾಪತಿಯವರು ಮರಣ ಹೊಂದಿರುವ ಕಾರಣ, ಅವರಿಂದ ಹೆಚ್ಚಿನ ಮಾಹಿತಿ ಸಂಗ್ರಹಿಸಲು ಸಾಧ್ಯವಾಗಲಿಲ್ಲ, ಹಾಗಾಗಿ ಅಂಬಿಕಾಪತಿಯವರು ಮಾಡಿರುವ ಆಪಾದನೆಯು ಮೇಲ್ನೋಟಕ್ಕೆ ಸಾಬೀತಾಗಿರುವುದಿಲ್ಲವೆಂದು ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಸಲ್ಲಿಸಿದ್ದಾರೆ. ಆರೋಪ ಮಾಡಿದವರು ಅಕಾಲಿಕ ಮರಣದಿಂದಾಗಿ ಸಾಕ್ಷ್ಯಾಧಾರಗಳ ಕೊರತೆ ಉಂಟಾದ್ದರಿಂದ ಆರೋಪವನ್ನು ತನಿಖೆಯಲ್ಲಿ ಸಾಬೀತು ಮಾಡಲು ಸಾಧ್ಯವಾಗಿಲ್ಲ. ಗುತ್ತಿಗೆದಾರರು ಮಾಡಿದ್ದ ಇತರ ಗಂಭೀರ ಆರೋಪಗಳ ಬಗ್ಗೆ ಬಿಜೆಪಿ ಸರ್ಕಾರ ತನಿಖೆ ನಡೆಸಲು ಮುಂದಾಗಲೇ ಇಲ್ಲ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಬಿಜೆಪಿ ಜಾಣ ಕುರುಡುತನ: ವಿವಿಧ ಇಲಾಖೆಗಳಲ್ಲಿನ 40% ಕಮಿಷನ್ ಆರೋಪದ ಕುರಿತ ಸಮಗ್ರ ತನಿಖೆಗಾಗಿ ಜಸ್ಟಿಸ್ ನಾಗಮೋಹನ್ ದಾಸ್ ಅವರ ನೇತೃತ್ವದಲ್ಲಿ ತನಿಖಾ ಆಯೋಗವನ್ನು ರಚಿಸಲಾಗಿದ್ದು, ಪ್ರಸ್ತುತ ತನಿಖೆ ನಡೆಯುತ್ತಿದೆ. ಈ ಆಯೋಗವು ನೀಡುವ ವರದಿಯ ಆಧಾರದ ಮೇಲೆ ಬಿಜೆಪಿ ಸರ್ಕಾರದ 40% ಕಮಿಷನ್ ಆರೋಪದ ಕುರಿತ ಸತ್ಯಾಸತ್ಯತೆ ಹೊರಬರಲಿದೆ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಪಿಎಸ್‌ಐ ಹಗರಣ, ಗಂಗಾಕಲ್ಯಾಣ ಹಗರಣ, ಕೆಕೆಆರ್‌ಡಿ ಹಗರಣ, ಕೋವಿಡ್ ಹಗರಣ ಹಾಗೂ ಇನ್ನಿತರ ಹಗರಣಗಳು ನಡೆದಿದ್ದರೂ ಅವುಗಳನ್ನು ಬಿಜೆಪಿ ನಿರಾಕರಿಸುತ್ತಲೇ ಬಂದಿತ್ತು. ಆದರೆ ಈಗ ಅವೆಲ್ಲಾ ಹಗರಣಗಳು ನಡೆದಿರುವುದು ತನಿಖೆಯಲ್ಲಿ ಮೇಲ್ನೋಟಕ್ಕೆ ಸಾಬೀತಾಗುತ್ತಿವೆ. ನ್ಯಾಯಮೂರ್ತಿ ಮೈಕೆಲ್ ಕುನ್ಹಾ ಆಯೋಗದ ಮಧ್ಯಂತರ ವರದಿಯಲ್ಲಿ ಕೋವಿಡ್ ಅವಧಿಯಲ್ಲಿ ನಡೆದಿದ್ದ ಅಕ್ರಮ ಸಾಬೀತಾಗಿದ್ದು, ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಅಂದಿನ ಆರೋಗ್ಯ ಸಚಿವ ಶ್ರೀ ರಾಮುಲುರವರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988 ಸೆಕ್ಷನ್ 7 ಹಾಗೂ ಸೆಕ್ಷನ್ 11ರ ಅಡಿ ವಿಚಾರಣೆ ನಡೆಸಬಹುದೆಂದು ವರದಿ ಸಲ್ಲಿಸಿರುತ್ತಾರೆ ಎಂದರು.

ಅನರ್ಹರ ಬಿಪಿಎಲ್ ಕಾರ್ಡು ರದ್ದು | ಕೆಲವರ ಕಾರ್ಡು ಎಪಿಎಲ್‌ಗೆ ವರ್ಗ

ಬಿಪಿಎಲ್ ಟು ಎಪಿಎಲ್: ಅನರ್ಹರಿಗೆ ಪಡಿತರವಿಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿನ ಬಡತನ ರೇಖೆಗಿಂತ ಮೇಲಿರುವವರ ಅರ್ಹರ ಬಿಪಿಎಲ್ ಕಾರ್ಡ್‌ಗಳನ್ನು ರದ್ದು ಮಾಡುವುದಿಲ್ಲ ಎಂದು ಸರಕಾರ ಸ್ಪಷ್ಟಪಡಿಸಿದೆ. ಆದರೆ, ರದ್ದುಪಡಿಸಲಾದ ಅನರ್ಹರನ್ನು ಎಪಿಎಲ್ ಗೆ ವರ್ಗಾವಣೆ ಮಾಡಲಾಗುತ್ತದೆ ಎಂದು ಆಹಾರ ಸಚಿವರು ಹೇಳಿದ್ದು, ಆದಾಯ ತೆರಿಗೆ ದಾರರು ಸೇರಿದಂತೆ ಯಾವುದೇ ಅನರ್ಹರು ಬಿಪಿಎಲ್ ಕಾರ್ಡ್ ಹೊಂದಿದ್ದರೆ ಅದನ್ನು ರದ್ದು ಮಾಡಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

> ಆದಾಯ ತೆರಿಗೆದಾರರು ಸೇರಿದಂತೆ ಯಾವುದೇ ಅನರ್ಹರು ಬಿಪಿಎಲ್ ಕಾಡ್ ಹೊಂದಿದ್ದರೆ ಅಂತಹ ಬಿಪಿಎಲ್ ಪಡಿತರ ಚೀಟಿ ಮಾತ್ರ ರದ್ದು ಮಾಡಲಾಗುವುದು. ಅರ್ಹರ ಬಿಪಿಎಲ್ ಕಾರ್ಡ್ ರದ್ದು ಮಾಡುತ್ತಿಲ್ಲ. ಬಡವರ ಬಿಪಿಎಲ್ ಕಾರ್ಡ್‌ಗೆ ಯಾವುದೇ ತೊಂದರೆಯಾಗದು. ಬದಲಿಗೆ, ಕೆವೈಸಿ ಪೂರ್ಣಗೊಳ್ಳದ ಎಪಿಎಲ್ ಕಾರ್ಡ್‌ಗಳು ರದ್ದಾಗಲಿದೆ.
> –**ಸಿದ್ದರಾಮಯ್ಯ**, ಮುಖ್ಯಮಂತ್ರಿ

ಸುದ್ದಿಗಾರರೊಂದಿಗೆ ಮಾತನಾಡಿದ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಎಚ್. ಮುನಿಯಪ್ಪ, ಪಡಿತರ ಚೀಟಿ ವಿಚಾರ ಸಮ್ಮನೇ ರಾಜಕೀಯ ಉದ್ದೇಶಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಸರಕಾರ ಯಾವುದೇ ಬಿಪಿಎಲ್ ಅಥವಾ ಎಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಿಲ್ಲ. ಅನರ್ಹ ಬಿಪಿಎಲ್ ಕಾರ್ಡುದಾರರನ್ನು ರದ್ದು ಮಾಡಿಲ್ಲ, ಬದಲಾಗಿ ಎಪಿಎಲ್ ಗೆ ವರ್ಗಾವಣೆ ಮಾಡಲಾಗಿದೆ ಎಂದು ಸ್ಪಷ್ಟನೆ ನೀಡಿದ್ದಾರೆ.

ಸದ್ಯ ಜನಸಂಖ್ಯೆಯ ಶೇಕಡ 80ರಷ್ಟು ಜನರು ಬಿಪಿಎಲ್ ಕಾರ್ಡ್‌ಗಳನ್ನು ಹೊಂದಿದ್ದಾರೆ. ಇನ್ನು ಕೆಲವು ಅನರ್ಹರು ಬಿಪಿಎಲ್ ಕಾರ್ಡ್‌ಗಳನ್ನು ಹೊಂದಿದ್ದಾರೆ ಎನ್ನುವ ಮಾಹಿತಿ ಬಂದಿದೆ. ಅಂತಹ ಕಾರ್ಡ್‌ಗಳನ್ನು ಮತ್ತೆ ವರ್ಗೀಕರಿಸುವ ಕೆಲಸ ಮಾಡುತ್ತಿದ್ದೇವೆ. ಅವುಗಳನ್ನು ಸಂಪೂರ್ಣವಾಗಿ ರದ್ದುಗೊಳಿಸುವುದಿಲ್ಲ, ಎಪಿಎಲ್ ಗೆ ಸೇರಿಸಲಾಗುತ್ತದೆ.

ಅದರಲ್ಲೂ ಸ್ಥಿರ ಆರ್ಥಿಕ ಹಿನ್ನೆಲೆಯುಳ್ಳ ವ್ಯಕ್ತಿಗಳು, ಆದಾಯ ತೆರಿಗೆ ಪಾವತಿದಾರರು ಸೇರಿದಂತೆ ಬಿಪಿಎಲ್ ಕಾರ್ಡ್ ಗೆ ಅನರ್ಹರಾಗಿರುವವರನ್ನು ಎಪಿಎಲ್‌ಗೆ ವರ್ಗಾವಣೆ ಮಾಡಲಾಗುತ್ತದೆ. ಎಪಿಎಲ್ ಕಾರ್ಡುದಾರರು ಅವರಿಗೆ ನಿಗದಿತ ಪ್ರಯೋಜನ ಪಡೆಯುವುದನ್ನು ಮುಂದುವರೆಸುತ್ತಾರೆ ಎಂದು ಹೇಳಿದರು.

ರಾಜ್ಯದ ಬಿಪಿಎಲ್ ಕಾರ್ಡುದಾರರ ಸಂಖ್ಯೆ: ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮತ್ತು ತೆಲಂಗಾಣದಂತಹ ರಾಜ್ಯಗಳಲ್ಲಿ ಬಿಪಿಎಲ್ ಕಾರ್ಡುದಾರರ ಸಂಖ್ಯೆ ಶೇಕಡಾ 50ಕ್ಕಿಂತ ಕಡಿಮೆ ಇದೆ. ಆದರೆ, ನಮ್ಮ ರಾಜ್ಯವು ಸುಮಾರು ಶೇಕಡ 80ರಷ್ಟು ಬಿಪಿಎಲ್ ಕಾರ್ಡುದಾರರನ್ನು ಹೊಂದಿದೆ. ರಾಜ್ಯದ 6.5 ಕೋಟಿ ಜನಸಂಖ್ಯೆಯಲ್ಲಿ 4.6 ಕೋಟಿ ಫಲಾನುಭವಿಗಳಾಗಿದ್ದಾರೆ.

ಯಾವ್ಯಾವ ಜಿಲ್ಲೆಯಲ್ಲಿ ಎಷ್ಟು ಕಾರ್ಡ್‌ಗಳ ವರ್ಗಾವಣೆ ?: ರಾಜ್ಯದಲ್ಲಿ ಅನರ್ಹರ ಪಡಿತರ ಕಾರ್ಡ್‌ಗಳನ್ನು ರದ್ದು ಮಾಡುತ್ತಿಲ್ಲ. ಬದಲಾಗಿ ಜಿಲ್ಲಾವಾರು ಅನರ್ಹರನ್ನು ಬಿಪಿಎಲ್‌ನಿಂದ ಎಪಿಎಲ್‌ಗೆ ವರ್ಗಾಹಿಸಲಾಗುತ್ತಿದೆ ಎನ್ನುವ ಮಾಹಿತಿ ಇಲಾಖೆ ನೀಡಿದೆ.

ವರ್ಗಾಯಿಸಿದ ಕಾರ್ಡ್‌ಗಳು

ಶಿವಮೊಗ್ಗ	2,346
ಚಿಕ್ಕಬಳ್ಳಾಪುರ	2,201
ಕಲಬುರಗಿ	1,925
ಮೈಸೂರು	4,221
ಹಾಸನ	3,925
ಮಂಡ್ಯ	2,824
ಬಾಗಲಕೋಟೆ	6,299
ಬೆಂಗಳೂರು ಗ್ರಾಮಾಂತರ	5,973
ವಿಜಯಪುರ	4,359
ಚಿಕ್ಕಮಗಳೂರು	9,441
ಕೋಲಾರ	6,500
ಉಡುಪಿ	6,422
ಗದಗ	1,119
ಚಾಮರಾಜನಗರ	836
ಉತ್ತರ ಕನ್ನಡ	315
ಬಳ್ಳಾರಿ	1,848
ಚಿತ್ರದುರ್ಗ	1,670
ದಾವಣಗೆರೆ	1,599

> ಗ್ಯಾರಂಟಿಗಳಿಗೆ ಹಣ ಹೊಂದಿಸಲಾಗದೆ ರಾಜ್ಯ ಸರ್ಕಾರ ಬಿಪಿಎಲ್ ಕಾರ್ಡ್‌ಗಳನ್ನುರದ್ದು ಮಾಡುತ್ತಿದೆ. ಇದು ಕಾಂಗ್ರೆಸ್‌ನ 6ನೇ ಗ್ಯಾರಂಟಿ. ಉಚಿತ ಗ್ಯಾರಂಟಿ ಕೊಡಲಾಗದೆ ಕಾಂಗ್ರೆಸ್ ಸರಕಾರ ಆರ್ಥಿಕ ಸಂಕಷ್ಟದಲ್ಲಿದೆ. ಗ್ಯಾರಂಟಿಗಳಿಗೆ ಹಣ ಹೊಂದಿಸಲು ಆಗುತ್ತಿಲ್ಲ. ಅದಕ್ಕಾಗಿ ಬಿಪಿಎಲ್ ಕಾರ್ಡ್‌ಗಳಿಗೆ ಕತ್ತರಿ ಹಾಕಿದ್ದಾರೆ.
> **ಆರ್.ಅಶೋಕ**, ಪ್ರತಿಪಕ್ಷದ ನಾಯಕ

ಪಡಿತರ ಚೀಟಿ ಯಾರಿಗೆಲ್ಲ?

ಕರ್ನಾಟಕ ಸರಕಾರದ ಆಹಾರ ಇಲಾಖೆಯು ಪಡಿತರ ಕಾರ್ಡ್ ನೀಡುವ ವ್ಯವಸ್ಥೆ ಹಿಂದಿನಿಂದಲೂ ಮುಂದುವರೆಸಿಕೊಂಡು ಬಂದಿದೆ. ಈಗ ಬಡತನ ರೇಖೆಗಿಂತ ಕೆಳಗಿನವರು ಬಿಪಿಎಲ್ ಹಾಗೂ ಬಡತನ ರೇಖೆಗಿಂತ ಕೆಳಗಿನಗರಿಗೆ ಎಪಿಎಲ್ ಕಾರ್ಡ್ ಅನ್ನು ನೀಡಲಾಗುತ್ತಿದೆ. ಇದರಲ್ಲಿ ಬಿಪಿಎಲ್ ಕಾರ್ಡ್‌ಗೆ ಮಾಸಿಕ ಪಡಿತರ, ಆರೋಗ್ಯ ಇಲಾಖೆ ಸಹಿತ ಹಲವೆಡೆ ಸೌಲಭ್ಯಗಳು ಸಿಗಲಿವೆ. ಆದರೆ, ಎಪಿಎಲ್ ಕಾರ್ಡ್‌ಗೆ ಯಾವುದೇ ಸೌಲಭ್ಯ ಇಲ್ಲ.

ಭಾರತವನ್ನು ಭಾರತವಾಗೇ ಉಳಿಸುವುದು ಕಷ್ಟವಿದೆ

ಬೆಂಗಳೂರು: ಭಾರತವನ್ನು ಭಾರತವಾಗೇ ಉಳಿಸೋದು ಕಷ್ಟವಿದೆ. ಪ್ರಜ್ಞಾವಂತರನ್ನು ವೇದಿಕೆಗೆ ಕರೆಸಿ ಮಾತನಾಡಿಸುವ ಅವಶ್ಯಕತೆಯಿದೆ. ಇಲ್ಲವಾದರೆ ಮುಂದಿನ ತಲೆಮಾರಿನ ಮಕ್ಕಳು ತಿರುಚಿದ ಇತಿಹಾಸವನ್ನೇ ನಿಜ ಇತಿಹಾಸವೆಂದುಕೊಳ್ಳುತ್ತಾರೆ ಎಂದು ಸ್ವಾಮಿ ವೀರೇಶಾನಂದಜಿ ಮಹಾರಾಜ್ ಹೇಳಿದ್ದಾರೆ.

ನಗರದ ರಾಷ್ಟ್ರೋತ್ಥಾನ ಪರಿಷತ್‌ನ ಕೇಶವಶಿಲ್ಪ ಸಭಾಂಗಣದಲ್ಲಿ ಶನಿವಾರ ಲೇಖಕರಾದ ಅಜ್ಜಂಪುರ ಮಂಜುನಾಥ ಮತ್ತು ಬಿ.ಪಿ ಪ್ರೇಮಕುಮಾರ್ ಅವರ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ರಾಷ್ಟ್ರೋತ್ಥಾನ ಪರಿಷತ್‌ನ ಕೋಶಾಧ್ಯಕ್ಷ ನಾರಾಯಣ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಹಿರಿಯ ವಿದ್ವಾಂಸ ಮಲ್ಲೇಪುರಂ ಜಿ ವೆಂಕಟೇಶ್, ಹಿರಿಯ ಲೇಖಕ ಬಾಬು ಕಷ್ಣಮೂರ್ತಿ ಮತ್ತು ಮಿಥಿಕ್ ಸೊಸೈಟಿಯ ಅಧ್ಯಕ್ಷವಿ. ನಾಗರಾಜ್ ಸೇರಿ ಸಾಹಿತ್ಯಾಸಕ್ತರು ಭಾಗವಹಿಸಿದ್ದರು.

> ವರ್ತಮಾನ ಮತ್ತು ಭವಿಷ್ಯವನ್ನು ಬದಲಿಸುವ ಶಕ್ತಿ ಈ ಪುಸ್ತಕಕ್ಕಿದೆ. ಭಾರತದ ಇತಿಹಾಸ ಅಂಧಕಾರ ಮತ್ತು ಅಜ್ಞಾನದಲ್ಲಿದೆ ಅದನ್ನು ತೊಡೆದು ಹಾಕುವ ಕೆಲಸವನ್ನು ಸೀತಾರಾಮ್ ಗೋಯೆಲ್ ಮಾಡಿದ್ದಾರೆ ಎಂದರು. ಇನ್ನು ಹೆಚ್ಚಿನ ಧರ್ಮ ಸಂರಕ್ಷಣೆ ಆಗಬೇಕೆಂದು ಸನಾತನ ಧರ್ಮ ನಿರೀಕ್ಷೆ ಮಾಡುತ್ತಿದೆ. ನಮ್ಮ ಹಿಂದೂಗಳಿಗೆ ಈಗಲೂ ಧರ್ಮ ಮತ್ತು ಮತದ ನಡುವಿನ ವ್ಯತ್ಯಾಸ ಗೊತ್ತಿಲ್ಲ .
> –**ಅಜ್ಜಂಪುರ ಮಂಜುನಾಥ**, ಲೇಖಕ

ಬಿಡುಗಡೆಗೊಂಡ ಪುಸ್ತಕಗಳು

1. ಹಿಂದೂ ದೇವಾಲಯಗಳು: ಇಸ್ಲಾಮೀ ವಿಧ್ವಂಸದ ಇತಿಹಾಸ: ಪ್ರಥಮ ಸಂಪುಟ
2. ಒಂದು ಪೂರ್ವಭಾವಿ ಸರ್ವೇಕ್ಷಣ, ಮೂಲ ಸೀತಾರಾಂ ಗೋಯೆಲ್, ಕನ್ನಡಕ್ಕೆ : ಅಜ್ಜಂಪುರ ಮಂಜುನಾಥ
3. ಸರಿಯಾಗಿ ದಾಖಲಾಗಬೇಕಾದ ಭಾರತದ ನಿಜ ಇತಿಹಾಸ: ಅಜ್ಜಂಪುರ ಮಂಜುನಾಥ,
4. ಮಾಡಿ ಮಡಿದವರು: ಬಿ.ಪಿ.ಪ್ರೇಮ ಕುಮಾರ್.

ನಾವು ಯಾರ ಅನ್ನ ಕಸಿಯುತ್ತಿಲ್ಲ: ಡಿಕೆಶಿ

ಬೆಂಗಳೂರು: ನಾವು ಯಾರ ಅನ್ನವನ್ನು ಕಸಿಯುತ್ತಿಲ್ಲ, ಬಿಜೆಪಿಗೆ ರಾಜಕೀಯ ಮಾಡುವುದು ಬಿಟ್ಟು ಬೇರೇನು ಕೆಲಸವಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಸದಾಶಿವನಗರ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ಬಿಪಿಎಲ್ ಕಾರ್ಡ್ ಪರಿಷ್ಕರಣೆ ಸಂಬಂಧ ಸರಕಾರ ಬಡವರ ಅನ್ನ ಕಸಿಯುತ್ತಿದೆ ಎಂಬ ಹೇಳಿಕೆಗೆ ಪ್ರತಿಕ್ರಯಿಸಿ, ಬಿಜೆಪಿಯವರಿಗೆ ಬೇರೇನು ಕೆಲಸವಿದೆ. ನಮ್ಮ ಕ್ಷೇತ್ರದಲ್ಲೂ ಶೇ 90 ರಷ್ಟು ಹಾಗೂ ಹೊಳೆನರಸೀಪುರದಲ್ಲಿ ಶೇ 92 ಬಿಪಿಎಲ್ ಕಾರ್ಡುದಾರರಿದ್ದಾರೆ. ಹೀಗಾಗಿ ಇವುಗಳನ್ನು ಪರಿಶೀಲನೆ ಮಾಡಬೇಕಲ್ಲವೇ?. ನಿಜವಾದ ಅರ್ಹರಿಗೆ ಬಿಪಿಎಲ್ ಕಾರ್ಡ್ ಸಿಕ್ಕಿದೆಯೇ ಇಲ್ಲವೇ ಎಂದು ನೋಡಬೇಕಾಗಿದೆ. ಕೆಲವು ಮಾನದಂಡಗಳ ಆಧಾರದ ಮೇಲೆ ಕೆಲವು ಬಿಪಿಎಲ್ ಕಾರ್ಡು ರದ್ದಾಗಿವೆ ಎಂದರು.

ಮಹಾರಾಷ್ಟ್ರದಲ್ಲಿ ಮಹಾವಿಕಾಸ್ ಅಗಾಡಿ ಮೈತ್ರಿಕೂಟ ಅಧಿಕಾರಕ್ಕೆ ಬರುವ ವಿಶ್ವಾಸವಿದೆ. ಕಾಂಗ್ರೆಸ್ ಪಕ್ಷಕ್ಕೆ ಜನ ಅಭೂತಪೂರ್ವ ಬೆಂಬಲ ನೀಡುತ್ತಿದ್ದು, ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ಇದ್ದ ಅನುಮಾನ ಬಗೆಹರಿದಿದೆ. ನಮ್ಮ ಸರಕಾರ ಕೊಟ್ಟ ಮಾತಿನಂತೆ ನಡೆದುಕೊಂಡಿದೆ ಎಂದರು.

ತಿರುಪತಿಯಲ್ಲಿ ಇನ್ಮುಂದೆ ಕ್ಯೂ ಇಲ್ಲ

ಅಮರಾವತಿ: ತಿರುಪತಿ ತಿಮ್ಮಪ್ಪನ ಭಕ್ತರು ಇನ್ನು ಮುಂದೆ ದೇವರ ದರ್ಶನ ಕ್ಕಾಗಿ ದೇವಸ್ಥಾನದಲ್ಲಿ ಗಂಟೆಗಟ್ಟಲೇ ಸಾಲಿನಲ್ಲಿ ನಿಲ್ಲಬೇಕಾಗಿಲ್ಲ.

ಹೌದು, ಕೃತಕ ಬುದ್ಧಿ ಮತ್ತೆ ಸೇರಿದಂತೆ ಸುಧಾರಿತ ತಂತ್ರಜ್ಞಾನವನ್ನು ಬಳಸಿಕೊಂಡು ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ದರ್ಶನದ ಸಮಯವನ್ನು 20–30 ಗಂಟೆಗಳಿಂದ ಕೇವಲ 2–3 ಗಂಟೆಗಳಿಗೆ ಇಳಿಸಲಾಗುವುದು ಎಂದು ತಿರುಮಲ ತಿರುಪತಿ ದೇವಸ್ಥಾನಂ ಆಡಳಿತ ಮಂಡಳಿ ತಿಳಿಸಿದೆ. ಸೋಮವಾರ ಟಿಟಿಡಿ ಅಧ್ಯಕ್ಷ ಬಿ.ಆರ್.ನಾಯ್ಡು ಅವರ ನೇತೃತ್ವದಲ್ಲಿ ನಡೆದ ಮೊದಲ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ. ದೇವಾಲಯದ ವ್ಯವಹಾರಗಳನ್ನು ನಿರ್ವಹಿಸುವ ಟಿಟಿಡಿ ಮಂಡಳಿಯು ಸಭೆಯಲ್ಲಿ ಕೆಲವು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿದೆ. ಕಂಪಾರ್ಟ್‌ಮೆಂಟ್‌ಗಳಲ್ಲಿ ಭಕ್ತರಿಗೆ ತೊಂದರೆ, ಕಿರಿಕಿರಿ ಉಂಟಾಗದಂತೆ ದರ್ಶನ ಲಭ್ಯವಾಗಲು ಈ ಯೋಜನೆ ರೂಪಿಸಲು ನಿರ್ಧರಿಸಲಾಗಿದೆ.

ಅರ್ಜೆಂಟೀನ ಆರ್ಥಿಕ ದುಃಸ್ಥಿತಿ–ಋಣಾತ್ಮಕ ಸ್ಥಿತಿ | ಭಾರತವೊಂದೇ ಶೇ.7ರಷ್ಟು ಬೆಳವಣಿಗೆ ದಾಖಲು

ಜಿ–20 ದೇಶಗಳ ಜಿಡಿಪಿ ಪ್ರಗತಿ: ಭಾರತವೇ ಪ್ರಥಮ

ದೆಹಲಿ: ವಿಶ್ವದ ಪ್ರಮುಖ ಜಿ–20 ದೇಶಗಳಲ್ಲಿಯೇ ವಿಶ್ವದ ಬಹುಪಾಲು ಆರ್ಥಿಕತೆ ನೆಲೆಗೊಂಡಿದೆ. ಅಮೆರಿಕ, ಭಾರತ, ಚೀನಾ, ಜರ್ಮನಿ, ಬ್ರಿಟನ್ ಮೊದಲಾದ ಪ್ರಮುಖ ರಾಷ್ಟ್ರಗಳು ಈ ಗುಂಪಿನಲ್ಲಿವೆ. ದೇಶದ ಒಟ್ಟಾರೆ ಆಂತ ರಿಕ ಉತ್ಪಾದನೆಯ(ಜಿಡಿಪಿ) ವಾರ್ಷಿಕ ಪ್ರಗತಿಯಲ್ಲಿ ಸದ್ಯ ಭಾರತವೇ ಮುಂದಿದೆ.





ವಿಶ್ವದ ಪ್ರಮುಖ ಆರ್ಥಿಕತೆಗಳಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಭಾರತವೊಂದೇ ಅತ್ಯಂತ ವೇಗದ ಜಿಡಿಪಿ ಬೆಳವಣಿಗೆ ಕಾಣುತ್ತಿರುವ ದೇಶವಾಗಿದೆ. ಭಾರತದ ಆರ್ಥಿಕ ಪ್ರಗತಿ ಗತಿ 2024–25ನೇ ಹಣಕಾಸು ವರ್ಷದಲ್ಲೂ ಮುಂದುವರಿದಿದೆ. ಪ್ರಸಕ್ತ ಸಾಲಿನಲ್ಲಿ ಭಾರತದ ಆರ್ಥಿಕತೆ ಶೇ.7ರ ಬೆಳವಣಿಗೆ ಕಾಣಬಹುದು ಎಂಬ ಅಂದಾಜಿದೆ.

ಜಿ–20 ದೇಶಗಳ ಜಿಡಿಪಿ ತುಲನೆ ಮಾಡಿದ ಮಾಹಿತಿಯನ್ನು ಕೇಂದ್ರ ಸರಕಾರವೇ 'ಎಕ್ಸ್' ಸಂದೇಶದಲ್ಲಿ ಹಂಚಿಕೊಂಡಿದೆ. ಹಲವಾರು ಸವಾಲು ಗಳ ಮಧ್ಯೆಯೂ ಭಾರತದ ಆರ್ಥಿಕ ಪ್ರಗತಿ ವೇಗವಾಗಿದೆ ಎಂದು ಹೇಳಿ ಕೊಂಡಿದೆ. 2024ರಲ್ಲಿ ಪ್ರಮುಖ 7 ದೇಶಗಳು ಶೇ.3ಕ್ಕೂ ಹೆಚ್ಚು ಜಿಡಿಪಿ ಬೆಳವಣಿಗೆ ಕಾಣಬಹುದು ಎಂದು ನಿರೀಕ್ಷಿಸಲಾಗಿದೆ. ಅರ್ಜೆಂಟೀನ ಆರ್ಥಿ ಕತೆ ಮಾತ್ರ ನಕಾರಾತ್ಮಕ ಗತಿಯಲ್ಲಿದ್ದು, ಶೇ.3.5 ರಷ್ಟು ಜಿಡಿಪಿ ನಷ್ಟ ಅನುಭ ವಿಸಲಿದೆ ಎಂದು ಅಂದಾಜು ಮಾಡಲಾಗಿದೆ.

ಭಾರತ ಬಲು ಸಮರ್ಥ!

ಜಿ20 ದೇಶಗಳಲ್ಲಿ 2024ರಲ್ಲಿ ಅಂದಾಜು ಜಿಡಿಪಿ ದರದಲ್ಲಿ ಭಾರತ ನಂ.1 ಸ್ಥಾನದಲ್ಲಿದ್ದು, ಅದರ ಜಿಡಿಪಿ ಶೇ.7ರಷ್ಟು ಬೆಳವಣಿಗೆ ದಾಖಲಿಸಲಿದೆ ಎಂದು ಅಂದಾಜು ಮಾಡಲಾಗಿದೆ. ಇಂಡೋನೇಷ್ಯಾಶೇ.5, ಚೀನಾ ಶೇ.4.8, ರಷ್ಯಾ ಶೇ.3.6, ಬ್ರೆಜಿಲ್, ಆಫ್ರಿಕಾ, ಟರ್ಕಿ ಶೇ.3, ಅಮೆರಿಕ ಶೇ.2.8, ದ.ಕೊರಿಯ ಶೇ.2.5, ಮೆಕ್ಸಿಕೊ ಶೇ.1.5, ಸೌದಿ ಅರೇಬಿಯ ಶೇ.1.5, ಕೆನಡಾ ಶೇ. 1.3, ಆಸ್ಟ್ರೇಲಿಯ ಶೇ.1.2, ಫ್ರಾನ್ಸ್, ಐರೋಪ್ಯ ಒಕ್ಕೂಟ, ಬ್ರಿಟನ್, ದಕ್ಷಿಣ ಆಫ್ರಿಕಾ ತಲಾ ಶೇ.1.1, ಇಟಲಿ ಶೇ.0.7, ಜಪಾನ್ ಶೇ.0.3, ಜರ್ಮನಿ ಶೇ.0 ಹಾಗೂ ಅರ್ಜೆಂಟೀನ ಜಿಡಿಪಿ ಪ್ರಗತಿ ದರ (ಮೈನಸ್) ಶೇ. –3.5ನಷ್ಟು ಇರಲಿದೆ ಎಂದು ಅಂದಾಜು ಮಾಡಲಾಗಿದೆ.

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ ವಿಹಾರ

ಯೋಗ್ಯತಾನುಸಾರ ಬಾಧ್ಯತೆ

ಕಾರ್ಯಕ್ಷಮತೆ ಎನ್ನುವುದು ಒಬ್ಬರ ಒಳಗಿನ ತೀವ್ರವಾದ ಆಸಕ್ತಿ, ಉತ್ಸಾಹಗಳಿಗೆ ನೇರವಾಗಿ ಸಂಬಂಧಿಸಿದೆ. ಯಾವುದೇ ಜವಾಬ್ದಾರಿಯುತ ಕೆಲಸವಾಗಿದ್ದರೂ, ಅದರ ಬಗ್ಗೆ ಕುತೂಹಲಭರಿತ ಆಪ್ತ ಭಾವ ಇದ್ದಾಗ ಮಾತ್ರ ಆ ಕೆಲಸವನ್ನು ಯಶಸ್ವಿಯಾಗಿ ಪೂರೈಸಲು ಸಾಧ್ಯ. ಇವೆಲ್ಲದರ ಜೊತೆಗೆ ಆ ಜವಾಬ್ದಾರಿ ನಿರ್ವಹಿಸಲು ಬೇಕಾದ ಸಾಮರ್ಥ್ಯ ಹೊಂದಿರಬೇಕಾಗುವುದು ಬಹು ಮುಖ್ಯ. ಸಾಮಾನ್ಯವಾಗಿ ಒಂದು ವಿಶೇಷವಾದ ತಜ್ಞತೆ ಬೇಡುವ ಕಾರ್ಯವನ್ನು ಸಂಪನ್ನಗೊಳಿಸಲು ಅದಕ್ಕೆ ಅಗತ್ಯವಿರುವಷ್ಟು ಕೌಶಲ್ಯ ಇರಲೇಬೇಕು. ಹಾಗೆ ಕೌಶಲ್ಯ ಹೊಂದಿರುವವರು ಸ್ವತಃ ತಾವು ಆ ಕಾರ್ಯದಲ್ಲಿ ತಲ್ಲೀನರಾಗಿ, ಆನಂದದಿಂದ ಆ ಕೆಲಸವನ್ನು ಪೂರೈಸುತ್ತಾರೆ. ಹೀಗೆ ಪೂರ್ಣವಾದ ಯೋಜನೆ ಮಹತ್ತರವಾದ ಯಶಸ್ಸನ್ನು ಪಡೆಯುತ್ತದೆ. ಜೊತೆಗೆ ಯಶಸ್ಸು ಪಡೆದ ವ್ಯಕ್ತಿಯ ಆತ್ಮವಿಶ್ವಾಸವು ವೃದ್ಧಿಸಿ, ಮುಂದೆ ಇನ್ನೂ ಹೆಚ್ಚಿನ ಜವಾಬ್ದಾರಿ ಹೊಂದುವ ಸಾಮರ್ಥ್ಯ ಗಳಿಸುವುದು ಸಹಜ.

ಕಡಿಮೆ ಅರ್ಹತೆ ಹೊಂದಿರುವ ವರಿಗೆ ಹೆಚ್ಚಿನ ಜವಾಬ್ದಾರಿ ಮಹಿಸಿದರೆ, ಪ್ರತಿಭೆಯ ಕೊರತೆಯಿಂದ ಆ ಕೆಲಸವನ್ನು ಪೂರ್ಣಗೊಳಿಸುವುದು ಅವರಿಗೆ ಕಠಿಣವೆನಿಸಬಹುದು. ತಮ್ಮ ಪ್ರಾವೀಣ್ಯತೆಯ ಬಗ್ಗೆಯೇ ಸಂದೇಹ ಮೂಡಿ, ಕೀಳರಿಮೆಗೂ ಕಾರಣವಾಗಬಹುದು. ಇಂತಹವರು ತಮ್ಮ ಪರಿಣಿತಿಯನ್ನು ಹೆಚ್ಚಿಸಿಕೊಳ್ಳುವ ದಿಕ್ಕಿನಲ್ಲಿ ನಡೆದರೆ ಅದೊಂದು ವಿಕಸನದ ಪ್ರಕ್ರಿಯೆ ಆಗಬಹುದು. ಇಲ್ಲವಾದಲ್ಲಿ ತಮ್ಮ ಯೋಗ್ಯತೆಯ ಬಗ್ಗೆಯೇ ಅವಿಶ್ವಾಸ ಹೊಂದಿ, ಕಾರ್ಯಕ್ಷೇತ್ರದಲ್ಲಿ ಹಿಂದುಳಿಯ ಬಹುದು. ಹಾಗೆಯೇ ಹೆಚ್ಚು ಸಾಮರ್ಥ್ಯ, ಕೌಶಲ್ಯ ಇರುವವರಿಗೆ ಅವರ ದಕ್ಷತೆಗಿಂತ ಕಡಿಮೆ ಮಟ್ಟದ ಜವಾಬ್ದಾರಿಯನ್ನು ವಹಿಸಿಕೊಟ್ಟಾಗ, ಅವರಿಗೆ ಆ ಕೆಲಸದ ಬಗ್ಗೆ ನಿರಾಸಕ್ತಿ ಮೂಡಿ, ಕಾರ್ಯದಿಂದ ವಿಮುಖರಾಗುವ ಸಂಭವವೇ ಹೆಚ್ಚು. ಅಥವಾ ಕೆಲಸ ಮಾಡಿದರೂ ಸಂಪೂರ್ಣ ಉತ್ಸಾಹದಿಂದ ತಮ್ಮನ್ನು ತೊಡಗಿಸಿಕೊಳ್ಳಲಾಗದೆ, ವಿಫಲರಾಗಬಹುದು. ಕಾರ್ಯ ಪೂರ್ಣಗೊಂಡರೂ ನಿರೀಕ್ಷಿತ ಮಟ್ಟದ ಯಶಸ್ಸು ದೊರೆಯದೆ ಹೋಗ ಬಹುದು. ನಿರೀಕ್ಷಿತ ಯಶಸ್ಸು ಸಿಗದೇ ಹೋದಾಗ ಆತ್ಮವಿಶ್ವಾಸಕ್ಕೆ ಧಕ್ಕೆ ಉಂಟಾಗಬಹುದು. ಯೋಗ್ಯತೆಗೆ ಅನುಸಾರವಾಗಿ ಬಾಧ್ಯತೆಯನ್ನು ವಹಿಸಿದರೆ, ವೈಯಕ್ತಿಕ ಮತ್ತು ಸಾರ್ವತ್ರಿಕ ಮೌಲ್ಯವರ್ಧನೆ ಸಾಧ್ಯ.

● ಮಾಯಾ ಬಾಲಚಂದ್ರ

'ಟ್ರೋಲ್' ಪ್ರತಿಮೆ!

ಅಮೆರಿಕದ ಫ್ರೆಮಾಂಟ್ ಎಂಬ ಜಾಗದ ರಸ್ತೆಯಲ್ಲಿ ನಡೆಯುತ್ತಿರುವಾಗ ಒಂದೆಡೆ 'ಟ್ರೋಲ್ ಕಡೆಗೆ ಹೋಗುವ ದಾರಿ' ಎಂಬ ಫಲಕ ಕಾಣಿಸಿತು. ಸಾಮಾಜಿಕ ಜಾಲತಾಣಗಳಲ್ಲಿ 'ಟ್ರೋಲ್' ಎಂಬ ಪದ ಕೇಳಿದ್ದೆನಷ್ಟೇ ಹೊರತು ಬೇರೆ ಟ್ರೋಲ್‌ಗಳ ಬಗೆಗೆ ನನ್ನ ತಿಳುವಳಿಕೆ ಶೂನ್ಯವಾಗಿತ್ತು. ಕಾಲ್ನಡಿಗೆಯಲ್ಲಿ ಹೋಗುತ್ತಾ, ಗೂಗಲ್ ಮ್ಯಾಪಿನ ಸಹಾಯ ಪಡೆಯುತ್ತಾ ಗಮ್ಯವನ್ನು ತಲುಪಿದಾಗ ಕಾಣಿಸಿದ್ದು ಒಂದು ದೆವ್ವದ ಕಲಾಕೃತಿ! ಜಾರ್ಜ್ ವಾಷಿಂಗ್ಟನ್ ಮೆಮೋರಿಯಲ್ ಸೇತುವೆಯ ಉತ್ತರ ಭಾಗದ ಕೆಳಗೆ ಇದರ ಸ್ಥಾನ. ಒಂದೇ ಕಣ್ಣಿರುವ ಇದರ

ಕೈಯಲ್ಲಿ ಒಂದು ನಿಜವಾದ ಫೋಲ್ಕ್ಸ್ ವ್ಯಾಗನ್ ಬೀಟ್ಲ್ ಕಾರು ಇದೆ. ಮೇಲಿರುವ ರಸ್ತೆಗೆ ಕೈಹಾಕಿ ಅಲ್ಲಿಂದಲೇ ಎತ್ತಿಕೊಂಡು ಬಂದಿರುವಂತಹ ಸಂದರ್ಭದಂತೆ ಕಾಣಿಸುತ್ತದೆ. 5.5 ಮೀಟರ್ ಎತ್ತರ, 5,900 ಕೆ.ಜಿ. ಭಾರವಿರುವ ಈ ಟ್ರೋಲ್ ಸ್ಟೀಲ್ ಮತ್ತು ಕಾಂಕ್ರೀಟ್‌ಗಳಿಂದ ನಿರ್ಮಿಸಲ್ಪಟ್ಟಿದೆ. ಟ್ರೋಲ್ ಎಂದರೆ ಒಂದು ಕಾಲ್ಪನಿಕ ದೈತ್ಯಾಕಾರದ ರಾಕ್ಷಸ ಅಥವಾ ದೆವ್ವ. ಮನುಷರೆಂದರೆ ಆಗದ ಇವುಗಳು ಗುಹೆಗಳಲ್ಲಿ ಅಥವಾ ಭೂಮಿಯೊಳಗಿನ ಸುರಂಗಗಳಲ್ಲಿ ವಾಸಿಸುತ್ತವೆ ಎಂಬ ನಂಬಿಕೆ.

ಈ ಕಲಾಕೃತಿಯನ್ನು ನಿರ್ಮಿಸಿದವರು ನಾಲ್ಕು ಜನ ಕಲಾವಿದರು. ಸ್ಟೀವ್ ಬಡಾನೆಸ್, ವಿಲ್ ಮಾರ್ಟಿನ್, ಡೋನಾ ವಾಲ್ಟರ್ ಮತ್ತು ರಾಸ್ ವೈಟ್ ಹೆಡ್. ಸೇತುವೆಯ ಕೆಳಗೆ ವಾಸಿಸುವ ಟ್ರೋಲ್‌ನ ಕಲ್ಪನೆ ನಾರ್ವೆಯ ಜನಪದ ಕತೆಯಿಂದ ಪಡೆದದ್ದು. ಕಾಲಕಾಲಕ್ಕೆ ಕಿಡಿಗೇಡಿಗಳಿಂದ ವಿರೂಪಗೊಂಡು, ರಿಪೇರಿಗೊಳಪಟ್ಟಿದೆ. ಈ ಕಲಾಕೃತಿ ಇರುವ ರಸ್ತೆ 'ಟ್ರೋಲ್ ಅವೆನ್ಯೂ'!

1990 ರಲ್ಲಿ ಫ್ರೆಮಾಂಟ್‌ನ ಆರ್ಟ್ ಕೌನ್ಸಿಲ್ ಒಂದು ವಿಶಿಷ್ಟವಾದ ಸ್ಪರ್ಧೆಯನ್ನು ಏರ್ಪಡಿಸಿತು. ಸೇತುವೆಯ ಕೆಳಗಿನ ಭಾಗವು ತ್ಯಾಜ್ಯ ವಸ್ತುಗಳು, ಭಿಕ್ಷುಕರು, ಹೆಗ್ಗಣಗಳು ಇರುವ ತಾಣವಾಗದಂತೆ ಮಾಡಲು ಭಯ ಹುಟ್ಟಿಸುವ ಕಲಾಕೃತಿಯನ್ನು ಸ್ಥಾಪಿಸುವ ಯೋಜನೆ ಅದು. ಇದರಲ್ಲಿ ಗೆದ್ದದ್ದೇ 'ಟ್ರೋಲ್'. ಸಿನೆಮಾಗಳಲ್ಲಿ, ವೀಡಿಯೋ ಗೇಮ್‌ಗಳಲ್ಲಿ ಫ್ರೆಮಾಂಟ್‌ನ ಟ್ರೋಲ್ ಚಿತ್ರವನ್ನು ಬಳಸಲಾಗಿದೆ.

● ಡಾ. ಉಮಾಮಹೇಶ್ವರಿ ಎನ್

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್,
ರಾಘವೇಂದ್ರ ಸ್ವಾಮಿ ಮಠದ ಹತ್ತಿರ,
ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಓದುಗ ದೊರೆಯ ಪುಸ್ತಕ ಸಂತೆ!

● ಶಶಿಧರ ಹಾಲಾಡಿ

ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ನಡೆದ 'ವೀರಲೋಕ ಪುಸ್ತಕ ಸಂತೆ'ಯ ಯಶಸ್ಸು ಹಿಂದೆಂದೂ ಕಂಡುಕೇಳರಿಯದಂತಹದ್ದು! ಕನ್ನಡ ಪುಸ್ತಕಗಳನ್ನು ಕೊಂಡು, ಓದುವವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬ ಅನುಮಾನವನ್ನು ಹಲವರು ವ್ಯಕ್ತಪಡಿಸುತ್ತಿರುವ ಈ ಕಾಲದಲ್ಲಿ, ಲಕ್ಷಾಂತರ ಓದುಗರನ್ನು ಪುಸ್ತಕ ಸಂತೆಗೆ ಆಹ್ವಾನಿಸಿ, ಬರುವಂತೆ ಮಾಡಿ, ಅವರು ಪುಸ್ತಕಗಳನ್ನು ನೋಡುವಂತೆ, ಕೊಳ್ಳುವಂತೆ ಪ್ರೇರೇಪಿಸಿದ ಈ ಪುಸ್ತಕ ಸಂತೆಯ ಯಶಸ್ಸು ನಿಜಕ್ಕೂ ಅಭೂತಪೂರ್ವ.

ಸುಮಾರು 1,75,000 ಓದುಗರು, ನವೆಂಬರ್ 15-17ರ ನಡುವೆ ನಡೆದ ಪುಸ್ತಕ ಸಂತೆಗೆ ಭೇಟಿ ನೀಡಿದ್ದು ಕನ್ನಡದ ಮಟ್ಟಿಗೆ ಒಂದು ದಾಖಲೆ ಎಂದು 'ವೀರಲೋಕ ಪುಸ್ತಕ ಸಂತೆ'ಯ ರೂವಾರಿ ವೀರಕಪುತ್ರ ಶ್ರೀನಿವಾಸ್ ಹೇಳಿದರು. ಓದುಗ, ಲೇಖಕ, ಪ್ರಕಾಶಕರನ್ನು ಒಂದೇ ಸೂರಿನಡಿ, ಈ ಮಟ್ಟದಲ್ಲಿ ಸೇರಿಸಿದ್ದು ಕನ್ನಡ ಸಾಹಿತ್ಯ ಲೋಕದ ಹೊಸ ಸುದ್ದಿ ಎನಿಸಿತು. ಇಷ್ಟು ದೊಡ್ಡ ಮಟ್ಟದಲ್ಲಿ, ಅದ್ದೂರಿಯಾಗಿ ಒಂದು ಪುಸ್ತಕ ಸಂತೆಯನ್ನು ಏರ್ಪಡಿಸಲು ಪ್ರೇರಣೆ ಏನು ಎಂದು ಕೇಳಿದಾಗ, ವೀರಕಪುತ್ರ ಶ್ರೀನಿವಾಸ್ ಅವರು ನೀಡಿದ ಉತ್ತರ ಮಾರ್ಮಿಕ, ಅರ್ಥಪೂರ್ಣ ಮತ್ತು ಆಪ್ತ.

> ಸುಮಾರು ಎರಡು ಲಕ್ಷದಷ್ಟು ಜನರನ್ನು ತನ್ನೆಡೆಗೆ ಸೆಳೆದ 'ವೀರಲೋಕ ಪುಸ್ತಕಸಂತೆ'ಯು, ಕನ್ನಡದ ಸಾಹಿತಿಗಳಿಗೆ, ಪ್ರಕಾಶಕರಿಗೆ ಹೊಸ ಉತ್ಸಾಹ ತುಂಬಿದೆ; ಕನ್ನಡದ ಓದುಗರು ಪುಸ್ತಕಗಳನ್ನು ಖರೀದಿಸುವಲ್ಲಿ ಹಿಂದೆ ಬಿದ್ದಿಲ್ಲ ಎಂದು ತೋರಿಕೊಟ್ಟಿದೆ. ಇನ್ನಷ್ಟು ಹೊಸ ಪುಸ್ತಕಗಳು ಹೊರಬರಲು ಸ್ಫೂರ್ತಿ ತುಂಬಿದೆ.

'ಓದುಗ ದೊರೆ ಎಂಬ ಪರಿಕಲ್ಪನೆಯ ಸುತ್ತಲೂ ಈ ಪುಸ್ತಕ ಸಂತೆಯನ್ನು ಏರ್ಪಡಿಸಲಾಗಿತ್ತು. ಮೂರು ದಿನ ನಡೆದ ಪುಸ್ತಕ ಸಂತೆಗೆ ಬಂದವರೆಲ್ಲರೂ, ಪುಸ್ತಕ ಸಂತೆಯ ಪ್ರಧಾನ ಸ್ಥಳದಲ್ಲಿ ಇರಿಸಿದ್ದ ಒಂದು ವಿಶಿಷ್ಟ ಆಸನವನ್ನು ನೋಡಿರಲೇಬೇಕು : ಅದು ಓದುಗ ದೊರೆಗೆ ನಾವು ನೀಡಿದ ಗೌರವ. ಓದುಗ ದೊರೆಯು ಬಂದು, ಆ ಆಸನದಲ್ಲಿ ಆಸೀನನಾಗಿ, ಪುಸ್ತಕಗಳನ್ನು ಓದಲಿ ಎಂಬ ರೂಪಕ ಅದು. ಕನ್ನಡ ಪುಸ್ತಕಗಳ ಜನರಿಗೆ ತಲುಪಬೇಕಾದರೆ, ಓದುಗ ದೊರೆಯು ಮನಸ್ಸು ಮಾಡಬೇಕು, ಓದುಗ ದೊರೆಯು ಪುಸ್ತಕಗಳನ್ನು ಖರೀದಿಸಬೇಕು, ಓದುಗ ದೊರೆಯೇ ಪ್ರಕಾಶಕರಿಗೆ ಪ್ರೋತ್ಸಾಹ ನೀಡಬೇಕು. ಆದ್ದರಿಂದ, ಓದುಗ ದೊರೆ ಎಂಬ ಪರಿಕಲ್ಪನೆಯ ಸುತ್ತ, ಪುಸ್ತಕ ಸಂತೆಯನ್ನು ಏರ್ಪಡಿಸುವ ಯೋಚನೆ ಮಾಡಿದೆ. ಕನ್ನಡ ಪುಸ್ತಕಗಳು ಹೆಚ್ಚು ಹೆಚ್ಚು ಜನರಿಗೆ ತಲುಪಲು, ಪುಸ್ತಕೋದ್ಯಮ ಬೆಳೆಯಲು 'ಓದುಗ ದೊರೆ'ಯೇ ಮುಖ್ಯ ಎಂಬ ಪ್ರಾಮಾಣಿಕ ಅನಿಸಿಕೆ ನನ್ನದು. ಆದ್ದರಿಂದ ಓದುಗ ದೊರೆಗೆ ಅತಿ ಹೆಚ್ಚಿನ ಗೌರವವನ್ನು ನೀಡಬಯಸುತ್ತೇನೆ.'

ಪುಸ್ತಕ ಸಂತೆಯ ಆಯೋಜನೆಯ ಹಿಂದೆ 'ಓದುಗ ದೊರೆ'ಯನ್ನು ಉನ್ನತ ಸ್ಥಾನದಲ್ಲಿರಿಸಿ, ಆ ಪರಿಕಲ್ಪನೆಯ ಸುತ್ತಲೇ ಪುಸ್ತಕ ಸಂತೆಯನ್ನು ಯೋಜಿಸಿದ ವಿಚಾರವನ್ನು ವೀರಕಪುತ್ರ ಶ್ರೀನಿವಾಸ್ ಅವರು

ವಿವರಿಸುವಾಗ, ಅವರು ತುಸು ಭಾವುಕರೂ ಆಗಿದ್ದರು; ಸಾಮಾನ್ಯ ಓದುಗನನ್ನು 'ದೊರೆ' ಎಂದು ಕರೆದು, ಅವನಿಗೊಂದು ವಿಶೇಷ ಆಸನವನ್ನು ಪುಸ್ತಕ ಸಂತೆಯಲ್ಲಿ ಮೀಸಲಾಗಿರಿಸಿದ್ದು ಸಹ ಕನ್ನಡದ ಮಟ್ಟಿಗೆ ಹಿಂದೆಂದೂ ಕಂಡರಿಯದ ಗೌರವ.

ವಾಲ್ ಆಫ್ ಫೇಮ್

ವೀರಲೋಕ ಪುಸ್ತಕ ಸಂತೆಯಲ್ಲಿ, ಒಂದು ವರ್ಣರಂಜಿತ ಗೋಡೆ - ವಾಲ್‌ನ್ನು ಆಯೋಜಿಸಲಾಗಿತ್ತು; ಒಂದು ರೀತಿಯಲ್ಲಿ ಅದು 'ವಾಲ್ ಆಫ್ ಫೇಮ್' : ಸಾಹಿತಿಗಳನ್ನು ಗುರುತಿಸುವ, ಗೌರವಿಸುವ ಗೋಡೆ ಅದು. ಆ ಗೋಡೆಯ ತುಂಬಾ, ನೂರಕ್ಕೂ ಅಧಿಕ ಲೇಖಕರ ವರ್ಣರಂಜಿತ ಛಾಯಾಚಿತ್ರಗಳು! ಜತೆಗೆ, ಓದುಗ ದೊರೆಗೆ ಮೀಸಲಿರಿಸಲಾಗಿದ್ದ ಆಸನದ ಬಳಿಯೂ, ನೂರಾರು ಲೇಖಕರ ಫೋಟೋಗಳನ್ನು ಆಕರ್ಷಕವಾಗಿ ಜೋಡಿಸಲಾಗಿತ್ತು. ಓದುಗ ದೊರೆಗೆ ಗೌರವ ನೀಡುವ ಸಮಯದಲ್ಲೇ, ಸಾಹಿತಿಗಳ ಫೋಟೋಗಳನ್ನು ಪ್ರದರ್ಶಿಸಿ, ಅವರಿಗೂ ಗೌರವ ನೀಡಿದೆ 'ವೀರಲೋಕ ಪುಸ್ತಕ ಸಂತೆ'.

ಎರಡು ಲಕ್ಷ ಜನರ ಭೇಟಿ!

ಬೆಂಗಳೂರಿನ ಜಯನಗರದ ಶಾಲಿನಿ ಮೈದಾನದಲ್ಲಿ ನಿನ್ನೆ ಮುಕ್ತಾಯಗೊಂಡ ಪುಸ್ತಕ ಸಂತೆಯ ಪುಸ್ತಕ ಮಳಿಗೆಗಳಿಗೆ ಸುಮಾರು ಒಂದೂ ಮುಕ್ಕಾಲು ಲಕ್ಷ ಜನ ಭೇಟಿ ನೀಡಿದ್ದಾರೆ ಎಂದು ಅಲ್ಲಿನ ಗಣಕೀಕೃತ ವ್ಯವಸ್ಥೆ ದಾಖಲಿಸಿದೆ. ಪುಸ್ತಕ ನೋಡಿ, ಓಡಾಡಿ ಸುಸ್ತಾದವರು ಕಾಫಿ, ತಿಂಡಿ ಸೇವಿಸಲು ಕೆಲವು ಸ್ಟಾಲ್‌ಗಳನ್ನು ಸಹ ಅಲ್ಲಿ ಸ್ಥಾಪಿಸಲಾಗಿತ್ತು; ಆ ಸ್ಟಾಲ್‌ಗಳಿಗೂ ಭೇಟಿ ನೀಡಿದ ಜನರನ್ನು ಸೇರಿಸಿದರೆ, ಒಟ್ಟು ಎರಡು ಲಕ್ಷ ಜನರು ಪುಸ್ತಕ ಸಂತೆಗೆ ಭೇಟಿ ನೀಡಿದ್ದರು ಎಂದು ವೀರಕಪುತ್ರ ಶ್ರೀನಿವಾಸ್ ಹೇಳಿದರು.

ಪುಸ್ತಕ ಸಂತೆಯ ಪ್ರಮುಖ ಜಾಗದಲ್ಲಿ, ನೂರಕ್ಕೂ ಅಧಿಕ ಲೇಖಕರ ಫೋಟೋಗಳ ಹಿನ್ನೆಲೆಯಲ್ಲಿ 'ಓದುಗ ದೊರೆ'ಗಾಗಿ ಮೀಸಲಿರಿಸಿದ ಆ ಚಂದವಾದ ಆಸನವನ್ನು, ಅಲ್ಲಿಗೆ ಬಂದ ಎಲ್ಲರೂ ನೋಡಿರಲೇಬೇಕು. ನೂರಾರು ಜನ ಓದುಗರು, ಅಭಿಮಾನಿಗಳು, ಆ ಮೆತ್ತನೆಯ ಕುರ್ಚಿಯ ಮೇಲೆ ಕುಳಿತು, ಫೋಟೋ ತೆಗೆಸಿಕೊಂಡರು; ಇನ್ನು ಕೆಲವರು ಆ ಆಸನದ ಮೇಲೆ ಕುಳಿತು, ತಾವು ಖರೀದಿಸಿದ ಪುಸ್ತಕಗಳನ್ನು ಓದುತ್ತಾ ಫೋಟೋ ತೆಗೆಸಿಕೊಂಡರು; ಸೆಲ್ಫಿಗಳಿಗಂತೂ ಲೆಕ್ಕವೇ ಇಲ್ಲ.

ಓಲೇ ಅಭಿಯಾನ

ಸೆಲ್ಫಿ ಎಂದಾಗ, 'ವೀರಲೋಕ ಪುಸ್ತಕ ಸಂತೆಯಲ್ಲಿ ನಡೆದ ಇನ್ನೊಂದು ವಿಶೇಷ ಅಭಿಯಾನದ ಕುರಿತು ಹೇಳಲೇಬೇಕು. ಅದೇ 'ಓಲೇ' ಅಭಿಯಾನ! 'ಓಲೇ' ಎಂದರೆ ಸರಳ - ಓದು ಲೇಖಕರ ಮುಖಾಮುಖಿ; ಇದರಲ್ಲಿ ಓದುಗರು ಲೇಖಕರ ಬಳಿ ಬಂದು, ಮಾತನಾಡಿಸಿ, ಅವರು ಬರೆದ ಪುಸ್ತಕ ಖರೀದಿಸಿ, ಆ ಪುಸ್ತಕಗಳಲ್ಲಿ ಲೇಖಕರ ಹಸ್ತಾಕ್ಷರ ಪಡೆದು, ಅಲ್ಲೇ ಒಂದು ಸೆಲ್ಫಿ ಸಹ ಕ್ಲಿಕ್ಕಿಸಿಕೊಳ್ಳುವ ಸಂಭ್ರಮ! ಪುಸ್ತಕ ಸಂತೆಯ ಹೃದಯ ಭಾಗದಲ್ಲಿ, ಸಾಹಿತಿಗಳು ತಮ್ಮ ಪುಸ್ತಕಗಳನ್ನು ಪ್ರದರ್ಶಿಸಿ, ಮಾರಾಟ ಮಾಡಲೆಂದೇ ಇಪ್ಪತ್ತು 'ಕ್ಯೂಬಿಕಲ್ಸ್'ಗಳನ್ನು ನಿಯೋಜಿಸಲಾಗಿತ್ತು; ಒಂದೊಂದು ಕ್ಯೂಬಿಕಲ್‌ನ ವಿನ್ಯಾಸವೂ ವಿಶಿಷ್ಟ; ಓದುಗ ಮತ್ತು ಲೇಖಕರು ಪರಸ್ಪರ ಮುಖಾಮುಖಿಯಾಗಿ ಹೃದಯಸಂವಾದ ನಡೆಸಲು ಅನುಕೂಲವಾಗುವ ವಿನ್ಯಾಸ ಅದು. ಜತೆಗೆ, ಪ್ರತಿ ಲೇಖಕನ ಕುರಿತಾದ ಚುಟುಕಾದ ಮಾಹಿತಿ, ಅವರು ಬರೆದ ಪುಸ್ತಕಗಳ ಮಾಹಿತಿ, ಪ್ರಶಸ್ತಿಗಳ ಮಾಹಿತಿಯನ್ನು ಪ್ರದರ್ಶಿಸುವ ಆಳೆತ್ತರದ ಕಟ್‌ಔಟ್ ಸಹ ಅಲ್ಲಿತ್ತು!

ವಿಶೇಷ ಎನಿಸಿದ್ದೆಂದರೆ, ವೀರಲೋಕ ಪ್ರಕಾಶನದ ಮೂಲಕ ಪುಸ್ತಕ ಪ್ರಕಟಿಸಿದ ಲೇಖಕರ ಜತೆಯಲ್ಲೇ, ಇತರ ಪ್ರಕಾಶನದಲ್ಲಿ ಪುಸ್ತಕ ಹೊರತಂದವರು ಸಹ ಇಲ್ಲಿ ಭಾಗವಹಿಸಿ, 'ಓಲೇ' ಅಭಿಯಾನದಲ್ಲಿ ಭಾಗವಹಿಸುವ ಅವಕಾಶವನ್ನು ನೀಡಲಾಗಿತ್ತು. ಮತ್ತು ಇದು ಉಚಿತ ಸೌಲಭ್ಯ! ಅಂದರೆ, ಓದುಗ ದೊರೆಯನ್ನು ಗೌರವಿಸುವ ಜತೆಯಲ್ಲೇ, ಕನ್ನಡದ ಲೇಖಕರನ್ನು ಸಹ ವಿಶೇಷವಾಗಿ ಗೌರವಿಸುವ ಅಭಿಯಾನವಿದು. ಪುಸ್ತಕ ಸಂತೆಗೆ ಬರುವ ಓದುಗರು, ತಮ್ಮ ನೆಚ್ಚಿನ ಲೇಖಕರನ್ನು ಭೇಟಿಯಾಗಿ, ಅವರ ಕೈಯಿಂದಲೇ ಪುಸ್ತಕ ಖರೀದಿಸುವ, ಹಸ್ತಾಕ್ಷರ ಪಡೆಯುವ ಗೌರವ. ಇದು ಓದು ಮತ್ತು ಲೇಖಕರಿಗೆ ಏಕಕಾಲದಲ್ಲಿ ನೀಡಿದ ವಿಶೇಷ ಗೌರವ ಎಂದೇ ಹೇಳಬಹುದು.

ಸಾಹಿತಿ ಓದುಗ ಭೇಟಿ

ಸಾಹಿತಿಗಳಿಗೆ ವಿಶೇಷ ಗೌರವ ನೀಡುವ 'ಓಲೇ' ಅಭಿಯಾನ ರೂಪಿಸುವ ಯೋಚನೆ ಎಲ್ಲಿಂದ ಮೂಡಿತು ಎಂದು ವೀರಕಪುಸ್ತಕ

ಶ್ರೀನಿವಾಸ್ ಅವರನ್ನು ಕೇಳಿದಾಗ, 'ಸಾಹಿತಿಗಳಿಂದಲೇ ಪುಸ್ತಕಗಳು, ಆದ್ದರಿಂದ ಅವರಿಗೆ ನನ್ನ ವಿಶೇಷ ಗೌರವವಿದೆ. ಲೇಖಕರು ತಮ್ಮ ಪುಸ್ತಕಗಳನ್ನು ನಮ್ಮ ಪ್ರಕಾಶನದಲ್ಲಿ ಪ್ರಕಟಿಸಿರಲಿ, ಅಥವಾ ಬೇರೆ ಪ್ರಕಾಶನದಲ್ಲೂ ಪ್ರಕಟಿಸಿರಲಿ, ಅವರಿಗೆ ಗೌರವ ನೀಡುವುದು ಸಹ ಈ ಪುಸ್ತಕ ಸಂತೆಯ ಉದ್ದೇಶ. ಪ್ರತಿ ದಿನ ನೂರು ಸಾಹಿತಿಗಳಂತೆ, ಮೂರು ದಿನಗಳಲ್ಲಿ ಸುಮಾರು 300 ಸಾಹಿತಿಗಳನ್ನು ಆಹ್ವಾನಿಸಿ, 'ಓಲೇ' ಅಭಿಯಾನದಲ್ಲಿ ಭಾಗವಹಿಸುವಂತೆ ಮಾಡುವುದು ಮೂಲ ಉದ್ದೇಶವಾಗಿತ್ತು; ಆದರೆ ಕಾರಣಾಂತರದಿಂದ, ಆ ಸಂಖ್ಯೆಯನ್ನು ತಲುಪಲು ಆಗಲಿಲ್ಲ; ಅದೇನಿದ್ದರೂ, ಸುಮಾರು 75 ಜನ ಸಾಹಿತಿಗಳು 'ಓಲೇ' ಅಭಿಯಾನಕ್ಕೆ ಸ್ಪಂದಿಸಿ, ಭಾಗವಹಿಸಿದರು. ಪ್ರತಿದಿನ ಸಂಜೆ 3ರಿಂದ 7 ಗಂಟೆಯ ತನಕ, ಸಾಹಿತಿಗಳು ತಮ್ಮ ಕ್ಯೂಬಿಕಲ್ಸ್‌ನಲ್ಲಿ ಇರಬೇಕು ಎಂದು ಮನವಿ ಮಾಡಲಾಗಿತ್ತು; ಜತೆಗೆ, ಅವರು ಬರೆದ ಪುಸ್ತಕಗಳ ಮಾಹಿತಿ ಪಡೆದು, ವಿವಿಧ ಪ್ರಕಾಶನಗಳಿಂದ ಆ ಪುಸ್ತಕಗಳನ್ನು ಮುಂಚಿತವಾಗಿ ನಾವೇ ತರಿಸಿ, ಆ ಕ್ಯುಬಿಕಲ್ಸ್‌ನಲ್ಲಿ ಪ್ರದರ್ಶಿಸಲಾಗಿತ್ತು. ಓದುಗರು ಅಲ್ಲಿಗೆ ಬಂದು, ಲೇಖಕರ ಜತೆ ಮಾತಾಡಿ, ತಮಗೆ ಬೇಕಾದ ಪುಸ್ತಕಗಳನ್ನು ಖರೀದಿಸುವ ಅವಕಾಶ. ಈ ಪರಿಕಲ್ಪನೆಯನ್ನು ಕರ್ನಾಟಕದಲ್ಲಿ ಮೊತ್ತಮೊದಲ ಬಾರಿಗೆ ಜಾರಿಗೆ ತಂದಿದ್ದು 'ವೀರಲೋಕ ಪುಸ್ತಕ ಸಂತೆ'ಯಲ್ಲಿ. ಆ ಕುರಿತು ನಮಗೆ ಹೆಮ್ಮೆ ಇದೆ' ಎಂದರು.

ಪುಸ್ತಕ ಬಿಡುಗಡೆ

ವೀರಲೋಕ ಪುಸ್ತಕ ಸಂತೆಯಲ್ಲಿ, ಒಟ್ಟು ಇಪ್ಪತ್ತು 20 ಪುಸ್ತಕಗಳು ಬಿಡುಗಡೆಯಾಗಿರುವುದು ಇನ್ನೊಂದು ವಿಶೇಷ. ಮೂರು ದಿನಗಳ ಅವಧಿಯಲ್ಲಿ ನಡೆದ ವೇದಿಕೆ ಕಾರ್ಯಕ್ರಮಗಳಲ್ಲಿ, ಪ್ರಮುಖ ಸಾಹಿತಿಗಳು ಮತ್ತು ಗಣ್ಯರು ಭಾಗಿಯಾಗಿ, ವಿವಿಧ ಲೇಖಕರ ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಗಣ್ಯರಲ್ಲಿ ಸಾಹಿತಿಗಳು, ಸಿನಿಮಾ ತಾರೆಯರು, ರಾಜಕೀಯ ನಾಯಕರು ಮತ್ತು ಪ್ರಮುಖ ವ್ಯಕ್ತಿಗಳು ಸೇರಿದ್ದರು. ಲೇಖಕರಿಗೆ ತಮ್ಮ ಪುಸ್ತಕ ಬಿಡುಗಡೆ ಮಾಡಲು ನೀಡಿದ ಈ ವಿಶೇಷ ಅವಕಾಶವನ್ನು ಹಲವು ಲೇಖಕರು ಸದುಪಯೋಗಪಡಿಸಿಕೊಂಡರು. ಬಿಡುಗಡೆಯಾದ ಪುಸ್ತಕಗಳನ್ನು ಒಟ್ಟಾಗಿ ಖರೀದಿಸಿದವರಿಗೆ ರಿಯಾಯತಿ ಮತ್ತು ಟಿಶರ್ಟ್ ಉಚಿತ ಎಂಬ ಆಹ್ವಾನವನ್ನೂ ನೀಡಲಾಗಿದೆ.

ಓಲೇ ಅಭಿಯಾನಕ್ಕೆ ಸಾಹಿತಿಗಳ ದೃಷ್ಟಿಯಲ್ಲಿ ಎಷ್ಟು ಯಶಸ್ವಿಯಾಯಿತು ಎಂದಾಗ, 'ಕೆಲವು ಖ್ಯಾತ ಲೇಖಕರ 300ಕ್ಕೂ ಅಧಿಕ ಪುಸ್ತಕಗಳು ಸ್ಥಳದಲ್ಲೇ ಮಾರಾಟಗೊಂಡದ್ದು ವಿಶೇಷ. ಹೊಸದಾಗಿ ಬರೆದವರ ಕನಿಷ್ಠ 20-30 ಪುಸ್ತಕಗಳು 'ಓಲೇ' ಅಭಿಯಾನದಲ್ಲಿ ಮಾರಾಟಗೊಂಡವು; ಅಪರಿಚಿತ ಓದುಗರು ತಮ್ಮನ್ನು ಭೇಟಿಯಾಗಿ, ಪರಿಚಯ ಮಾಡಿಕೊಂಡು, ಹಸ್ತಾಕ್ಷರ ಪಡೆದಾಗ ತುಂಬಾ ಖುಷಿಯಾಯಿತು ಎಂದು ಹಲವು ಸಾಹಿತಿಗಳು ಹೇಳಿದರು. ಅದು ನಮಗೆ ತೃಪ್ತಿ ಕೊಟ್ಟಿದೆ' ಎಂದರು ವೀರಕಪುತ್ರ ಶ್ರೀನಿವಾಸ.

ಕನ್ನಡ ಪುಸ್ತಕ ಪ್ರಕಾಶನ ಲೋಕದಲ್ಲಿ ಇನ್ನಷ್ಟು ಹೊಸ ಅಭಿಯಾನಗಳನ್ನು ಏರ್ಪಡಿಸುವಲ್ಲಿ ವೀರಲೋಕ ಪ್ರಕಾಶನ ಮತ್ತು ವೀರಕಪುತ್ರ ಶ್ರೀನಿವಾಸ್ ಅವರು ತೊಡಗಿಕೊಂಡಿದ್ದಾರೆ. ಹಲವು ಹೊಸ ಲೇಖಕರ ಪುಸ್ತಕಗಳ ಜತೆಯಲ್ಲೇ, ಖ್ಯಾತ ಲೇಖಕರ ಪುಸ್ತಕಗಳನ್ನು ಸಹ ಪ್ರಕಟಿಸಿದ್ದಾರೆ, ಮುಂದಿನ ದಿನಗಳಲ್ಲಿ ಪ್ರಕಟಿಸಲಿದ್ದಾರೆ. ಮುಂದಿನ ದಿನಗಳಲ್ಲಿ ಪ್ರಕಾಶನ ಕ್ಷೇತ್ರದಲ್ಲಿ ಇನ್ನೂ ಹೊಸ ಸಾಹಸಗಳನ್ನು ಕೈಗೊಳ್ಳಲು ಉತ್ಸುಕರಾಗಿದ್ದೇನೆ ಎಂದು ವೀರಕಪುತ್ರ ಶ್ರೀನಿವಾಸ್ ಹೇಳಿದರು.

ಪುಸ್ತಕ ಸಂತೆ ಯಶಸ್ಸು ಗೊಳ್ಳಲು ಹಲವರ ಕೊಡುಗೆ ಇದೆ; ಜಯನಗರದ ಶಾಸಕರು, ವಿವಿಧ ನಾಯಕರು, ವಿವಿಧ ಇಲಾಖೆಯ ಮುಖ್ಯಸ್ಥರು, ಸಂಘ ಸಂಸ್ಥೆಗಳು ಹೆಗಲುಕೊಟ್ಟಿವೆ. ವೀರಲೋಕ ತಂಡದ ಸದಸ್ಯರು ಸಹ ಹಗಲು ರಾತ್ರಿ ದುಡಿದು, ಪುಸ್ತಕ ಸಂತೆಗೆ ವಿಶೇಷ ಪ್ರಚಾರ ನೀಡಿ, ಯಶಗೊಳ್ಳಲು ಕಾರಣರಾದರು ಎಂದು ವೀರಕಪುಸ್ತಕ ಶ್ರೀನಿವಾಸ್ ಹೇಳಿದರು.

ಕಿಕ್ಕಿರಿದ ಜನಸಂದಣಿ ಹೊಂದಿದ್ದ 'ವೀರಲೋಕ ಪುಸ್ತಕ ಸಂತೆ' ಈಗ ಯಶಸ್ವಿಯಾಗಿ ಮುಗಿದಿದೆ. ಮುಂದಿನ ವರ್ಷ ಇದೇ ರೀತಿಯ ಅದ್ದೂರಿ ಪುಸ್ತಕ ಸಂತೆ ನಡೆಯಲಿದೆ. ಕನ್ನಡ ಓದುಗರು ಪುಸ್ತಕ ಖರೀದಿಯಲ್ಲಿ ತಾವು ಹಿಂದೆ ಬಿದ್ದಿಲ್ಲ ಎಂದು ಈ ಪುಸ್ತಕ ಸಂತೆಯಲ್ಲಿ ತೋರಿಸಿಕೊಟ್ಟಿದ್ದಾರೆ. 'ಓದುಗ ದೊರೆ'ಯು ಇನ್ನಷ್ಟು ಗೌರವ ಪಡೆಯಲಿ ಎಂಬ ಹಾರೈಕೆಯೊಂದಿಗೆ, ಮುಂದಿನ ವರ್ಷದ ಪುಸ್ತಕಸಂತೆಗೆ ಕಾಯೋಣ!

ನಿತ್ಯ ಜೀವನದಲ್ಲಿ ಭಗವದ್ಗೀತೆ



ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ಜ್ಞಾನ, ಕರ್ಮ, ಭಕ್ತಿ ಯೋಗ

ಅವರವರ ಮನೋಭಾವಕ್ಕನುಗುಣವಾಗಿ ಗೀತೆಯು ಬೇರೆ ಬೇರೆ ಜನರಿಗೆ ಬೇರೆಬೇರೆಯಾಗಿಯೇ ತೋರುತ್ತದೆ.

ಗೀತೆಯಲ್ಲಿ ಮೂರು ವಿವಿಧ ಮಾರ್ಗಗಳನ್ನು ಹೇಳಲಾಗಿದೆ. ಕರ್ಮಯೋಗ, ಸಾಂಖ್ಯಾಯೋಗ ಮತ್ತು ಭಕ್ತಿಯೋಗ; ಮನೋದೃಷ್ಟಿ ಹೊಂದಿದವರಿಗೆ ಕರ್ಮಯೋಗವು, ಬೌದ್ಧಿಕ ದೃಷ್ಟಿ ಹೊಂದಿದವರಿಗೆ ಸಾಂಖ್ಯಾಯೋಗವು, ಹೃದಯ ದೃಷ್ಟಿಹೊಂದಿದವರಿಗೆ ಭಕ್ತಿಯೋಗವು ಆದರ್ಶಪ್ರಾಯವಾಗಿದೆ.

ಇಂದಿನ ಜಗತ್ತಿನಲ್ಲಿ ಮನೋದೃಷ್ಟಿ ಹೊಂದಿದವರೇ ಬಹು ಸಂಖ್ಯೆಯಲ್ಲಿದ್ದಾರೆ. ನಾವು ಸರಪಳಿಗಳಿಂದ ಬಂಧಿತರಾಗಿದ್ದು ಅದನ್ನು ಮುರಿದು ನಾವು ಸ್ವತಂತ್ರರಾಗಲು ಬಹಳ ಶ್ರಮಪಡಬೇಕೆಂಬ ನಂಬಿಕೆಯ ಆಧಾರದ ಮೇಲೆ ಇದು ನಿಂತಿದೆ. ಆದ್ದರಿಂದ ಇದು ಕ್ರಿಯೆ ಪರವಾಗಿದೆ ಅಂಥವರೊಂದಿಗಿನ ಯಾವುದೇ ಸಂವಾದವೂ ನಾನೀಗ ಏನು ಮಾಡಬೇಕು ಎಂಬಲ್ಲಿ ಕೊನೆಗೊಳ್ಳುತ್ತದೆ. ಈ ಮಾರ್ಗವು ನಮ್ಮನ್ನು ನಿಷ್ಕಾಮ ಕರ್ಮ (ಅಪ್ರಚೋದಿತಕ್ರಿಯೆ)ಕ್ಕೆ ಒಯ್ಯುತ್ತದೆ.

ಸಾಂಖ್ಯಯೋಗವನ್ನು ಜ್ಞಾನಯೋಗವೆಂದೂ ಕರೆಯುತ್ತಾರೆ ಮತ್ತು ಇದು ಅರಿಯುವುದರ ಅಥವಾ ತಿಳಿಯುವುದರ ಬಗ್ಗೆ ಇದೆ. ಜ್ಞಾನದ ಬಗ್ಗೆ ಅಲ್ಲ. ನಾವು ಒಂದು ಕತ್ತಲೆಯ ಕೋಣೆಯಲ್ಲಿದ್ದೇವೆ. ಈ ಕತ್ತಲೆಯನ್ನು ಹೋಗಲಾಡಿಸಲು ನಾವು ದೀಪವನ್ನು ಹಚ್ಚಬೇಕಾಗಿದೆ ಯಾಕೆಂದರೆ ಮತ್ತಾವುದೇ ಕಾರ್ಯ ಅಥವಾ ಪ್ರಯತ್ನ ಈ ಕತ್ತಲೆಯನ್ನು ಹೋಗ ಲಾಡಿಸಲು ಸಾಧ್ಯವಿಲ್ಲ ಎಂಬ ನಂಬಿಕೆಯೇ ಇದರ ಪ್ರಾರಂಭವಾಗಿರುತ್ತದೆ. ಈ ಮಾರ್ಗವು ನಮ್ಮನ್ನು ಆಯ್ಕೆರಹಿತ ಜಾಗೃತಿಯತ್ತ ಒಯ್ಯುತ್ತದೆ. ಭಕ್ತಿಯೋಗವು ಶರಣಾಗತಿಯ ಬಗ್ಗೆ ಇದೆ. ಪರಮಾತ್ಮ ಒಂದು ಸಾಗರ ಹಾಗೂ ಸಾಗರದ ಅಲೆಯು ಆ ಸಾಗರಕ್ಕೆ ವಶವಾಗಿದೆ. ನಾವು ಆ ಅಲೆಯಂತೆ ಎಂದು ಇದರ ಅನುಯಾಯಿಗಳು ತಿಳಿಯುತ್ತಾರೆ.

ಪ್ರಾರಂಭದಲ್ಲಿ ಈ ಮೂರು ಮಾರ್ಗಗಳ ಪರಿಭಾಷೆ ಮತ್ತು ಅರಿವು ಸಂಪೂರ್ಣ ಭಿನ್ನವಾಗಿರುತ್ತದೆ. ಈ ಮಾರ್ಗದ ಅರಿವಿನ ಬಗ್ಗೆ ಮನೋದೃಷ್ಟಿ ಹೊಂದಿದ ವ್ಯಕ್ತಿಗೆ ವಿವರಿಸಿದರೆ ಇದರ ಬಗ್ಗಾಗಿ ಅವನು ಒಂದು ಕ್ರಿಯೆಯನ್ನು ಹುಡುಕುತ್ತಿರುತ್ತಾನೆ.

ಖಂಡಿತವಾಗಿಯೂ ಈ ಮೂರೂ ಮಾರ್ಗಗಳು ಅಭೇದ್ಯವಲ್ಲ. ಈ ಮೂರರ ಸಂಯೋಜನೆಯ ಅನುಭವವು ವ್ಯಕ್ತಿಗೆ ಉಂಟಾಗುತ್ತದೆ. ಉದಾಹರಣೆಗೆ ಕರ್ಮ ಮತ್ತು ಸಾಂಖ್ಯ ಮಾರ್ಗಗಳು ಒಂದನ್ನೊಂದು ಸಂಧಿಸಿದಾಗ ಎಲ್ಲ ಕ್ರಿಯೆಗಳ ಅಂತಿಮ ಗುರಿ ಒಂದು ಭ್ರಮೆ ಹಾಗೂ ಕರ್ಮ ಮಾಡಿವಾಗ ಅದಕ್ಕೆ ನಾಟಕದ ಪಾತ್ರದಂತೆ ಅಂಟಿಕೊಂಡಿರುವುದಿಲ್ಲ ಎಂಬ ತಿಳುವಳಿಕೆ ನಮ್ಮಲ್ಲಿ ಮೂಡುತ್ತದೆ.

ಇಡೀ ವಿಶ್ವವೇ ಇಲೆಕ್ಟ್ರಾನ್, ಪ್ರೋಟಾನ್ ಮತ್ತು ನ್ಯೂಟ್ರಾನ್ ಕಣಗಳ ಸಂಯೋಜನೆಯಾಗಿರುವಂತೆ, ಆಧ್ಯಾತ್ಮಿಕ ಜಗತ್ತೂ ಕೂಡ ಈ ಮೂರು ಮಾರ್ಗಗಳ ಸಂಯೋಜನೆಯಾಗಿದೆ. ಈ ಮೂರು ಮಾರ್ಗಗಳು ಅಹಂಕಾರದಿಂದ ಮುಕ್ತ ವಾಗಿರುವ ಅಂತರಾತ್ಮವನ್ನು ಅರಿಯುವ ಅಂತಿಮಗುರಿ ಹೊಂದಿದೆ ಎಂದು ಕೃಷ್ಣ ಹೇಳುತ್ತಾನೆ.

ಕರಜಗಿಯವರಿಗೆ ಕತಾರ್ ಕನ್ನಡ ಸಮ್ಮಾನ್

● ಹೆಚ್.ಕೆ.ಮಧು, ದೋಹಾ, ಕತಾರ್

ಕತಾರ್ ಕರ್ನಾಟಕ ಸಂಘದ ಬೆಳ್ಳಿಹಬ್ಬ ಹಾಗೂ ಈ ಬಾರಿಯ ರಾಜ್ಯೋತ್ಸವದ ಜಂಟಿ ಉತ್ಸವಕ್ಕೆ ಪ್ರತಿ ವರ್ಷ ನೀಡುವ ಕತಾರ್ ಕನ್ನಡ ಸಮ್ಮಾನ್ ಪ್ರಶಸ್ತಿಗೆ ಡಾ.ಗುರುರಾಜ ಕರಜಗಿಯವರ ಹೆಸರನ್ನು ಸೂಚಿಸಿದ್ದೆ. ಸಂಘದ ಅಧ್ಯಕ್ಷರಾ ಡಾ. ರವಿಶೆಟ್ಟಿಯವರು ಅದಕ್ಕೆ ಒಪ್ಪಿಗೆ ಸೂಚಿಸಿ ಸಂಘದಿಂದ ಅಧಿಕೃತ ಆಹ್ವಾನ ಹೋಗಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸುವ ವಿಚಾರ ಖಚಿತವಾಯಿತು.

ನವೆಂಬರ್ 14 ರಂದು ಇತರೆ ಅತಿಥಿಗಳೊಂದಿಗೆ ಕರಜಗಿಯವರು ತಮ್ಮ ಪತ್ನಿಯೊಂದಿಗೆ ದೋಹಾ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ, ನಾನು ಅವರ ಪಾದಗಳಿಗೆ ನಮಸ್ಕರಿಸಿದ್ದೆ. ಬಹು ವರ್ಷಗಳ ನನ್ನ ಕನಸು ಸಾಕಾರವಾಗಿತ್ತು. ಮಾರನೆಯ ದಿನದ ಅಧಿಕೃತ ಕಾರ್ಯಕ್ರಮದ ನಂತರ, ದೋಹಾದ ಸಮಾನ ಮನಸ್ಕರೊಂದಿಗೆ 30 ನಿಮಿಷಗಳ ಮಾತುಕತೆಗೆ ಮನವಿ ಮಾಡಿದೆ. ಡಾ. ಕರಜಗಿಯವರು ಒಪ್ಪಿಗೆ ಕೊಟ್ಟರು.

ಅದ್ದೂರಿ ಬೆಳ್ಳಿಹಬ್ಬ ಹಾಗೂ ರಾಜ್ಯೋತ್ಸವದ ಸಮಾರಂಭದಲ್ಲಿ ಗುರುರಾಜ ಕರಜಗಿಯವರಿಗೆ ಪ್ರತಿಷ್ಠಿತ 'ಕತಾರ್ ಕನ್ನಡ ಸಮ್ಮಾನ್' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಅವರ ಭಾಷಣದಲ್ಲಿ ನೆರೆದಿದ್ದ ಸಾವಿರಾರು ಕನ್ನಡಿಗರಿಗೆ ಕಿವಿಮಾತು ಹೇಳಿದರು. ಭಾಷೆಯನ್ನು ಸದಾ ಬಳಸಿದಾಗ ಮಾತ್ರ ಉಳಿಸಲು, ಬೆಳೆಸಲು ಸಾಧ್ಯ,ಹೊರದೇಶದಲ್ಲಿಯೇ ಕನ್ನಡದ ಕಂಪು ಜಾಸ್ತಿಯೆಂದರು.

ರಾಜ್ಯೋತ್ಸವ, ಬೆಳ್ಳಿಹಬ್ಬದ ಕಾರ್ಯಕ್ರಮಗಳು ಶುಕ್ರವಾರ ತಡರಾತ್ರಿಯವರೆಗೂ ಮುಂದುವರೆದಾಗ, ಶನಿವಾರ ಬೆಳಿಗ್ಗಿನ ಕಾರ್ಯಕ್ರಮಕ್ಕೆ ಸಮಯ ಹೊಂದಿಸುವುದು ಕಷ್ಟಸಾಧ್ಯವಾಗತೊಡಗಿತು. ಈ ಮಧ್ಯೆ ಬಂದ ಎಲ್ಲಾ ಅತಿಥಿ ಹಾಗೂ ಕಲಾವಿದರನ್ನು ಭಾರತೀಯ ದೂತಾವಾಸದಡಿಯ ಭಾರತೀಯ ಸಾಂಸ್ಕೃತಿಕ ಕೇಂದ್ರವರು ಶನಿವಾರ ಬೆಳಿಗ್ಗೆ ಸನ್ಮಾನಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಅದೃಷ್ಟ ನಮ್ಮ ಪಾಲಿಗಿತ್ತು. ಭಾರತೀಯ ಸಾಂಸ್ಕೃತಿಕ ಕೇಂದ್ರದ ಸನ್ಮಾನದ ಕಾರ್ಯಕ್ರಮದ ನಂತರ ಕಿರು ಅವಧಿಗೆ ಕರಜಗಿಯವರನ್ನು ನಮ್ಮ ಬಳಗದ ವಿಶೇಷ ಭೇಟಿಗೆ ಅವಕಾಶ ದೊರೆಯಿತು. ಕನ್ನಡ ನಾಡಿನ ಹಿರಿಮೆ, ಗರಿಮೆ, ಒಲುಮೆ, ಈಶಾವಾಸ್ಯದಲ್ಲಿನ 18 ಶ್ಲೋಕಗಳ ಒಳಾರ್ಥದ ಹೂರಣವನ್ನು ಕೆಲವೇ ನಿಮಿಷಗಳಲ್ಲಿ ನಮ್ಮ ಬಳಗಕ್ಕೆ ಉಣಬಡಿಸಿದರು. ಜೊತೆಗೆ, ಪೇಜಾವರಮಠದ ಶ್ರೀ ವಿಶ್ವೇಶ್ವರ ತೀರ್ಥರ, ಬನ್ನಂಜೆ ಗೋವಿಂದಾಚಾರ್ಯರೊಂದಿಗಿನ ಒಡನಾಟ, ಮಹಾವೀರ, ಉಪವಾಸದ ನಿಜ ಹಿನ್ನೆಲೆ, ಅರ್ಥ ಹೀಗೆ ಹತ್ತಾರು ವಿಷಯಗಳ ಮೇಲೆ ಉಪನ್ಯಾಸ ನೀಡಿದರು. ಸಮಯ ಓಡುತ್ತಿತ್ತು.

ಕರಜಗಿಯವರನ್ನು ಗ್ರಂಥಾಲಯಕ್ಕೆ ಕರೆದೊಯ್ಯಲು ವ್ಯವಸ್ಥೆಯಾಗಿದ್ದ ವಾಹನ ನಾವಿದ್ದ ಜಾಗಕ್ಕೆ ಬಂದು ತಲುಪಿತು. ಮನೆಯಲ್ಲಿ ಸೇರಿದ್ದ ಎಲ್ಲಾ ಮಿತ್ರರು ಗುರು ದಂಪತಿಗಳ ಪಾದಕ್ಕೆರಗಿ, ಆಶೀರ್ವಾದ ಪಡೆದು ಬೀಳ್ಕೊಟ್ಟೆವು.

ಅವರ ಮಾತು ಕೇಳಿ, ಅವರ ಸಾಂಗತ್ಯ ದೊರೆತ ನಂತರ, ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣಾ ಮುಕುತಿ.. ಎಂಬ ಪುರಂದರದಾಸರ ಪದ ಮೇಲಿಂದ ಮೇಲೆ ನೆನಪಾಗುತ್ತಿದೆ.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
19.11.2024 ಮಂಗಳವಾರ
vishwavani.news

ದಿನ ದರ್ಶಿಕೆ

ಕಾರ್ತಿಕ ಮಾಸ, ಕೃಷ್ಣ ಪಕ್ಷ, ತ್ರಿಥಿಯಾ ತಿಥಿ, ಮೃಗಶಿರ ನಕ್ಷತ್ರ, ಸಿದ್ಧ ಯೋಗ, ವಣಿಜ ಕರಣ, ಮಿಥುನ ಲಗ್ನ, ವೃಶ್ಚಿಕ ರಾಶಿ, ಹೇಮಂತ ಋತು, ದಕ್ಷಿಣಾಯನ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮಶಕ ಸಂವತ್ಸರ

ಮನೆಮದ್ದು

ಒಂದು ಲೋಟ ನೀರಿಗೆ ಸ್ವಲ್ಪ ಅರಿಶಿನ ಪುಡಿ ಸೇರಿಸಿ ಕುಡಿಯುವುದರಿಂದ ಯೂರಿಕ್ ಆಮ್ಲದ ನಿಯಂತ್ರಣಕ್ಕಾಗಿ ತುಂಬಾ ಒಳ್ಳೆಯದು. ಇದನ್ನು ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಕುಡಿಯುತ್ತಾ ಬಂದರೆ ಯೂರಿಕ್ ಆಸಿಡ್ ಹೆಚ್ಚಾಗುವುದು ತಪ್ಪುತ್ತದೆ. ಸಾಧ್ಯವಾದರೆ ಇದಕ್ಕೆ ಸ್ವಲ್ಪ ಜೇನುತುಪ್ಪ ಸೇರಿಸಿ ಕುಡಿಯುವ ಅಭ್ಯಾಸ ಮಾಡಿಕೊಳ್ಳಿ. ಮೊದಲೇ ಇರುವಂತಹ ಯೂರಿಕ್ ಆಮ್ಲ ಕೂಡ ಇದರಿಂದ ನಿಯಂತ್ರಣವಾಗುತ್ತದೆ.

ಸೌಂದರ್ಯ ಸೂತ್ರ

ಆಲೋವೆರಾದಲ್ಲಿ ಅಧಿಕ ಮಟ್ಟದ ಆಂಟಿ ಆಕ್ಸಿಡೆಂಟ್‌ಗಳಿವೆ ಹಾಗೂ ಪ್ರಬಲ ಅತಿಸೂಕ್ಷ್ಮಜೀವಿ ನಿವಾರಕ ಗುಣಗಳೂ ಇವೆ. ಈ ಗುಣಗಳು ಕಂಕುಳ ವಾಸನೆಯ ನಿವಾರಣೆಗೆ ಸೂಕ್ತವಾಗಿವೆ. ಆಲೋವೆರಾ ರಸದ ಜ್ಯೂಸ್ ಕುಡಿಯುವ ಮೂಲಕ ದೇಹದಲ್ಲಿರುವ ಕಲ್ಮಶಗಳು ನಿವಾರಣೆಯಾಗುವ ಜೊತೆಗೇ ಇದರ ತಿರುಳನ್ನು ಕಂಕುಳ ಭಾಗಕ್ಕೆ ಹಚ್ಚುವುದರಿಂದ ದುರ್ಗಂಧಕ್ಕೆ ಕಾರಣವಾಗುವ ಬ್ಯಾಕ್ಟೀರಿಯಾಗಳೂ ನಾಶವಾಗುತ್ತವೆ.

ದಿನ ಭವಿಷ್ಯ

ಮೇಷ ಯೋಗ ಧ್ಯಾನದೊಂದಿಗೆ ದಿನ ಪ್ರಾರಂಭಿಸಬಹುದು. ಇದು ಪ್ರಯೋಜನಕಾರಿ ಯಾಗುತ್ತದೆ ಮತ್ತು ದಿನವಿಡೀ ಶಕ್ತಿ ಉಳಿದಿರುತ್ತದೆ.

ವೃಷಭ ಚಿಂತನೆ ಮತ್ತು ಶಕ್ತಿಯನ್ನು ವಾಸ್ತವವಾಗಿ ಏನನ್ನು ನೋಡಬಯಸುತ್ತೀರೋ ಅದನ್ನು ಸಾಧಿಸುವಲ್ಲಿ ಕೆಲಸ ಮಾಡಿ.

ಮಿಥುನ ಸಂಘರ್ಷವು ಅನಾರೋಗ್ಯ ಇನ್ನಷ್ಟು ಹಾಳು ಮಾಡಬಹುದಾದ್ದರಿಂದ ಅದನ್ನು ತಪ್ಪಿಸಿ. ಪರಿಸ್ಥಿತಿ ಶೀಘ್ರ ಸುಧಾರಿಸುತ್ತದೆ.

ಕಟಕ ನಗು ಎಲ್ಲ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ಮನೆಯಲ್ಲಿ ಹಣ ಸಂಗ್ರಹಿಸುವ ಬಗ್ಗೆ ಉಪನ್ಯಾಸಗಳನ್ನು ನೀಡಬಹುದು.

ಸಿಂಹ ಸ್ವಲ್ಪ ವ್ಯಾಯಾಮದೊಂದಿಗೆ ನಿಮ್ಮ ದಿನವನ್ನು ಪ್ರಾರಂಭಿಸಿ - ಒಳ್ಳೆಯ ಅಭಿಪ್ರಾಯ ಇಟ್ಟುಕೊಳ್ಳುವುದು ಮುಖ್ಯ.

ಕನ್ಯಾ ದೀರ್ಘಕಾಲಿನ ಹೂಡಿಕೆಗಳನ್ನು ತಪ್ಪಿಸಿ ಮತ್ತು ಸ್ನೇಹಿತರ ಜೊತೆ ಕೆಲವು ಆಹ್ಲಾದಕರ ಕ್ಷಣಗಳನ್ನು ಕಳೆಯಲು ಪ್ರಯತ್ನಿಸಿ.

ತುಲಾ ಮನಸು ಇತ್ತೀಚಿನ ಘಟನೆಗಳಿಂದ ತೊಂದರೆಗೊಳಗಾಗುತ್ತದೆ. ಇಂದು ವಿಶೇಷ ಜನರನ್ನು ಭೇಟಿಯಾಗುವ ಸಾಧ್ಯತೆ ಇದೆ

ವೃಶ್ಚಿಕ ಒಂದು ಲಾಭಕರ ದಿನ ಮತ್ತು ಧೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು.

ಧನು ಯೋಗ ಮತ್ತು ಧ್ಯಾನ ಒಳ್ಳೆಯ ದೇಹರಚನೆ ಕಾಯ್ದುಕೊಳ್ಳಲು ಮತ್ತು ಮಾನಸಿಕವಾಗಿ ಸದೃಢವಾಗಿರಲು ಸಹಾಯ ಮಾಡುತ್ತದೆ.

ಮಕರ ಹಾಸ್ಯಪ್ರಜ್ಞೆಯಿರುವ ಸಂಬಂಧಿಕರ ಸಂಗ ಉದ್ವೇಗವನ್ನು ಕಡಿಮೆ ಮಾಡುತ್ತದೆ, ತುಂಬಾ ಅಗತ್ಯವಾಗಿರುವ ಪರಿಹಾರ ನೀಡುತ್ತದೆ.

ಕುಂಭ ದೇಹದ ಪುನಃಶ್ಚೇತನಕ್ಕಾಗಿ ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳದಿದ್ದರೆ ಆಯಾಸ, ನಿರಾಸೆಯಲ್ಲಿ ಸಿಲುಕುತ್ತೀರಿ.

ಮೀನ ಭರವಸೆಯ ಮಾಯಾಜಾಲದಲ್ಲಿದ್ದೀರಿ. ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1917: ಭಾರತದ ಉಕ್ಕಿನ ಮಹಿಳೆ, ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ಪ್ರಯಾಗ್‌ರಾಜ್‌ನಲ್ಲಿ ಜನಿಸಿದರು.
- 1794: ಅಮೆರಿಕನ್ ಕ್ರಾಂತಿಕಾರಿ ಯುದ್ಧದಿಂದ ಸಮಸ್ಯೆಗಳನ್ನು ಪರಿಹರಿಸಿ, ಸಂಯುಕ್ತ ರಾಷ್ಟ್ರ ಮತ್ತು ಬ್ರಿಟನ್‌ನ ನಡುವೆ ಜೇ ಒಪ್ಪಂದವಾಯಿತು.
- ವಿಶ್ವ ಗಂಡಸರ ದಿನ

ಚಿತ್ರಸ್ಫೂರ್ತಿ

ಬೈಕ್‌ನ್ನು ನೆಲದ ಮೇಲೆ ಓಡಿಸಬೇಕೆಂಬ ವಿಚಾರವನ್ನೇ ಮರೆತವರು.

ಚಿತ್ರ: ಸುಧಾಕರ್ ದೇವರಾಜ್

ಭಕ್ತಿಯಿಂದ ಮಾಡುವ ಪ್ರತಿ ಕೆಲಸವೂ ಪೂಜೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಮುಲ್ಲೈಕ್ಕೊಡು ಎಂದು ತಮಿಳುನಾಡಿನ ಒಂದು ಪುಟ್ಟ ಗ್ರಾಮ. ಅಲ್ಲಿ ಶ್ರೀಕೃಷ್ಣನ ಒಂದು ಸುಂದರವಾದ ದೇವಾಲಯ. ಅರ್ಚಕರೂ ಅವರಿಗೆ ಸಹಾಯಕನಾಗಿದ್ದ ತುಳಸಿ ಎಂಬ ಯುವಕನೂ ದಿನವೂ ಬೆಳಿಗ್ಗೆ ನಾಲ್ಕು ಗಂಟೆಗೇ ಎದ್ದು ಶುಚಿಯಾಗಿ ದೇವಸ್ಥಾನಕ್ಕೆ ಬರುತ್ತಿದ್ದರು. ದೇವಾಲಯದ ಪಕ್ಕದಲ್ಲೇ ಒಂದು ಹೂದೋಟ. ತೋಟದಿಂದ ಹೂಗಳನ್ನು ತಂದು ದೇವರೀಗೆ ಮಾಲೆಯಾಗಿ ಕಟ್ಟಿ ಕೊಡುವ ಕೆಲಸ ತುಳಸಿಯದು. ಅವನೋ ಪರಮ ಕೃಷ್ಣ ಭಕ್ತ. ಸದಾ ಕೃಷ್ಣಧ್ಯಾನ ನಿರತ.

ತೋಟದಲ್ಲಿ ಹೂಗಳನ್ನು ಕೀಳುವಾಗಲೂ ಅವನಿಗೆ ಕೃಷ್ಣನದೇ ನೆನಪು. ಕೃಷ್ಣಾರ್ಪಣಂ ಎಂದು ಮನದಲ್ಲಿ ಹೇಳಿಕೊಂಡೇ ಹೂಗಳನ್ನು ಕಿತ್ತು ಪೋಣಿಸಿ ಹಾರ ಮಾಡುವವನು ಈ ಭಕ್ತ.

ಇತ್ತ ಅರ್ಚಕರು ಅವನಿತ್ತ ಮಾಲೆಗಳನ್ನು ಶ್ರೀ ಕೃಷ್ಣನ ಮಂಗಳ ಮೂರ್ತಿಗೆ ಮುಡಿಸಿ ಅಲಂಕಾರ ಮಾಡಲು ಹೋದರೆ, ಅದಾಗಲೇ ದೇವರು ಒಂದು ಹೊಸ ಮಾಲೆಯನ್ನು ಧರಿಸಿ ಹುರುಪಿನೊಂದಿಗೆ ಇವರನ್ನು ಎದುರುಗೊಳ್ಳಲು ಸಿದ್ಧನಾಗಿರುತ್ತಿದ್ದ. ಹಳೆಯ ನಿರ್ಮಾಲ್ಯವನ್ನು ತೆಗೆದು ಹೊಸ ಮಾಲೆಯನ್ನು ದೇವರಿಗೆ ಹಾಕಿ ಅಲಂಕಾರ ಮಾಡಬೇಕೆಂದಿದ್ದ ಅರ್ಚಕರಿಗೆ ಒಂದು ಕಡೆ ನಿರಾಸೆ. ಇನ್ನೊಂದೆಡೆ ಅಚ್ಚರಿ. 'ಇದು ಹೇಗೆ ಸಾಧ್ಯ?' ಎಂದು ಯೋಚಿಸಿದ ಅವರು ಇದು ತುಳಸಿಯದೇ ಕುಚೇಷ್ಟೆ ಎಂದು ಸಂದೇಹಿಸಿ, ಅವನು ತಾನೇ ಕೈಯಿಂದ ದೇವರಿಗೆ ಹೂ ಮುಡಿಸಿದನಲ್ಲ ಎಂದು ಖೇದ ಪಟ್ಟರು.

'ನಾಳೆಯಿಂದ ನೀನು ಮಾಲೆ ಕಟ್ಟಬೇಡ. ಇನ್ನು ಮೇಲೆ ಹಂಡೆಗಳಿಗೆ ನೀರು ತುಂಬುವ ಕೆಲಸ ಮಾಡು ಸಾಕು' ಎಂದು ಕಟ್ಟಪ್ಪಣೆ ಮಾಡಿದರು ಅರ್ಚಕರು.

ಇದು ಭಗವಂತನ ಹೊಸ ಆಜ್ಞೆ ಎಂದು ಭಾವಿಸಿದ ತುಳಸಿ ಮರುದಿನದಿಂದ ನೀರು ತುಂಬಲಾರಂಭಿಸಿದ. ಮರುದಿನ ಅರ್ಚಕರು ಶ್ರೀಕೃಷ್ಣನಿಗೆ ಅಭಿಷೇಕ ಮಾಡಲು ಹೋಗುತ್ತಾರೆ. ಅರೇ! ಆಗ ತಾನೇ ಶುದ್ಧ ಜಲದಿಂದ ಮಿಂದಂತೆ ಕೃಷ್ಣ ಶುಭ್ರನಾಗಿ ಮಿಂಚುತ್ತಿದ್ದ. ಗರ್ಭಗುಡಿಯಲ್ಲೆಲ್ಲ ನೀರು. ಮೈಯಿಂದ ನೀರು ತೊಟ್ಟಿಕ್ಕುತ್ತಿದ್ದ ಕೃಷ್ಣ ಅರ್ಚಕರನ್ನು ಕಂಡು ಮುಸಿನಗುತ್ತಿದ್ದ. ಮತ್ತೆ ಅರ್ಚಕರಿಗೆ ಕಡುಕೋಪ!

ತುಳಸಿಯನ್ನು ಕರೆದು 'ಏನೋ, ದೇವರಿಗೆ ಅಭಿಷೇಕ ಮಾಡುವಷ್ಟು ಧೈರ್ಯ ಬಂತೇ ನಿನಗೆ! ನಿನ್ನಿಂದ ನನಗೆ ಉಪಕಾರಕ್ಕೆ ಬದಲಾಗಿ ತೊಂದರೆಯೇ ಹೆಚ್ಚಾಯ್ತು' ಎಂದೆಲ್ಲ ಬೈಯಲಾರಂಭಿಸಿದರು. ತುಳಸಿಗೋ ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯಲಾರಂಭಿಸಿತು. 'ಸ್ವಾಮಿ, ನಾನು ಹಂಡೆಗಳಲ್ಲಿ ನೀರು ತುಂಬಿದೆ ಅಷ್ಟೇ! ಅಯ್ಯೋ! ಕೃಷ್ಣನಿಗೆ ಅಭಿಷೇಕ ಮಾಡುವುದು ಹೇಗೆಂದೇ ನನಗೆ ತಿಳಿಯದು' ಎಂದ.

ಸರಿ. ಮಾರನೆಯ ದಿನವೇ ಅರ್ಚಕರು ಅವನನ್ನು ದೇವರಿಗೆ ನೈವೇದ್ಯ ತಯಾರಿಸುವ ಪಾಕಶಾಲೆಗೆ ವರ್ಗಾಯಿಸಿದರು. ಅಡುಗೆ ಭಟ್ಟರಿಗೆ ಅವನು ಸಹಾಯಕನಾದ. ಮರುದಿನ ಯಥಾಪ್ರಕಾರ ಬೀಗ ತೆರೆದವರು ಕೃಷ್ಣನನ್ನು ನೋಡುತ್ತಾ ಬೆಪ್ಪಾಗಿ ನಿಂತರು! ಕೃಷ್ಣನ ಬಾಯಲ್ಲಿ ಘಮಘಮಿಸುವ ಸಕ್ಕರೆ ಪೊಂಗಲ್ ಇಣುಕುತ್ತಿತ್ತು. ಅತ್ತ ಅಡುಗೆಮನೆಯಲ್ಲಿ ಸಕ್ಕರೆ ಪೊಂಗಲ್ ಆಗ ತಾನೇ ಸಿದ್ಧವಾಗುತ್ತಿತ್ತು. 'ಈ ತುಳಸಿಯೊಬ್ಬ! ಅವನಿಗೆ ಯಾವ ಕೆಲಸ ಕೊಟ್ಟರೂ ಅದು ಹೇಗೋ ನನಗಿಂತ ಮುಂಚೆಯೇ ಕೃಷ್ಣನಿಗೆ ಸೇರಿಬಿಡುವುದಲ್ಲ! ಅವನೇನು ಮಂತ್ರವಾದಿಯೋ' ಎಂದು ಗಾಬರಿಗೊಂಡರು. ಎಲ್ಲಿಂದಲೋ ಒಂದು ವಾಣಿ ಕೇಳಿಸಿತು.

'ಅರ್ಚಕರೇ ಹೆದರಬೇಡಿ, ನಾನಿದ್ದೇನೆ. ಆ ನನ್ನ ಭಕ್ತ ತುಳಸಿಗೆ ನೀವು ಏನು ಕೆಲಸ ಕೊಟ್ಟರೂ ಅವನು ಕೃಷ್ಣಾರ್ಪಣ ಎಂದು ನನಗೆ ಕಾಣಿಕೆ ಸಲ್ಲಿಸಿಬಿಡುತ್ತಾನೆ. ಹೀಗೆ ಅವನು ಅರ್ಪಿಸುವ ಎಲ್ಲವನ್ನೂ ನಾನು ಮನಸಾರೆ ಸ್ವೀಕರಿಸುತ್ತೇನೆ. ಮನಸ್ಸೆಲ್ಲೋ ಬೇರೆಡೆ ಇದ್ದು ಮಾಡುವ ಪೂಜೆಗಿಂತ ಎಲ್ಲವೂ ಕೃಷ್ಣನಿಗೇ ಅರ್ಪಣೆ ಎನ್ನುವವನ ಪ್ರೀತಿಯನ್ನೇ ನಾನು ಸ್ವೀಕರಿಸುತ್ತೇನೆ. ತುಳಸೀ ಒಬ್ಬ ಯೋಗಿ ಆವನ ಭಕ್ತಿ ನನಗೆ ಬಹಳ ಪ್ರಿಯ' ಕೃಷ್ಣಪರಮಾತ್ಮನ ಆ ವಾಣಿಯನ್ನು ಕೇಳಿ ಅರ್ಚಕರು ದೇವಾಲಯದ ಹೊರಗೋಡಿದರು. ತುಳಸಿಯ ಪಾದಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿದರು. ಭಗವಂತನ ನಾಮಸ್ಮರಣೆ ಪರಿಶುದ್ಧವಾದ ಭಕ್ತಿ ನಾವೆಲ್ಲಿದ್ದರೂ ನಮ್ಮ ಪೂಜೆಯನ್ನು ಅವನಿಗೆ ತಲುಪಿಸುತ್ತದೆ. ಮಾಡುವ ಪ್ರತಿ ಕೆಲಸದಲ್ಲೂ ಶ್ರದ್ಧೆ ಇದ್ದಾಗ ಆ ಕೆಲಸವೇ ಪೂಜೆಯಾಗುತ್ತದೆ.

ಪ ದ ಬಂ ಧ



ಎಡದಿಂದ ಬಲಕ್ಕೆ

2. ಹಣವನ್ನು ಕೂಡಿಡುವ ಡಬ್ಬ (3)
5. ಅರಸರಿಗೆ ಅರಸ, ಚಕ್ರವರ್ತಿ (4)
6. ಗಣೇಶನಿಗೆ ಪ್ರಿಯವಾದ ಸಿಹಿಕಡುಬು (3)
8. ಕೈಬೆರಳುಗಳನ್ನು ಮಡಿಚಿ ಶಬ್ದ ಮಾಡುವುದು (3)
10. ವನದಲ್ಲಿ ಬೀಸಿದೆ ಗಾಳಿ (3)
12. ಆರಂಭದಲ್ಲಿ ಹ್ರಸ್ವವಾಗಿ ಬಂದಿರುವ ತಾವರೆ (3)
14. ನೀರಿನಲ್ಲಿ ಹುಟ್ಟಿದುದು ಎಂದರ್ಥದಲ್ಲಿ ತಾವರೆ (3)
16. ಸ್ವರ್ಗದ ವಿರುದ್ಧ ಪದ ಅಸ್ತವ್ಯಸ್ತವಾಗಿ ಬಂದಿದೆ (3)
18. ದಟ್ಟವಾದ ಕತ್ತಲೆ (4)
20. ಮತ್ತೊಬ್ಬ ವ್ಯಾಪಾರಿ (3)

ಎಡದಿಂದ ಬಲಕ್ಕೆ

1. ಅಜಾಗರೂಕತೆಯಿಂದ ಉಂಟಾದ ದೋಷ (3)
2. ಆಟಕ್ಕೆ ಬಳಸುವ ಗಾಜಿನ ಗುಂಡು (2)
3. ತಾವರೆಯ ಮತ್ತೊಂದು ಹೆಸರು (3)
4. ಪರರಿಂದ ಉಂಟಾದ ಸೋಲು (4)
6. ವಂಚಕ ಇಲ್ಲಿ ಹೀಗೆ ಬಂದಿದ್ದಾನೆ (4)
7. ಹಕ್ಕಿಗಳ ಮಧುರವಾದ ಧ್ವನಿ (4)
9. ಮತ್ತೊಂದು ಕಾರ್ಯ (3)
10. ನಮ್ಮ ಸುತ್ತಲಿನ ಮಂದಿ (4)
11. ಕೈಮುಗಿದು ಮಾಡಿದ ವಂದನೆ (4)
13. ಪಶುಸಂಪತ್ತನ್ನು ಹೀಗೆನ್ನಬಹುದು (4)
15. ಶಬ್ದ ಅಥವಾ ಕೂಗು ಎಂದರ್ಥ (3)
17. ಕಿವಿಗೆ ಕೇಳಲು ಕಠೋರವಾದ ಶಬ್ದ (3)
19. ಎರಡಕ್ಷರದಲ್ಲಿ ಬಂದಿರುವ ಸ್ವರ್ಗ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಬುನಾದಿ 4. ಸಮಯ 6. ಲಗಾಮು 7. ಮಯೂರ 8. ತರುಣಿ 10. ಯವನ 12. ಹಲುಬು 15. ಅತಲ 17. ರದನಿ 18. ಮೇಲಾಟ 19. ಕವಲು 20. ತರಿಹ

ಮೇಲಿನಿಂದ ಕೆಳಕ್ಕೆ: 1. ಬುದ್ಧಿವಂತ 2. ದಿನಮಣಿ 3. ಬಾಲರವಿ 4. ಸಮುದಾಯ 5. ಯಕ್ಷಗಾನ 9. ರುಮಾಲು 11. ವರಾತ 12. ಹರಿಣಾಂಕ 13. ಬುಡಮೇಲು 14. ಕರಟಕ 15. ಅನಿಯತ 16. ಲತಾಗೃಹ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಬದುಕಿನ ಗಿಡ

ಒಂದು ಮರ ಎಷ್ಟು ವರ್ಷಗಳ ವರೆಗೂ ಬದುಕಬಹುದು? ಅದು ಗಿಡದ ಮಟ್ಟದಲ್ಲಿದ್ದಾಗಯಾವುದೋ ಮೇಕೆ ತಿನ್ನುವ ತನಕ. ಮರದ ಲೆಕ್ಕದಲ್ಲಿದ್ದಾಗ ಕಟ್ಟಿಗೆ ಗೋಸ್ಕರ ಕಡಿಯುವವರ ತನಕ. ಆದರೆ, ಆಫ್ರಿಕಾದಲ್ಲಿ ಬಾಒಬಾಬ್ ಎಂದ ವೃಕ್ಷ ಕುಟುಂಬವಿದೆ, ಅದು

50-ನೂರು ವರ್ಷಗಳ ಹಿಂದಿನದ್ದಲ್ಲ. ಬದಲಿಗೆ 2,500 ವರ್ಷಗಳಷ್ಟು ಹಿರಿಯ ಮರ. ಅದು ಹೇಳಬೇಕೆಂದರೆ, ವಿಶ್ವದ ಹಿರಿಯ ಮರ ಎಂಬ ಬಿರುದನ್ನೂ ಕೊಡಬಹುದು. ಈ ಮರ ವರ್ಷಗಳ ಕಾಲದ ಎಲ್ಲ ರೀತಿಯ ಕಾಲಮಾನ, ಋತುಗಳನ್ನೂ ನೋಡಿಕೊಂಡು, ಅದನ್ನು ಜಯಿಸಿ ಬದುಕಿದೆ. ಈ ಮರದ ರೆಂಬೆಗಳಲ್ಲಿ ಸಾವಿರಾರು ಲಿಟರ್‌ನಷ್ಟು ನೀರನ್ನು ಸಂಗ್ರಹಿಸಿಡಬಹುದಾಗಿದೆ. ಅದರಲ್ಲೂ ಕೆಲವು ಬಾಒಬಾಬ್ ಮರಗಳನ್ನು ಪೋಸ್ಟ್ ಆಫೀಸ್, ಮನೆಗಳು, ಇನ್ನೂ ಜೈಲುಗಳನ್ನಾಗಿಯೂ ಪರಿವರ್ತಿಸಿದ್ದಾರೆ. ಹಾಗೇ ಈ ಮರಗಳು ಹಣ್ಣನ್ನು ನೀಡುತ್ತದೆ, ಅದನ್ನು ಸೂಪರ್‌ಫುಡ್‌ಗಳ ಗುಂಪಿಗೆ ಸೇರಿಸಲಾಗುತ್ತದೆ. ಅದರಲ್ಲಿ ವಿಟಮಿನ್ ಸಿ ಜಾಸ್ತಿ ಇದ್ದು, ಹಾಲಿನಕ್ಕಿಂತ ಹೆಚ್ಚಿನ ಪ್ರಮಾಣದ ಕ್ಯಾಲ್ಸಿಯಮ್ ಅನ್ನೂ ಹೊಂದಿರುತ್ತದೆ. ಅದರ ಜತೆಗೆ ಸಿಕ್ಕಾಪಟ್ಟೆ ಆ್ಯಂಟಿಆಕ್ಸಿಡೆಂಟ್‌ಗಳನ್ನು ಹೊಂದಿರುತ್ತದೆ. ಎಲ್ಲದಕ್ಕಿಂತ ಹೆಚ್ಚಾಗಿ ಈ ವೃಕ್ಷಗಳು, ಪ್ರಾಣಿ-ಪಕ್ಷಿಗಳಿಗೆ ಮನೆಯಾಗುವುದಲ್ಲದೇ, ಮನುಷ್ಯರಿಗೂ ಸೂರನ್ನು ಕಲ್ಪಿಸಿಕೊಟ್ಟಿದೆ.

ಪುಸ್ತಕ ಲೋಕ

ಒಡಲುಗೊಂಡವರು

ಇದು ಹಳೆಮನೆ ರಾಜಶೇಖರ ಅವರ ಕಾದಂಬರಿ. ಕತೆಗಾರ - ವಿಮರ್ಶಕ ಹಳೆಮನೆ ರಾಜಶೇಖರ ಅವರು ತಮ್ಮ ಸೂಕ್ಷ್ಮ ಸಂವೇದನೆಯ ಕತೆಗಳ ಕಟ್ಟುವಿಕೆಯ ಮೂಲಕ ಪ್ರಿಯರಾಗಿದ್ದು, ಇದೀಗ ಅವರ ಬರವಣಿಗೆಯ ಕಸುಬುದಾರಿಕೆಯು ಕಾದಂಬರಿಯಲ್ಲಿಯೂ



ಮುಂದುವರೆದಿದೆ. ವಚನಕಾರ ದಾಸಿಮಯ್ಯನ ಸಾಲನ್ನು ಶೀರ್ಷಿಕೆಯಾಗಿಸಿಕೊಂಡಿರುವ 'ಒಡಲುಗೊಂಡವರು' ಕಾದಂಬರಿಯು ಕೇವಲ 'ಕತೆ'ಯಾಗಿಲ್ಲ. ಬದಲಿಗೆ ಜ್ವಲಂತ ಬದುಕಿನ ಜೀವಂತ ಚಿತ್ರಣವೇ ಆಗಿ ಅಕ್ಕರದ ರೂಪು ತಾಳಿದೆ. ಬದುಕಿನ ಬವಣೆಗಳ ದಾರುಣ ಚಿತ್ರ ಕಟ್ಟುವ ಕಾರಣಕ್ಕಾಗಿ ಓದಿಗೆ ಪ್ರಿಯವಾಗುವ ಈ ಕಾದಂಬರಿಯು ಮೊದಲ ಇನ್ನಿಂಗ್ಸ್‌ನಲ್ಲಿಯೇ ಸಿಕ್ಸರ್ ಹೊಡೆದ ಹಾಗಿದೆ. ಕತೆಗೆ ಒಬ್ಬ ನಾಯಕನಿದ್ದಾನೆ. ಅವನು ಕೇರಿಯ 'ಭೀಮು'. ಬಾಲ್ಯದಲ್ಲಿಯೇ ಸರ್ವಸ್ವವನ್ನು ಕಳೆದುಕೊಂಡ ಗೌಡರ ಮನೆಯ ಆಳು. ಭೀಮನ ಸುತ್ತ ಹೆಣೆಯಲಾದ ಈ ಕತೆಯು ಕೇವಲ ಅವನಿಗಷ್ಟೇ ಸೀಮಿತವಾಗಿಲ್ಲ. ಒಂದು ಹಳ್ಳಿಯ ಏಳು-ಬೀಳಿನ ಹೃದಯಂಗಮ ಚಿತ್ರಣ ನೀಡುತ್ತದೆ.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

- ಯಾತ್ರಾ ಸ್ಥಳಗಳಲ್ಲಿ ಸ್ವಚ್ಛತೆಯನ್ನು ಉತ್ತೇಜಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಯಾವ ಉಪಕ್ರಮವನ್ನು ಪ್ರಾರಂಭಿಸಿದರು?
- ಎ. ಸೆಕ್ರಡ್ ಸೈಟ್ ಹೈಜೀನ್ ಪ್ರೊಗ್ರಾಮ್.
- ಬಿ. ಸ್ವಚ್ಛ ಭಾರತ್ ಉಪಕ್ರಮ.
- ಸಿ. ಸ್ವಚ್ಛ ಮಂದಿರ ಅಭಿಯಾನ.
- ಡಿ. ಕ್ಲೀನ್ ಪಿಲಿಗ್ರಿಮೇಜ್ ಪ್ರಾಜೆಕ್ಟ್.

ಉತ್ತರ: ಸಿ. ಸ್ವಚ್ಛ ಮಂದಿರ ಅಭಿಯಾನ.

ಮಾಹಿತಿ

ಪ್ರಧಾನಿ ನರೇಂದ್ರ ಮೋದಿ ಅವರು ಜನವರಿ 22 ರಂದು ಅಯೋಧ್ಯೆಯಲ್ಲಿ ರಾಮಮಂದಿರ ಪ್ರತಿಷ್ಠಾಪನೆಗೆ ಮುಂಚಿತವಾಗಿ 'ಸ್ವಚ್ಛ ಮಂದಿರ' (ಸ್ವಚ್ಛ ಮಂದಿರ) ಅಭಿಯಾನವನ್ನು ಪ್ರಾರಂಭಿಸಿದ್ದಾರೆ. ಅವರು ಅಯೋಧ್ಯೆಯನ್ನು ಭಾರತದ ಅತ್ಯಂತ ಸ್ವಚ್ಛ ನಗರವನ್ನಾಗಿ ಮಾಡಲು ರಾಷ್ಟ್ರವ್ಯಾಪಿ ಈ ಉಪಕ್ರಮಕ್ಕೆ ಕರೆ ನೀಡಿದರು. ಈ ಅಭಿಯಾನವು ಜನವರಿ 14 ರಿಂದ 22 ರವರೆಗೆ ತೀರ್ಥಯಾತ್ರಾ ಸ್ಥಳಗಳನ್ನು ಸ್ವಚ್ಛಗೊಳಿಸಲು ನಾಗರಿಕರನ್ನು ಉತ್ತೇಜಿಸುತ್ತದೆ, ಇದು ಉಪಕ್ರಮದ ಅಂತರ್ಗತ ಸ್ವರೂಪವನ್ನು ಒತ್ತಿಹೇಳುತ್ತದೆ. ಸಂಸದರು, ಶಾಸಕರು ಮತ್ತು ಪಂಚಾಯತ್ ಪ್ರತಿನಿಧಿಗಳು ಸೇರಿದಂತೆ ಎಲ್ಲ ಚುನಾಯಿತ ಪ್ರತಿನಿಧಿಗಳು ಈ ಸ್ವಚ್ಛತಾ ಅಭಿಯಾನದ ಯಶಸ್ಸನ್ನು ಖಚಿತಪಡಿಸಿಕೊಳ್ಳಲು ತೊಡಗಿಸಿಕೊಂಡಿದ್ದಾರೆ.

ಕಾಣೆಯಾದ ಹಸ್ತಪ್ರತಿ ರಹಸ್ಯ

● ಕಾರ್ತಿಕ್ ಕೃಷ್ಣ

ಗ್ರಂಥಾಲಯಗಳೆಂದರೆ ತಟ್ಟನೆ ಅಲ್ಲಿನ ನಿಶಬ್ದತೆ, ಪ್ರಶಾಂತತೆ, ಹೊರಗಿನ ಪ್ರಪಂಚದ ಅರಿವೇ ಇಲ್ಲದೆ ಓದಿನಲ್ಲಿ ಮಗ್ನರಾಗಿರುವ ಓದುಗರು, ಲೆಕ್ಕವಿಲ್ಲದಷ್ಟು ಪುಸ್ತಕಗಳು ನೆನಪಾಗುತ್ತವೆ. ಬದುಕಿನ ಜಂಜಾಟಗಳಿಂದ ನಮ್ಮನ್ನು ಅರೆಕ್ಷಣ ದೂರಮಾಡಿ, ಓದಿನ ರಸಗವಳವನ್ನು ಉಣಬಡಿಸುವ ಗಂಥಾಲಯಗಳನ್ನು ಪುಸ್ತಕಪ್ರಿಯರ ಸ್ವರ್ಗವೆಂದು ಕರೆದರೂ ತಪ್ಪಾಗಲಾರದು. ಇಂತಿಪ್ಪ ಪ್ರಶಾಂತ ತಾಣಗಳಲ್ಲೂ ರೋಚಕ ಘಟನೆಗಳು ನಡೆಯಬಹುದೆಂದರೆ ನೀವು ನಂಬುತ್ತೀರಾ? ಅಪರೂಪದ ಪುಸ್ತಕ ಸಂಗ್ರಹಕ್ಕೆ ಹೆಸರುವಾಸಿಯಾದ 'ರಾವೆನ್‌ಸ್ಟೋನ್ ಸಾರ್ವಜನಿಕ ಗ್ರಂಥಾಲಯ'ದಲ್ಲಿ 2018ರಲ್ಲಿ ಜರುಗಿದ ಈ ಘಟನೆ ಪುಸ್ತಕಗಳ ಶಕ್ತಿಗೆ ಸಾಕ್ಷಿಯಾಗಿದ್ದಲ್ಲದೆ, ಅವು ಕೇವಲ ಶಿಕ್ಷಣ ಮತ್ತು ಮನರಂಜನೆಗಾಗಿ ಮಾತ್ರವಲ್ಲದೆ, ಓದುಗಲ್ಲಿ ಸಾಹಸ ಪ್ರವೃತ್ತಿಯ ಕಿಡಿಯನ್ನು ಹಚ್ಚಬಲ್ಲದು ಎಂಬುದನ್ನು ತಿಳಿಸಿಕೊಟ್ಟಿತ್ತು. ಯೂರೋಪಿನ ಒಂದು ಸಣ್ಣ ಪಟ್ಟಣದ ಗ್ರಂಥಾಲಯದಲ್ಲಿ ನಡೆದ ಆ ಘಟನೆಯ ಬಗ್ಗೆ ಹೇಳುತ್ತೇನೆ ಕೇಳಿ.

ವಿಸಿಗೋತ್‌ಗಳ ಕಳೆದುಹೋದ ಸಂಪತ್ತನ್ನು ವಿವರಿಸುವ ಮಧ್ಯಕಾಲೀನ ಪತ್ಯವಾದ 'ದಿ ಕ್ರಾನಿಕಲ್ ಆಫ್ ಅಲಾರಿಕ್' ಎಂಬ ಲಕ್ಷಾಂತರ ಪೌಂಡ್ ಮೌಲ್ಯದ ಹಸ್ತಪ್ರತಿಯೊಂದು, ದಾಸ್ತಾನು ಪರಿಶೀಲನೆಯ ಸಮಯದಲ್ಲಿ, ಈ ಗ್ರಂಥಾಲಯದಿಂದ ಯಾವುದೇ ಕುರುಹುಗಳಿಲ್ಲದೆ ಕಣ್ಮರೆಯಾಗಿತ್ತು! ಬೆರಳೆಣಿಕೆಯ ಸಿಬ್ಬಂದಿಗೆ ಮಾತ್ರ ಪ್ರವೇಶಿಸಬಹುದಾದ ಕೊಠಡಿಯಲ್ಲಿ, ಲಾಕ್ ಮಾಡಿದ ಗಾಜಿನ ಡಿಸ್ಪ್ಲೇ ಕೇಸ್‌ನಲ್ಲಿ ಹಸ್ತಪ್ರತಿಯನ್ನು ಭದ್ರವಾಗಿರಿಸಲಾಗಿದ್ದರೂ, ಕಣ್ಗಾವಲು ಕ್ಯಾಮೆರಾಗಳು ಮತ್ತು ಅಲಾರ್ಮ್ ಸೇರಿದಂತೆ ಹೆಚ್ಚಿನ ಭದ್ರತಾ ಕ್ರಮಗಳ ನಡುವೆಯೂ ಹಸ್ತಪ್ರತಿ ಕಣ್ಮರೆಯಾದದ್ದು ಗ್ರಂಥಪಾಲಕರು ಮತ್ತು ಅಧಿಕಾರಿಗಳನ್ನು ದಿಗ್ಭ್ರಮೆಗೊಳಿಸಿತು. ಕಳ್ಳತನದ ಸುದ್ದಿ ಕಾಳ್ಗಿಚ್ಚಿನಂತೆ ಹರಡಿ, ಪತ್ರಕರ್ತರು, ಇತಿಹಾಸಕಾರರ ಗಮನಸೆಳೆಯಿತು. ಒಳಗಿನವರೇ ಈ ಕಳ್ಳತನದಲ್ಲಿ ಭಾಗಿಯಾಗಿದ್ದಾರೆ ಎಂದು ಕೆಲವರು ಊಹಿಸಿದರೆ, ಇದೊಂದು ಅಂತಾರಾಷ್ಟ್ರೀಯ ಕಲಾ ಕಳ್ಳರು ಕೆಲಸ ಎಂದು ಇತರರು ನಂಬಿದ್ದರು.

ಕಳ್ಳತನದ ಮೂರು ವಾರಗಳ ನಂತರ, ಒಂದು ಅನಿರೀಕ್ಷಿತ ಕುರುಹು ಸಿಕ್ಕಿತ್ತು. 40 ವರ್ಷಗಳ ಅನುಭವವನ್ನು ಹೊಂದಿರುವ, ಎಲೀರ್‌ನ ಎಂಬ ಹಿರಿಯ ಗ್ರಂಥಪಾಲಕಿಗೆ, ಬೇರೊಂದು ವಿಭಾಗದ ಕಪಾಟಿನಲ್ಲಿದ್ದ, 'ದಿ ಕ್ಯಾಂಟರ್‌ಬರಿ ಟೇಲ್ಸ್'ನ ಪ್ರತಿಯೊಂದರ ಹಿಂಬದಿಯ ಮೇಲೊಂದು ಮಸುಕಾದ ಗುರುತೊಂದು ಕಣ್ಣಿಗೆ ಬಿದ್ದಿತ್ತು. ಕುತೂಹಲದಿಂದ ಪುಸ್ತಕವನ್ನು ತೆರೆದ ಅವಳಿಗೆ ಕಂಡದ್ದು, 'The

treasure lies where words dance in the moonlight' ಎಂದು ಬರೆದಿದ್ದ ಒಂದು ತೆಳುವಾದ ಕಾಗದ! ಎಲೀರ್‌ನ ತಕ್ಷಣವೇ ಈ ಸಂಗತಿಯನ್ನು ಪೊಲೀಸರಿಗೆ ವರದಿ ಮಾಡಿದಳು. ತನಿಖೆಯನ್ನು ಆರಂಭಿಸಿದ ಅಧಿಕಾರಿಗಳಲ್ಲೊಬ್ಬರಿಗೆ, ಮೂನ್ಲೈಟ್ ಅಲ್ಕೋವ್ ಎಂಬ ಅಡ್ಡಹೆಸರಿನ ಓದುವ ಪ್ರದೇಶವೊಂದು, ಲೈಬ್ರರಿಯ ಗಾರ್ಡನ್‌ನಲ್ಲಿರುವುದು ನೆನಪಾಗಿ, ಕೂಡಲೇ ಆ ಸ್ಥಳದಲ್ಲಿ ಹುಡುಕಲು ಆರಂಭಿಸಿದಾಗ, ಒಂದು ಕಲ್ಲು ಬೆಂಚಿನ ಕೆಳಗೆ ಬಟ್ಟೆಯಿಂದ ಸುತ್ತಲ್ಪಟ್ಟ 'ದಿ ಕ್ರಾನಿಕಲ್ ಆಫ್ ಅಲಾರಿಕ್' ಸಿಕ್ಕಿತ್ತು.

ಇತಿಹಾಸಕಾರ ಮತ್ತು ಗ್ರಂಥಾಲಯದಲ್ಲಿ ಮೊದಲು ಸ್ವಯಂಸೇವಕನಾಗಿ ಕಾರ್ಯ ನಿರ್ವಹಿಸಿದ್ದ ಮಾರ್ಕಸ್ ಹ್ಯಾಲೋವೇ ಎಂಬಾತ ಈ ಕೃತ್ಯದ ಹಿಂದಿದ್ದದ್ದು ವಿಚಾರಣೆಯ ನಂತರ ಬೆಳಕಿಗೆ ಬಂತು. ಮಧ್ಯಕಾಲೀನ ಪತ್ಯಗಳ ಕುರಿತು ಒಂದು ತೆರನಾದ ಗೀಳನ್ನು ಹೊಂದಿದ್ದ ಮಾರ್ಕಸ್, ಹಸ್ತಪ್ರತಿಯನ್ನು ರಕ್ಷಿಸಲು ಈ ಯೋಜನೆಯನ್ನು ರೂಪಿಸಿದ್ದನಂತೆ. ಅಲ್ಲದೆ, ಗ್ರಂಥಾಲಯವು ಅದರ ಐತಿಹಾಸಿಕ ಮಹತ್ವಕ್ಕೆ ಬೆಲೆಕೊಡದೇ ಇದ್ದುದರಿಂದ ಜನರ ಗಮನ ಸೆಳೆಯಲು ಈ ರೀತಿ ಮಾಡಿದೆ ಎಂದು ತಪ್ಪೊಪ್ಪಿಕೊಂಡಿದ್ದ. ಅವನು ಅಂದುಕೊಂಡಂತೆಯೇ, 'ದಿ ಕ್ರಾನಿಕಲ್ ಆಫ್ ಅಲಾರಿಕ್'ನ ಮೇಲೆ ಸಾರ್ವಜನಿಕರ ಕುತೂಹಲ ಹೆಚ್ಚಾಗಿ, ಹಸ್ತಪ್ರತಿಯನ್ನು ನೋಡಲು ಉತ್ಸುಕರಾದ ಜನರಿಂದ, ಗ್ರಂಥಾಲಯವು ದುಪ್ಪಟ್ಟು ಸಂದರ್ಶಕರನ್ನು ಕಂಡಿತು.

ಮರೆವಿನ ಮಹಿಮೆ

● ಆಶ್ರಿತ ಕಿರಣ್ (ಆಕೆ)

ದಿನದ ಕೆಲವು ಸಮಯ ಒಂಟಿಯಾಗಿ ಇರಬೇಕು ಎಂದು ಅನಿಸುವುದು ಸಹಜ.ಆದರೇ ಒಂಟಿಯಾಗಿ ಜೀವನ ಪರ್ಯಂತ ಬದುಕುವುದು ಕಷ್ಟ. ಒಂಟಿತನ ಕಾಡದಂತೆ ಬದುಕಲು ಬಂಧು ಬಳಗ ಕುಟುಂಬ ಸ್ನೇಹಿತರು ಎಲ್ಲರೊಂದಿಗೆ ಹೊಂದಿಕೊಂಡು ಜೀವನ ನಡೆಸಬೇಕು.ಜೀವನದಲ್ಲಿ ಈ ಹೊಂದಾಣಿಕೆ ಎಂಬುದು ಬಹಳ ಮುಖ್ಯ. ಬದುಕಿನಲ್ಲಿ ಕೆಲವೊಂದು ಅವಶ್ಯಕತೆ ಅಥವಾ ಅನಿವಾರ್ಯತೆ ಇದ್ದಾಗ ಮಾತ್ರ ಹೊಂದಿಕೊಂಡು ಬದುಕಲು ಸಾಧ್ಯ.

ಬದುಕಿನಲಿ ಅವಶ್ಯಕತೆ ಇದ್ದಾಗ ಕುಟುಂಬದಲ್ಲಿ ಅಥವಾ ಕೆಲಸ ಮಾಡುವ ಜಾಗದಲ್ಲಿ ಹೊಂದಿಕೊಳ್ಳುವ ಪ್ರಯತ್ನ ಮಾಡುತ್ತೇವೆ. ಪ್ರಯತ್ನವಷ್ಟೇ ಅಲ್ಲ ಅದೆಂತದೇ ಕಹಿ ಘಟನೆಗಳು ನಡೆದಿರಲಿ ಮರೆತು ಮುಂದೆ ಹೋಗುವ ಮನಸ್ಸು ಮಾಡುತ್ತೇವೆ. ಅನಿವಾರ್ಯತೆ ಎಂದು ಬಂದಾಗ ಬೇರೆ ದಾರಿಯೇ ಇಲ್ಲದೆ ಅದೆಷ್ಟೇ ಕಷ್ಟವಾದರೂ ನಡೆದ ಘಟನೆಗಳನ್ನು ಮರೆತು ಬದುಕಲು ಪ್ರಯತ್ನಿಸುತ್ತೇವೆ. ಅವಶ್ಯಕತೆ ಹಾಗೂ ಅನಿವಾರ್ಯತೆಗೆ ತಕ್ಕಂತೆ ಮನುಷ್ಯನು ನಡೆದ ವಿಷಯಗಳನ್ನು ಮರೆಯುತ್ತಾನೆ. ಮರೆತು ಮುನ್ನಡೆದಾಗ ಮಾತ್ರ ಬದುಕಿನ ಸಾರ್ಥಕತೆಯನ್ನು ಪಡೆಯಬಹುದು.

ಕುಟುಂಬದಲ್ಲಿ ಮಗ ಅಥವಾ ಸೊಸೆಗೆ ಮನೆಯಲ್ಲಿ ಅಪ್ಪ ಅಮ್ಮ ಅಥವಾ ಅತ್ತೆ ಮಾವನ ಅವಶ್ಯಕತೆ ಇದೆ ಎಂದಾದರೆ ಹೊಂದಿಕೊಂಡು ಬಾಳುತ್ತಾರೆ. ಅನಿವಾರ್ಯತೆ ಇದ್ದರಂತೂ ಅದೆಷ್ಟೇ ಮಾತಿನ ಚಕಮಕಿ ನಡೆದರು ಮರೆತು ಬದುಕುವ ಪ್ರಯತ್ನ ಮಾಡುತ್ತಾರೆ .ಇದಾವುದೂ ಇಲ್ಲದೆ ಇದ್ದಲ್ಲಿ ಚಿಕ್ಕದೊಂದು ಕಹಿ ಘಟನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಮರೆಯಲಾಗದೆ ಅಥವಾ ಮರೆಯುವ ಪ್ರಯತ್ನವನ್ನು ಮಾಡದೆ ಪದೇಪದೇ ನೆನಪಿಸಿಕೊಂಡು ಕುಟುಂಬದಿಂದ ದೂರ ಉಳಿಯುತ್ತಾರೆ. ಬರೀ ಕುಟುಂಬವೆಂದಲ್ಲ ಕೆಲಸ ಮಾಡುವ ವಾತಾವರಣವಾದರೂ ಸರಿಯೇ. ಅವಮಾನವಿಲ್ಲದೆ ಸನ್ಮಾನ ಸಿಗದು. ಆ ಸನ್ಮಾನ ಸಿಗಬೇಕೆಂದರೆ ಆಗಿರುವ ಅವಮಾನವನ್ನು ಮರೆತು ಮುನ್ನುಗ್ಗಬೇಕಾಗುತ್ತದೆ. ಒಂದು ಅರ್ಥದಲ್ಲಿ ಮರೆವು ಮನುಷ್ಯನಿಗೆ ಅತ್ಯವಶ್ಯಕ. ಒಂದು ರೀತಿಯಲ್ಲಿ ವರವಿದ್ದಂತೆ.

ಕೆಲವರಲ್ಲಿ ಜಾಣ ಮರೆವಿರುತ್ತದೆ. ಸಮಯಕ್ಕೆ ಅನುಗುಣವಾಗಿ ಅದು ಮರುಕಳಿಸಿ ಮರೆತು ಹೋಗುತ್ತದೆ. ಇದು ಕೂಡ ಅವಶ್ಯಕತೆ ಅನಿವಾರ್ಯತೆಯ ಮೇಲೆ ನಿಂತಿರುವ ಮರೆವಾಗಿರುತ್ತದೆ. ಮನಸ್ಸಿನಾಳದಲ್ಲಿ ಅಚ್ಚಳಿಯದೇ ಉಳಿದಿರುವ ನೋವುಗಳು ಮರೆತು ಹೋಗುವುದಿಲ್ಲ. ಜೊತೆಗೆ ಇನ್ನೊಬ್ಬರಿಂದ ಹೇಳಿಸಿಕೊಂಡ ಮಾತು ಮರೆತು ಹೋಗುವುದಿಲ್ಲ. ಮರೆತು ಮುನ್ನುಗ್ಗಬೇಕು ಎಂದು ಹೇಳಿದಷ್ಟು ಸುಲಭವಲ್ಲ. ಒಂದು ಅರ್ಥದಲ್ಲಿ ನಿಜವಾಗಿಯೂ ಮರೆತು ಹೋಗದಿದ್ದರೂ ಮರೆತು ಹೋದಂತೆ ಬದುಕುವುದರಿಂದ ಕೊಂಚ ಮಟ್ಟಿನ ನೆಮ್ಮದಿಯನ್ನು ಕಾಯ್ದಿರಿಸಿಕೊಳ್ಳಬಹುದು. ಹಾಗಾಗಿ ಮರೆವು ಮನುಷ್ಯನ ಮನಸ್ಸಿನ ನೆಮ್ಮದಿಗೆ ಅವಶ್ಯಕವು ಹೌದು ಅನಿವಾರ್ಯವು ಹೌದು. ಕೆಲವೊಮ್ಮೆ ಈ ಅವಶ್ಯಕತೆ ಅನಿವಾರ್ಯತೆಯ ನಡುವಲ್ಲಿ ಮರೆವು ವರ ಹಾಗು ಶಾಪವಾಗಿ ಪರಿಣಮಿಸಿರುತ್ತದೆ.

ಸಂಸಾರದಲ್ಲಿ ಕೆಲವೊಮ್ಮೆ ಗಂಡ ಹೆಂಡತಿಯ ನಡುವೆ ನಡೆಯುವ ಮಾತಿನ ಚಕಮಕಿ ಗಳನ್ನು ಸದಾ ನೆನಪಿನಲ್ಲಿಟ್ಟುಕೊಂಡರೂ ಸಂಸಾರದ ನೆಮ್ಮದಿ ಹಾಳು. ಹಾಗೆಂದು ಸಂಪೂರ್ಣ ಮರೆತರೆ ಎಷ್ಟು ಬಾರಿ ಇದೆ ವಿಷಯ ಹೇಳಬೇಕು? ಎಷ್ಟು ಬಾರಿ ಹೇಳಿದರು ಮರೆಯುತ್ತಿರಿ/ತೀಯ ಎಂಬ ಮಾತು ಕೇಳಿ ಬರುತ್ತದೆ. ಪದೇ ಪದೇ ಕೇಳಿದರೂ ನೆನಾಪಗದೆ ತೊಳಲಾಡುವಂತಾಗುತ್ತದೆ.ಆಗ ಮರೆವು ಶಾಪದಂತೆ ಅನಿಸುತ್ತದೆ. ಮನುಷ್ಯನನ್ನು ಸೃಷ್ಟಿಸಿದ ಆ ದೇವರು ಎಷ್ಟು ಯೋಚನೆ ಮಾಡಿ ಸೃಷ್ಟಿಸಿದ್ದಾನೆ...ರೋಗದ ಜೊತೆಗೆ ಔಷಧಿಯನ್ನು ಮನಸ್ಸಿನಲ್ಲಿಯೇ ಇಟ್ಟಿದ್ದಾನೆ. ಆದರೆ ಬುದ್ಧಿವಂತ ಪ್ರಾಣಿ ಮನುಷ್ಯ ತನ್ನಲ್ಲಿರುವ ಮರೆವಿನ ಔಷಧಿಯನ್ನು ಮನಸ್ಸಿನ ನೆಮ್ಮದಿಗೆ ಬಳಸದೆ ತೊಂದರೆಗೆ ಸಿಲುಕಿ ಒದ್ದಾಡಿ ಪರದಾಡುವ ಪರಿಗೆ ಆ ದೇವ ಎಷ್ಟು ನಗುತ್ತಿರಬಹುದು!

ಸಮಾಚಾರ ಸಣ್ಣದಲ್ಲ

ಮುಂಬೈ ತಂಡಕ್ಕೆ ಅಯ್ಯರ್ ನಾಯಕ

ಮುಂಬೈ: ಭಾರತ ಕ್ರಿಕೆಟ್ ತಂಡದಲ್ಲಿ ಮರಳಿ ಸ್ಥಾನ ಪಡೆಯುವತ್ತ ಗುರಿಯಿಟ್ಟಿರುವ ಶ್ರೇಯಸ್ ಅಯ್ಯರ್ ಅವರನ್ನು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಮುಂಬೈ ತಂಡಕ್ಕೆ ನಾಯಕರನ್ನಾಗಿ ನೇಮಕ ಮಾಡಲಾಗಿದೆ. ಇದೇ 23 ರಿಂದ ಡಿಸೆಂಬರ್ 15ರವರೆಗೆ ಟೂರ್ನಿಯು ನಡೆಯಲಿದೆ. ರಣಜಿ ಟ್ರೋಫಿ ಟೂರ್ನಿಯಲ್ಲಿ ತಂಡವನ್ನು ಮುನ್ನಡೆಸಿದ್ದ ಅಜಿಂಕ್ಯ ರಹಾನೆ ಕೂಡ ಟಿ20 ತಂಡದಲ್ಲಿದ್ದಾರೆ. ರಣಜಿ ಟೂರ್ನಿಯಲ್ಲಿ ಅಯ್ಯರ್ ಉತ್ತಮ ಲಯದಲ್ಲಿದ್ದರು. 452 ರನ್ ಗಳಿಸಿದ್ದಾರೆ. ಅದರಲ್ಲಿ 2 ಶತಕಗಳಿವೆ. ಒಡಿಶಾ ಎದುರು ಅವರು 228 ಎಸೆತಗಳಲ್ಲಿ 233 ರನ್ ಹೊಡೆದಿದ್ದರು. ಆರಂಭಿಕ ಬ್ಯಾಟರ್ ಪೃಥ್ವಿ ಶಾ ಕೂಡ ತಂಡದಲ್ಲಿದ್ದಾರೆ.
ತಂಡ: ಶ್ರೇಯಸ್ ಅಯ್ಯರ್ (ನಾಯಕ), ಪೃಥ್ವಿ ಶಾ, ಅಂಗಕ್ರಿಷ್ ರಘುವಂಶಿ, ಜೈ ಬಿಸ್ತ್, ಅಜಿಂಕ್ಯ ರಹಾನೆ, ಸಿದ್ಧೇಶ್ ಲಾಡ್, ಸೂರ್ಯಾಂಶ್ ಶೆಡ್ಗೆ, ಸಾಯಿರಾಜ್ ಪಾಟೀಲ, ಹಾರ್ದಿಕ್ ತಮೋರೆ (ವಿಕೆಟ್‌ಕೀಪರ್), ಆಕಾಶ್ ಆನಂದ್ (ವಿಕೆಟ್‌ಕೀಪರ್), ಶಮ್ಸ್ ಮುಲಾನಿ, ಹಿಮಾಂಶು ಸಿಂಗ್, ತನುಷ್ ಕೋಟ್ಯಾನ್, ಶಾರ್ದೂಲ್ ಠಾಕೂರ್, ಮೋಹಿತ್ ಅವಸ್ತಿ, ರಾಯ್ಸ್ಟನ್ ದಿಯಾಸ್, ಜುನೇದ್ ಖಾನ್.

ರೌಂಡ್ ರಾಬಿನ್ ಲೀಗ್: ಭಾರತ ಸೆಮಿಫೈನಲ್‌ಗೆ

ರಾಜಗೀರ್ (ಬಿಹಾರ): ಹಾಲಿ ಚಾಂಪಿಯನ್ ಭಾರತ ಹಾಕಿ ತಂಡ ಅಜೇಯ ದಾಖಲೆಯೊಂದಿಗೆ ಮಹಿಳಾ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದೆ. ಭಾನುವಾರ ನಡೆದ ರೌಂಡ್ ರಾಬಿನ್ ಲೀಗ್ ಪಂದ್ಯದಲ್ಲಿ ಜಪಾನ್ ವಿರುದ್ಧ 3-0 ಗೋಲುಗಳಿಂದ ಭರ್ಜರಿ ಗೆಲುವು ಸಾಧಿಸಿತು. ಅಮೋಘ ಲಯ ಮುಂದುವರೆಸಿದ ತಾರಾ ಸ್ಟ್ರೈಕರ್ ದೀಪಿಕಾ ಕೊನೆಯ ಕ್ವಾರ್ಟರ್‌ನಲ್ಲಿ ಎರಡು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳಲ್ಲಿ (47, 48ನೇ ನಿಮಿಷ) ಪರಿವರ್ತಿಸಿದರು. ಉಪನಾಯಕಿ ನವನೀತ್ ಕೌರ್ (37ನೇ ನಿಮಿಷ) ಒಂದು ಗೋಲು ಹೊಡೆದರು. ಈ ಗೆಲುವಿನೊಂದಿಗೆ ಭಾರತ ತಂಡ ಐದು ಪಂದ್ಯಗಳಿಂದ 15 ಅಂಕ ಕಲೆ ಹಾಕಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ಮಂಗಳವಾರ ನಡೆಯುವ ಸೆಮಿಫೈನಲ್‌ನಲ್ಲಿ ಭಾರತ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಜಪಾನ್ ತಂಡವನ್ನು ಎದುರಿಸಲಿದೆ. 47ನೇ ನಿಮಿಷದಲ್ಲಿ ಭಾರತ ಪ್ರಾಬಲ್ಯ ಮೆರೆದು ಸತತ ಮೂರು ಪೆನಾಲ್ಟಿ ಕಾರ್ನರ್ ಅವಕಾಶ ಪಡೆಯಿತು. ಕೊನೆಗೂ ಸ್ಟ್ರೈಕರ್ ದೀಪಿಕಾ ಡ್ರ್ಯಾಗ್ ಫ್ಲಿಕ್ ಹೊಡೆತದ ನೆರವಿನಿಂದ ಗೋಲು ದಾಖಲಿಸಿದರು.

ಕಲಬುರಗಿ ಐಟಿಎಫ್ ಓಪನ್ ಟೂರ್ನಮೆಂಟ್ | ಡ್ರಾ ಮೂಲಕ ಆಟಗಾರರ ಆಯ್ಕೆ

ಐಟಿಎಫ್ ಮುಖ್ಯ ಸುತ್ತಿಗೆ ಏಳು ಭಾರತೀಯರ ಎಂಟ್ರಿ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಇಲ್ಲಿನ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ಸೋಮವಾರ ಮಧ್ಯಾಹ್ನ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಹಾಗೂ ಕೆ.ಎಸ್.ಎಲ್.ಟಿ.ಎಸ್ ಪದಾಧಿಕಾರಿಗಳ ಸಮ್ಮುಖದಲ್ಲಿ ಟೂರ್ನಿಯ ಮುಖ್ಯ ಸುತ್ತಿನ ಪಂದ್ಯಗಳ ಡ್ರಾ ನಡೆಯಿತು.

ಜಿಲ್ಲಾ ಕ್ರೀಡಾಂಗಣದ ಲಾನ್ ಟೆನಿಸ್ ಅಂಕಣದಲ್ಲಿ ನಡೆಯುತ್ತಿರುವ ಪುರುಷರ ಕಲಬುರಗಿ ಐಟಿಎಫ್ ಓಪನ್‌ಗೆ ಸಿಂಗಲ್ಸ್ 32 ಆಟಗಾರರು ಹಾಗೂ ಡಬಲ್ಸ್ 16 ಆಟಗಾರರನ್ನು ಡ್ರಾ ಮೂಲಕ ಆಯ್ಕೆ ಮಾಡಲಾಯಿತು. 32ರ ಮುಖ್ಯ ಸುತ್ತಿನಲ್ಲಿ ಕರ್ನಾಟಕದ ನಾಲ್ವರು ಆಟಗಾರರು ಕಾಣಿಸಿಕೊಳ್ಳುತ್ತಿರುವುದು ಈ ಬಾರಿಯ ಟೂರ್ನಿಯ ವಿಶೇಷವಾಗಿದೆ.

ಕರ್ನಾಟಕ ಆಟಗಾರರಾದ ಆದಿಲ್ ಕಲ್ಯಾಣಪುರ, ಪ್ರಜ್ವಲ್ ದೇವ್ ಸಿಡ್ ಮೂಲಕ ಎಂಟ್ರಿ ಕೊಟ್ಟರೆ, ಇನ್ನಿಬ್ಬರು ಆಟಗಾರರಾದ ರಿಷಿ ರೆಡ್ಡಿ ಹಾಗೂ ಮನೀಶ್ ಜಿ., ವೈಲ್ಡ್ ಕಾರ್ಡ್ ಮೂಲಕ ಮುಖ್ಯ ಸುತ್ತಿನಲ್ಲಿ ಆಡಲಿದ್ದಾರೆ. ಕಳೆದ ವಾರ ಮುಂಬೈನಲ್ಲಿ ನಡೆದ ಐಟಿ ಸೆಮಿಫೈನಲ್ ಗೇರಿದ ಕರಣ್ ಸಿಂಗ್ ಹಾಗೂ ಮುಂಬೈನಲ್ಲಿ ನಡೆದ ಡಬಲ್ಸ್ ಪ್ರಶಸ್ತಿ ವಿಜೇತ ಆರ್ಯನ್ ಶಾ, ದೇವ್ ಜಾವಿಯಾ ಸೇರಿ ಹಲವು ಭಾರತೀಯರು ಮುಖ್ಯ ಸುತ್ತಿನಲ್ಲಿ ಆಡಲಿದ್ದಾರೆ.

ಇನ್ನೂ, ಟೂರ್ನಿಯ ಅಗ್ರ ಶ್ರೇಯಾಂಕಿತ ಉಜಬೇಕಿಸ್ತಾನ್‌ನ ಖುಮೋಯುನ್ ಸುಲ್ತಾನೋವ್, ಎರಡನೇ ಮತ್ತು ಮೂರನೇ ಶ್ರೇಯಾಂಕದ ರಷ್ಯಾದ ಬೊಬ್ರೊವ್ ಮತ್ತು ಎಗೊರ್ ಅಗೊನೊವ್, ಯುಎಸ್ಎ ಮೂಲದ ಆದಿತ್ಯ ಗಣೇಶ, ನಿಕ್ ಚಾಪೆಲ್, ಕೊರಿಯಾದ ಯುನಸೆಯೂಕ್ ಜಾಂಗ್, ಇಂಡೊನೇಷ್ಯಾದ ಎಂ.ರಫ್ಕಿ, ಆಂಥೋನಿ ಸುಸಾಂಟೊ, ಜಪಾನ್‌ನ ಕಾಜುಕಿ ನಿಶ್ವಾಕಿ ಮುಖ್ಯ ಸುತ್ತಿನ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಅರ್ಹತಾ ಸುತ್ತಿನ ಫಲಿತಾಂಶಗಳು

- ಸಿದ್ಧಾಂತ್ ಬಂಥಿಯಾ ಅವರು ಅಜಯ್ ಮಲಿಕ್ ವಿರುದ್ಧ 6-2, 6-0 ಅಂತರದಲ್ಲಿ ಗೆಲುವು ಸಾಧಿಸಿದರು;
- ಪ್ರಣವ್ ಕರ್ತಿಕ್ ಅವರು ಚಿನ್ಮಯ ದೇವ್ ಚೌಹಾಣ್ ವಿರುದ್ಧ 6-2, 6-1 ಅಂತರದಲ್ಲಿ ಜಯ ದಾಖಲಿಸಿದರು.
- ಇಂಡೋನೇಷ್ಯಾದ ಆಂಥೋನಿ ಸುಸಾಂಟೊ ಅವರು ವಿಯೆಟ್ನಾಂನ ಹಾಮಿನ್ಹ್ ಡಕ್ ವು ವಿರುದ್ಧ 7-5, 6-1 ಅಂತರದಲ್ಲಿ ಗೆಲುವು ಕಂಡರು.
- ಶಿವಾಂಕ್ ಭಟ್ನಾಗರ್ 6-3, 6-1 ಅಂತರದಲ್ಲಿ ಕಬೀರ್ ಹನ್ಸ್ ಅವರಿಗೆ ಶರಣಾದರು.
- ನಿತಿನ್ ಕುಮಾರ್ ಸಿನ್ಹಾ ಅವರು ಯಶ್ ಚೌರಾಸಿಯಾ ವಿರುದ್ಧ 6-3, 6-3 ಅಂತರದಲ್ಲಿ ಜಯ ಪಡೆದರು.
- ಧೀರಜ್ ಕೊಡಂಚ ಶ್ರೀನಿವಾಸನ್ ಅವರು ಉದಿತ್ ಕಾಂಬೋಜ್ ವಿರುದ್ಧ 6-1, 6-3 ಅಂತರದ ಗೆಲುವು ಸಾಧಿಸಿದರು.
- ಪ್ರಿಯಾಂಶು ಚೌಧರಿ ಅವರು ಮುನಿ ಅನಂತ್ ಮಣಿ ಅವರನ್ನು 6-2, 6-2 ಅಂತರದಲ್ಲಿ ಮಣಿಸಿದರು.
- ಮಾನ್ ಕೇಶ್ವಾನಿ ಅವರು ರೋಹನ್ ಮೆಹ್ರಾ ಅವರನ್ನು 7-6, 6-4 ಅಂತರದಲ್ಲಿ ಸೋಲಿಸಿದರು.

> ಕಳೆದ ಎರಡು ವಾರಗಳಲ್ಲಿ ಇದು ಉತ್ತಮವಾಗಿದೆ. ಇದೀಗ ನನ್ನ ಆಟದ ಬಗ್ಗೆ ನಾನು ಉತ್ತಮ ಭಾವನೆ ಹೊಂದಿದ್ದೇನೆ. ಕಲಬುರಗಿ ಓಪನ್ ಟೆನಿಸ್‌ನಲ್ಲಿ ಉತ್ತಮ ಪ್ರದರ್ಶನ ನೀಡುವ ಭರವಸೆ ನನಗಿದೆ.
> – ಕರಣ್ ಸಿಂಗ್, ಅಗ್ರ ಶ್ರೇಯಾಂಕಿತ ಭಾರತೀಯ

ಅರ್ಹತೆ ಪಡೆದ 7 ಭಾರತೀಯರು

ಅರ್ಹತಾ ಸುತ್ತಿನ ಪಂದ್ಯಗಳಿಂದ 7 ಭಾರತೀಯರು ಸೇರಿ ಒಟ್ಟು ಎಂಟು ಜನರು ಮುಖ್ಯ ಸುತ್ತಿಗೆ ಅರ್ಹತೆ ಪಡೆದಿದ್ದಾರೆ. ತಮಿಳುನಾಡು ಮೂಲದ ಬೆಂಗಳೂರಿನಲ್ಲಿ ಓದುತ್ತಿರುವ ಧೀರಜ್ ಕೊಡಂಚ ಶ್ರೀನಿವಾಸನ್ ಕೂಡ ಅರ್ಹತೆ ಪಡೆದಿದ್ದಾರೆ. ಇಂಡೋನೇಷ್ಯಾದ ಆಂಥೋನಿ ಸುಸಾಂಟೊ ಮುಖ್ಯ ಸುತ್ತಿಗೆ ಅರ್ಹತೆ ಪಡೆದ ಏಕೈಕ ವಿದೇಶಿ ಆಟಗಾರನಾಗಿದ್ದಾರೆ.

ಅಂತಾರಾಷ್ಟ್ರೀಯ ಕ್ರೀಡಾಪಟು ಬಿಂದುರಾಣಿಯಿಂದ ಉದ್ಘಾಟನೆ

ಮಹಿಳಾ ಕಾಲೇಜುಗಳ ಅಥ್ಲೆಟಿಕ್ ಕ್ರೀಡಾಕೂಟ ನಾಳೆಯಿಂದ ಶುರು

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕ್ರೀಡಾ ನಿರ್ದೇಶನಾಲಯ ಹಾಗೂ ದೈಹಿಕ ಶಿಕ್ಷಣ ಅಧ್ಯಯನ ಮತ್ತು ಕ್ರೀಡಾ ವಿಜ್ಞಾನ ವಿಭಾಗ ಇವರ ಸಂಯುಕ್ತ ಆಶ್ರಯದಲ್ಲಿ 18ನೇ ಅಂತರ ಮಹಿಳಾ ಮಹಾವಿದ್ಯಾಲಯಗಳ ಅಥ್ಲೆಟಿಕ್ 2024-2025 ಕ್ರೀಡಾಕೂಟ ಇದೇ ನವೆಂಬರ್ 20 ರಿಂದ 22 ರವರೆಗೆ ಮೂರು ದಿನಗಳ ಕಾಲ ವಿವಿಯ ಕ್ರೀಡಾಂಗಣದಲ್ಲಿ ನಡೆಯಲಿದ್ದು ಈ ಕ್ರೀಡಾಕೂಟದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ 400ಕ್ಕೂ ಹೆಚ್ಚು ಕ್ರೀಡಾಪಟುಗಳು 19 ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ.

ಇದೇ ಬುಧವಾರ ಆರಂಭವಾಗಲಿರುವ 18ನೇ ಅಥ್ಲೆಟಿಕ್ ಕ್ರೀಡಾಕೂಟದ ಪೂರ್ವ ತಯಾರಿ ಭರದಿಂದ ಸಾಗಿದ್ದು, ಈ ಕ್ರೀಡಾಕೂಟದಲ್ಲಿ ವಿಜಯಪುರ, ಧಾರವಾಡ, ಬಾಗಲಕೋಟ, ಬೀದರ್, ಹೊಸಪೇಟೆ, ಕಲಬುರಗಿ, ಕೊಪ್ಪಳ, ಮಂಡ್ಯ ಹೀಗೆ ಬೇರೆ-ಬೇರೆ ಜಿಲ್ಲೆಗಳಿಂದ ಆಗಮಿಸುವ ಕ್ರೀಡಾಪಟುಗಳು ಭಾಗವಹಿಸುತ್ತಿದ್ದಾರೆ.

ಕಳೆದ ವರ್ಷ 17ನೇ ಅಥ್ಲೆಟಿಕ್ ಕ್ರೀಡಾಕೂಟವೂ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿಯೇ ಸಂಘಟಿಸಿದ್ದು, ಇದರಲ್ಲಿ ಕ್ರೀಡಾಪಟುಗಳು 2 ಹೊಸ ದಾಖಲೆಗಳನ್ನು ಬರೆದಿದ್ದರು. ಈ ಬಾರಿಯು ಇನ್ನಷ್ಟು ದಾಖಲೆಗಳನ್ನು ಕ್ರೀಡಾಪಟುಗಳು ಮಾಡುವ ಆಶಯವಿದೆ ಎಂದು ಕ್ರೀಡಾ ನಿರ್ದೇಶಕ ಪ್ರೊ. ಸಕ್ಪಾಲ್ ಹೂವಣ್ಣ ತಿಳಿಸಿದ್ದಾರೆ.

ವಿಜೇತ ತಂಡಗಳಿಗೆ ನಗದು ಬಹುಮಾನ, ಟ್ರೋಫಿ ಮತ್ತು ಬ್ಲೇಜರ್: ಈ ಕ್ರೀಡಾಕೂಟದಲ್ಲಿ ಭಾಗವಹಿಸಿ ವಿಜೇತ ತಂಡಗಳಿಗೆ ನಗದು ಬಹುಮಾನ, ಟ್ರೋಫಿ ಮತ್ತು ಬ್ಲೇಜರ್ ನೀಡಲಾಗುವುದು. ಅದರಂತೆ ಪ್ರಥಮ ಸ್ಥಾನಕ್ಕೆ 25,000 ರು. ನಗದು ಹಾಗೂ ದ್ವಿತಿಯ ಸ್ಥಾನಕ್ಕೆ 15,000 ರು. ನಗದು ಹಾಗೂ ತೃತೀಯ ಸ್ಥಾನಕ್ಕೆ 10,000 ರು. ನಗದು ಹಾಗೂ ಟ್ರೋಫಿ ವಿತರಿಸಲಾಗುತ್ತದೆ ಎಂದು ಅವರು ವಿವರಿಸಿದರು.

ಉದ್ಘಾಟನೆ

ನ.20 ರಂದು ಬೆಳಗ್ಗೆ 11.30ಕ್ಕೆ ಬೆಂಗಳೂರಿನ ಅಂತಾರಾಷ್ಟ್ರೀಯ ಕ್ರೀಡಾಪಟು ಬಿಂದು ರಾಣಿ.ಜಿ ಕ್ರೀಡಾಕೂಟ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ನಗರದ ಕೆನರಾ ಬ್ಯಾಂಕ್ ಪ್ರಾದೇಶಿಕ ಕಚೇರಿಯ ಮುಖ್ಯಸ್ಥ ಸಂಜಯ ಸತೀಜಾ ಆಗಮಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿವಿಯ ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲ ವಹಿಸಲಿದ್ದು, ವಿವಿಯ ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ. ಎಚ್.ಎಂ ಚಂದ್ರಶೇಖರ ಉಪಸ್ಥಿತರಿರಲಿದ್ದಾರೆ.

ಸಮಾರೋಪ

ನವೆಂಬರ್ 22ರಂದು ಕ್ರೀಡಾಕೂಟದ ಸಮಾರೋಪ ಸಮಾರಂಭ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ನಗರದ ಅಂತಾರಾಷ್ಟ್ರೀಯ ಕ್ರೀಡಾಪಟು ಹಾಗೂ ಖ್ಯಾತ ಉದ್ಯಮಿ ಶರಣಬಸಪ್ಪ ಅರಕೇರಿ ಭಾಗವಹಿಸಲಿದ್ದು, ಅಧ್ಯಕ್ಷತೆಯನ್ನು ವಿವಿಯ ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲ ವಹಿಸಲಿದ್ದಾರೆ. ಸಮಾರೋಪ ಸಮಾರಂಭದಲ್ಲಿ ವಿವಿಯ ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಎಚ್.ಎಂ ಚಂದ್ರಶೇಖರ ಉಪಸ್ಥಿತರಿರಲಿದ್ದಾರೆ ಎಂದು ಕ್ರೀಡಾ ನಿರ್ದೇಶಕರು ತಿಳಿಸಿದ್ದಾರೆ.

ಈ ಅಖಿಲ ಭಾರತ ಮಟ್ಟದಲ್ಲಿ ಗೆದ್ದವರಿಗೆ ನಮ್ಮ ವಿಶ್ವವಿದ್ಯಾನಿಲಯ ಮತ್ತು ಕ್ರೀಡಾ ನಿರ್ದೇಶನಾಲಯದಿಂದ ನಗದು ಬಹುಮಾನ ಕೂಡಾ ವಿತರಿಸಲಾಗುವುದು. ಹಾಗೂ ಇದೇ ಸಂದರ್ಭದಲ್ಲಿ 2023ರಲ್ಲಿ ಅಖಿಲ ಭಾರತದಲ್ಲಿ ಗೆದ್ದ ಕ್ರೀಡಾಪಟುಗೆ ಈ ಬಾರಿ 10,000 ರು. ನಗದು ಮತ್ತು ಬ್ಲೇಜರ್ ನೀಡಿ ಸನ್ಮಾನಿಸಲಾಗುತ್ತದೆ. ಆಟಗಾರರಿಗೆ ಹಾಗೂ ತೀರ್ಪುಗಾರರಿಗೆ ಊಟ ಹಾಗೂ ವಸತಿಯ ವ್ಯವಸ್ಥೆ ಕಲ್ಪಿಸಲಾಗಿದ್ದು, ಸಂಜೆಯ ವೇಳೆ ಮನರಂಜನೆ ಕಾರ್ಯಕ್ರಮಗಳು ಕೂಡ ಏರ್ಪಡಿಸಲಾಗಿದೆ ಎಂದು ಪ್ರೊ. ಸಕ್ಪಾಲ್ ಅವರು ವಿವರಿಸಿದ್ದಾರೆ.

ಆರ್‌ಸಿಬಿಗೆ ಸಾಳ್ವಿ ಬೌಲಿಂಗ್ ಕೋಚ್

ಬೆಂಗಳೂರು: ಓಂಕಾರ್ ಸಾಳ್ವಿ ಅವರನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಬೌಲಿಂಗ್ ಕೋಚ್ ಆಗಿ ನೇಮಕ ಮಾಡಿಕೊಂಡಿದೆ. ಮುಂಬೈ ತಂಡ, ಕಳೆದ ಋತುವಿನಲ್ಲಿ ರಣಜಿ ಟ್ರೋಫಿ ಮತ್ತು ಇರಾನಿ ಟ್ರೋಫಿ ಗೆಲ್ಲುವಲ್ಲಿ ಓಂಕಾರ್ ಅವರ ಮಾರ್ಗದರ್ಶನವೂ ಇತ್ತು.

ದೇಶಿ ಕ್ರಿಕೆಟ್‌ನಲ್ಲಿ ಹೆಸರು ಮಾಡಿರುವ ಓಂಕಾರ್ ಅವರು ಈ ಹಿಂದೆ ಕೋಲ್ಕತ್ತ ನೈಟ್ ರೈಡರ್ಸ್ ಸಹಾಯಕ ಕೋಚ್ ಆಗಿದ್ದರು.

ಮುಂಬೈ ತಂಡದ ಹಾಲಿ ಹೆಡ್ ಕೋಚ್ ಆಗಿರುವ ಓಂಕಾರ್ ಸಾಳ್ವಿ ಅವರನ್ನು ಆರ್‌ಸಿಬಿ ಬೌಲಿಂಗ್ ಕೋಚ್ ಆಗಿ ನೇಮಕ ಮಾಡಲಾಗಿದೆ ಎಂದು ಬೆಂಗಳೂರಿನ ಫ್ರಾಂಚೈಸಿ ಟ್ವೀಟ್ ಮಾಡಿದೆ.

ರಣಜಿ ಟ್ರೋಫಿ ಪಂದ್ಯಗಳು ಜನವರಿ 23ರಂದು ಪುನರಾರಂಭಗೊಳ್ಳಲಿದ್ದು, ಅದರ ಮುಕ್ತಾಯದ ನಂತರ ಅವರು ಆರ್‌ಸಿಬಿ ತಂಡ ಕೂಡಿಕೊಳ್ಳಲಿದ್ದಾರೆ.

ಭಾರತ ತಂಡದ ಮಾಜಿ ಆಟಗಾರ ಅವಿಷ್ಕಾರ್ ಸಾಳ್ವಿ ಅವರ ತಮ್ಮನಾಗಿರುವ ಓಂಕಾರ್, ರೈಲ್ವೆ ಪರ 2005ರಲ್ಲಿ ಒಂದು ಲಿಸ್ಟ್ ಎ ಪಂದ್ಯ ಆಡಿದ್ದಾರೆ. ಮುಂಬೈ ತಂಡದ ಜೊತೆ ಅವರ ಒಪ್ಪಂದ 2025ರ ಮಾರ್ಚ್‌ವರೆಗೆ ಇದೆ.

ಪಾಕ್‌ನ ಮೇಲೆ ಆಸೀಸ್‌ನ ಕ್ಲೀನ್ ಸ್ವೀಪ್ ಸವಾರಿ

ಹೋಬಾರ್ಟ್ (ಆಸ್ಟ್ರೇಲಿಯಾ): ಮಾರ್ಕಸ್ ಸ್ಟೊಯಿನಿಸ್ ಅವರು ಮಿಂಚಿನ ಅರ್ಧ ಶತಕದ ನೆರವಿನಿಂದ ಆಸ್ಟ್ರೇಲಿಯಾ ಮೂರನೇ ಹಾಗೂ ಅಂತಿಮ ಟಿ20 ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಸೋಮವಾರ ಏಳು ವಿಕೆಟ್‌ಗಳಿಂದ ಸೋಲಿಸಿತು. ಆ ಮೂಲಕ ಆತಿಥೇಯರು ಸರಣಿಯನ್ನು 3-0ಯಿಂದ ಕ್ಲೀನ್‌ಸ್ವೀಪ್ ಮಾಡಿದರು.

ಸ್ಟೊಯಿನಿಸ್ 27 ಎಸೆತಗಳಲ್ಲಿ 61 ರನ್ ಸಿಡಿಸಿದರು. ವೇಗದ ಬೌಲರ್ ಶಾಹೀನ್ ಶಾ ಅಫ್ರಿದಿ ಅವರ ಒಂದೇ ಓವರ್‌ನಲ್ಲಿ ಮೂರು ಸಿಕ್ಸರ್ ಸೇರಿದಂತೆ ಒಟ್ಟು ಐದು ಸಿಕ್ಸರ್ ಅವರ ಇನ್ನಿಂಗ್ಸ್‌ನಲ್ಲಿದ್ದವು. ಜೊತೆಗೆ ಐದು ಬೌಂಡರಿಗಳನ್ನೂ ಬಾರಿಸಿದರು. ಜೋಸ್ ಇಂಗ್ಲಿಷ್ ಸಾರಥ್ಯದ ಆಸ್ಟ್ರೇಲಿಯಾ 11.2 ಓವರುಗಳಲ್ಲಿ 3 ವಿಕೆಟ್‌ಗೆ 118 ರನ್ ಬಾರಿಸಿ ಗುರಿ ತಲುಪಿತು. ಇದಕ್ಕೆ ಮೊದಲು ಪ್ರವಾಸಿ ತಂಡ 11 ಎಸೆತಗಳು ಬಾಕಿಯಿರುವಾಗ 117 ರನ್‌ಗಳಿಗೆ ಆಲೌಟ್ ಆಗಿತ್ತು. ಅಫ್ರಿದಿ (43ಕ್ಕೆ1) ಮತ್ತು ಹ್ಯಾರಿಸ್ ರವೂಫ್ (0/34) ಅವರು ತಮ್ಮೊಳಗಿನ ಆರು ಓವರುಗಳಲ್ಲಿ 77 ರನ್ ತೆತ್ತರು.

ಟಿ20 ಕ್ರಿಕೆಟ್‌ನಲ್ಲಿ 126 ಪಂದ್ಯಗಳಿಂದ 4,192 ರನ್ ಗಳಿಸುವ ಮೂಲಕ ಬಾಬರ್ ಅವರು ವಿರಾಟ್ ಕೊಹ್ಲಿ ಅವರನ್ನು (4,188 ರನ್) ಹಿಂದೆಹಾಕಿ ಎರಡನೇ ಸ್ಥಾನಕ್ಕೇರಿದರು. ರೋಹಿತ್ ಶರ್ಮಾ (159 ಪಂದ್ಯಗಳಿಂದ 4,231) ಅಗ್ರಸ್ಥಾನದಲ್ಲಿದ್ದಾರೆ.

ಪಾಕಿಸ್ತಾನ ಏಕದಿನ ಸರಣಿಯನ್ನು 2-1ರಿಂದ ಗೆದ್ದಿತ್ತು.

ಸ್ಕೋರುಗಳು: ಪಾಕಿಸ್ತಾನ: 18.1 ಓವರುಗಳಲ್ಲಿ 117 (ಬಾಬರ್ ಆಜಂ 41, ಹಸೀಬುಲ್ಲಾ ಖಾನ್ 24; ಸ್ಪೆನ್ಸರ್ ಜಾನ್ಸನ್ 24ಕ್ಕೆ2, ಆ್ಯಡಂ ಜಂಪಾ 11ಕ್ಕೆ2, ಆರನ್ ಹಾರ್ಡಿ 21ಕ್ಕೆ3); ಆಸ್ಟ್ರೇಲಿಯಾ: 11.2 ಓವರುಗಳಲ್ಲಿ 3 ವಿಕೆಟ್‌ಗೆ 118 (ಜೋಶ್ ಇಂಗ್ಲಿಸ್ 27, ಮಾರ್ಕಸ್ ಸ್ಟೊಯಿನಿಸ್ ಔಟಾಗದೇ 61). ಪಂದ್ಯದ ಆಟಗಾರ: ಮಾರ್ಕಸ್ ಸ್ಟೊಯಿನಿಸ್.

ಸಂಗೊಳ್ಳಿ ರಾಯಣ್ಣನಿಗೆ ಆಧುನಿಕ ಸ್ಪರ್ಶ

ಹದಿನೆಂಟನೇ ಶತಮಾನದಲ್ಲಿ ಕಿತ್ತೂರು ರಾಣಿ ಚನ್ನಮ್ಮನ ಬಲಗೈ ಭಂಟನಾಗಿದ್ದ ವೀರಸೇನಾನಿ ಸಂಗೊಳ್ಳಿ ರಾಯಣ್ಣನ ಸಾಹಸ ಗಾಥೆಯನ್ನು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಶೀರ್ಷಿಕೆಯಲ್ಲಿ ತೆರೆಗೆ ತರಲಾಗಿತ್ತು. 2012ರಲ್ಲಿ ತೆರೆಕಂಡ ಈ ಚಿತ್ರ, ಬಾಕ್ಸ್ ಆಫೀಸ್‌ನಲ್ಲಿ ಉತ್ತಮ ಗಳಿಕೆ ಕಂಡಿತ್ತು. ದರ್ಶನ್ ಬ್ರಿಟೀಷರ ವಿರುದ್ಧ ತೊಡೆತಟ್ಟಿ ನಿಂತ ಕೆಚ್ಚೆದೆಯ ವೀರ ಯೋಧ ಸಂಗೊಳ್ಳಿ ರಾಯಣ್ಣನಾಗಿ ಅಬ್ಬರಿಸಿದ್ದರು. ಹಿರಿಯನಟಿ ಜಯಪ್ರದ ಕಿತ್ತೂರು ರಾಣಿ ಚನ್ನಮ್ಮನ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ನಾಗಣ್ಣ ನಿರ್ದೇಶನದಲ್ಲಿ ಮೂಡಿಬಂದಿದ್ದ ಈ ಚಿತ್ರ ಹಲವು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿತ್ತು. ಇದೀಗ ಅದೇ ಚಿತ್ರ, ಆಧುನಿಕ ತಂತ್ರಜ್ಞಾನದೊಂದಿಗೆ ನವೆಂಬರ್ 22 ರಂದು ಮರುಬಿಡುಗಡೆಯಾಗುತ್ತಿದೆ. ಎಸ್.ಜಿ.ಕೆ. ಫಿಲಂಸ್ ಮೂಲಕ ಕೆ.ಬಸವರಾಜ್ ರಾಜ್ಯಾದ್ಯಂತ ಈ ಚಿತ್ರವನ್ನು ಬಿಡುಗಡೆ ಮಾಡುತ್ತಿದ್ದಾರೆ.

ಪಯಣದಲ್ಲಿನ ಪ್ರೇಮಕಥೆ ಸೂರಿ ಲವ್ಸ್ ಸಂಧ್ಯಾ

ನಟ, ನಿರ್ದೇಶಕ ಕಾಶೀನಾಥ್ ಪುತ್ರ ಅಭಿಮನ್ಯು ಕಾಶಿನಾಥ್ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಎಲ್ಲಿಗೆ ಪಯಣ ಯಾವುದೋ ದಾರಿ ಚಿತ್ರದಲ್ಲಿ ನಟಿಸಿ ಮನಗೆದ್ದ ಅಭಿಮನ್ಯು ಈಗ ಸೂರಿ ಲವ್ಸ್ ಸಂಧ್ಯಾ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದಾರೆ. ಈಗಾಗಲೇ ಸಿನಿಮಾದ ಶೂಟಿಂಗ್ ಮುಕ್ತಾಯವಾಗಿದ್ದು, ತೆರೆಗೆ ಬರಲು ಸಿದ್ಧವಾಗಿದೆ. ಸೂರಿ ಲವ್ಸ್ ಸಂಧ್ಯಾ ಟೀಸರ್ ರಿಲೀಸ್ ಆಗಿದ್ದು ಸಿನಿಪ್ರಿಯರ ಮನಗೆದ್ದಿದೆ. ಮಧ್ಯಮ ವರ್ಗದ ಹುಡುಗನ ಪ್ರೇಮ ಕಥನ ಇಲ್ಲಿದ್ದು ತನ್ನ ಪ್ರೀತಿಯನ್ನು ಉಳಿಸಿಕೊಳ್ಳಲು ನಾಯಕನ ಹೋರಾಟ ಹೇಗಿರುತ್ತದೆ ಎನ್ನುವುದನ್ನು ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ಯಾದವ ರಾಜ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಅಭಿಮನ್ಯು ಇಲ್ಲಿಯೂ ರಗಡ್ ಲುಕ್‌ನಲ್ಲಿ ಮಿಂಚಿದ್ದಾರೆ. ಅಪೂರ್ವಾ ನಾಯಕಿಯಾಗಿ ಬಣ್ಣಹಚ್ಚಿದ್ದು, ಪ್ರತಾಪ್ ರಾಜ್ ಖಳನಾಗಿ ಅಬ್ಬರಿಸಿದ್ದಾರೆ. ಜಯರಾಮ್, ಪ್ರದೀಪ್, ಪಲ್ಲವಿ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು ಸಿನಿಮಾದ ಕಥೆ ಹೇಳಿದಾಗಲೇ ಮನಸಿಗೆ ಹಿಡಿಸಿತು. ಇದು ನನಗೆ ಹೊಂದುವ ಕಥೆಯಾಗಿತ್ತು, ಹಾಗಾಗಿ ಅಂದುಕೊಂಡಂತೆ ಅಭಿನಯಿಸಲು ಸಾಧ್ಯವಾಯಿತು. ನಿರ್ದೇಶಕರು ಅಗತ್ಯ ಸಿದ್ಧತೆ ಮಾಡಿಕೊಂಡು ಯೋಜನಬದ್ಧವಾಗಿ ಸಿನಿಮಾ ನಿರ್ದೇಶಿಸಿದ್ದು ಪ್ರೇಕ್ಷಕರ ಮನಸೂರೆಗೊಳ್ಳಲಿದೆ. ಚಿತ್ರದಲ್ಲಿನ ಸಾಹಸ ದೃಶ್ಯಗಳು ಅದ್ಭುತವಾಗಿದ್ದು ನೈಜವಾಗಿ ಮೂಡಿಬಂದಿವೆ ಎಂದು ಅಭಿಮನ್ಯು ಹೇಳಿದರು.

ಪಯಣದಲ್ಲಿ ಸಾಗುವ ಪ್ರೇಮಕಥೆ ಚಿತ್ರದಲ್ಲಿದ್ದು, ಎಲ್ಲರಿಗೂ ಬಲು ಬೇಗ ಕನೆಕ್ಟ್ ಆಗಲಿದೆ. ಜತೆಗೆ ಒಳ್ಳೆಯ ಸಂದೇಶವೂ ಚಿತ್ರದಲ್ಲಿದೆ. ನನ್ನ ಪಾತ್ರ ಮನಸಿಗೆ ಹಿಡಿಸಿತು. ಹಾಗಾಗಿ ಚಿತ್ರದಲ್ಲಿ ಇಷ್ಟಪಟ್ಟು ನಟಿಸಿದ್ದೇನೆ ಎಂದು ನಟಿ ಅಪೂರ್ವಾ ಸಂತಸದಿಂದ ನುಡಿದರು. ಮದ್ದೂರು, ಬೆಂಗಳೂರು, ಕೋಲಾರ, ಕಾಶಿ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಶ್ರೀನಿವಾಸ್ ಛಾಯಾಗ್ರಹಣ, ಡಿಫರೆಂಟ್ ಡ್ಯಾನಿ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಕೆ.ಟಿ.ಮಂಜುನಾಥ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಕಟ್ಲೆಗರ ಕೃಷ್ಣ ಸಾಥ್

ಹಲವು ಸಿನಿಮಾಗಳಲ್ಲಿ ಹಾಸ್ಯನಟನಾಗಿ ಜನಮನ ಗೆದ್ದಿರುವ ಕೆಂಪೇಗೌಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಶ್ರೀವಿದ ನಿರ್ದೇಶನದ ಕಟ್ಲೆ ಸಿನಿಮಾದಲ್ಲಿ ನಾಯಕನಾಗಿ ಬಣ್ಣಹಚ್ಚಿದ್ದಾರೆ. ಕಟ್ಲೆ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದೆ. ಈ ಹಾಡನ್ನು ನಟ ಡಾರ್ಲಿಂಗ್ ಕೃಷ್ಣ ಬಿಡುಗಡೆ ಮಾಡಿ, ಚಿತ್ರತಂಡಕ್ಕೆ ಶುಭ ಕೋರಿದರು. ಬಹದ್ದೂರ್ ಚೇತನ್ ಕುಮಾರ್ ಬರೆದಿರುವ ಯಾರೋ ನಾ ಕಾಣೆ... ಚಂದಾಗೌಳೆ ಶಾಣೆ... ಎಂಬ ಈ ಗೀತೆಗೆ ಗಾಯಕ ಟಿಪ್ಪು ದನಿಯಾಗಿದ್ದಾರೆ. ಶ್ರೀಧರ್ ವಿ ಸಂಭ್ರಮ್ ಸಂಗೀತ ಸಂಯೋಜಿಸಿದ್ದಾರೆ.

ಅಮೃತಾ ರಾಜ್ ಹಾಗೂ ಸಂಹಿತಾ ನಾಯಕಿಯರಾಗಿ ಬಣ್ಣಹಚ್ಚಿದ್ದು, ಉಳಿದಂತೆ ಉಮೇಶ್, ತಬಲ ನಾಣಿ, ಹರೀಶ್ ರಾಜ್, ಕರಿಸುಬ್ಬು ಶ್ರುತಿ, ನಿಸರ್ಗಾ ಅಪ್ಪಣ್ಣ ಮುಂತಾದವರು ಕಟ್ಲೆಯ ತಾರಾಗಣದಲ್ಲಿದ್ದಾರೆ. ಭರತ್ ಗೌಡ ಹೊಸಕೋಟೆ ನಿರ್ಮಾಣದ ಕಟ್ಲೆ ಚಿತ್ರವನ್ನು ಶ್ರೀವಿದ ನಿರ್ದೇಶನ ಮಾಡಿದ್ದಾರೆ.

> ನಾನು ನಾಯಕನಾಗಿ ನಟಿಸುತ್ತೇನೆ ಎಂದು ಕನಸಿನಲ್ಲಿಯೂ ಯೋಚಿಸಿರಲಿಲ್ಲ. ನಿರ್ಮಾಪಕರು ನನ್ನ ಮೇಲೆ ನಂಬಿಕೆ ಇಟ್ಟು ಸಿನಿಮಾ ನಿರ್ಮಾಣ ಮಾಡಿದ್ದಾರೆ. ನಿರ್ದೇಶಕರು ಕಟ್ಲೆ ಚಿತ್ರಕ್ಕೆ ಅದ್ಭುತವಾದ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಈ ಸಿನಿಮಾ ಎಲ್ಲರಿಗೂ ಇಷ್ಟವಾಗಲಿದೆ.
> -ಕೆಂಪೇಗೌಡ ನಟ

> ಕಟ್ಲೆಯಲ್ಲಿ ಒಳ್ಳೆಯ ಕಂಟೆಂಟ್ ಇದೆ. ಅಪರೂಪದ ಪ್ರೇಮಕಥೆಯ ಜತೆಗೆ ಸೆಂಟಿಮೆಂಟ್ ಅಂಶಗಳೂ ಬೆರೆತಿವೆ. ನಮ್ಮ ಚಿತ್ರದ ಪ್ರಥಮ ಹಾಡು ಬಿಡುಗಡೆಯಾಗಿದೆ. ಕಟ್ಲೆ ಸೆನ್ಸಾರ್ ಅಂಗಳದಲ್ಲಿದ್ದು, ಡಿಸೆಂಬರ್ ಚಿತ್ರವನ್ನು ತೆರೆಗೆ ತರುವ ಯೋಜನೆ ಇದೆ.
> -ಶ್ರೀವಿದ ನಿರ್ದೇಶಕ

ಜನವರಿ 17ಕ್ಕೆ ಎಮರ್ಜೆನ್ಸಿ

ಕಂಗನಾ ರಣಾವತ್ ನಟಿಸಿ, ನಿರ್ದೇಶಿಸಿರುವ ಎಮರ್ಜೆನ್ಸಿ ಚಿತ್ರದ ಬಿಡುಗಡೆಯ ದಿನಾಂಕ ಘೋಷಣೆಯಾಗಿದೆ. ಜನವರಿ 17 ರಂದು ಎಮರ್ಜೆನ್ಸಿ ತೆರೆಗೆ ಬರಲಿದೆ.

ಮಾಜಿ ಪ್ರಧಾನಿ ದಿ.ಇಂದಿರಾಗಾಂಧಿ ಅವರ ರಾಜಕೀಯ ಜೀವನ ಹಾಗೂ ಎಮರ್ಜೆನ್ಸಿ ದಿನಗಳ ಕುರಿತ ಕಥೆ ಈ ಚಿತ್ರದಲ್ಲಿದೆ. ಹಾಗಾಗಿಯೇ ಸಿನಿಮಾ ಆರಂಭ ಆದಾಗಿನಿಂದಲೂ ವಿವಾದ ಶುರುವಾಗಿತ್ತು. ಟ್ರೇಲರ್ ರೀಲಿಸ್ ಆದ ಬಳಿಕ ಅದು ಇನ್ನಷ್ಟು ಹೆಚ್ಚಾಯಿತು. ನ್ಯಾಯಾಲಯದ ಮೆಟ್ಟಿಲೇರಿತ್ತು. ಅಂತೂ ಈಗ ವಿವಾದಗಳಿ ಬಗೆಹರಿದು ಚಿತ್ರದ ಬಿಡುಗಡೆಯ ದಿನಾಂಕ ಘೋಷಣೆಯಾಗಿದ್ದು, ಸಿನಿಪ್ರಿಯರು ಎಮರ್ಜೆನ್ಸಿ ನೋಡಲು ಕಾತರರಾಗಿದ್ದಾರೆ.

ಕಂಗನಾ ರಣಾವತ್, ಇಂದಿರಾ ಗಾಂಧಿ ಅವರ ಪಾತ್ರದಲ್ಲಿ ನಟಿಸಿದ್ದು, ಜೈಪ್ರಕಾಶ್ ನಾರಾಯಣ್ ಪಾತ್ರದಲ್ಲಿ ಅನುಪಮ್ ಖೇರ್ ಕಾಣಿಸಿಕೊಂಡಿದ್ದಾರೆ ಶ್ರೇಯಸ್ ತಲ್ಪಾಡೆ ಮಾಜಿ ಪ್ರಧಾನಿ ದಿ.ಅಟಲ್ ಬಿಹಾರಿ ವಾಜಪೇಯಿ ಪಾತ್ರದಲ್ಲಿ ಬಣ್ಣಹಚ್ಚಿದ್ದಾರೆ. ಮಹಿಮಾ ಚೌಧರಿ ಕೂಡ ಸಿನಿಮಾ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ. ಇದು ಹೈಬಜೆಟ್ ಸಿನಿಮಾವಾಗಿದ್ದು, ಝೀ ಸ್ಟುಡಿಯೋಸ್ ಮತ್ತು ಮಣಿಕರ್ಣಿಕ ಸಿನಿಮಾಸ್ ಬ್ಯಾನರ್ ನಲ್ಲಿ ಚಿತ್ರ ನಿರ್ಮಾಣವಾಗಿದೆ.

ಚಿತ್ರೀಕರಣ ಮುಗಿಸಿದ ಫಾದರ್

ಕನ್ನಡ ಚಿತ್ರರಂಗದ ಖ್ಯಾತ ನಿರ್ಮಾಪಕ ಹಾಗೂ ನಿರ್ದೇಶಕ ಆರ್. ಚಂದ್ರು, ಆರ್.ಸಿ. ಸ್ಟುಡಿಯೋಸ್ ಎಂಬ ದೊಡ್ಡ ನಿರ್ಮಾಣ ಸಂಸ್ಥೆ ಸ್ಥಾಪಿಸಿದ್ದು ಐದು ಅದ್ದೂರಿ ಸಿನಿಮಾಗಳನ್ನು ನಿರ್ಮಾಣ ಮಾಡುತ್ತಿದ್ದಾರೆ ಅದರಲ್ಲಿ ಫಾದರ್ ಸಿನಿಮಾವು ಒಂದು.

ರಾಜ್ ಮೋಹನ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಫಾದರ್ ಚಿತ್ರದಲ್ಲಿ ಡಾರ್ಲಿಂಗ್ ಕೃಷ್ಣ ನಾಯಕನಾಗಿ ನಟಿಸುತ್ತಿದ್ದಾರೆ. ಪ್ರಕಾಶ್ ರೈ ಚಿತ್ರದ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಸದ್ಯ ಫಾದರ್ ಚಿತ್ರಕ್ಕೆ ಮಾತಿನ ಭಾಗದ ಚಿತ್ರೀಕರಣ ಮುಕ್ತಾಯವಾಗಿದ್ದು, ಎರಡು ಹಾಡುಗಳ ಚಿತ್ರೀಕರಣ ಮಾತ್ರ ಬಾಕಿಯಿದೆ. ಬೆಂಗಳೂರು, ಆನೇಕಲ್, ಚನ್ನಪಟ್ಟಣ, ಮಂಗಳೂರು, ಧರ್ಮಸ್ಥಳ ಮುಂತಾದ ಕಡೆ ಶೂಟಿಂಗ್ ನಡೆಸಲಾಗಿದೆ.

ಬಾಕಿಯಿರುವ ಎರಡು ಹಾಡುಗಳ ಚಿತ್ರೀಕರಣವನ್ನು ಸದ್ಯದಲ್ಲೇ ಪೂರ್ಣಗೊಳಿಸಿ, ಆದಷ್ಟು ಬೇಗ ಚಿತ್ರವನ್ನು ತೆರೆಗೆ ತರುವುದಾಗಿ ಆರ್ ಚಂದ್ರು, ತಿಳಿಸಿದ್ದಾರೆ.

ವಿನೋದ್ ಮಾಸ್ಟರ್ ಸಾಹಸ ನಿರ್ದೇಶನ ಹಾಗೂ ಸುಜ್ಞಾನಮೂರ್ತಿ ಛಾಯಾಗ್ರಹಣ ಈ ಚಿತ್ರಕ್ಕಿದೆ.